
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

08 ಫೆಬ್ರವರಿ 2017 ಪುಟ 20 ರೂ. 15/-



ವಾಣಿಜ್ಯ-ವಿದ್ಯೆ ಸಂಗಮಿಸಿದ ದಾವಣಗೆರೆ




ದುರ್ಗತಿಯತ್ತ ತಿಥಿ ನಟರು







ಮರ್ಯಾದಾಪುರುಷೋತ್ತಮ ಇಲ್ಲದ ಉತ್ತರ ಕಾಂಡ




ಹಳಿಯಾಳ ಮುದಿಹುಲಿ ಗಾಯ ನೆಕ್ಕುತ್ತಿದೆ






ಗುಬ್ಬಿ ದಲಿತನ ಮೇಲೆ ಪೈಶಾಚಿಕ ದಾಳಿ

ನಂಜನಗೂಡು ದೇವೇಗೌಡರ ಹೊಸ ಸೂತ್ರ





ಅಂಚಿನಿಂದ....

ಡಾ.ವಾಸು ಎಚ್.ವಿ.

ಕಪ್ಪು ಹಣದ ವಿರುದ್ಧದ ಹೋರಾಟ ದೇಶದ ಜನರೆಲ್ಲರಿಗೂ ಏಕೆ ಮುಖ್ಯ

ಬಿಜೆಪಿ ಮತ್ತು ಮೋದಿ ಹಾಗೂ ಅವರ ಪರಿವಾರವು ಕಾಳಧನದ ವಿರುದ್ಧದ ಹೋರಾಟ ಮಾಡುವವರಂತೆಯೂ, ಈ ಪರಿವಾರವನ್ನು ವಿರೋಧಿಸುವವರು ಕಪ್ಪುಹಣದ ಪರ ಇರುವ ಅಥವಾ ತಾವೇ ಸ್ವತಃ ಕಾಳಧನಕೋರರಂತೆಯೂ ಚಿತ್ರಿಸುವುದು ನಡೆಯುತ್ತಿದೆ. ವಾಸ್ತವದಲ್ಲಿ ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದದ್ದೇ ಕಪ್ಪುಹಣದ ಆಧಾರದ ಮೇಲೆ. ಇದಕ್ಕೆ ಸಾಕಷ್ಟು ಪುರಾವೆಯನ್ನು ಈ ಅಂಕಣದಲ್ಲೂ, 'ಪತ್ರಿಕೆ'ಯಲ್ಲಿ ಕಳೆದ 3-4 ವರ್ಷಗಳಲ್ಲಿ ಬಂದ ಹಲವಾರು ವಿಶ್ಲೇಷಣೆಗಳಲ್ಲೂ ನೀಡಲಾಗಿದೆ. ಇರಲಿ, ಈಗ ಮತ್ತೊಮ್ಮೆ ಕಪ್ಪುಹಣದ ಕುರಿತ ಚರ್ಚೆ ದೇಶಾದ್ಯಂತ ನಡೆಯುತ್ತಿರುವ ಸಂದರ್ಭದಲ್ಲಿ, ಅದರ ವಿರುದ್ಧದ ಹೋರಾಟ ನಮಗೆಲ್ಲರಿಗೂ ಏಕೆ ಮುಖ್ಯ ಎಂಬುದನ್ನು ಚರ್ಚಿಸುವ ಅಗತ್ಯವಿದೆ.

ಮೊದಲಿಗೆ ಈ ಕಪ್ಪುಸಂಪತ್ತು ಹೇಗೆ ಸೃಷ್ಟಿಯಾಗುತ್ತದೆಂಬುದರ ಕುರಿತು ಕೆಲವು ಪ್ರಾಥಮಿಕ ಸಂಗತಿಗಳನ್ನಷ್ಟೇ ನೋಡೋಣ. (ಈ ಅನೈತಿಕ ಹಣಕ್ಕೆ ಕಪ್ಪು ಹಣ ಎಂದು ಕರೆಯುವುದು, ಬರೆಯುವುದೇ ಮನಸ್ಸಿಗೆ ಒಪ್ಪದು. ಪ್ರಪಂಚದಲ್ಲಿ ಬಣ್ಣವನ್ನು ಮೇಲುಕೀಳು ಮಾಡಿರುವುದು ಯಾರು ಮತ್ತು ಏಕೆ ಎಂದು ನಮಗೆಲ್ಲರಿಗೂ ಗೊತ್ತಿದೆ. ಈ ಲೇಖನದ ಮಟ್ಟಿಗೆ ಅನಿವಾರ್ಯವಾಗಿ ಇದನ್ನು ಬಳಸಲಾಗಿದೆ, ಓದುಗರು ಮನ್ನಿಸಬೇಕೆಂದು ಕೋರುತ್ತೇನೆ) ಕಪ್ಪು ಸಂಪತ್ತು ಎರಡು ರೀತಿಯಲ್ಲಿ ಸೃಷ್ಟಿಯಾಗುತ್ತದೆ. ಒಂದು, ಆದಾಯ/ಸಂಪತ್ತಿನ ಮೇಲೆ ತೆರಿಗೆ ತಪ್ಪಿಸುವುದು; ವಾಸ್ತವದಲ್ಲಿ 1991ರ ನಂತರದ ತೆರಿಗೆ ಪದ್ಧತಿಯೇ ಜನವಿರೋಧಿಯಾದದ್ದು. ಅದು ಜನಸಾಮಾನ್ಯರ ಮೇಲೆ ಹೆಚ್ಚಿನ ತೆರಿಗೆ ಹಾಕುತ್ತದೆ. ಶ್ರೀಮಂತರ ಮೇಲೆ ಕಡಿಮೆ ತೆರಿಗೆ ಹಾಕುತ್ತದೆ. ಹೀಗಿದ್ದೂ ಶ್ರೀಮಂತರು ಹೆಚ್ಚು ತೆರಿಗೆ ತಪ್ಪಿಸುತ್ತಾರೆ. ಅದರಲ್ಲೂ ಹೆಚ್ಚೆಚ್ಚು ಶ್ರೀಮಂತರಾದವರು ಹೆಚ್ಚೆಚ್ಚು ತೆರಿಗೆ ತಪ್ಪಿಸುತ್ತಾರೆ.

ತೆರಿಗೆ ಏಕೆ ಹಾಕಬೇಕು, ಅದರಲ್ಲೂ ಶ್ರೀಮಂತರಿಗೆ ಹೆಚ್ಚು ತೆರಿಗೆ ಹಾಕಬೇಕು? ಇದಕ್ಕೆ ಸರಳವಾಗಿ ಉತ್ತರ ಹೇಳುವುದಾದರೆ, ನಮ್ಮದು ನಿಜವಾದ ಪ್ರಜಾಪ್ರಭುತ್ವವಾದರೆ ಶ್ರೀಮಂತರಿಗೆ ಹೆಚ್ಚು ತೆರಿಗೆ ಹಾಕಬೇಕು. ಎಲ್ಲಾ ಸಂಪತ್ತೂ ಇನ್ನಾರಿಗೋ ಮೋಸ ಮಾಡಿಯೇ ಸೃಷ್ಟಿಯಾದದ್ದು ಎಂದು ಹೇಳುವುದು ಅತಿ ಎನ್ನಿಸಬಹುದಾದರೂ, ಅತಿಯಾದ ಸಂಪತ್ತಂತೂ ಬೇರೆಯವರ ಪಾಲಿನ ಸಂಪತ್ತನ್ನು ಕಿತ್ತುಕೊಳ್ಳುವುದರ ಮೂಲಕ ಅಥವಾ ಬೇರೆಯವರ ಶ್ರಮಶಕ್ತಿಯ ಪಾಲನ್ನು ಲೂಟಿ ಮಾಡುವುದರ ಮೂಲಕ ಸೃಷ್ಟಿಯಾಗುತ್ತದೆ. ಹಾಗಾಗಿಯೇ ನಮ್ಮ ಸಂವಿಧಾನದ ರಾಜ್ಯ ನಿರ್ದೇಶನ ತತ್ವಗಳ ಕಲಂ 39 ಸಿ ಹೀಗೆ ಹೇಳುತ್ತದೆ, 'ನಮ್ಮ ಆರ್ಥಿಕ ವ್ಯವಸ್ಥೆಯನ್ನು ಹೇಗೆ ನಡೆಸಬೇಕೆಂದರೆ, ಅದರಿಂದ ಕೆಲವೇ ವ್ಯಕ್ತಿಗಳ ಕೈಯ್ಯಲ್ಲಿ ಅಪಾರವಾದ ಸಂಪತ್ತು ಸೃಷ್ಟಿಯಾಗುವುದನ್ನು ತಪ್ಪಿಸಬೇಕು'. ಅಂದರೆ, ನಮ್ಮ ಉತ್ಪಾದನಾ ವಿಧಾನ, ವ್ಯವಹಾರ, ವಹಿವಾಟುಗಳೆಲ್ಲವೂ ಸಂಪತ್ತು ಸಮಾನವಾಗಿ ವಿತರಣೆಯಾಗುವಂತೆ ನೋಡಿಕೊಳ್ಳಬೇಕು. ಒಂದು ವೇಳೆ ಆದಾಗದಿದ್ದರೆ, ಹೆಚ್ಚೆಚ್ಚು ಸಂಪತ್ತನ್ನು ಶೇಖರಿಸಿಕೊಳ್ಳುವವರಿಗೆ ಹೆಚ್ಚೆಚ್ಚು ತೆರಿಗೆ ಹಾಕಿ, ಆ ಸಂಪತ್ತು ಉಳ್ಳವರಿಂದ ಇಲ್ಲದವರ ಕಡೆಗೆ ಹರಿಯುವಂತೆ ನೋಡಿಕೊಳ್ಳಬೇಕು. ಇಲ್ಲಿ ಗಮನಿಸಬೇಕಾದ್ದೆಂದರೆ, ಇಂದು ಅಸ್ತಿತ್ವದಲ್ಲಿರುವ ಕಾನೂನು ಮತ್ತು ನಿಯಮಗಳ ಪ್ರಕಾರ, ಅಂದರೆ 'ಕಾನೂನುಬದ್ಧವಾಗಿ' ಸಂಪಾದಿಸಿದ ಹಣಕ್ಕೆ ತೆರಿಗೆ ಹಾಕುವುದು ಅತ್ಯಂತ ಮುಖ್ಯ, ಇದನ್ನೂ ನಮ್ಮ ಸರ್ಕಾರಗಳು ಸರಿಯಾಗಿ ಮಾಡುತ್ತಿಲ್ಲ.

ಹೆಚ್ಚೆಚ್ಚು ತೆರಿಗೆ ಹಾಕಿದರೆ, ಹೆಚ್ಚೆಚ್ಚು ತೆರಿಗೆಗಳ್ಳತನ ನಡೆಯುತ್ತದೆ. ಆದ್ದರಿಂದ ತೆರಿಗೆಯನ್ನು ಕಡಿಮೆ ಮಾಡಬೇಕು. ಇಲ್ಲದಿದ್ದರೆ ಅದನ್ನು ತಪ್ಪಿಸಲು ಹಲವು ಮಾರ್ಗಗಳನ್ನು ಹುಡುಕಿಕೊಳ್ಳುತ್ತಾರೆ ಎಂಬ ಒಂದು ವಾದವಿದೆ. ಇಲ್ಲಿ ತೆರಿಗೆ ಎಂದರೆ, ಆದಾಯ ತೆರಿಗೆಯಂತಹ ಪ್ರತ್ಯಕ್ಷ ತೆರಿಗೆಯ ಬಗ್ಗೆ ಹೆಚ್ಚಿನ ಚರ್ಚೆ ನಡೆಯುತ್ತದೆ. ಈ ರೀತಿ ಹೇಳುವ ಒಂದು ಸಂದೇಶ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಓಡಾಡಿತು. ಅದನ್ನು ಓದಿದ ಹಲವರು ಹೌದಲ್ಲವೇ ಎಂದೂ ಕೇಳಿದರು. ಸಾಫ್ಟ್‌ವೇರ್ ಇಂಜಿನಿಯರ್‌ಗಳು ಸೇರಿದಂತೆ, ಅವರ ವೇತನದಲ್ಲೇ ತೆರಿಗೆ ಕಡಿತವಾಗುವ ಹಲವಾರು ಸಂಬಳದಾರರಿಗೆ ಇಂತಹದೊಂದು ಸಿಟ್ಟಿದೆ. ತಾವು 'ಕಷ್ಟಪಟ್ಟು' ದುಡಿದು, ಆ ಹಣದಲ್ಲಿ ತೆರಿಗೆ ಕಟ್ಟಿ, ಸೋಮಾರಿಗಳಾದ ಬಡವರಿಗೆ ಬಿಟ್ಟಿ ಭಾಗ್ಯಗಳನ್ನು ಕೊಡಲು ಸರ್ಕಾರಕ್ಕೆ ಹಣಸಂದಾಯ ಮಾಡುತ್ತಿದ್ದೇವೆಂದು ಅವರಿಗೆ ಸಿಟ್ಟು. ಇದು ಎಷ್ಟು ಪೊಳ್ಳು ಎಂಬುದನ್ನು ಚರ್ಚಿಸಲು ಇನ್ನೊಂದು ಲೇಖನ ಬೇಕಾಗುತ್ತದಾದ್ದರಿಂದ ಇಲ್ಲಿ ವಿಸ್ತರಿಸಲು ಹೋಗುವುದಿಲ್ಲ, ಆದರೆ, ಒಂದಂತೂ ಸತ್ಯ, ತೆರಿಗೆ ಹೆಚ್ಚಾದರೆ ತೆರಿಗೆಗಳ್ಳತನ ಹೆಚ್ಚಾಗುತ್ತದೆ, ಹಾಗಾಗಿ ಕಪ್ಪುಹಣವೂ ಹೆಚ್ಚಾಗುತ್ತದೆ ಎಂಬುದು ದೊಡ್ಡ ಸುಳ್ಳು. ಕಳೆದ 70 ವರ್ಷಗಳಲ್ಲಿ ಈ ದೇಶದಲ್ಲಿ ಜಾರಿಯಲ್ಲಿದ್ದ ತೆರಿಗೆಯ ಪ್ರಮಾಣಕ್ಕೂ, ಕಪ್ಪು ಸಂಪತ್ತಿನ ಸೃಷ್ಟಿಗೂ ಮತ್ತು ಹಗರಣಗಳು ಹುಟ್ಟಿಕೊಂಡಿದ್ದಕ್ಕೂ, ಇರುವ ಸಂಬಂಧ ನೋಡಿದರೆ ಆಶ್ಚರ್ಯವೆನಿಸುತ್ತದೆ. ವಿಪರೀತ ತೆರಿಗೆ ಇದ್ದ ಕಾಲಕ್ಕಿಂತ, ತೆರಿಗೆ ಕಡಿಮೆಯಾದ ಕಾಲದಲ್ಲಿ ಹೆಚ್ಚೆಚ್ಚು ಕಪ್ಪುಸಂಪತ್ತು ಸೃಷ್ಟಿಯಾಗಿದೆ!



ವರ್ಷ	ಕಪ್ಪು ಆರ್ಥಿಕತೆಯ ಪ್ರಮಾಣ	ಆದಾಯ ತೆರಿಗೆ	ದೊಡ್ಡ ಹಗರಣ
1948-1968		20 ರಿಂದ 30%	
1956 (ಕಾಲ್ಡೊ ಸಮಿತಿ)	4 ರಿಂದ 5%	20 ರಿಂದ 30%	
1970-71 (ವಾಂಚು ಸಮಿತಿ)	7%	97.5%	
1980-81	21%	55%	
(National institute of public finance & policy)			
1987	34%		
(ಪ್ರೊ.ಸೂರಜ್‌ಭಾನ್ ಸಮಿತಿ)			
1991		40%	
1995-96	40%		
(ಪ್ರೊ.ಅರುಣ್‌ಕುಮಾರ್ ಎನ್‌ಐಪಿಎಫ್‌ಪಿ)			(13,>1000ಕೋಟಿ
2000	60%	30%	
(2005ರಿಂದ 2008ರ ನಡುವೆ 150 ದೊಡ್ಡ ಹಗರಣಗಳು ನಡೆದವು)			

(ವಿವರಗಳಿಗೆ ಮೇಲಿನ ಕೋಷ್ಟಕ ನೋಡಿ.)

ಕಪ್ಪುಹಣ ಸೃಷ್ಟಿಯಾಗುವ ಇನ್ನೊಂದು ವಿಧಾನವೆಂದರೆ, ಅಕ್ರಮ ಗಳಿಕೆಯ ವಿಧಾನ. ಗಳಿಕೆಯೇ ಅಕ್ರಮವಾದ್ದರಿಂದ, ಇದಕ್ಕೆ ತೆರಿಗೆ ಕಟ್ಟುವ ಪ್ರಶ್ನೆ ಬರುವುದಿಲ್ಲ. (ಈ ಎರಡು ರೀತಿಯಲ್ಲಿ ಗಳಿಸಲಾದ ಹಣಕ್ಕೂ ಈಗ ಲೆಕ್ಕವೇ ಕೊಡದೆ ಅದನ್ನು ಸಕ್ರಮ ಧನವನ್ನಾಗಿ ಪರಿವರ್ತಿಸುವ ಅವಕಾಶವನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಆ ಪ್ರಶ್ನೆ ಬೇರೆ). ಇದರಲ್ಲಿ ನೈಸರ್ಗಿಕ ಸಂಪನ್ಮೂಲಗಳ ಲೂಟಿಯಿಂದ ಸೃಷ್ಟಿಯಾಗುವ ಅಕ್ರಮ ಸಂಪತ್ತಿನದ್ದೂ ಗಮನಾರ್ಹ ಪಾಲಿದೆ. ಈ ನೈಸರ್ಗಿಕ ಸಂಪನ್ಮೂಲಗಳು ದೇಶದ ಎಲ್ಲಾ ಜನರಿಗೂ ಸೇರಬೇಕಾಗಿದ್ದ ಸಂಪತ್ತು, ನೈಸರ್ಗಿಕ ಅನಿಲ, ತೈಲ, ಅದಿರು, ಮರಳು ಇತ್ಯಾದಿಗಳು ಇದರಲ್ಲಿ ಸೇರುತ್ತವೆ. ಅದಲ್ಲದೇ, ಅಕ್ರಮ ಚಟುವಟಿಕೆಗಳ ಮೂಲಕ ಸಂಪಾದನೆ ಮಾಡುವವರ ಲೋಕವೇ ಒಂದಿದೆ. ಮಾಫಿಯಾ, ಡ್ರಗ್, ಆಯುಧಗಳ ವಹಿವಾಟು ಈ ರೀತಿಯ ದಂಧೆಗಳು ಒಂದೆಡೆಯಾದರೆ, ಭ್ರಷ್ಟಾಚಾರದ ದಂಧೆ ಇನ್ನೊಂದು.

ಇವೆಲ್ಲದರ ವಿವರಗಳಿಗೆ ಇಲ್ಲಿ ಹೋಗುವುದಿಲ್ಲ. ಏಕೆಂದರೆ, ನಮಗೆ ಕಪ್ಪು ಹಣದ ವಿರುದ್ಧದ ಹೋರಾಟ ಏಕೆ ಮುಖ್ಯವೆಂಬುದನ್ನು ಹೇಳುವುದು ಈ ಲೇಖನದ ಉದ್ದೇಶವಾಗಿದೆ. ಆದರೆ, ಮೇಲಿನ ವಿವರಗಳನ್ನು ಹೇಳಬೇಕಾದುದಕ್ಕೂ ಕಾರಣವಿದೆ. ಮೇಲೆ ಹೇಳಲಾದ ರೀತಿಯಲ್ಲಿ ಅಕ್ರಮ ಸಂಪತ್ತು ಗಳಿಸುವುದು ಅಥವಾ 'ಸಕ್ರಮವಾಗಿ ಗಳಿಸಿದರೂ' ತೆರಿಗೆ ತಪ್ಪಿಸುವುದು ದೇಶ ವಿರೋಧಿ ಚಟುವಟಿಕೆಗಳಾಗಿವೆ. ಹೀಗಾಗಿ ಇದನ್ನು ನಾವೆಲ್ಲರೂ ವಿರೋಧಿಸಬೇಕು. ಅಲ್ಲವೇ? ಇಂತಹ ಕೆಲಸಗಳನ್ನು ಯಾಕೆ ದೇಶದ್ರೋಹ ಎಂದು ಭಾವಿಸಲಾಗುವುದಿಲ್ಲ? ಅದರಲ್ಲೂ ನೂರಾರು ಕೋಟಿ ಅಕ್ರಮ ಸಂಪತ್ತು ಸಂಪಾದನೆ ಅಥವಾ ತೆರಿಗೆಗಳ್ಳತನಗಳನ್ನೂ ದೇಶದ್ರೋಹ ಎಂದು ಪರಿಗಣಿಸಬೇಕಲ್ಲವೇ? ಅದ್ಯಾವುದೂ ಇಲ್ಲಿ ನಡೆಯುವುದಿಲ್ಲ. ಬದಲಿಗೆ ಅಂತಹವರನ್ನು ಪುಣ್ಯವಂತರು ಎಂದೋ, ಸಾಧನೆ ಮಾಡಿದವರು ಎ[...] ಪರಿಗಣಿಸುವ ಪರಿಪಾಠವಿದೆ. ಇರಲಿ, ಇಂತಹ [...] ಗಳಿಕೆಯಿಂದ ದೇಶಕ್ಕೆ ಹಾನಿಯಾಗುತ್ತದೆ, ಇದು [...] ಇತ್ಯಾದಿ ಸಾಮಾನ್ಯ ಮಾತುಗಳಿಂದ ಹೇಳುವುದಲ್ಲದೇ ಇನ್ನೊಂದು ಆಯಾಮವೂ ಇದೆ. ಅದೇನೆಂದರೆ, ದೇಶ ಬಡವಾಗುವುದಕ್ಕೆ, ಬಡವರು ಬಡವರಾ[...] ಇರುವುದಕ್ಕೂ ಇದು ಕಾರಣವಾಗಿದೆ. ಅದು ಹೇ[...]


ಯಾವುದೇ ದೇಶದಲ್ಲಿ ಸರ್ಕಾರಕ್ಕೆ [...] ಸಂಗ್ರಹವಾಗುವುದು ಆ ದೇಶದಲ್ಲಿ ಸೃಷ್ಟಿಯಾ[...] ಸಂಪತ್ತಿನಿಂದ. ಈ ಸಂಪತ್ತು ಸರಕು ಮತ್ತು ಸೇ[...] ಸೃಷ್ಟಿ ಹಾಗೂ ವಹಿವಾಟಿನಿಂದ ಉತ್ಪತ್ತಿಯಾಗ[...] ಅವೆಲ್ಲದರ ಒಟ್ಟು ಮೊತ್ತವನ್ನೇ ಜಿಡಿಪಿ (ಒಟ್ಟು ಆ[...] ಉತ್ಪನ್ನ) ಎಂದು ಕರೆಯಲಾಗುತ್ತದೆ. ಭಾರತದ ಜಿಡಿಪಿ[...] ಈ ಸದ್ಯ 150 ಲಕ್ಷ ಕೋಟಿ ರೂ.ಗಳ[...] ಅಂದಾಜಿಸಲಾಗಿದೆ. ಸರಾಸರಿ ತೆರಿಗೆ ಪ್ರಮಾಣವು 1[...] ಇರುವುದರಿಂದ, ಈ 150 ಲಕ್ಷ ಕೋಟಿ ರೂ[...] ಸರಿಸುಮಾರು 24 ಲಕ್ಷ ಕೋಟಿ ರೂ.ಗಳಷ್ಟು [...] ಸಂಗ್ರಹವಾಗುತ್ತಿದೆ. ಇದು ಅಧಿಕೃತ ಲೆಕ್ಕ. ಆದರೆ, ಸು[...] 60% ಅಷ್ಟು ಕಾಳಸಂಪತ್ತು ಸೃಷ್ಟಿಯಾಗುತ್ತಿದೆ [...] ಬಹುತೇಕ ತಜ್ಞರು ಅಭಿಪ್ರಾಯಪಡುತ್ತಾರೆ. ಅ[...] ಸುಮಾರು 90 ಲಕ್ಷ ಕೋಟಿ ರೂ.ಗಳಷ್ಟು ಕಾಳಸಂ[...] ಸೃಷ್ಟಿಯಾಗುತ್ತಿದೆ. ಒಂದು ವೇಳೆ ಇದಕ್ಕೂ ತೆ[...] ಹಾಕಿದ್ದಾದಲ್ಲಿ, ಇನ್ನೂ 14 ಲಕ್ಷ ಕೋಟಿ ರೂ.ಗ[...] ತೆರಿಗೆ ಸಂಗ್ರಹವಾಗುತ್ತದೆ.

ಸದ್ಯದಲ್ಲಿ ದೇಶದ ವಿತ್ತೀಯ ಕೊರತೆ (ಅಂದರೆ ವಾ[...] ಬಜೆಟ್‌ನಲ್ಲಿ ನಮ್ಮ ಆದಾಯ ಮತ್ತು ಖರ್ಚಿನ ನಡು[...] ವ್ಯತ್ಯಾಸ, ಈ ಲೇಖನ ಬರೆಯುವ ಸಂದರ್ಭ[...] ರಿಸರ್ವ್‌ಬ್ಯಾಂಕ್ ಮುಂದಿಟ್ಟ ಅಂದಾಜು) ಸುಮಾ[...] 4.5%ನಷ್ಟು, 5.50 ಲಕ್ಷ ಕೋಟಿ ರೂ.ಗಳಷ್ಟು. ಈ ಕೊರತೆಯನ್ನು ಮೇಲೆ ಹೇಳಲಾದ ರೀತಿ[...] ಸಂಗ್ರಹಿಸಬಹುದಾದ ಹೆಚ್ಚುವರಿ ತೆರಿಗೆಯಿಂದ ಸುಲ[...] ತುಂಬಿಕೊಳ್ಳಬಹುದು. ಕರ್ನಾಟಕವೊಂದರ ಅನ್ನ[...] ಯೋಜನೆಗೆ ಖರ್ಚಾಗುತ್ತಿರುವುದು ಸುಮಾರು 5,0[...] ಕೋಟಿ ರೂ.ಗಳಷ್ಟೇ. ಅಂದರೆ, 14 ಲಕ್ಷ ಕೋಟಿ ರೂ[...] ಹೆಚ್ಚುವರಿ ತೆರಿಗೆ ಸಂಗ್ರಹ ನಿಜಕ್ಕೂ ಆದರೆ ಸಾರ್ವ[...] ಪಡಿತರ ವ್ಯವಸ್ಥೆ, ಉಚಿತ ಶಿಕ್ಷಣ, ಸರ್ವರಿಗೂ ಆರೋ[...] ಇವ್ಯಾವುವೂ ನಮಗೆ ಕಷ್ಟವಾಗಲಾರದು ಅಲ್ಲವೇ?

ಈ ಎಲ್ಲಾ ಕಾರಣಗಳಿಂದ ಶ್ರೀಮಂತರಿಗೆ ಹೆ[...] ತೆರಿಗೆ ಹಾಕುವುದರಲ್ಲಿ ಯಾವ ಸಮಸ್ಯೆಯೂ [...] ಹಾಗೆಯೇ ಕಪ್ಪುಹಣವನ್ನು ಹಿಡಿದು ಹಾಕಿ ಅದನ್ನು ದೇ[...] ಒಳಿತಿಗೆ ಬಳಸುವುದು ಅಗತ್ಯ ಮಾತ್ರವಲ್ಲ, ಅನಿವಾರ್ಯ[...] ಹೌದು. ದೇಶದ ಒಳಿತಿನ ದೃಷ್ಟಿಯಿಂದ ಜನಸಾಮಾ[...] ಪರವಾಗಿ ವಿವಿಧ ರೀತಿಯ ಹೋರಾಟಗ[...] ತೊಡಗಿಕೊಂಡಿರುವವರು, ಸಾಮಾಜಿಕ ನ್ಯಾಯ[...] ಹೋರಾಟಗಳಲ್ಲಿ ತೊಡಗಿಕೊಂಡಿರುವವರು ಎ[...] ಒತ್ತಾಯವೂ ಪರೋಕ್ಷವಾಗಿ ಇದೇ ಆಗಿದೆ. ಆದರೆ, ಅದ[...] ಕಪ್ಪುಹಣದ ವಿರುದ್ಧದ ಹೋರಾಟದ ಹೆಸರಿನಲ್ಲಿ ಇದ[...] ಅವರೆಲ್ಲರೂ ಮಾಡುತ್ತಿಲ್ಲ, ಹಾಗಾಗಿ ಕಪ್ಪುಹಣದ ವಿರು[...] ಹೋರಾಟವೆನ್ನುವುದು ಇನ್ನಾರದೋ ಗುತ್ತಿಗೆಯ[...] ಆಗಿಬಿಟ್ಟಿದೆ. ವಿಪರ್ಯಾಸದ ಸಂಗತಿಯೆಂದರೆ, ಯಾ[...] ಕಪ್ಪುಹಣದಲ್ಲೇ ಮುಳುಗೇಳುತ್ತಿದ್ದಾರೋ, ಅಂತಹವ[...] ಕೆಲವರು ಇದರ ಮುಂಚೂಣಿಯಲ್ಲಿ ನಿಂತುಬಿಟ್ಟಿದ್ದಾ[...] ಇದು ತಪ್ಪಬೇಕು. ದೇಶದ ಅಸಲೀ ಜನರು ಈ ಹೋರಾ[...] ವನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕು.

ಮರ್ಯಾದಾ ಪುರುಷೋತ್ತಮ ಇಲ್ಲದ 'ಉತ್ತರಕಾಂಡ'

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಮಂಗಳವಾರ ಎಸ್.ಎಲ್.ಭೈರಪ್ಪನವರ ಹೊಸ ..ಂಬರಿ 'ಉತ್ತರಕಾಂಡ' ಓದಿ ಮುಗಿಸಿದೆ. ನನಗೇ ..ಶ್ಚರಿ ಆಗುವಂತೆ ಈ ಕಾದಂಬರಿ ಇಷ್ಟವಾಯಿತು. ಅದಕ್ಕೆ ..ಬ್ಬ ಕಾರಣ ಭೈರಪ್ಪನವರು ಸೀತೆಯ ಪಾತ್ರವನ್ನು ..ಕೊಟ್ಟಿರುವ ರೀತಿ. ಅವರು 'ಪ್ರಜಾವಾಣಿ'ಗೆ ಕೊಟ್ಟ ..ರ್ದರ್ಶನದಲ್ಲಿ ಹೇಳಿರುವಂತೆ 'ಉತ್ತರಕಾಂಡ'ದಲ್ಲಿ ಅವರು ..ತೆಗೆ ಆದ ಅನ್ಯಾಯವನ್ನು ತೋರಿಸಲು ಯತ್ನಿಸಿದ್ದಾರೆ. ..ತೆಗೆ ಲಕ್ಷ್ಮಣನನ್ನು ಅವರು ತೋರಿಸುವ ರೀತಿ ..ಷ್ಟು ಚೆನ್ನಾಗಿದೆ ಎಂದರೆ ಕಾದಂಬರಿಯಲ್ಲಿ ರಾಮ 'ಡಲ್' ..ಯಾಗಿ ಕಂಡರೆ ಲಕ್ಷ್ಮಣನೇ ಹೀರೋ ಆಗಿ ನಿಲ್ಲುತ್ತಾನೆ. ..ರ್ಮಿಳೆ, ಜನಕನ ಪಾತ್ರಗಳೂ ಚೆನ್ನಾಗಿ ರೂಪಿಸಲ್ಪಟ್ಟಿವೆ. ..ರೆ ರಾವಣ ಮತ್ತು ಕೈಕೇಯಿಯ ಪಾತ್ರಗಳು ..ಮರ್ಪಕವಾಗಿವೆ. ಶೂರ್ಪನಖಿಯ ಪಾತ್ರವಂತೂ ..ಸ್ಯಾಸ್ಪದವಾಗಿದೆ.

ಕಾದಂಬರಿಯು ಪರಿತ್ಯಜಿಸಲ್ಪಟ್ಟಿರುವ, ವಾಲ್ಮೀಕಿಯ ..ಶ್ರಮದಲ್ಲಿ ಅವಳಿ ಜವಳಿಗಳನ್ನು ಹೆತ್ತಿರುವ ಸೀತೆಯಿಂದ ..ರಂಭವಾದರೂ ಅದು ಪದೇಪದೇ ಫ್ಲಾಶ್‌ಬ್ಯಾಕ್‌ಗೆ ..ೀಗಿ ಆಕೆಯ ಜನನ, ಮದುವೆ, ವನವಾಸ ಇತ್ಯಾದಿಗಳನ್ನು ..ಪಿಸುತ್ತದೆ.


ನನಗೆ ಇಷ್ಟವಾದ ಮತ್ತೊಂದು ಸಂಗತಿ ಯಾವುದೆಂದರೆ ..ರಲ್ಲಿ ಹಿಂದೂತ್ವವಾದಿಗಳು ಪ್ರಚುರಪಡಿಸುವ ಯಾವುದೇ ..ೌಢ್ಯ ಇಲ್ಲದಿರುವುದು. ಅಂದರೆ ಇಲ್ಲಿ ..ತ್ರಕಾಮೇಷ್ಠಿಯಿಂದಾಗಿ ಮಕ್ಕಳ ಜನನ, ರಾಮ ಸೇತು, ..ಷ್ಪಕ ವಿಮಾನ, ಆಂಜನೇಯನಿಗೆ ಬಾಲ, ರಾವಣನಿಗೆ ..ತ್ತು ತಲೆ ಮತ್ತು ಹತ್ತು ಕೈಗಳು ಇತ್ಯಾದಿಗಳು ..ಲ್ಲದಿರುವುದು.

ಅಂದಮಾತ್ರಕ್ಕೆ ಈ ಕಾದಂಬರಿಯಲ್ಲಿ ಯಾವ ..ೀಷಗಳು ಇಲ್ಲವೆಂದಲ್ಲ. ಭೈರಪ್ಪನವರ ಇತರೆ ಬರಹಗಳಲ್ಲಿ ..ದ್ದು ಕಾಣುವಂತೆ ಇದರಲ್ಲೂ ಎಲ್ಲಾ ಪಾತ್ರಗಳು ..ತೆಶಿವರದ ಬ್ರಾಹ್ಮಣರ ಕನ್ನಡ ಮಾತನಾಡುತ್ತವೆ. ..ತ್ರಿಯರಾದ ರಾಮ, ಸೀತೆ ಮತ್ತು ಲಕ್ಷ್ಮಣರು ..ವಾಸದಲ್ಲಿರುವಾಗಲೂ ಅಪ್ಪಟ ಸಸ್ಯಾಹಾರಿಗಳಾಗಿದ್ದು ..ಗಿ ಮುದ್ದೆ ಮತ್ತು ಸೊಪ್ಪು ಸಾರು ತಿನ್ನುತ್ತಿರುತ್ತಾರೆ. ಈ ..ಹದ ಮಿತಿಗಳು ಹಲವಾರು ಇವೆ.

ರಾಮ ಯುವಕನಾಗಿದ್ದಾಗ ಸತ್ಯ ಮತ್ತು ಧರ್ಮದ ..ವಾಗಿರುತ್ತಾನೆ, ಆದರೆ ವನವಾಸ ಮುಗಿದು ಆತ ..ಯೋಧ್ಯೆಯ ಸಿಂಹಾಸನವನ್ನು ಏರಿದನಂತರ ಆತ ಆ ..ದ್ದೆಗೆ ಬದ್ಧನಾಗಿರುತ್ತಾನೆಯೇ ಹೊರತು ತನ್ನ ..ರ್ಮಪತ್ನಿಗೂ ಅಲ್ಲ, ಆಕೆಯ ಸುತ್ತ ಹಬ್ಬುವ ..ಷ್ಟುವದಂತಿಗಳ ವಿರುದ್ಧವೂ ಅಲ್ಲ. ಅಧಿಕಾರ ರಾಮನನ್ನು ..ಗೆ ದಾರಿ ತಪ್ಪಿಸಿತು ಎಂಬುದನ್ನು ಭೈರಪ್ಪನವರು ಸೀತೆಯ ..ೂಲಕ ತೋರಿಸುತ್ತಾರೆ.

ಮಕ್ಕಳಿಲ್ಲದ ಕಾರಣ ಜನಕ ಪುತ್ರಕಾಮೇಷ್ಠಿ ಮಾಡಲು ..ಯಿಸುತ್ತಾನೆ. ಅದಕ್ಕೊಂದು ಭೂಶುದ್ಧಿ ಮಾಡುವಾಗ ..ನ ನೇಗಿಲಿಗೆ ಭೂಮಿಯಲ್ಲಿ ಒಂದು ಕೂಸು ಸಿಗುತ್ತದೆ. ..ದೂ ಹಳೇ ಸೀರೆಯಿಂದ ಸುತ್ತಿಟ್ಟಿರುವ ಮಗು. ಅದು ..ಡೊ, ಹೆಣ್ಣೋ ಎಂಬುದನ್ನೂ ನೋಡದೆ "ಭೂಶುದ್ಧಿ ..ರಂಭದಲ್ಲೇ ನನಗೆ ಫಲ ದೊರಕಿದೆ. ಇನ್ನು ..ಜ್ಞ ಮಾಡುವ ಅಗತ್ಯವಿದೆಯೇ" ಎಂದು ..ಕ ಪುರೋಹಿತರನ್ನು ಕೇಳುತ್ತಾನೆ. ಜನಕನ ..ಡತಿ ಬಂದು ಮಗುವಿನ ಬಟ್ಟೆಯೊಳಗೆ ..ಕಿ "ಹೆಣ್ಣು ಮಗು" ಎಂದಾಗ ಜನಕ ..ಣ್ಣು ಗಂಡೆಂಬ ಭೇದವು ಸುಳ್ಳು. ಅದು ..ವಲ ಭೌತಶರೀರಕ್ಕೆ ಸಂಬಂಧಿಸಿದ್ದು" ..ಸುತ್ತಾನೆ. ಪತ್ನಿ ತನ್ನ ಹೊಟ್ಟೆಯಲ್ಲಿ ಹುಟ್ಟುವ ..ಗು ಒಂದು ಬೇಕು ಎಂದಾಗ ಜನಕ ಒಂದು ..ರತ್ತು ಹಾಕುತ್ತಾನೆ. ಅದೇನೆಂದರೆ ..ಭೂಮಿಯೇ ನಮಗೆ ಕೊಟ್ಟ ಈ ಶಿಶುವನ್ನು ..ನ್ನ ಮೊದಲ ಮಗು ಎಂಬ ..ವನೆಯಿಂದಲೇ ಸಾಕಿ ಬೆಳೆಸಿ ಸಕಲ ..ಸ್ಕಾರವನ್ನೂ ಮಾಡಿ ನಮ್ಮ ಅಂತಸ್ತಿಗೆ ತಕ್ಕ ..ಜಕುಟುಂಬಕ್ಕೇ ಕೊಟ್ಟು ಮದುವೆ ..ಡಬೇಕು. ಭೇದ ಮಾಡಕೂಡದು. ಇದಕ್ಕೆ ..ಸ್ತ್ರೀಯಾ?" ಇಂತಹ ಜನಕ ಸದಾ ಸೀತೆಯ ..ೆ ನಿಲ್ಲುವ ತಂದೆ.


ರಾಮ ಧನುಸ್ಸನ್ನು ಮುರಿದಾಗ ಆತನಿಗೆ ..ತೆಯನ್ನು, ಲಕ್ಷ್ಮಣನಿಗೆ ಊರ್ಮಿಳೆಯನ್ನು, ..ರತನಿಗೆ ಮಾಂಡವಿಯನ್ನು, ಶತ್ರುಘ್ನನಿಗೆ ..ತಕೀರ್ತಿಯನ್ನು ಕೊಟ್ಟು ಮದುವೆ ..ಡುವುದೆಂದು ನಿಶ್ಚಯವಾಗುತ್ತದೆ. ಆದರೆ ..ತೆ ಜನಕನ ಸ್ವಂತ ಮಗಳಲ್ಲ ಎಂದು ..ತ್ತಾದಾಗ ದಶರಥ ಇಂಥ ಹುಡುಗಿಯನ್ನು ಇಕ್ಷ್ವಾಕುವಂಶದ ರಾಜಕುಮಾರನಿಗೆ ತಂದುಕೊಳ್ಳುವುದಿಲ್ಲ, ಬೇಕಿದ್ದರೆ ಇನ್ನಿತರೆ ಮೂರು ದಂಪತಿಗಳ ಮದುವೆಯಾಗಲಿ ಎನ್ನುತ್ತಾನೆ. ಆಗ ಜನಕ ಸೀತೆಯನ್ನು ತಂದುಕೊಳ್ಳದಿದ್ದರೆ ತಮ್ಮ ಮನೆತನದ ಇತರೆ ಹೆಣ್ಣುಮಕ್ಕಳನ್ನೂ ಕೊಡುವುದಿಲ್ಲ ಎಂದು ಹಟ ಹಿಡಿಯುತ್ತಾನೆ. ತನ್ನನ್ನು ತ್ಯಜಿಸಿದ ಗಂಡ, ತಂದೆಯ ಹಿಂದೆ ಹೋದ ಪುತ್ರರು, ಮಾತು ಬಿಟ್ಟಿರುವ ಲಕ್ಷ್ಮಣ... ಇದೆಲ್ಲದರ ಮಧ್ಯೆ ಸೀತೆ ನೆನಪಿಸಿಕೊಳ್ಳುವುದು ಆಕೆಯ ಪ್ರೀತಿಯ ತಂದೆಯನ್ನೇ.



ದಶರಥ ಸೀತೆಯನ್ನು ತಿರಸ್ಕರಿಸಿದಾಗ ಆತನ ಮನಪರಿವರ್ತನೆ ಮಾಡುವುದು ರಾಮನೆ. ಜಾತಿ ಭೇದ ಮಾಡುವುದನ್ನು ಖಂಡಿಸುವ ರಾಮ ತಾನು ಧನುಸ್ಸನ್ನು ಮುರಿದಾಗಲೇ ಆಕೆ ತನ್ನವಳಾದಳೆಂದು, ಆಕೆಯನ್ನಲ್ಲದೆ ತಾನು ಬೇರೆ ಯಾರನ್ನೂ ಮದುವೆ ಆಗುವುದಿಲ್ಲವೆಂದು ಹೇಳುತ್ತಾನೆ. ಆಗ ವಿಧಿ ಇಲ್ಲದೆ ದಶರಥ ಮದುವೆಗೆ ಒಪ್ಪುತ್ತಾನೆ.

ರಾಮನ ಬಗ್ಗೆ ಸೀತೆಗಿರುವ ಪ್ರೀತಿ ತಾರುಣ್ಯದ ಲವ್ ತರಹ ಇದೆ. ಎಷ್ಟರ ಮಟ್ಟಿಗೆ ಎಂದರೆ ಮದುವೆಯಾದ ನಂತರ ಸೀತೆಗೆ ತವರುಮನೆಗೆ ಹೋಗ ಬೇಕು ಅಂತ ಅನ್ನಿಸುವುದೇ ಇಲ್ಲ. ರಾಮನ ಗುಣಗಾನ, ಕೈಕೇಯಿಯ ಷಡ್ಯಂತ್ರ, ಇತ್ಯಾದಿಗಳಲ್ಲಿ ಕಾದಂಬರಿಯ ಮೊದಲ ಅರ್ಧ ಗಿರಕಿ ಹೊಡೆಯುತ್ತದೆ.

ವನವಾಸದ ಸಂದರ್ಭದಲ್ಲಿ ರಾಮ ಗೆಡ್ಡೆಗೆಣಸುಗಳನ್ನೇ ತಿನ್ನಬೇಕು ಎಂದೆಲ್ಲ ಹುಚ್ಚುಚ್ಚಾಗಿ ವರ್ತಿಸಿದರೆ ಲಕ್ಷ್ಮಣ ಚಿಕ್ಕವನಾಗಿದ್ದಾಗ ಕುರುಬರ ಮತ್ತು ಗೊಲ್ಲರ ಹುಡುಗರೊಂದಿಗಿನ ಒಡನಾಟದಿಂದ ಪಡೆದಿದ್ದ ನೈಸರ್ಗಿಕ ಜ್ಞಾನವನ್ನು ಉಪಯೋಗಿಸಿ ಯಾವ ಹಣ್ಣು ಯಾವ ಸೊಪ್ಪು ಯಾವ ಬೀಜ ತಿನ್ನಬಹುದು ಎಂದೆಲ್ಲ ನೋಡಿ ಸಂಗ್ರಹಿಸುತ್ತಾನೆ. ರಾಮ ಆಕಾಶದಲ್ಲಿರುವ ನಕ್ಷತ್ರಗಳಲ್ಲಿ ತನ್ನ ಪೂರ್ವಜರನ್ನು ಕಾಣಲು ಯತ್ನಿಸುವಾಗ ಲಕ್ಷ್ಮಣ ಬೆಂಕಿಹಚ್ಚಿ ರೊಟ್ಟಿ ಬಡಿಯುತ್ತಾನೆ. ರಾಮ ಗಿಡಮರಗಳ ಸೌಂದರ್ಯದಲ್ಲಿ ತಲ್ಲೀನನಾಗಿರುವಾಗ ಲಕ್ಷ್ಮಣ ಅವರ ವಾಸಕ್ಕೆ ಯೋಗ್ಯವಾದ, ಪ್ರಾಣಿಪಕ್ಷಿಗಳಿಂದ ರಕ್ಷಿಸುವ ಕುಟೀರ ಕಟ್ಟುತ್ತಾನೆ. ಹೀಗೆ ಲಕ್ಷ್ಮಣ ಕಾದಂಬರಿ ಉದ್ದಕ್ಕೂ ಕ್ರಿಯಾಶೀಲ ವ್ಯಕ್ತಿಯಾಗಿ ರೂಪುಗೊಂಡಿದ್ದಾನೆ.



ಕಾದಂಬರಿ ವೇಗವನ್ನು ಪಡೆಯುವುದೇ ಸೀತೆಯ ಅಪಹರಣವಾದಾಗ. ಅದೂ ಆಕೆಯನ್ನು ಅಪಹರಿಸುವುದು ರಾವಣನಲ್ಲ ಬದಲಾಗಿ ಆತನ ಸೈನಿಕರು. ಲಕ್ಷ್ಮಣನು ಶೂರ್ಪನಖಿಯ ಮೂಗನ್ನು ಕತ್ತರಿಸಿದ್ದರಿಂದ ಆತ ಆಕೆಯ ಅಪಹರಣಕ್ಕೆ ಆದೇಶಿಸಿರುತ್ತಾನೆ. ಸೀತೆಯನ್ನು ಚಟ್ಟದಂತ ವಾಹನದ ಮೇಲೆ ಮಲಗಿಸಿ ಆಕೆಯನ್ನು ಲಂಕೆಗೆ ಹೊತ್ತೊಯ್ಯುತ್ತಾರೆ.

ರಾವಣನಿಗೆ ಸೀತೆಯ ತಂದೆಯ ವಯಸ್ಸು. ಹಲವಾರು ಕತೆಗಳಲ್ಲಿ ಇರುವಂತೆ ಸೀತೆ ತಲೆ ಎತ್ತಿ ರಾವಣನ ಮುಖವನ್ನೂ ನೋಡದೆ ಇರುವುದಿಲ್ಲ, ಬದಲಾಗಿ ಆಕೆ ರಾವಣನೊಂದಿಗೆ ಮಾತಿನ ಜಟಾಪಟಿಗೆ ಇಳಿಯುತ್ತಾಳೆ. ಆಗ ರಾವಣ "ಬಲು ಜಾಣೆ ನೀನು. ನನಗೆ ವಶವಾದ ನೂರಾರು ಹೆಂಗಸರಲ್ಲಿ ಯಾರೂ ಹೀಗೆ ವಾದಕ್ರೀಡೆಯಾಡಿರಲಿಲ್ಲ. ಇದೊಳ್ಳೇ ಶೃಂಗಾರಕ್ರೀಡೆ. ಭೇಷ್!" ಎನ್ನುತ್ತಾನೆ. ಹೀಗೆ ರಾವಣನನ್ನು ತಿರಸ್ಕರಿಸುತ್ತಲೇ ಬರುವ ಸೀತೆ ಒಮ್ಮೆ ನೆನಪಿಸಿಕೊಳ್ಳುತ್ತಾಳೆ: "ಅವನಿಗೆ ಮುಂದೆ ಮಾತು ತಿಳಿಯಲಿಲ್ಲ. ಚಂಡಿ, ಮೊಂಡಿ, ಹಟಮಾರಿ ಎಂದು ತನಗೆ ತಿಳಿದಿದ್ದ ಶಬ್ದಗಳನ್ನೆಲ್ಲ ಬಳಸಿದ. ಆದರೆ ಅವು ಯಾವುವೂ ಕಠೋರ ಬೈಗುಳಗಳಲ್ಲ, ಮನೆಯಲ್ಲಿ ಮೊಂಡಾಟ ಮಾಡುವ ಹೆಣ್ಣುಮಕ್ಕಳನ್ನು ಬೈಯುವ ಮಾತುಗಳೇ."

ರಾವಣನ ಸೆರೆಯಲ್ಲಿರುವಾಗ ಸೀತೆಗೆ ಅತ್ಯಾಚಾರಕ್ಕೆ ಗುರಿಯಾಗುವ ಭಯ. ಆದರೆ ಒಂದು ರಾತ್ರಿ ಹೀಗೆ ಚಿಂತಿಸುತ್ತಾಳೆ: "ದೇಹಶುದ್ಧಿಯು ನಷ್ಟವಾದರೆ ಯಾಕೆ ಹೆಂಗಸಿಗೆ ಸರ್ವನಾಶವಾದ ಭಾವ ಬರುತ್ತೆ?... ಅತ್ಯಾಚಾರದ ಪಾಪ ಅತ್ಯಾಚಾರಿಗೆ ಮಾತ್ರ ಮೆತ್ತಿಕೊಳ್ಳಬೇಕೇ ಹೊರತು ಬಲಿಯಾದವಳಿಗೆ ಯಾಕೆ ತಗುಲಬೇಕು? ಅವಳೇಕೆ ಈ ದೇಹವನ್ನು ತ್ಯಜಿಸಬೇಕು?" ಅಷ್ಟರಮಟ್ಟಿಗೆ ಈ ಕಾದಂಬರಿಯಲ್ಲಿ ಭೈರಪ್ಪ 'ಯಾನ'ದಲ್ಲಿ 'ಎಲ್ಲ ಮಹಿಳೆಯರು ತಮ್ಮ ಮೇಲೆ ಅತ್ಯಾಚಾರ ನಡೆಯಲಿ ಎಂದು ಬಯಸುತ್ತಾರೆ' ಎಂದಿದ್ದಕ್ಕೆ ಶುದ್ಧೀಕರಣ ಮಾಡಿಕೊಂಡಿದ್ದಾರೆ.

'ಉತ್ತರಕಾಂಡ'ದಲ್ಲಿ ರಾಮ ಸೇತು ಇಲ್ಲ, ಕಪಿಗಳ ಸೈನ್ಯವೂ ಇಲ್ಲ. ಬದಲಾಗಿ ರಾಮ ಮತ್ತು ಸುಗ್ರೀವನ ಸೈನಿಕರು ಅದೆಷ್ಟೋ ಮೀನುಗಾರರ ದೋಣಿಗಳಲ್ಲಿ ಲಂಕೆಯನ್ನು ತಲುಪುತ್ತಾರೆ; ಸೇತುವೆಯಂತಿರುವ ಬಂಡೆಗಳ ಮೇಲೆ ನಡೆದು, ಮಧ್ಯ ಮಧ್ಯೆ ಈಜಿ ದಡ ಮುಟ್ಟುತ್ತಾರೆ.

ಯುದ್ಧ ಮುಗಿದನಂತರ ರಾಮ ಇರುವಲ್ಲಿಗೆ ಸೀತೆಯನ್ನು ಕರೆದುಕೊಂಡು ಹೋಗುತ್ತಾರೆ. ಆಗ ರಾಮ ಆಕೆಯನ್ನು "ಜನಕ ರಾಜಪುತ್ರೀ" ಎಂದು ಕರೆಯುತ್ತಾನೆ. ಅದನ್ನು ಕೇಳಿ ಸೀತೆಗೆ ಅಚ್ಚರಿ. ಸೀತೆ ಎನ್ನಲಿಲ್ಲ, ಪ್ರಿಯೆ ಅನ್ನಲಿಲ್ಲ, ಭಾರ್ಯೆ ಅನ್ನಲಿಲ್ಲ ಎಂದು. ಆದರೆ ಅದಕ್ಕಿಂತ ದೊಡ್ಡ ಶಾಕ್ ರಾಮ ಆಕೆಗೆ ಕೊಡುತ್ತಾನೆ. "ನಿನ್ನನ್ನು ಹೊತ್ತೊಯ್ದ ರಾವಣನನ್ನು ಕೊಂದು ನನ್ನ ಇಕ್ಷ್ವಾಕು ವಂಶದ ಗೌರವವನ್ನು ಕಾಪಾಡಿಕೊಂಡಿದ್ದೇನೆ. ನಾನು ನಿನಗಾಗಿ ಈ ಯುದ್ಧ ಮಾಡಲಿಲ್ಲ. ನನ್ನ ವಂಶದ ಕೀರ್ತಿಯನ್ನುಳಿಸಿಕೊಳ್ಳಲು ಮಾಡಿದೆ. ನಿನ್ನನ್ನು ಹುಡುಕಲು, ರಾವಣನ ಮೇಲೆ ಯುದ್ಧ ಹೂಡಲು, ಅವನ ಸೈನ್ಯವನ್ನು, ಸೇನಾಮುಖ್ಯರನ್ನು ಕೊಲ್ಲಲು ಕಿಷ್ಕಿಂಧೆಯ ಈ ವೀರರು ಸಹಾಯ ಮಾಡಿದ್ದಾರೆ. ನನ್ನ ಕೆಲಸ ಮುಗಿದಿದೆ. ಇಷ್ಟು ದೀರ್ಘಕಾಲ ಪರಪುರುಷನ ಅದರಲ್ಲೂ ರಾವಣನಂಥ ಅಪಕೀರ್ತಿಯ ಕಾಮಿಯ ಅಧೀನದಲ್ಲಿದ್ದ ನಿನ್ನ ಮೇಲೆ ನನಗೆ ನಂಬಿಕೆ ಇಲ್ಲ. ನೀನು ಸ್ವತಂತ್ರಳಾಗಿದ್ದೀಯೆ. ನೀನು ಎಲ್ಲಿ ಬೇಕಾದರೂ ಹೇಗೆ ಬೇಕಾದರೂ ಇರಬಹುದು."

ಸೀತೆಗೆ ಸಹಜವಾಗಿಯೇ ಕೋಪ ಬರುತ್ತೆ. ಯುದ್ಧದಲ್ಲಿ ರಾಮನಿಗೆ ಸಹಾಯ ಮಾಡಿದವರಿಗೆಲ್ಲ ಅವನ ಇಕ್ಷ್ವಾಕು ವಂಶದ ಕೀರ್ತಿ ಉಳಿಸುವ ಉದ್ದೇಶವಿತ್ತೇ ಎಂದು ತನ್ನೊಳಗೇ ಪ್ರಶ್ನಿಸಿಕೊಳ್ಳುತ್ತಾಳೆ. ತನ್ನನ್ನು ಶಂಕಿಸುವ ರಾಮ ಆಕೆಗೆ ರಾವಣನಿಗಿಂತ ದೊಡ್ಡ ರಾಕ್ಷಸನಂತೆ ಕಾಣುತ್ತಾನೆ. ಉದ್ವೇಗಗೊಂಡು ಹತ್ತಿರದಲ್ಲೇ ಅಡಗಿ ಮಾಡುತ್ತಿರುವವರಿಗೆ ಒಂದು ಶವಸಂಸ್ಕಾರಕ್ಕೆ ಬೇಕಾಗುವಷ್ಟು ಸೌದೆಗಳನ್ನು ಜೋಡಿಸಲು ಹೇಳುತ್ತಾಳೆ. ಆಗ ಆಕೆ ಆತ್ಮಹತ್ಯೆ ಮಾಡಿಕೊಳ್ಳದಂತೆ ತಡೆಯುವುದು ಲಕ್ಷ್ಮಣ.

ರಾಮ 18ರ ಪ್ರಾಯದ ಯುವಕನಾಗಿದ್ದಾಗ ಅಹಲ್ಯೆ ಪ್ರಕರಣ ನಡೆಯುತ್ತದೆ. ಅಹಲ್ಯೆಯ ವ್ಯಭಿಚಾರ ಮಾಡಿದ್ದರಿಂದ ಆಕೆಯ ಪತಿ ಋಷಿ ಗೌತಮ ಆಕೆಯನ್ನು ತ್ಯಜಿಸಿರುತ್ತಾನೆ. ಆಗ ಅಹಲ್ಯೆಯನ್ನು ಕ್ಷಮಿಸುವಂತೆ ರಾಮನೇ ಆಕೆಯ ಗಂಡನಿಗೆ ಮನವರಿಕೆ ಮಾಡಿಕೊಟ್ಟಿರುತ್ತಾನೆ. ಅದನ್ನು ನೆನಪಿಸುವ ಲಕ್ಷ್ಮಣ ಅವರಿಬ್ಬರಿಂದ ಮತ್ತೆ ಅಗ್ನಿಯ ಪ್ರದಕ್ಷಿಣೆ ಮಾಡಿಸುತ್ತಾನೆ.


ಅಯೋಧ್ಯೆಗೆ ಹಿಂದಿರುಗುವಾಗ ಸೀತೆಗೆ ವಾಲಿಯನ್ನು ರಾಮ ಕೊಂದದ್ದು ಗೊತ್ತಾಗುತ್ತದೆ. ಆಕೆ "ಬೇರೊಬ್ಬನೊಡನೆ ಮಲ್ಲಯುದ್ಧ ಮಾಡುತ್ತಿದ್ದವನ ಮೇಲೆ ಮರೆಯಲ್ಲಿ ನಿಂತು ಬಾಣಪ್ರಯೋಗ ಮಾಡಿ ಕೊಲ್ಲುವುದು ಧರ್ಮವೇ? ತಮ್ಮನ ಹೆಂಡತಿಯನ್ನು ಅಣ್ಣನೂ ಅಣ್ಣನ ಹೆಂಡತಿಯನ್ನು ತಮ್ಮನೂ ಅನುಭೋಗಿಸುವ ಜನರ ಸಹಾಯ ಪಡೆದು ನನ್ನ ಹುಡುಕಿಸಿ ಬಿಡಿಸಿಕೊಂಡು ಬಂದದ್ದು ನ್ಯಾಯಮಾರ್ಗವೇ? ಇವನ ಧರ್ಮಸೂಕ್ಷ್ಮದ ಬಗೆಗೆ ಸಂಶಯ ಹುಟ್ಟಿತು" ಎಂದುಕೊಳ್ಳುತ್ತಾಳೆ. ಅಷ್ಟೊತ್ತಿಗೆ ಆಕೆಗೆ ರಾಮನ ಬಗ್ಗೆ ಎಂತಹ ನಿರಾಶೆ ಆಗಿರುತ್ತದೆಂದರೆ ಆಕೆಯನ್ನು ಪಲ್ಲಕ್ಕಿಯ ಮೇಲೆ ಕೂರಿಸಿಕೊಂಡು ಸಾಗಿಸುತ್ತಿದ್ದರೆ "ಹೆಣವನ್ನು ಅಲಂಕರಿಸಿ ಚಟ್ಟದ ಮೇಲೆ ಕೂರಿಸಿ ಮೆರವಣಿಗೆಯಲ್ಲಿ ಒಯ್ಯುತ್ತಿರುವಂತೆ" ಭಾಸವಾಗುತ್ತದೆ. ಅಷ್ಟೇ ಅಲ್ಲ, ಆ ಪಲ್ಲಕ್ಕಿಯು ರಾವಣನ ಸೈನಿಕರು ತನ್ನನ್ನು ಸಾಗಿಸಿದ ವಾಹನವನ್ನು ನೆನಪಿಸಿ "ಅದು ಮಾನಭಂಗ ಮಾಡಲು ಒಯ್ಯುತ್ತಿದ್ದ ವಾಹನ. ಇದು ಮಾನಭಂಗವನ್ನು ಸ್ಥಿರಪಡಿಸಿ ಸಾಗಿಸುತ್ತಿರುವ ವಾಹನ" ಎಂದುಕೊಳ್ಳುತ್ತಾಳೆ.

ಬ್ರಾಹ್ಮಣ ಬಾಲಕ ಸತ್ತಿದ್ದರಿಂದ ತಪಸ್ಸು ಮಾಡುತ್ತಿದ್ದ ಶೂದ್ರ ಶಂಭೂಕನನ್ನು ರಾಮ ಕೊಂದದ್ದು ಸೀತೆಗೆ ಗೊತ್ತಾದಾಗಲೂ ಅವಳಲ್ಲಿ ಸಂಶಯಗಳು ಮೂಡುತ್ತವೆ. "ಹದಿನಾಲ್ಕು ವರ್ಷದ ಆ ಹುಡುಗ ಸರಿಯಾದ ಚಿಕಿತ್ಸೆ ಇಲ್ಲದೆ ಸತ್ತಿದ್ದರೆ, ತಕ್ಕ ಆಹಾರವಿಲ್ಲದೆ ಹಸಿವಿನಿಂದ ಸತ್ತಿದ್ದರೆ, ರಾಜನ ಹೊಣೆಯಾಗುತ್ತಿತ್ತು. ಎಲ್ಲೋ ಯಾರೋ ತನ್ನ ಪಾಡಿಗೆ ತಪಸ್ಸು ಮಾಡಿಕೊಂಡಿದ್ದಕ್ಕೂ ಇನ್ನೆಲ್ಲೋ ಒಬ್ಬ ಹುಡುಗ ಸತ್ತಿದ್ದಕ್ಕೂ ಯಾವ ಸಂಬಂಧ? ಯಾವುದೋ ವರ್ಷ ಮಳೆಯಾಗದಿದ್ದಕ್ಕೂ ರಾಜನ ಧರ್ಮಾಧರ್ಮಗಳಿಗೂ ಎಲ್ಲಿಯ ಸಂಬಂಧ? ... ಆತ್ಮೀಯ ಮಿತ್ರ (ಬೇಡ) ಗುಹನೇ ತಪಸ್ಸಿಗೆ ಕೂತಿದ್ದರೆ ಅವನ ತಲೆಯನ್ನೂ ಕಡಿಯುತ್ತಿದ್ದನೆ?" ಎಂದು ಚಿಂತಿಸುತ್ತಾಳೆ.

ತನ್ನನ್ನು ಮದುವೆಯಾಗಲು ಹುಟ್ಟಿನ ವರ್ಣ ಮುಖ್ಯವಲ್ಲ ಸಂಸ್ಕಾರ ಎಂದು ವಾದಿಸಿದ್ದ ರಾಮ, ವ್ಯಭಿಚಾರ ಮಾಡಿದ ಅಹಲ್ಯೆ ಕ್ಷಮಾರ್ಹಳೆಂದು ಗೌತಮ ಋಷಿಗಳನ್ನು ಒಪ್ಪಿಸಿದ್ದ ರಾಮ ತನ್ನ ಆಣೆಪ್ರಮಾಣ, ಸೆರಮನೆಯ ಪ್ರಮಾಣಪೂರ್ವಕ ಸಾಕ್ಷಿ ಇದ್ದರೂ ತನ್ನನ್ನು ತ್ಯಜಿಸಿದ್ದ ರಾಮನನ್ನು ನೆನಪು ಮಾಡಿಕೊಂಡು "ರಾಮ, ನಾನು ಪ್ರೀತಿಸಿದುದು ನಿನ್ನ ಆ ತಾರುಣ್ಯದ ಮುಕ್ತಮನಸ್ಸನ್ನು. ಸಿಂಹಾಸನದ ಮೇಲೆ ಕುಳಿತ ಬಂಧಿತ ಮನಸ್ಸನ್ನಲ್ಲ. ನಿನ್ನ

▶▶ 11

ಹಳಿಯಾಳ: ಮುದಿ ಹುಲಿ ಗಾಯ ನೆಕ್ಕುತ್ತಿದೆ!!


ದೇಶಪಾಂಡೆ

ದೋಷಪಾಂಡೆ ಸಾಹೇಬ ಉರುಫ್ ಆರ್.ವಿ. ದೇಶಪಾಂಡೆ ಎಂದರೆ ಸುಮ್ಮನೆ ಮಾತಲ್ಲ, ಆತ ಸಿಎಂ ಮಟೇರಿಯಲ್; ಸಕಲ ಪಕ್ಷದಲ್ಲೂ ಕೈಯಾಡಿಸಿ ಸ್ವಾರ್ಥ ಸಾಧಿಸಬಲ್ಲ ಸಮಯಸಾಧಕ ನಿತ್ಯ ರಾಜಕಾರಣಿ! ರಾಜ್ಯದ ಕಾಯಂ ಬೃಹತ್ ಕೈಗಾರಿಕಾ ಮಂತ್ರಿಯಂತಾಗಿರುವ ದೋಷಪಾಂಡೆ ರಾಜಕಾರಣ ಲಾಭದಾಯಕ ಉದ್ಯಮದಂತೆ ನಿಭಾಯಿಸುತ್ತಿರುವ ಪಕ್ಕಾ ಕಂತ್ರಿ ವ್ಯಾಪಾರಸ್ಥ!! ಉತ್ತರ ಕನ್ನಡದ ಮೂಲೆಯ ಬರ-ಬಿಸಿಲುಗಳ ಬಯಲುಸೀಮೆಯ ಹಳಿಯಾಳದ ಈ ಅಲ್ಪಸಂಖ್ಯಾತ ಜಿಎಸ್‌ಬಿ-ಕೊಂಕಣಿಗ ಕ್ಷೇತ್ರದ ಬಹುಸಂಖ್ಯಾತ ಮರಾಠರಿಗೆ ಮಂಕುಬೂದಿ ಎರಚುತ್ತ ಸಮೃದ್ಧ ಪುಢಾರಿಯಾಗಿ ಕೊಬ್ಬಿದ್ದೇ ಒಂದು ರೋಚಕ ವೃತ್ತಾಂತ.

ಯಾವುದೇ ಸೈದ್ಧಾಂತಿಕ ಬದ್ಧತೆ, ಚಳವಳಿ ಹಿನ್ನೆಲೆ ಒತ್ತಟ್ಟಗಿರಲಿ, ಕನಿಷ್ಠ ಜನಪರ ಕಾಳಜಿಯೂ ದೋಷಪಾಂಡೆಯಲ್ಲಿ ಕಾಣಿಸದು. ಆತನದು ಏನಿದ್ದರೂ ಪಾಳೆಗಾರಿಕೆ ದರ್ಬಾರು. ದೇವಸ್ಥಾನ-ಕಲ್ಯಾಣಮಂಟಪ ಕಟ್ಟಸೋದು, ಕುಸ್ತಿ ಆಡಿಸಿ ಚಂದ ನೋಡೋದು, ಹಣ-ಹೆಂಡ, ಚಿನ್ನ-ಸೀರೆ ಹಂಚಿ ಓಟಿನ ಬೇಟೆಯಾಡೋದೇ ಆತನ ಜಾಯಮಾನ. ಹಳಿಯಾಳದಲ್ಲಿ ದೋಷಪಾಂಡೆ ಎಂಟು ಬಾರಿ ಸ್ಪರ್ಧಿಸಿ ಏಳು ಸಲ ಗೆದ್ದಿದ್ದಾರೆ. ಒಮ್ಮೆ ತಾನೇ ಫ್ಯೂಡಲ್ ರಾಜಕಾರಣದ ಅಂಗಳದಲ್ಲಿ ಅಂಬೆಗಾಲಿಕ್ಕಲು ಕಲಿಸಿ ಪೋಷಿಸಿದ್ದ ಪೋರನ ಎದುರು ಸೋತಿದ್ದೂ ಇದೆ. ಈಗ ಸಿದ್ದು ಸರ್ಕಾರದ ವಜನ್‌ದಾರ್ ಮಂತ್ರಿ ಮಾಂಡಲೀಕನಾಗಿರುವ ದೋಷಪಾಂಡೆ ದಿಲ್ಲಿತನಕ ಬೇರು-ಬಿಳಲು ಹಬ್ಬಿಸಿ ಹುಲುಸಾಗಿ ಬೆಳೆದಿದ್ದಾರೆ. ಆದರೆ ಕೇವಲ ನಾಲ್ಕೇ ನಾಲ್ಕು ವರ್ಷದಲ್ಲಿ ದೋಷಪಾಂಡೆಯ ರಾಜಕಾರಣದ ಚಕ್ರ ಬರೋಬ್ಬರಿ ಒಂದು ಸುತ್ತು ತಿರುಗಿಬಿಟ್ಟಂತಾಗಿದೆ!

ಹಳಿಯಾಳದಲ್ಲಿ ದೋಷಪಾಂಡೆಯು ಪತನ ಪ್ರಾರಂಭವಾಯ್ತಾ? ಮತ್ತದೇ ಜಾತ್ಯಸ್ಥ ವಟು-ಮಾಜಿ ಶಾಸಕ ಸುನಿಲ್ ಹೆಗಡೆ ಕೈಲಿ ಸೋಲುವ ಕಾಲಘಟ್ಟಕ್ಕೆ ಆತ ಬಂದು ನಿಂತಿದ್ದಾರಾ? ಹಳಿಯಾಳ-ಜೋಯಿಡಾದಲ್ಲಿ ಜಿಪಂ-ತಾಪಂ-ಗ್ರಾಪಂ-ತಾಪಂಗಳ ಮೇಲೆಲ್ಲ ಹಿಡಿತ ಸ್ಥಾಪಿಸಿ ಸಾಮ್ರಾಜ್ಯ ಕಟ್ಟಿಕೊಂಡಿದ್ದರೂ ಎಪಿಎಂಸಿ ಚುನಾವಣೆಯಲ್ಲಿ ದೋಷಪಾಂಡೆ ಪಡೆಗೇಕೆ ಮುಟ್ಟಿ-ಮುಟ್ಟಿ ನೋಡಿಕೊಳ್ಳುವಂಥ ಹೊಡೆತ ಬಿತ್ತು? ನೀಚ ನಾಲಿಗೆಯ ಸೇನಾಧಿಪತಿ-ಎಮ್‌ಎಲ್‌ಸಿ ಶ್ರೀಕಾಂತ್ ಘೋಟನೇಕರ್ ಪುಂಡಾಟಕ್ಕೆ ದೇಶಪಾಂಡೆ ದಂಡ ಕಟ್ಟಬೇಕಾಗಿ ಬಂತಾ? ಅಥವಾ ದೋಷಪಾಂಡೆ ಬಗೆಗಿರುವ ನಕಾರಾತ್ಮಕ ಭಾವನೆ ಮತ್ತೆ ಮರುಕಳಿಸುತ್ತಿದೆಯಾ? ಎಂಬಿತ್ಯಾದಿ ಚರ್ಚೆಗಳೀಗ ಜಿಲ್ಲೆಯಲ್ಲಿ ಜೋರಾಗುತ್ತಿದೆ.

ಜೋಯಿಡಾ ತಾಲೂಕನ್ನು ಒಳಗೊಂಡ ಹಳಿಯಾಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆಡಳಿತ ಮಂಡಳಿಗೆ ನಡೆದ ಚುನಾವಣೆ ಫಲಿತಾಂಶ ಇದೆಯಲ್ಲ, ಅದು ದೋಷಪಾಂಡೆ ಮತ್ತಾತನ ಪುಂಡ-ಭಂಡ ಬಂಟನೂ ಎಮ್ಮೆಲ್ಸಿಯೂ ಆಗಿರುವ ಶ್ರೀಕಾಂತ ಘೋಟನೇಕರ್‌ನ ಗೂಂಡಾ ಗರ್ದಿಗೆ ಜನ ಬೇಸತ್ತಿರುವುದನ್ನು ನಿಸ್ಸಂಶಯವಾಗಿ ಬಿಂಬಿಸುತ್ತಿದೆ. ಹಳಿಯಾಳ-ಜೋಯಿಡಾ ಅಸೆಂಬ್ಲಿ ಕ್ಷೇತ್ರದಲ್ಲಿ ಹೆಚ್ಚು ಮತದಾರರು ಇರುವುದು ಹಳಿಯಾಳ ಏರಿಯಾದಲ್ಲಿ. ಇಲ್ಲಿಯೇ ದೇಶಪಾಂಡೆಯ ಪಟಾಲಮ್ ಮಕಾಡೆ ಮಲಗಿದೆ. ಹಳಿಯಾಳದ ಎಂಟು ಕ್ಷೇತ್ರಗಳಲ್ಲಿ ಮಾಜಿ ಶಾಸಕ ಸುನಿಲ್ ಹೆಗಡೆ ಬಣ ಐದು ಕ್ಷೇತ್ರಗಳಲ್ಲಿ ಗೆದ್ದಿದೆ. ಬರೀ ಮೂರರಲ್ಲಿ ದೋಷಪಾಂಡೆ-ಘೋಟನೇಕರ್ ಗ್ಯಾಂಗ್ ತಿಣುಕಾಡಿ-ಒದ್ದಾಡಿ ದಡ ಸೇರಿದೆ. ದೇಶಪಾಂಡೆ ಬೆಂಬಲಿತರು ಸಣ್ಣ-ಸಣ್ಣ ಅಂತರದಲ್ಲಿ ಎದುಸಿರುಬಿಡುತ್ತ ಸೋಲಿಂದ ತಪ್ಪಿಸಿಕೊಂಡರೆ, ಸುನಿಲ್ ಹೆಗಡೆ ಹುರಿಯಾಳುಗಳು ಭರ್ಜರಿ ಅಂತರದಲ್ಲಿ ಎದುರಾಳಿಗಳನ್ನು ಹಣ್ಣುಗಾಯಿ-ನೀರುಗಾಯಿ ಮಾಡಿದ್ದಾರೆ.


ಗೌಳಿ-ಕುಣಬಿಗಳಂಥ ಬುಡಕಟ್ಟು ಜನ ಸಮೂಹವೇ ಜಾಸ್ತಿಯಿರುವ ಗುಡಗಾಡಿ ಪ್ರದೇಶ-ಜೋಯಿಡಾದಲ್ಲಿ ದೇಶಪಾಂಡೆಯ ದುಡ್ಡಿನ ಆಟ ನಡೆದಿದೆ. ಹಳಿಯಾಳದಲ್ಲಿ ಹರಿಸಿದಂತೆ ಜೋಯಿಡಾದಲ್ಲಿ ಹಣ ಹರಿಸಲು ಸುನಿಲ್ ಹೆಗಡೆಯ ಚಿಡ್ಡಿ ತಂಡಕ್ಕೆ ಅವಕಾಶವಾಗಲಿಲ್ಲ. ಹೀಗಾಗಿ ಜೋಯಿಡಾದ ಎಲ್ಲ ಮೂರು ಸ್ಥಾನ ಕಾಂಗ್ರೆಸ್ ಪಾಲಾಗಿದೆ. ಹೀಗಾಗಿ ಕಾಂಗ್ರೆಸ್ ಎಪಿಎಂಸಿ ಅಧಿಕಾರ ಹಿಡಿದಿದೆ. ಇದು ತಾಂತ್ರಿಕ ಜಯವೇ ಹೊರತು ವೀರೋಚಿತ ವಿಜಯವೇನಲ್ಲ. ಒಟ್ಟು ಮತ ಗಳಿಕೆಯಲ್ಲಿ ಸುನಿಲ್ ಹೆಗಡೆಯೇ ಮುಂದಿದ್ದಾರೆ. ಆತನ ಬಿಜೆಪಿ ಶೇಕಡಾ 50.52 ಮತ ಬಾಚಿದರೆ, ಬಲಾಢ್ಯ ಮಂತ್ರಿ-ಹಳೇ ಹುಲಿ ದೋಷಪಾಂಡೆ-ಘೋಟನೇಕರ್ ಜೋಡಿ ಪಡೆದಿರುವುದು ಶೇಕಡಾ 47.20ರಷ್ಟು ಮತ ಮಾತ್ರ!

ಎಪಿಎಂಸಿ ಎಲೆಕ್ಷನ್‌ನಲ್ಲಿ ದೋಷಪಾಂಡೆಯನ್ನು ಮಣಿಸಿರುವುದು ಮಾಜಿ ಶಾಸಕ ಸುನಿಲ್ ಹೆಗಡೆಯೇ ಹೊರತು ಬಿಜೆಪಿ ಅಲ್ಲ. ಹಳಿಯಾಳ-ಜೋಯಿಡಾದಲ್ಲಿ ಬಿಜೆಪಿಗೆ ನೆಲೆ-ಬೆಲೆಯೇ ಇಲ್ಲ. ಇಡೀ ಉತ್ತರ ಕನ್ನಡದಲ್ಲಿ ಬಿಜೆಪಿ ಈವರೆಗೆ ಗೆಲ್ಲದೇ ಇರುವ ಕ್ಷೇತ್ರವೆಂದರೆ, ಹಳಿಯಾಳ ಮಾತ್ರ. ಜೆಡಿಎಸ್‌ನಿಂದ ಸ್ಪರ್ಧಿಸಿ ದೇಶಪಾಂಡೆಯನ್ನು ಮಣ್ಣು ಮುಕ್ಕಿಸಿದ್ದ ಸುನಿಲ್ ಹೆಗಡೆ ಕುಮ್ಮಿ ಜತೆಗಿನ ಹಣಕಾಸಿನ ಮನಸ್ತಾಪದಿಂದಾಗಿ ಆ ಪಾರ್ಟಿ ಬಿಡಬೇಕಾಯ್ತು. ಸಾಲ ಮಾಡಿ ದಿವಾಳಿಯಾಗಿದ್ದ ಸುನಿಲ್ ಮತ್ತಾತನ ತಂದೆ-ಮಾಜಿ ಎಮ್ಮೆಲ್ಲೆ ವಿ.ಡಿ. ಹೆಗಡೆಗೆ ಕುಮ್ಮಿ ಕೇಳಿದಷ್ಟು ಅಥವಾ ಭರವಸೆ ಕೊಟ್ಟಷ್ಟು ಕಾಸು ಕೊಟ್ಟಿರಲಿಲ್ಲ. ಹಣವಿಲ್ಲದೆ ಹಳಿಯಾಳದಲ್ಲಿ ಜೆಡಿಎಸ್‌ನಿಂದ ಗೆಲ್ಲೋದು ಕಷ್ಟವೆಂಬ ಒಂದೇ ಕಾರಣಕ್ಕೆ ಸುನಿಲ್-ವಿ.ಡಿ. ಹೆಗಡೆ ಬಿಜೆಪಿ ಪಾಲಾಗಿದ್ದಾರೆ.

ಹಾಗೆ ನೋಡಿದರೆ ಸಂಘಟನಾತ್ಮಕವಾಗಿ ಹಳಿಯಾಳದಲ್ಲಿ ಬಿಜೆಪಿ-ಜೆಡಿಎಸ್‌ಗೆ ಅಂಥ ವ್ಯತ್ಯಾಸವೇನಿಲ್ಲ. ಬಿಜೆಪಿಯಲ್ಲಿ ಒಂದಿಷ್ಟು ಒರಿಜನಲ್ ಚಡ್ಡಿ-ಸಂಘ ಸಾಚಾವಿದ್ದರೆ, ಜೆಡಿಎಸ್‌ನಲ್ಲಿ ಅಸಲಿ ದಳವಾಯಿಗಳ ತಂಡವೊಂದಿದೆಯಷ್ಟೇ. ಸುನಿಲ್ ಹೆಗಡೆ ಈ ಎರಡು ಪಕ್ಷದಲ್ಲಿ ಯಾವುದಕ್ಕೆ ಹೋದರೂ ಆತ ಸ್ವಂತ ಇಮೇಜಿನಲ್ಲೇ ಈಸಬೇಕು. ಬಿಜೆಪಿಯಲ್ಲಿ ಹಣದ ಕೊರತೆಯಿಲ್ಲದಿರುವುದರಿಂದ ಸುನಿಲ್‌ಗೆ ಅಡಚಣೆಯೇನೂ ಆಗದು. ಹುಬ್ಬಳ್ಳಿಯ ಪ್ರಹ್ಲಾದ್ ಜೋಶಿಯಂಥ ಬಿಜೆಪಿಯ ಬಿಗ್‌ಬಾಸ್‌ಗಳ ಸಖ್ಯ ಕುದುರಿಸಿಕೊಂಡಿರುವ ಸುನಿಲ್‌ಗೆ ಆರ್ಥಿಕವಾಗಿ ಜೆಡಿಎಸ್‌ಗಿಂತ ಬಿಜೆಪಿಯೇ ಸುರಕ್ಷಿತವಾಗಿ ಕಂಡಿದೆ. ಹಳಿಯಾಳ-ಜೋಯಿಡಾದಲ್ಲಿ ದೇಶಪಾಂಡೆಗೆ ಸೆಡ್ಡು ಹೊಡೆಯುವ ತಾಕತ್ತು ಇರೋದು ಈ ಸುನಿಲ್‌ಗೆ ಮಾತ್ರ.

ಸುನಿಲ್ ದೋಷಪಾಂಡೆ ಗರಡಿಯಲ್ಲೆ ಪಳಗಿದವನು. ಆತನ ತಂದೆ ವೆಂಕಟೇಶ್ ಹೆಗಡೆ ದೇಶಪಾಂಡೆಗೆ ಗುರುಸ್ಥಾನದಲ್ಲಿದ್ದಾತ. ಈ ಅಪ್ಪ-ಮಗ ಈಗಷ್ಟೇ ಸಾಚಾ ತಾವೆಂದು ಪೋಸು ಕೊಟ್ಟರೂ ದೇಶಪಾಂಡೆಯ ದರ್ಬಾರಿನ ಪಾಪದ ಫಲಾನುಭವಿಗಳೇ. ಹಾಗಾಗಿ ಸುನಿಲ್‌ಗೆ ದೋಷಪಾಂಡೆಯ ಪಟ್ಟುಗಳು- ಕುತಂತ್ರಗಳು-ಹಣದ-ತೋಳ್ಬಲದ ಷಡ್ಯಂತ್ರಗಳೆಲ್ಲ ಗೊತ್ತಿದೆ. ಮೊನ್ನೆ ನಡೆದ ಎಪಿಎಂಸಿ ಚುನಾವಣೆಯಲ್ಲಿ ದೇಶಪಾಂಡೆ ಒಂದು ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ತಲಾ ಐವತ್ತು ಸಾವಿರದಂತೆ 'ಫಂಡ್' ಕಳಿಸಿದರೆ, ಸುನಿಲ್ ಒಂದು ಲಕ್ಷ 'ನಿಧಿ' ರವಾನೆ ಮಾಡಿದ್ದ. ಅಸೆಂಬ್ಲಿ ಚುನಾವಣೆಗೆ ಬಿಜೆಪಿ ಹಳಿಯಾಳದಲ್ಲಿ ಅಡಿಪಾಯ ಹಾಕಬೇಕೆಂದರೆ, ಈ ಎಪಿಎಂಸಿ ಕಾಳಗದಲ್ಲಿ ಗೆಲ್ಲಲೇಬೇಕು. ನೀವು ಹಣ ಕೊಟ್ಟರೆ ನಾನು ಗೆದ್ದು ತೋರಿಸ್ತೇನೆಂದು ಬಿಜೆಪಿ ಭೂಪರೆದುರು ಅತ್ತೂ ಕರೆದು ಕಾಸು ತಂದಿದ್ದ ಸುನಿಲ್ ಎದುರಾಳಿ ದೋಷಪಾಂಡೆಗೆ ಸರಿಯಾಗೇ ಗುಮ್ಮಿದ್ದಾನೆ.


ದೇಶಪಾಂಡೆ ಕಳೆದ ಬಾರಿ ಗೆದ್ದಿದ್ದು ಐದು ಸಾವಿರ ಮತಗಳ ಸಣ್ಣ ಅಂತರದಲ್ಲಿ. ಆಗಲೂ ಸುನಿಲ್‌ಗೆ ಹಣಕಾಸಿನ ಕೊರತೆಯೇ ಕಾಡಿತ್ತು. ಆತನೇ ಆಪ್ತರೆದುರು ಇವತ್ತಿಗೂ ಅಲವತ್ತುಕೊಳ್ಳುವ ಪ್ರಕಾರ ಆಗಾತನ ಕೈಲಿ ಇನ್ನೊಂದು ಹತ್ತು ಲಕ್ಷ ಕೊನೆಯ ದಿನದ ಕತ್ತಲರಾತ್ರಿಯಲ್ಲಿ ಇದ್ದಿದ್ದರೆ ದೇಶಪಾಂಡೆ ಮಾಜಿಯಾಗೇ ಇರುತ್ತಿದ್ದರು. ಅಲ್ಲಿಗೆ ಆತನ ರಾಜಕೀಯ ಅವಸಾನವೂ ಆಗುತ್ತಿತ್ತೇನೋ? ಆದರೆ ಹಣ ಹರಿಸಿಯೇ ಆತ ಗೆದ್ದುಬಿಟ್ಟರು. ದೇಶಪಾಂಡೆಯ ಕಪ್ಪು ಕಾಸಿನ ತಾಕತ್ತು ಸುನಿಲ್‌ಗೆ ಗೊತ್ತಿದೆ. ಬಿಜೆಪಿ ಹಿರಿಯರು ಅದೆಷ್ಟೇ ದುಡ್ಡು ಕೊಟ್ಟರೂ ಅದಕ್ಕಿಂತ ಹೆಚ್ಚೇ ದೇಶಪಾಂಡೆ ಖರ್ಚು ಮಾಡುತ್ತಿದ್ದರೆಂಬುದು ಸುನಿಲ್‌ಗೆ ಖಾತ್ರಿಯೂ ಆಗಿದೆ. ಹಾಗಾಗಿ ಆತ ಈಗ ಗೆಲ್ಲಲು ಹಣದೊಂದಿಗೆ ಹಿಂದೂತ್ವದ ಹರಾಮಿ ತತ್ವಗಳಿಗೂ ಜೋತು ಬಿದ್ದಿದ್ದಾನೆ.



...ಸ್.ಎಲ್. ಘೋಟನೇ...


ಖತರ್‌ನಾಕ್-ಮತಾಂಧತೆಯಿಂದ ಮನ ಪರಿವರ್ತ... ಮಾಡಿಕೊಂಡಿದ್ದಾನೆ. ಎಲೆಕ್ಷನ್ ಹತ್ತಿರ ಬಂದಾಗ ಹಿಂದು... ಮತಗಳು ಸಾರಾಸಗಟಾಗಿ ಬಿಜೆಪಿಗೆ ಬರುವಂತೆ ಮಾಡ... ಆತ ಕಮ್ಯುನಲ್ ಕಸರತ್ತು ಮಾಡು... ದೂ(ದು)ರಾಲೋಚನೆಗೂ ಬಿದ್ದಿದ್ದಾನಂತೆ.


ಹಳಿಯಾಳದ ಸಂಘಪರಿವಾರದ ಸರ್ಕಸ್‌ಗಳಲ್ಲಿ ಸುನಿ... ಮುಂಚೂಣಿಯ ಮುಖಂಡನಾಗಿ ಈಗ ಮೈದಳೆದಿದ್ದಾ... ಹೇಗಾದರೂ ಮಾಡಿ ಶಾಸಕನಾಗಲೇಬೇಕೆಂಬ ಹ... ಬಿದ್ದಿರುವ ಸುನಿಲ್‌ಗೆ ಆದಿವಾಸಿ ಚಡ್ಡಿಚತುರ ರಾಜೂಧು... ಕಾಲೆಳೆಯುತ್ತಿದ್ದಾನೆ. ಪ್ರಖರ ಕೋಮುವಾದಿಯಾ... ಬದಲಾಗಿರುವ ಸುನಿಲ್‌ನ ವರಸೆ ಕಂಡು ಕಕ್ಕಾಬಿಕ್ಕಿಯಾಗಿರು... ದೋಷಪಾಂಡೆಗೆ ಕ್ಷೇತ್ರದ ಬಹುಸಂಖ್ಯಾತ ಮರಾಠ... ತನ್ನನ್ನು ನಂಬುವುದಿಲ್ಲ ಎಂಬುದೂ ಪಕ್ಕಾ ಆಗಿಹೋಗಿ... ಹೀಗಾಗಿ ಆತ ಮರಾಠರ ಮತ ಸುನಿಲ್‌ಗೆ ದಂಡಿಯಾ... ಹೋಗದಂತೆ ಮಾಡಲು ಜೆಡಿಎಸ್ ಬೆಳೆಸುವ ಕರಾಮ... ಒಳಗೊಳಗೇ ನಡೆಸುತ್ತಿದ್ದಾರೆ. ಜೆಡಿಎಸ್‌ನ ತಾಲ್ಲೂಕಾಧ... ನಾಗೇಂದ್ರ ಜಿವ್ರೋಜಿಯನ್ನು ಪುಸಲಾಯಿಸುತ್ತಿದ್ದಾರೆಂ... ಪುಕಾರುಗಳೀಗ ಜೆಡಿಎಸ್ ವಲಯದಲ್ಲಿ ಪಿಸುಗುಡುತ್ತಿ... ಈ ಜಿವ್ರೋಜಿ ಮರಾಠ ಮುಂದಾಳು. ಒಂದು ಕಾಲದ... ದೋಷಪಾಂಡೆಯ ದಗಲುಬಾಜಿ ದಂಡಿನಲ್ಲೇ ಇದ್ದಾ... ಬಾಸ್ ಬರೀ ಘೋಟನೇಕರ್-ಆತನ ಪುತ್ರರತ್ನ ಶ್ರೀನಿವಾ... ಗಷ್ಟೇ ತರತರದ ಚಾನ್ಸ್ ಕೊಡುತ್ತಿರುವುದು ಸಹಿಸಲಾಗ... ತಿರುಗಿಬಿದ್ದಾತ. ದೇಶಪಾಂಡೆಯ ದೋಖಾಬಾಜಿಗೆ ಕೆ... ಜೆಡಿಎಸ್ ಸೇರಿದ್ದ ಜೇವ್ರೋಜಿಯನ್ನು ಮರಾಠರ ಬ... ಜೆಡಿಎಸ್ ತಾಲ್ಲೂಕಾಧ್ಯಕ್ಷನಾಗಿ ಪ್ರತಿಷ್ಠಾಪಿಸಿಕೊಂಡಿದೆ.

⏭ 05...


ಸುನಿಲ್ ಹೆಗಡೆ


ಪ್ರಶಾಂತ್ ದೇಶಪಾಂಡೆ



ನಾಗೇಂದ್ರ ಜೇವ್ರೋಜಿ


ಕೆ.ಆರ್. ರಮೇಶ್

ಘೋಟನೇಕರ್ ಲೂಟಿ!!

ಹಳಿಯಾಳ ಸೈತಾನ ಸಚಿವ ದೇಶಪಾಂಡೆಯ ಭಂಡ-ಪುಂಡ ಪಟಾಲಮ್‌ನ ಹಾವಳಿಗೆ ತತ್ತರಿಸಿಹೋಗಿದೆ! ದಿಲ್ಲಿ-ಬೆಂಗಳೂರಿನ ಪವರ್ ಪಾಲಿಟಿಕ್ಸ್-ಪೈಸಾ ಪಾಲಿಟಿಕ್ಸ್‌ನಲ್ಲಿ ನಿರತನಾಗಿರುವ ದೇಶಪಾಂಡೆಯ ನಾಮಬಲದಲ್ಲಿ ಎಮ್ಮೆಲ್ಸಿ ಶ್ರೀಕಾಂತ್ ಘೋಟನೇಕರ್ ಹಳಿಯಾಳದಲ್ಲಿ ದರ್ಬಾರು ನಡೆಸಿಕೊಂಡಿದ್ದಾನೆ. ಗೂಂಡಾಗರ್ದಿ ಗುಣ-ಧರ್ಮದ ಘೋಟನೇಕರ್‌ನ ನಾಲಿಗೆಗೂ ಆಚಾರವಿಲ್ಲ. ಕಂಡ-ಕಂಡವರಿಗೆ 'ಯಾಚಿ ಮಾಯ್ಚಿ' (ಮರಾಠಿ-ಇವನ ಅವ್ವನ್) ಎಂದು ಕೊಳಕು ಕೊಳಕಾಗಿ ಬೈಯ್ಯುತ್ತ ಮೈಮೇಲೇರಿ ಹೋಗುವ ಘೋಟನೇಕರ್ ಫ್ಯಾಮಿಲಿ ಮಾಡುತ್ತಿರುವ ಲೂಟಿಯಂತೂ ಹೇಳತೀರದು.

ಮ್ಯಾಗ್ಗಿಯಂಥ ಮ್ಯಾಗ್ಗಿಯನ್ನೇ ಮಣಿಸಿದ, ಜಿಲ್ಲೆಯ ಅಷ್ಟೂ ಪಕ್ಷದ ಬಲಾಢ್ಯರ ಹುಟ್ಟಡಗಿಸಿದ ವೀರಾಧಿವೀರ ತಾನೆಂದು ಪೋಸು ಕೊಡುವ ದೇಶಪಾಂಡೆ ಸಾಹೇಬ ಹಳಿಯಾಳದಲ್ಲಿ ಘೋಟನೇಕರ್‌ನ ಸೂತ್ರ ಬೊಂಬೆಯಂತಾಡುತ್ತಿರುವುದು ವಿಚಿತ್ರವಾದರೂ ಸತ್ಯ. ಒಮ್ಮೆ ತನ್ನದೇ ಗರಡಿಯ ಎಳಸು ಹುಡುಗ ಸುನಿಲ್ ಹೆಗಡೆಯಿಂದ ಹೀನಾಯ ಸೋಲು ಕಂಡ ಬಳಿಕ ದೇಶಪಾಂಡೆಗೆ ಹಳಿಯಾಳದ ಬಹುಸಂಖ್ಯಾತ ಮರಾಠರ ಮಹತ್ವ ಏನೆಂಬುದು ಅರ್ಥವಾಗಿದೆ. ಹೀಗಾಗಿ ಮರಾಠ ಸಮುದಾಯದ ಘೋಟನೇಕರ್‌ನನ್ನು ಆತ ಅವಲಂಬಿಸಬೇಕಾಗಿ ಬಂದಿದೆ. ದೇಶಪಾಂಡೆಯ ದೌರ್ಬಲ್ಯದ ದುರ್ಲಾಭ ಘೋಟನೇಕರ್ ಸಕತ್ತಾಗಿಯೇ ಎತ್ತುತ್ತಿದ್ದಾನೆ.


ಶ್ರೀನಿವಾಸ್ ಘೋಟನೇಕರ್

ಬಹುಶಃ ದೋಷಪಾಂಡೆ ತನ್ನ ಮೂರೂ ಕಾಲು ದಶಕದ ಒಕ್ಕೈಪರ್ವದಲ್ಲಿ ಇಷ್ಟು ಗತಿಗೇಡಿಯಾಗಿದ್ದು ಹಿಂದೆಂದೂ ಇಲ್ಲ. ದಳದಲ್ಲಿರಲಿ, ಕಾಂಗ್ರೆಸ್‌ನಲ್ಲಿರಲಿ ದೇಶಪಾಂಡೆ ಸ್ಥಳೀಯಾಡಳಿತ ಸಂಸ್ಥೆಗಳ ಕ್ಷೇತ್ರದಿಂದ ಒಮ್ಮೆ ಎಮ್ಮೆಲ್ಸಿ ಮಾಡಿದವರಿಗೆ ಮತ್ತೊಂದು ಚಾನ್ಸ್ ಕೊಟ್ಟದ್ದೇ ಇಲ್ಲ. ಆದರೆ ಈ ಘೋಟನೇಕರ್‌ನ ಬ್ಲ್ಯಾಕ್ ಮೇಲ್‌ಗೆ ಕಂಗಾಲಾದ ದೇಶಪಾಂಡೆ ಆತನಿಗೆ ಎರಡನೇ ಬಾರಿ ಎಮ್ಮೆಲ್ಸಿ ಮಾಡಿದ್ದಾರೆ. ಜಿಲ್ಲಾ ಮಧ್ಯವರ್ತಿ ಬ್ಯಾಂಕಿನ ಅಧ್ಯಕ್ಷ ಸ್ಥಾನ ಘೋಟನೇಕರ್‌ಗೆ ಸಿಗದಂತೆ ದೇಶಪಾಂಡೆ ತಂತ್ರ ಮಾಡಿದ್ದರು. ಆದರೆ ಘೋಟನೇಕರ್ ಸೆಡ್ಡು ಹೊಡೆದು ಕೆಡಿಸಿಸಿ ಬ್ಯಾಂಕಿನ ಪಟ್ಟವೇರಿಬಿಟ್ಟ. ಈ ಘೋಟನೇಕರ್ ಮರಾಠರ ಪ್ರಶ್ನಾತೀತ ನಾಯಕನೇನೂ ಅಲ್ಲ. ಆತನ ಕಂಡರೆ ಸ್ವ-ಜಾತಿಯವರೇ ಕ್ಯಾಕರಿಸಿ ಉಗಿಯುತ್ತಾರೆ. ಆದರೆ ಕ್ಷೇತ್ರದಲ್ಲಿ ಮೈನಸ್‌ನಲ್ಲಿರುವ ದೇಶಪಾಂಡೆಗೆ ಈ ಘೋಟನೇಕರ್ ಅರ್ಧ ಪರ್ಸೆಂಟ್ ಓಟು ಕಟ್ ಮಾಡಿದರೂ ಸಾಕು ಗಂಡಾಂತರವೇ.

ಹಾಗಾಗಿ ದೇಶಪಾಂಡೆ ಆತನ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಬೇಕಾಗಿದೆ. ಪಾಪ... ಮಜಾ ಎಂದರೆ, ದೇಶಪಾಂಡೆ ಜಗಳಗಂಟ ಘೋಟನೇಕರ್‌ನ ಸಂಪ್ರೀತ ಗೊಳಿಸಿದಂತೆ... ಆತನಿಗೆ ಹಳಿಯಾಳದಲ್ಲಿ ಹಾನಿಯೇ ಆಗುತ್ತಿದೆ. ದೇಶಪಾಂಡೆ ಮಂತ್ರಿಗಿರಿ ಪವ... ಬಳಸಿ ಕ್ಷೇತ್ರಕ್ಕೆ ಕೋಟಿ-ಕೋಟಿ ಅನುದಾನ ತರುತ್ತಿದ್ದಾರೆ. ಈ ಹಣದ ಕಾಮಗಾರಿಗಳ... ದೊಡ್ಡ ಪಾಲು ಘೋಟನೇಕರ್ ಮತ್ತವನ ಪುತ್ರರತ್ನ ಶ್ರೀನಿವಾಸ್ ಹೊಡೆದುಕೊಳ್ಳುತ್ತಿದ್ದಾ... ಶ್ರೀನಿವಾಸ್ ಸರ್ಕಾರಿ ಗುತ್ತಿಗೆ ಮಾಡುವ ನೆಪದಲ್ಲಿ ಲೂಟಿ ಮಾಡುತ್ತಿದ್ದಾನೆ! ಕೋಟ... ಕೋಟಿ ಬಿಲ್ ವಿದ್ಯಾ ಪಾರಂಗತನಾಗಿರುವ ಶ್ರೀನಿವಾಸ್ ಅಪ್ಪ ಎಮ್ಮೆಲ್ಸಿ ಆಗಿರುವುದು... ಸ್ವಾಹಾಕ್ಕೆ ಸಹಕಾರಿಯಾಗಿದೆ. ಕೆಲವೇ ವರ್ಷದ ಹಿಂದೆ ತಿರಬೋಕಿಯಂತಿದ್ದ ಎಮ್ಮೆಲ್... ಘೋಟನೇಕರ್ ಇವತ್ತು ಕೋಟಿಗೆ ತೂಗುತ್ತಾನೆ.

ಈ ಅಪ್ಪ-ಮಗ ಎದುರು ಕಂಡದ್ದು ಯಾವುದೂ ಉಳಿಸುವುದಿಲ್ಲ! ಎಲ್ಲಿ ತಟ್ಟಿದರ... ಹಣ ಉದುರುತ್ತದೆ, ಹೇಗೆ ಗುಟುರು ಹಾಕಿದರೆ ಸರ್ವಶ... ದೇಶಪಾಂಡೆಯೇ ನಡುಗುತ್ತಾನೆಂಬುದು ಶ್ರೀಕಾಂತ್-ಶ್ರೀನಿವಾಸ... ಪತ್ತೆ ಹಚ್ಚಿಕೊಂಡಿದ್ದಾರೆ. ಈ ಜೋಡಿ ಅಸಹಾಯಕ-ಅಮಾಯಕ... ರೈತರನ್ನೂ ಬಿಟ್ಟಿಲ್ಲ. ಶ್ರೀನಿವಾಸ್ ಸರ್ಕಾರಿ ಕಂಟ್ರಾಕ್ಟರಿಕೆ ಜತೆಜತೆಗೆ... ಕಳ್ಳ ಹೆಂಡದ ಹೋಟೇಲು, ಟ್ರ್ಯಾಕ್ಟರ್ ಏಜೆನ್ಸಿ ನಡೆಸುತ್ತಾನೆ. ರೈತರಿಗ... ಸಹಕಾರಿ ಸಂಘಗಳಲ್ಲಿ ಟ್ರ್ಯಾಕ್ಟರ್ ಸಾಲ ಬೇಕಿದ್ದರೆ ಶ್ರೀನಿವಾಸ... ಮಹಾಲಕ್ಷ್ಮೀ ಏಜೆನ್ಸಿಯಿಂದ ಕೊಟೇಷನ್ ಪಡೆಯಲೇಬೇಕು. ಬೇರ... ಕಡೆಯಲ್ಲಿ ಕೊಟೇಷನ್ ತಂದರೆ ಸಾಲ ಸಿಗದು; ಟ್ರ್ಯಾಕ್ಟರೂ... ಕೈಗೆಟುಕದು!

ಹಳಿಯಾಳ ರೈತರ ಊರು. ಕಬ್ಬು-ಭತ್ತ ಬೆಳೆಯುವ ಇಲ್ಲಿಯ... ರೈತರಿಗೆ ಟ್ರ್ಯಾಕ್ಟರ್ ಅನಿವಾರ್ಯ. ಹೀಗಾಗಿ ತಿಂಗಳಿಗೆ ಹತ್ತಾರು... ಟ್ರ್ಯಾಕ್ಟರ್ ಮಾರಾಟವಾಗುತ್ತಿದೆ. ಒಂದು ಟ್ರ್ಯಾಕ್ಟರ್ ಮೇಲೆ ಶ್ರೀನಿವಾಸ್‌ಗೆ... ಅರ್ಧ ಲಕ್ಷದಷ್ಟು ನಿಕ್ಕಿ ಲಾಭವಿದೆ. ಮಗನ ಉದ್ಯಮ ಬೆಳೆಸಲು ಅಪ್ಪ ಶ್ರೀಕಾಂತ... ಘೋಟನೇಕರ್ ಕೆಡಿಸಿಸಿ ಬ್ಯಾಂಕಿನ ಬಲ ದುರುಪಯೋಗಿಸಿ ಸಿಕ್ಕಿಬಿದ್ದಿದ್ದಾನೆ. ಹಳಿಯಾಳದಲ್ಲಿ... ಟ್ರ್ಯಾಕ್ಟರ್ ಪೂರೈಕೆಗೆ ಶ್ರೀನಿವಾಸ್‌ನ ಮಹಾಲಕ್ಷ್ಮೀ ಏಜೆನ್ಸಿಯನ್ನು ಕೆಡಿಸಿಸಿ ಬ್ಯಾಂಕ್... ನಿಯೋಜಿಸಿದೆ. ಈ 'ಅಧಿಕೃತ' ಏಜೆನ್ಸಿ ಜತೆಗೇ ಹಳಿಯಾಳದ ರೈತರು-ಸೊಸೈಟಿಗಳು... ವ್ಯವಹಾರ ಮಾಡಬೇಕೆಂಬ ಅರ್ಥದ ಸುತ್ತೋಲೆ ಕೆಡಿಸಿಸಿ ಬ್ಯಾಂಕ್ ಹೊರಡಿಸಿದೆ.

ಘೋಟನೇಕರ್ ಫ್ಯಾಮಿಲಿಯ ಇಂಥ ಹಗಲು ದರೋಡೆ ಹಳಿಯಾಳದಲ್ಲಿ ಅಸಹ್ಯ... ಮೂಡಿಸಿಬಿಟ್ಟಿದೆ! ಜನರ ಸಿಟ್ಟು ಈ ತೋಳಗಳ ಸಾಕುತ್ತಿರುವ ದೇಶಪಾಂಡೆ ಮೇಲೆ... ಕೇಂದ್ರೀಕೃತವಾಗಿದೆ. ಮೊನ್ನೆ ಎಪಿಎಂಸಿ ಎಲೆಕ್ಷನ್‌ನಲ್ಲಿ ದೇಶಪಾಂಡೆಗೆ ಆದ ಮುಖಭಂಗ... ಘೋಟನೇಕರ್ ಕುಟುಂಬದ ಕಳಂಕವೂ ಒಂದು ಕಾರಣ!

ಪುಕ್ಕಲುಶೆಟ್ಟಿಯ ಪ್ರಲಾಪ!

ಧೂತ್ತೇರಿ

ಯಾಹೂ


ಧಾರವಾಡದ ಸಾಹಿತ್ಯ ಸಂಭ್ರಮ ಸವಿಯಾದ ...ಜನದೊಂದಿಗೆ ಸಾಂಗವಾಗಿ ನೆರವೇರುತ್ತಿರುವಾಗ ...ಂಪುರದ ಶೆಟ್ಟಿಯೊಬ್ಬ ಹದಗೆಡಿಸಿದನಂತಲ್ಲಾ. ...ಂಪುರದ ಈ ಶೆಟ್ಟಿಯದ್ದು ಒಂದು ಪುಟ್ಟ ಇತಿಹಾಸವೇ ... ಅತಿಹೆಚ್ಚು ಸ್ವಾತಂತ್ರ್ಯ ಹೋರಾಟಗಾರರು, ಕಲೆ, ...ತ್ಯ, ಸಂಗೀತದಲ್ಲಿ ಶ್ರೇಷ್ಠ ಅಭಿರುಚಿ ಬೆಳೆಸಿಕೊಂಡು ...ಿಕಿದ ಅಜ್ಜಂಪುರದ ಜನ ರಾಜ್ಯದಲ್ಲೇ ಮೊದಲಬಾರಿ ...ನಾಂತರ ಪ್ರದೇಶದಲ್ಲಿ ಕಲಾಶ್ರೀ ರಂಗಮಂದಿರ ...ಸಿದರು. ಅಷ್ಟೇ ಅಲ್ಲ, ಡಾ. ರಾಜಕುಮಾರ್ ಕರೆಸಿ ...ಾಟಿಸಿಕೊಂಡವರು. ಇಂತ ಊರಿನ ಮಂಜುನಾಥ ...ಬು ಮಾನವೀಯ ಕಾಳಜಿಯುಳ್ಳ ವ್ಯಕ್ತಿಯಾಗಿದ್ದನಂತೆ. ... ಮನೆಯಲ್ಲಿ ಉಂಡು ಮಲಗಿದ್ದು ಹೋಗಲು ಬರುತ್ತಿದ್ದ ...ಎಸ್‌ಎಸ್ ಕಾರ್ಯಕರ್ತರಿಗೆ ವಿವೇಕ ಹೇಳಿ "ನಿಮ್ಮ ...ರ್ಗ ಸರಿಯಿಲ್ಲ. ಚೆನ್ನಾಗಿ ಓದಿ ಕೆಲಸಕ್ಕೆ ಸೇರಿ. ...ಾಜಸೇವೆ ಮಾಡಿ" ಎಂದು ಹೇಳುತ್ತಿದ್ದನಂತೆ. ಭಾರತದ ...ದ್ದಗಲಕ್ಕೂ ಹರಡಿಕೊಂಡಿರುವ ಛದ್ಮವೇಷದ ಚೆಡ್ಡಿಗಳ ... ಯೋಚಿಸುತ್ತಲೇ ಅವರ ಬಗ್ಗೆ ಖಂಡನೀಯ ...ಖನವನ್ನು ಬರೆಯುತ್ತಿದ್ದ ಮಂಜುನಾಥ ಲಂಕೇಶರ ...ಿಪಾತ್ರ ಲೇಖಕನಾಗಿದ್ದನಂತಲ್ಲಾ, ಥೂತ್ತೇರಿ!

* * * *

... ಲಂಕೇಶರ ಪ್ರಿಯ ಲೇಖಕನಾಗಿದ್ದ ಈತ ಲೇಖನ ...ಯುತ್ತಿದ್ದುದು ಹೆಂಡತಿ ಹೆಸರಿನಲ್ಲಿ. ಆದ್ದರಿಂದ ...ಜವಾಗಿ ಲಂಕೇಶ್ ಇಷ್ಟು ಚೆನ್ನಾಗಿ ಬರೆವ, ನೋಡಲು ...ಾಗಿರುವ ಇಂತಹ ಹೆಣ್ಣುಮಕ್ಕಳನ್ನು ಪ್ರೋತ್ಸಾಹಿಸಬೇಕು ...ದು ಆಕೆ ಬರೆದುದೆಲ್ಲವನ್ನು ಪ್ರಕಟಿಸುತ್ತಿದ್ದರಂತೆ. ಆದರೆ ...ಮ್ಮ ಅನುಮಾನ ಬಂದು ಪರಿಶೀಲಿಸಲಾಗಿ ...ಯುತ್ತಿದ್ದವಳು ಹೆಂಡತಿಯಲ್ಲ, ಬದಲಾಗಿ ಮಂಜುನಾಥ ... ಎಂದು ಗೊತ್ತಾಯಿತಂತೆ. ಕೂಡಲೇ ಆತನಿಗೆ ಪುಕ್ಕಲು ... ಎಂದು ನಾಮಕರಣ ಮಾಡಿದರಂತಲ್ಲಾ. ಅದ್ಯಾವ ...ಗೆಯಲ್ಲಿ ಪುಕ್ಕಲು ಶೆಟ್ಟಿ ಎಂದು ನಾಮಕರಣ ...ಡಿದರೋ ಏನೋ, ಮಂಜುನಾಥ ಆರ್‌ಎಸ್‌ಎಸ್‌ನ ...ಯ ಕಾರ್ಯಕರ್ತನಾಗಿ ಬದಲಾಗಿ ಹೋದ. ಅಷ್ಟೇ ... ಎಸ್.ಎಲ್. ಭೈರಪ್ಪನನ್ನು ತನ್ನ ಸೋದರ ...ವನೆಂದೂ ಬರೆದುಕೊಂಡ. ಯಾವ ಜಾತಿಯ ...ತೆಯೂ ಗುರುತಿಸಿಕೊಳ್ಳದೆ ಪುರೋಹಿತಶಾಹಿಯಾಗಿಯೇ ...ಿದಿರುವ ಭೈರಪ್ಪ ಶೆಟ್ಟರ ಹುಡುಗನ ಸೋದರ ...ವನಾಗುವುದು ನಿಜವೇ? ಆದರೂ ಈ ಸೋದರ ...ವ ಶೆಟ್ಟಿ ಮನೆಗೆ ಹೋಗಿ ಉಂಡು ಮಲಗಿ ...ುತ್ತಿದ್ದನಂತಲ್ಲಾ, ಥೂತ್ತೇರಿ!!

* * * *

... ಪುಕ್ಕಲು ಶೆಟ್ಟಿಯ ಪಟಾಲಂ ಸದ್ಯ ಜೋರಾಗಿದೆ. ...ಪ್ರೋತ್ಥಾನ ಸಾಹಿತ್ಯ ಸೃಷ್ಟಿಸುವಲ್ಲಿ ಸಕ್ರಿಯವಾಗಿರುವ ... ರೋಗಗ್ರಸ್ತ ಮನಸ್ಸಿನ ಪಡೆ ಮಾಡುವ ಕೆಲಸಗಳ ... ದೊಡ್ಡದಿದೆ. ಮುಖ್ಯವಾಗಿ ಮುಸ್ಲಿಂ ದೊರೆಗಳಿಂದ ...ದು ಆ ಜನಾಂಗ ಜಟಕಾ ಸಾಬಿವರೆಗೆ



ಮಂಜುನಾಥ ಶೆಟ್ಟಿ

ಆಡಿಕೊಳ್ಳುವುದು. ಅವರ ಕೋಟೆಕೊತ್ತಲು ಅರಮನೆಗಳೆಲ್ಲಾ ಹಿಂದೂಗಳ ಆವಾಸಸ್ಥಾನವಾಗಿದ್ದವು ಎನ್ನುವುದು. ಮುಖ್ಯವಾಗಿ ತಾಜಮಹಲ್ ಕೂಡ ಷಹಜಹಾನ್ ಕಟ್ಟಿಸಿದ್ದಲ್ಲ, ಅದೊಂದು ತೇಜೋ ಮಹಾಲಯ ಎಂಬ ಶಿವ ದೇವಾಲಯ ಎಂದು ಸುಳ್ಳು ಹೇಳುವುದು. ಗೋಲಗುಂಬಜ್ ಕೂಡ ನಮ್ಮವರೇ ನಿರ್ಮಿಸುವಾಗ ಸಾಬರು ದಾಳಿ ಮಾಡಿ ತಮಗಿಷ್ಟ ಬಂದಂತೆ ಕಟ್ಟಿಕೊಂಡರು ಎಂದು ಆರೋಪಿಸುವುದು. ಟಿಪ್ಪು ಮತಾಂಧನಾಗಿದ್ದರಿಂದ ಆತ ಎಲ್ಲ ಹಿಂದೂ ದೇವಾಲಯಗಳನ್ನು ಕೊಳ್ಳೆ ಹೊಡೆದ, ಮಲಯಾಳಿಗಳ ರವಿಕೆ ಬಿಚ್ಚಿಸಿದ... ಇಂತ ಅಸಂಖ್ಯಾತ ಕತೆ ಹೊಸೆಯುವ, ಅವುಗಳನ್ನು ಬಿತ್ತರಿಸುವ ಮತ್ತು ಎಂದೂ ರಿಪೇರಿಯಾಗದ ಮೆದುಳನ್ನು ಹೊಂದಿರುವ ಚೆಡ್ಡಿ ಗುಂಪಿನ ಪುಕ್ಕಲು ಶೆಟ್ಟಿಯನ್ನು ಜಾತ್ಯತೀತ ಮನಸ್ಸಿನ ಸಾಹಿತ್ಯ ವೇದಿಕೆಗೆ ಕರೆದ ಗಿರಡ್ಡಿ ನಿಜಕ್ಕೂ ಒಬ್ಬ ಅಸಂಬದ್ಧ ಹಾಸ್ಯಾಸ್ಪದ ವ್ಯಕ್ತಿಯಂತಲ್ಲಾ, ಥೂತ್ತೇರಿ!!

* * * *

ಧಾರವಾಡದ ಸಾಹಿತ್ಯ ಸಂಭ್ರಮಕ್ಕೆ ಬಂದ ಪುಕ್ಕಲುಶೆಟ್ಟರು ನಿಜವಾಗಿ ಏನು ಹೇಳಬೇಕೊ ಅದನ್ನೇ ಹೇಳಿದ್ದಾರೆ. ಅದು ಬಿಟ್ಟು ಬೇರೆ ಸಾಮಗ್ರಿ ಅವರ ಬಳಿ ಇಲ್ಲ, ಏಕೆಂದರೆ ಅದೊಂದು ಸಮೂಹಸನ್ನಿ ಸೃಷ್ಟಿಸುವ ಸುಳ್ಳು. ಆದ್ದರಿಂದ ಅದನ್ನು ಹೇಳಲೇಬೇಕಿರುತ್ತೆ. ಅಂತೆಯೇ ಎಂ.ಎಂ. ಕಲಬುರ್ಗಿ ಹತ್ಯೆಗೆ ಕೌಟುಂಬಿಕ ಕಾರಣ ಎಂದಿರುವುದು ಸರಿಯಾಗಿದೆ. ಮತಾಂಧರು ಎಸಗಿದ ದಾಳಿಯೇ ಕಾರಣ ಅಂದ ಕೂಡಲೇ ಆತನೂ ಸೇರಿಕೊಳ್ಳುವುದರಿಂದ ಅಂತಹ ಹೇಳಿಕೆ ಅನಿವಾರ್ಯ. ವಾಸ್ತವವಾಗಿ ಕಲ್ಬುರ್ಗಿ ಹತ್ಯೆಯ ಹಿಂದೆ ಅವರು ಸಂಶೋಧಿಸಿದ ಕಟು ಸತ್ಯದ ಸಾಲುಗಳು ಕೆಲಸ ಮಾಡಿವೆ. ಕಲ್ಬುರ್ಗಿ ದಾಖಲಿಸಿದ ಸಾಲುಗಳನ್ನು ಸಹಿಸಲಾಗದ ಧರ್ಮಾಂಧರು ಭೂಗತಲೋಕದ ಮೊರೆ ಹೋಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹೀನವಾದ ದಾಳಿ ನಡೆಸಿದ್ದಾರೆ. ಅವರ‍್ಯಾರು ಎಂಬುದು ಸಿಐಡಿ ಮುಂದಿರುವ ಸವಾಲು.

ಕನ್ಹಯ್ಯ ಕುಮಾರನ ಒಂದು ಭಾಷಣಕ್ಕೆ ಇಡೀ ದೇಶದ ಚೆಡ್ಡಿಗಳೆಲ್ಲಾ ತತ್ತರಿಸಿಹೋಗಿರುವ ಉದಾಹರಣೆ ಹಸಿಯಾಗಿರುವಾಗಲೇ ಕಲ್ಬುರ್ಗಿ ಹತ್ಯೆಗೆ ಕೌಟುಂಬಿಕ ಕಾರಣವಿದೆ ಎಂದು ಹೇಳಿರುವ ಶೆಟ್ಟಿ ಕೂಡ ಸಿಐಡಿ ಪೊಲೀಸರ ತಪಾಸಣೆಗೆ ಯೋಗ್ಯನಂತಲ್ಲಾ, ಥೂತ್ತೇರಿ!!

* * * *

ಧಾರವಾಡ ಸಂಭ್ರಮದ ಘಟನೆ ನಂತರ ತನ್ನ ಸಹೋದರನಂತಿರುವ ಶೆಟ್ಟಿಯ ಬೆಂಬಲಕ್ಕೆ ವಿಷ ಭಟ್ಟ ನಿಂತಿದ್ದಾನಂತಲ್ಲಾ. ಎಡಪಂಥವನ್ನು ಬುಡಕಟ್ಟು ಜನರೆಂದು ಸಂಬೋಧಿಸುವ ವಿಷ ಭಟ್ಟ, ಸಾಹಿತ್ಯಸಂಭ್ರಮದಲ್ಲಿ ಎಚ್.ಚಂದ್ರಶೇಖರ್ ಪುಕ್ಕಲು ಶೆಟ್ಟಿಗೆ ತೋರಿದ ಮೆಟ್ಟನ್ನು ತನಗೇ ತೋರಿದ ಮೆಟ್ಟೆಂದು ಭಾವಿಸಿ ಬರೆಯಬಾರದವರ



ಕೈಲೆಲ್ಲಾ ಬರೆಸುತ್ತಿದ್ದಾನಂತಲ್ಲಾ. ಇತ್ತ ಸದರಿ ಮೆಟ್ಟಿನ ಪ್ರಕರಣವನ್ನು ಎಲ್ಲಾ ಮರೆತರೂ, ವಿಶ್ವವಾಣಿ ವಿಷ ಭಟ್ಟ ಅದನ್ನು ನಾಡಿನ ಮೂಲೆಮೂಲೆಗೆ ತಲುಪಿಸುತ್ತಿರುವಾಗಲೇ ಅತ್ತ ಶೆಟ್ಟಿಯ ಗುಂಪು ಶೆಟ್ಟರಿಗೆಲ್ಲಾ ವ್ಯಾಟ್ಸಾಪ್, ಇ-ಮೇಲ್ ಮುಖಾಂತರ ಸಂದೇಶ ಕಳುಹಿಸುತ್ತಿದ್ದಾರಂತಲ್ಲಾ, "ನಮ್ಮ ಜನಾಂಗಕ್ಕೆ ಈವರೆಗೆ ಯಾರೂ ಮೆಟ್ಟು ತೋರಿರಲಿಲ್ಲ, ಆದರೆ ಈಗ, ಸಾರ್ವಜನಿಕ ಸಭೆಯಲ್ಲಿ ಅದೂ ಸಾಹಿತ್ಯದ ಸಭೆಯಲ್ಲಿ, ತಮ್ಮ ಅಭಿಪ್ರಾಯವನ್ನು ನ್ಯಾಯವಾಗಿಯೇ ನೀಡಿದ ಆರ್ಯವೈಶ್ಯ ಕುಲ ತಿಲಕನಿಗೆ ಮೆಟ್ಟು ತೋರಲಾಗಿದೆ. ಇಂತ ವ್ಯಕ್ತಿಗಳಿಗೆ ಮೆಟ್ಟು ಮಾರುವ ಮುನ್ನ ಅವರ ಎಲ್ಲಾ ಪೂರ್ವಾಪರ ಇತಿಹಾಸ ತಿಳಿದು, ಆಧಾರ್ ಕಾರ್ಡ್ ಪರಿಶೀಲಿಸಿ, ಒಂದು ವೇಳೆ ಮೆಟ್ಟು ಮಾರುವುದೇ ಆದರೆ ಅಷ್ಟೇನು ಏಟು ಬೀಳದ ತೆಳುವಾದ ಹವಾಯ್ ಚಪ್ಪಲಿಯನ್ನ ಮಾತ್ರ ಮಾರಬೇಕು" ಎಂಬ ಸಂದೇಶ ಇನ್ನೂ ಬಂದಿಲ್ಲವಂತಲ್ಲಾ, ಥೂತ್ತೇರಿ!!

* * * *

ಸಾಹಿತ್ಯ ಸಂಭ್ರಮದಲ್ಲಿ ನಡೆದ ಕಹಿ ಘಟನೆಗಳಿಂದ ತುಂಬ ನೊಂದಿರುವ ಮಹಾ ಮಾನವಂತರಾದ ಹಂಪಾನಾ ಯಾರಿಗೂ ಮುಖ ತೋರಲಾಗದೆ ಮನೆಯಲ್ಲೇ ಇದ್ದಾರಂತಲ್ಲಾ, ಆದರೂ ಕೈತುಂಬ ಪ್ರಯಾಣಭತ್ಯೆ ಡಬಲ್‌ಬೆಡ್ ರೂಮು ಒದಗಿಸುವವರು ಕರೆದರೆ ಹೋಗಿ ಭಾಷಣ ಬಿಗಿಯುವ ಈ ಹಂಪಾನಾರ ಕಾಲದಲ್ಲಿ ನಡೆದಂತಹ ಸಾಹಿತ್ಯ ಪರಿಷತ್ತಿನ ಜಗಳ ಇನ್ನೂ ಸಾಹಿತಿಗಳ ಮನದಲ್ಲಿದೆ. "ಸರ್ವತಂತ್ರ ಸ್ವತಂತ್ರ ಜಾತ್ಯತೀತವಾದ ಸಾಹಿತ್ಯ ಪರಿಷತ್ತನ್ನೇ ಕುಲಗೆಡಿಸಿರುವ ಈ ಹಂಪಾನಾನಂತವರಿಗೆ ಅವಮಾನವಾಗುವಂತದ್ದು ಸಾಹಿತ್ಯ ಸಂಭ್ರಮದಲ್ಲೇನು ನಡೆಯಿತು?" ಎಂದು ನಾಡಿನ ಜನ ಯೋಚಿಸುತ್ತಿರುವಾಗ, ಸಹನೆ ಮೀರಿದ ಮನಸ್ಸೊಂದು, ಚೆಡ್ಡಿ ಹೈದನಿಗೆ ಚಪ್ಪಲಿ ತೋರಿದ್ದು ಅಂತಹ ಅಕ್ಷಮ್ಯವಾಗೇನೂ ಕಾಣುತ್ತಿಲ್ಲವಂತಲ್ಲಾ, ಈ ನಡುವೆ ತನ್ನ ಲೇಖನಗಳಿಂದ ಲಂಕೇಶರ ಮನ ಗೆದ್ದಿದ್ದ ಅ.ನಾ. ಮಂಜುನಾಥ್ ಅಂದರೆ ಅಜ್ಜಂಪುರದ ಮಂಜುನಾಥ್, ಊರ ಹೆಸರಿಟ್ಟುಕೊಂಡ ಮೇಲೆ ಊರಿಗೆ ಕೀರ್ತಿ ತರಬೇಕು. ಮತ್ತೆ ಎಂದಿನಂತೆ ಪತ್ರಿಕೆಗೆ ಮಾನವೀಯ ಕಾಳಜಿಯುಳ್ಳ ಲೇಖನ ಬರೆಯಬೇಕು ಎಂಬುದೇ ಪತ್ರಿಕೆಯ ಕಳಕಳಿಯಾಗಿದೆಯಂತಲ್ಲಾ, ಥೂತ್ತೇರಿ!!

* * * *

ಕಳೆದ ವಾರ ಬರೆಯದೇ ಬಿಟ್ಟ ಸಂಗತಿಯೊಂದನ್ನು ದಾಖಲಿಸುವುದಾದರೆ ನಡೆದಾಡುವ ದೇವರನ್ನು ಹೊಂದಿದ ಸಿದ್ದಗಂಗಾ ಮಠಕ್ಕೆ ಉತ್ತರಾಧಿಕಾರಿಯಾಗಿ ಆಯ್ಕೆಯಾಗಿದ್ದ ಸ್ವಾಮಿಗಳು ನಿಧನರಾಗಿದ್ದಾರೆ. ಎಂದಿನಂತೆ ಅವರ ಪಾರ್ಥಿವ ಶರೀರದ ವಿಷಯದಲ್ಲೂ ಗೊಂದಲ ನಡೆಯಿತು. ಬದುಕಿನುದ್ದಕ್ಕೂ ಅವಮಾನ, ಅಪಪ್ರಚಾರ ಮತ್ತು ತಿರಸ್ಕಾರಗಳನ್ನೆದುರಿಸಿದ್ದ ಸ್ವಾಮಿ ಸಿದ್ದಗಂಗೆ ಪೀಠವನ್ನೇರಲಾಗಲೇಯಿಲ್ಲ. ಅಲ್ಲಿ ಭೀಷ್ಮ ಪ್ರತಿಜ್ಞೆಯ ಇಚ್ಛಾಮರಣಿ ಇರುವಾಗಲೇ ಮತ್ತೊಂದು ಮರಿಗೆ ಅವಕಾಶ ಸಿಗಲಾರದು. ಇತ್ತ ಸಿರಿಗೆರೆ ಪೀಠವೇರಲು ಕಾದಿದ್ದ ಉತ್ತರಾಧಿಕಾರಿಯದೂ ಇದೇ ಕತೆಯಂತಲ್ಲಾ, ಸಿರಿಗೆರೆ ಸಂವಿಧಾನವನ್ನು ಮೀರಿ ನಿಂತ ಶಿವಾಚಾರ್ಯ ತನ್ನ ನಂತರ ತನ್ನ ಬಂಧುವನ್ನು ಪೀಠಾಧಿಪತಿಯನ್ನಾಗಿ ಮಾಡಲು ಹಟತೊಟ್ಟ ಕಾರಣ, ಉತ್ತರಾಧಿಕಾರಿಗೆ ಅತ್ತ ಮದುವೆಯೂ ಇಲ್ಲ, ಇತ್ತ ಪೀಠವೂ ಇಲ್ಲ ಎನ್ನುವಂತಾಗಿದೆ. ಇಂತದಕ್ಕೆಲ್ಲಾ ಕಾರಣರಾದ ಶಿವಾಚಾರ್ಯ ಜನಮಾನಸದಲ್ಲಿ ಗೌರವ ಕಳೆದುಕೊಂಡು ರಾಜಕಾರಣಿಯ ಸ್ಥಾನಕ್ಕೆ ಇಳಿದಿರುವರಂತಲ್ಲಾ, ಥೂಥೂ ಥೂತ್ತೇರಿ!!! ■

---

4 ⏮

...ಜಿವೋಜಿ ಹಿಂದೆ ಕೈತಾನ ಬಾರಬೋಜಾ, ಎಂ.ಎಸ್. ...ಬಗಟ್ಟಿ, ಉಡಚಪ್ಪ ಬೋಬಾಟಿಯಂಥ ಹಳಿಯಾಳ ...ಕಾರಣದ ಅಂಕಣದಲ್ಲಿ ನುರಿತ ಕಿಲಾಡಿಗಳಿದ್ದಾರೆ. ...ರಿಗೆಲ್ಲ ಬೆಂಗಳೂರಿಂದ ಬಂದು ಹಳಿಯಾಳದಲ್ಲಿ ಎಮ್ಮೆಲ್ಲೆ ...ವ ಆಟ ಆಡುತ್ತಿರುವ ಕೆ.ಆರ್. ರಮೇಶ್ ಎಂಬ ...ಥ ದಂಧೆದಾರನ ಕಂಡರಾಗದು. ದಲಿತ ಸಮುದಾಯದ ...ೇಶ್ ಹಳಿಯಾಳದ ವಿಧವೆಯೊಬ್ಬಳ ವರಿಸಿ ಮರಾಠರ ...ವಿನ ನಿರೀಕ್ಷೆಯಲ್ಲಿದ್ದಾನೆ. ಲಕ್ಷ-ಲಕ್ಷ ಹರಿಸುತ್ತ ಜೆಡಿಎಸ್ ...ಲು ಕಟಪಿಟ ಮಾಡುತ್ತಿದ್ದಾನೆ. ಕುಮ್ಮಿಯೂ "ನೀನೇ ...ಯಾಳ ಜೆಡಿಎಸ್‌ನ ಡಾರ್ಕ್‌ಹಾರ್ಸ್" ಎಂದ್ಹೇಳಿ ...ಮೇಧಕ್ಕೆ ಬಿಟ್ಟಿದ್ದಾರೆ. ಆದರೆ ಜೆಡಿಎಸ್ ಟಿಕೆಟ್‌ಗೆ ...ಯ ಮರಾಠನಾದ ತಾನೇ ಹಕ್ಕುದಾರನೆಂದು ಜೀವೋಜಿ ...ದು ಮಾಡಿದ್ದಾನೆ. ಮರಾಠನಾದ ಜೀವೋಜಿ ...ಗೊಂಡರೆ ಸಹಜವಾಗೇ ಅಭಿನವ ಚೆಡ್ಡಿ ಸುನಿಲ್ ...ೆಗೆ ಹೊಡೆತ ಬೀಳುತ್ತದೆಂಬ ಲೆಕ್ಕಾಚಾರ ದೋಷಪಾಂಡೆ ...ೇಬರದು.

... ಮುಂದಿನ ವರ್ಷ ನಡೆಯುವ ಅಸೆಂಬ್ಲಿ ಎಲೆಕ್ಷನ್ ...ತ್ತಿಲ್ಲಿ, ತಾನೇ ಹಳಿಯಾಳದಲ್ಲಿ ಸ್ಪರ್ಧಿಸುವ ...ತೆಯಲ್ಲಿದ್ದಾರೆ ದೇಶಪಾಂಡೆ. ಮಗ ಪ್ರಶಾಂತನನ್ನು ...ಕಿಯಿಂದಾದರೂ ಸರಿಯೇ ಕೆನರಾದ ಎಂಪಿ ಮಾಡುವ ...ಯಲ್ಲಿರುವ ದೇಶಪಾಂಡೆ ಅದು ಸಾಧ್ಯವಾಗದಿದ್ದರೆ ...ಯಾಳದಲ್ಲಿ ಶಾಸಕತ್ವದ ವಾರಸುದಾರನಾಗಿ ಪ್ರಾಜೆಕ್ಟ್ ...ಡುವ ಇರಾದೆಯಲ್ಲಿದ್ದಾರೆ. ಇಂಥದ್ದೇ ಪ್ಲಾನ್ ಆತನ ...-ಎಮ್ಮೆಲ್ಸಿ ಘೋಟನೇಕರ್‌ನ ತಲೆಯಲ್ಲೂ ಗಿರಕಿ ...ಡೆಯುತ್ತಿದೆ. ತನ್ನ ಕುಲಕಂಠೀರವ ಶ್ರೀನಿವಾಸ ...ಟನೇಕರ್ ಹಳಿಯಾಳದ ಶಾಸಕ ಏಕಾಗಬಾರದೆಂಬ

ಪುತ್ರ ವ್ಯಾಮೋಹ ಘೋಟನೇಕರ್‌ಗೆ. ಬಹುಸಂಖ್ಯಾತ ಮರಾಠರ ಜಾತ್ಯಸ್ತರಾದ ತಾವೇ ಹಳಿಯಾಳ ಆಳ್ವಿಕೆಗೆ ಹಕ್ಕುದಾರನೆಂಬ ದೃಢ ನಿರ್ಧಾರ ಘೋಟನೇಕರ್‌ದು. ದೇಶಪಾಂಡೆಗೆ ಬ್ಲಾಕ್‌ಮೇಲ್ ಮಾಡಿಯೇ ಎರಡನೇ ಅವಧಿಯ ವಿಧಾನಪರಿಷತ್ ಸದಸ್ಯದ ಚಾನ್ಸ್ ಹೊಡೆದ ಘೋಟನೇಕರ್ 'ಮರಾಠ' ಟ್ರಂಪ್‌ಕಾರ್ಡ್ ಬಳಸಿ ದೇಶಪಾಂಡೆಗೆ ಹಣಿಯುತ್ತಲೇ ಬಂದಿದ್ದಾನೆ. ಮೊನ್ನೆ ನಡೆದ ಎಪಿಎಂಸಿ ಚುನಾವಣೆಯಲ್ಲಿ ಮಗ ಶ್ರೀನಿವಾಸ್‌ನನ್ನು ಸದಸ್ಯನಾಗಿ ಗೆಲ್ಲಿಸಿಕೊಂಡಿರುವ ಘೋಟನೇಕರ್ ಮುಂದೊಂದು ದಿನ ತನ್ನ ಮಗನ ಭವಿಷ್ಯಕ್ಕೆ ಅಡ್ಡಗಾಲಾಗುತ್ತಾನೆಂಬುದು ದೋಷಪಾಂಡೆಗೆ ಗ್ಯಾರಂಟಿಯಾಗಿ ಹೋಗಿದೆ.

ದೇಶಪಾಂಡೆ ಕೃಪೆಯಿಂದ ಎಮ್ಮೆಲ್ಸಿಯಾಗಿದ್ದ ವಿ.ಡಿ. ಹೆಗಡೆ ತನ್ನ ಮಗ ಸುನಿಲ್‌ನನ್ನು ರಾಜಕೀಯಕ್ಕೆ ತಂದು ದೇಶಪಾಂಡೆ ಎದುರು ನಿಲ್ಲಿಸಿದ್ದರಲ್ಲವಾ? ಆಗ ದೇಶಪಾಂಡೆ ಎದುರಿಸಿದ ಸಂಕಷ್ಟ ಮುಂದೊಂದು ದಿನ ಘೋಟನೇಕರನೂ ತಂದೊಡ್ಡದೇ ಬಿಡಲಾರ. ಇದೆಲ್ಲ ಹಳೆ ರಾಜಕೀಯ ಹುಲಿ ದೇಶಪಾಂಡೆಗೆ ಅರ್ಥವಾಗಿದೆ. ಹೀಗಾಗಿ ಆತ ಸ್ಥಿಮಿತ ಕಳೆದುಕೊಳ್ಳುತ್ತಿದ್ದಾರೆ. ದೇಶಪಾಂಡೆ-ಘೋಟನೇಕರ್ ನಡುವಿನ ಶೀತಲ ಸಮರದ ಪರಿಣಾಮವೇ ಎಪಿಎಂಸಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ಸಿಗಾದ ಮುಖಭಂಗ ಎಂದು ವ್ಯಾಖ್ಯಾನಿಸುವವರೂ ಇದ್ದಾರೆ. ಎಪಿಎಂಸಿಯಲ್ಲಿ ಹೀನಾಯ ಜಯ ಪಡೆದ ನಂತರ ದೇಶಪಾಂಡೆ ಕಂಗಾಲಾಗಿದ್ದಾರೆ. ತನ್ನ ಸಾಮ್ರಾಜ್ಯ ಕುಸಿಯುವ ಆತಂಕಕ್ಕೆ ಬಿದ್ದಿದ್ದಾರೆ. ಹಳಿಯಾಳದ ಜನರು ತನ್ನನ್ನು ನಂಬುವುದಿಲ್ಲ ಎಂಬುದು ಆತನಿಗೆ ಎಪಿಎಂಸಿ ಎಲೆಕ್ಷನ್ ಫಲಿತಾಂಶದಿಂದ ಗೊತ್ತಾಗಿದೆ. ಫಲಿತಾಂಶದ ಬೆನ್ನಿಗೆ ಹಳಿಯಾಳದಲ್ಲಿ ನಡೆದ ಸರ್ಕಾರಿ ಯೋಜನೆಯೊಂದರ ಸಹಾಯಧನ-ಸಾಲ ವಿತರಣಾ ಕಾರ್ಯಕ್ರಮದಲ್ಲಿ ದೇಶಪಾಂಡೆ ಘೋಟನೇಕರ್‌ಗೆ ಟಾಂಗು-ಟೌಂಟು ಕೊಟ್ಟಿದ್ದಾರೆ.

"ನಾಯಿ ತನಗೆ ಸಹಾಯ ಮಾಡಿದವರಿಗೆ ನಿಷ್ಠೆಯಿಂದ ಇರುತ್ತದೆ. ಒಡೆಯನಿಗೆ ತೊಂದರೆ ಕೊಡುವವರ ವಿರುದ್ಧ ಹೋರಾಡುತ್ತದೆ.... ಈ ನಾಯಿ ನಿಷ್ಠೆ ಬೆಳೆಸಿಕೊಳ್ಳಬೇಕು...." ಎಂದು ಘೋಟನೇಕರ್‌ಗೆ ಪರೋಕ್ಷವಾಗಿ ತಾಕೀತು ಮಾಡಿದ್ದಾರೆ. ಸರ್ಕಾರಿ ಯೋಜನೆಯ ಸೌಲಭ್ಯ ಹಂಚಿರುವ ತನಗೆ ನಿಷ್ಠೆಯಿಂದ ಇರುವಂತೆ ಜನರಿಗೆ ಹೇಳಿದಂತೆ ಮಾಡಿ ಘೋಟನೇಕರ್‌ಗೆ 'ಎಚ್ಚರಿಕೆ' ದೇಶಪಾಂಡೆ ಕೊಟ್ಟಿದ್ದಾರೆಂದೇ ಆತನ ಪಾಳೆಗಾರಿ ಪೊಗರು ಬಲ್ಲವರು ವಿಶ್ಲೇಷಿಸುತ್ತಿದ್ದಾರೆ. ಒಟ್ಟಿನಲ್ಲಿ ಮತದಾರರು-ಕಾಂಗ್ರೆಸ್ ಕಾರ್ಯಕರ್ತರು, ಅಧಿಕಾರಿಗಳು, ವಿರೋಧ ಪಕ್ಷದವರೆಲ್ಲರೂ ದೇಶಪಾಂಡೆಗೆ ನಾಯಿಯಂತೆ ವಿಧೇಯರಾಗಿರಬೇಕು ಎಂಬುದು ಆತನ ಮಾತಿನ ಸಾರಾಂಶ.


ಇದಾತನ ಅಸಲಿ ಫ್ಯೂಡಲ್ ಮನಃಸ್ಥಿತಿ! ಇಂಥ ಅಹಂ-ಅಹಂಕಾರಗಳೇ ಇವತ್ತು ದೋಷಪಾಂಡೆ ಹಳಿಯಾಳ-ಜೋಯಿಡಾದಲ್ಲಿ ಅಧಃಪತನ ಹೊಂದುವಂತಾಗಲು ಮೂಲ ಕಾರಣ!! ಅಲ್ಲಿಂದಿಲ್ಲಿಗೂ ಹಳಿಯಾಳ ರೈತರನ್ನು ವಂಚಿಸುತ್ತಲೇ ಬಂದ ದೇಶಪಾಂಡೆ ವಿಶ್ವಾಸಾರ್ಹತೆಯನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಹಳಿಯಾಳ ಭಾಗದ ರೈತರ ಬಹುದಿನದ ಬೇಡಿಕೆಯಾದ ಕಾಳಿ ನದಿ ನೀರಾವರಿ ಯೋಜನೆ ಮಂಜೂರಿ ಮಾಡಿಸಿಕೊಂಡು ಬಂದರೂ ಜನ ದೇಶಪಾಂಡೆಯನ್ನು ನಂಬುವ ಸ್ಥಿತಿಯಲ್ಲಿಲ್ಲ, ಕಾಳಿ ನೀರಾವರಿ ಯೋಜನೆ ಬೆನ್ನಿಗೆ ಆದ ಎಪಿಎಂಸಿ ಎಲೆಕ್ಷನ್‌ನಲ್ಲಿ ದೇಶಪಾಂಡೆಗೆ ಜನ ಮುಖ-ಮೂತಿ ಎನ್ನದೆ ಚಚ್ಚಿದ್ದಾರೆ. ವಾಸ್ತವವಾಗಿ ಈ ಯೋಜನೆಗೆ ಪ್ರಯತ್ನಿಸಿದ್ದು ಸುನಿಲ್ ಹೆಗಡೆ. ಆತ ಶಾಸಕನಾಗಿದ್ದಾಗ ಸದಾ ನೀರಾವರಿ ಯೋಜನೆಗಾಗಿ ಸುನಿಲ್ ಹೋರಾಟವೇ ನಡೆಸಿದ್ದ.

ಪ್ರತಿ ಚುನಾವಣೆ ಹತ್ತಿರ ಬಂದಾಗಲೂ ಸಕ್ಕರೆ ಕಾರ್ಖಾನೆ ಮಾಡುತ್ತೇನೆಂದು ರೈತರ ಯಾಮಾರಿಸಿ ಗೆಲ್ಲುತ್ತಿದ್ದ ದೇಶಪಾಂಡೆ ಈಗ ನೀರಾವರಿ ಯೋಜನೆಯ ತಂತ್ರಗಾರಿಕೆ ಪ್ರಯೋಗಿಸುತ್ತಿದ್ದಾರೆಂಬ ಅನುಮಾನ ರೈತರಿಗೆ ಬಂದಿದೆ. ಸಕ್ಕರೆ ಕಾರ್ಖಾನೆಗೆ ಮೂರ‍್ಮೂರು ಬಾರಿ ಶಿಲಾನ್ಯಾಸ ಮಾಡಿ ಬರೋಬ್ಬರಿ ಹದಿನೈದು ವರ್ಷ ರೈತರನ್ನು ದೇಶಪಾಂಡೆ ಸತಾಯಿಸಿದ್ದ. ಈಗ ಕಾಳಿ ನದಿ ಯೋಜನೆ ಇನ್ನೂ ಒಂದೂವರೆ ದಶಕವಾದರೂ ದೇಶಪಾಂಡೆಗೆ ಬೇಕೇಬೇಕೆಂದು ರೈತ ಹೋರಾಟಗಾರರು ತರ್ಕ ಮಾಡುತ್ತಾರೆ. ಅಷ್ಟಕ್ಕೂ ಈಗ ದೇಶಪಾಂಡೆ ಮಂಜೂರಿ ಮಾಡಿಸಿರುವ ನೀರಾವರಿ ಯೋಜನೆಯಾದರೂ ಎಂಥದ್ದು ಗೊತ್ತಾ? ಬರೀ 17 ಸಾವಿರ ಎಕರೆ ಪ್ರದೇಶಕ್ಕಷ್ಟೇ ಈ ಪ್ರಾಜೆಕ್ಟ್‌ನಿಂದ ನೀರಾವರಿ ಸೌಲಭ್ಯ ಸಿಗಬಹುದು. ಆದರೆ ಹಳಿಯಾಳ ತಾಲ್ಲೂಕೊಂದರಲ್ಲೇ 50 ಸಾವಿರದಷ್ಟು ನೀರಾವರಿ ಅವಶ್ಯವಿರುವ ಭೂಮಿಯಿದೆ. ಅಲ್ಲದೆ ಜೋಯಿಡಾ ತಾಲ್ಲೂಕಿನ ಜನರೂ ದೇಶಪಾಂಡೆಯ ತಾರತಮ್ಯದಿಂದ ಕೆರಳಿದ್ದಾರೆ. ಜೋಯಿಡಾ ಕಾಳಿ ನದಿ ವಿದ್ಯುತ್ ಯೋಜನೆಯ ಸಂತ್ರಸ್ತ ಪ್ರದೇಶ. ಕಾಳಿ ನದಿ ನೀರಿನ ಸೌಲಭ್ಯಕ್ಕೆ ನಿಜವಾದ ಹಕ್ಕುದಾರರು ಜೋಯಿಡಾದವರು.

ದೂರ-ದೃಷ್ಟಿ ದೋಷದ- ಜನರ ಸಮಸ್ಯೆ ಅರ್ಥವೇ ಆಗದ ದೋಷಪಾಂಡೆ ಹಳಿಯಾಳ-ಜೋಯಿಡಾ ಎರಡೂ ಕಡೆಯವರಿಗೆ ಮೋಸ-ವಂಚನೆ-ದೋಖಾ ಮಾಡುತ್ತಿದ್ದಾರೆ. ದೇಶಪಾಂಡೆ ಈ ಜನ್ಮದಲ್ಲಿ ಬದಲಾಗಲು ಸಾಧ್ಯವಾ? ಕಷ್ಟ-ಕಷ್ಟ!!

■ ನಹುಷ

ಗುಬ್ಬಿ: ದಲಿತ ಗೃಹಮಂತ್ರಿ ಬುಡದಲ್ಲೇ ಇದೆಂಥಾ ವಿಪರ್ಯಾಸ!




ಗೃಹಮಂತ್ರಿ ಡಾ.ಜಿ.ಪರಮೇಶ್ವರ್

ಜಾತಿವಿಷದ ವಿಕೃತ ಮನಸ್ಸುಗಳ ರಣಕೇಕೆ ಮತ್ತೆ ಮುಂದುವರೆದಿದೆ. ಈ ಸಲ ಅದಕ್ಕೆ ಸಾಕ್ಷಿಯಾಗಿರೋದು ತುಮಕೂರು ಜಿಲ್ಲೆಯ ಗುಬ್ಬಿ. ದಲಿತ ಹುಡುಗ ಮೇಲ್ಜಾತಿ ಹುಡುಗಿಯನ್ನು ಪ್ರೀತಿಸಿದ್ದಾನೆ ಎಂಬ ಏಕೈಕ ಕಾರಣಕ್ಕೆ ಹುಡುಗನನ್ನು ಅಪಹರಿಸಿ, ವಿವಸ್ತ್ರಗೊಳಿಸಿ, ಕ್ರೂರವಾಗಿ ಥಳಿಸಿದ್ದಲ್ಲದೇ ತಮ್ಮ ವಿಕೃತವನ್ನು ವಿಡಿಯೋದಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣಗಳಿಗೆ ಹರಿಬಿಟ್ಟು ಈಗ ಹುಡುಗನ ಮೇಲೆಯೇ ಪೋಕ್ಸೋ ಕೇಸು ಜಡಿಸಿದ್ದಾರೆ.

ಗುಬ್ಬಿಯ ಸುಭಾಶ್ ನಗರದ ಮಾದಿಗ ಸಮುದಾಯದ ಬಸ್ತಿ ಎಂಬುವವರ ಮಗ ಅಭಿಷೇಕ್ ಆಟೋ ಓಡಿಸಿ ಕೊಂಡು ದುಡಿಮೆಯ ದಾರಿ ಕಂಡುಕೊಂಡಿದ್ದ. ಈತ ಕಳೆದ 2 ವರ್ಷಗಳಿಂದ ಗಣೇಶ ಉತ್ಸವದಲ್ಲಿ ಪರಿಚಯವಾಗಿದ್ದ ತಿಗಳರ ಸಮುದಾಯದ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಿದ್ದ. ಅವರ ಸ್ನೇಹಿತರು ಹೇಳುವಂತೆ ಹುಡುಗಿಯೇ ಮೊದಲು ಈತನ ಮೊಬೈಲ್ ನಂಬರ್ ಪಡೆದು ಸ್ನೇಹಕ್ಕೆ ನಾಂದಿ ಹಾಡಿದ್ದಳಂತೆ. ಈಗ 9ನೇ ತರಗತಿ ಓದುತ್ತಿರುವ ಆಕೆಯ ವಯಸ್ಸು 16 ವರ್ಷವಿನ್ನೂ ದಾಟಿಲ್ಲ. ಆದರೂ ಪರಸ್ಪರ ಭೇಟಿಯಾಗುವುದು, ಮೊಬೈಲ್‌ನಲ್ಲಿ ಮಾತನಾಡೋದು ನಡೆದೇ ಇತ್ತು. ಇದು ಹುಡುಗಿಯ ತಂದೆ ಕಾಡು ಪ್ರಕಾಶ್‌ನ ಗಮನಕ್ಕೆ ಬಂದು ಅಭಿಷೇಕ್‌ನನ್ನು ಮುಗಿಸಿಬಿಡಲು ಹೊಂಚು ಹಾಕಿದ್ದ. ಜನವರಿ 15ರಂದು ಅಭಿಷೇಕ್ ಶಬರಿಮಲೈನಿಂದ ವಾಪಾಸ್ ಬರುವುದನ್ನು ಖಾತ್ರಿಪಡಿಸಿಕೊಂಡು ಅವತ್ತೇ ಅವನ ಮೇಲೆ ಹಲ್ಲೆ ಮಾಡಲು ಸ್ಕೆಚ್ ಹಾಕಿದ್ದರು. ಇದು ಹುಡುಗಿಗೆ ತಿಳಿದು, ಆಕೆಯೇ ಅಭಿಷೇಕ್‌ಗೆ ಫೋನಾಯಿಸಿ 'ದಯವಿಟ್ಟು ಊರು ಬಿಟ್ಟು ಹೋಗು, ನಮ್ಮಪ್ಪ ನಿನ್ನನ್ನು ಜೀವಂತ ಉಳಿಸುವುದಿಲ್ಲ' ಎಂದೆಲ್ಲಾ ಗೋಳಾಡಿದ್ದಳು.

ಆಕೆಯ ಮಾತನ್ನು ನೆಗ್ಲೆಟ್ ಮಾಡಿದ ಬಿಸಿರಕ್ತದ ಅಭಿಷೇಕ್ ಮನೆಗೆ ಬಂದು ದೇವರ ಪ್ರದರ್ಶನ ಮುಗಿಸಿ ಮುಂದಿನದು ತೀರ್ಮಾನಿಸೋಣ ಎಂದು ನಿರ್ಧರಿಸಿದ್ದ. ಆತ ಗುಬ್ಬಿಗೆ ಮರಳುವುದನ್ನೇ ಕಾದು ಕುಳಿತಿದ್ದ ಕಾಡು ಪ್ರಕಾಶ್ ಮತ್ತು ಆತನ ಗೂಂಡಾ ಪಟಾಲಂ ಜನವರಿ 17 ರಂದು ಅಭಿಷೇಕ್‌ನನ್ನು ಅಪಹರಿಸಿ ತಮ್ಮ ತೋಟದ ಮನೆಗೆ ಎಳೆದೊಯ್ದು ಮನಸೋ ಇಚ್ಛೆ ಥಳಿಸಿದ್ದರು. ಅವನನ್ನು ವಿವಸ್ತ್ರಗೊಳಿಸಿ, ಚಪ್ಪಲಿಹಾರ ಹಾಕಿ ಅದನ್ನೆಲ್ಲಾ ವೀಡಿಯೊ ಮಾಡಿಕೊಂಡಿದ್ದರು. ಅಲ್ಲದೇ "ಗುಬ್ಬಿ ಹುಡುಗಿಯರನ್ನು ಕೆಣಕಿದರೆ ಇದೇ ಗತಿ" ಎಂದು ಸ್ಲೇಟ್‌ನಲ್ಲಿ ಬರೆದು ಅದನ್ನು ಅಭಿಷೇಕ್ ಕೊರಳಿಗೆ ಹಾಕಿ ಫೋಟೊ ತೆಗೆದಿದ್ದರು. ಆ ಫೋಟೋ, ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಸಹ ಮಾಡಿದ್ದರು.

ಅಸಲಿಗೆ ಅಭಿಷೇಕ್‌ನನ್ನು ಬಾವಿಯೊಂದಕ್ಕೆ ನೇಣು ಹಾಕಿ ಕೊಲ್ಲುವುದು ಅವರ ಪ್ಲಾನ್ ಆಗಿತ್ತು, ಆದರೆ ಅದ್ಯಾಕೋ ಅವರಿಗೆ ಧೈರ್ಯ ಬಂದಿಲ್ಲ. ಅಭಿಷೇಕ್‌ನ ಮೊಬೈಲ್ ಕಿತ್ತುಕೊಂಡು, ಮಲ್ಲಸಂದ್ರದ ಬಳಿ ಇಳಿಸಿ, ಹತ್ತಿರದ ಸ್ಮಶಾನದಲ್ಲಿ ಬಿದ್ದಿದ್ದ ಹಳೇ ಬಟ್ಟೆಯನ್ನೇ ತೊಡಿಸಿ,



ದಲಿತ ಮುಖಂಡ ಭಾಸ್ಕರ್ ಪ್ರಸಾದ್ ಅಭಿಷೇಕ್ ಜೊತೆ ಆಸ್ಪತ್ರೆಯಲ್ಲಿ ಚರ್ಚಿಸುತ್ತಿರುವುದು.

150 ರೂಪಾಯಿ ಕೊಟ್ಟು ಊರುಬಿಟ್ಟು ಹೋಗಬೇಕೆನ್ನುವ ಕಟ್ಟಕಡೆಯ ವಾರ್ನಿಂಗ್ ಕೊಟ್ಟು ಪರಾರಿಯಾಗಿದ್ದರು. ಘಟನೆಯ ಬಗ್ಗೆ ಮನೆಯವರಿಗೆ ಮತ್ತು ಪೊಲೀಸರಿಗೆ ತಿಳಿಸಿದರೆ ನಿನ್ನ ಇಡೀ ಕುಟುಂಬವನ್ನು ಉಳಿಸೋದಿಲ್ಲ ಎಂಬ ಧಮಕಿಯನ್ನೂ ಹಾಕಿದ್ದರು.


ಹಲ್ಲೆಯಿಂದ ನಿತ್ರಾಣಗೊಂಡಿದ್ದ ಅಭಿಷೇಕ್ ಯಾರದೋ ಮೊಬೈಲ್‌ನಿಂದ ಮನೆಯವರಿಗೆ ಫೋನ್ ಮಾಡಿ ಮಲ್ಲಸಂದ್ರದ ಬಳಿ ಕರೆಸಿಕೊಂಡಿದ್ದ. ಆ ಸ್ಥಿತಿಯಲ್ಲಿ ಅಭಿಷೇಕ್‌ನನ್ನು ನೋಡಿ ಗಾಬರಿಗೊಂಡ ಮನೆಯವರು ತಕ್ಷಣವೇ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದರು. ಇದೇ ಸಂದರ್ಭದಲ್ಲಿ ಅಭಿಷೇಕ್‌ನನ್ನು ಬೆತ್ತಲುಗೊಳಿಸಿ, ಸ್ಲೇಟ್‌ಹಾಕಿ ಅವಮಾನ ಮಾಡಿದ್ದ ಫೋಟೋ ವೈರಲ್ ಆಗಿ ಮೊಬೈಲ್‌ಗಳಲ್ಲಿ ಹರಿದಾಡಲು ಶುರುವಾಗಿತ್ತು. ಅದನ್ನು ನೋಡಿ ನೊಂದುಕೊಂಡ ಕುಟುಂಬ ಅವಮಾನ ಸಹಿಸದೆ ಅಭಿಷೇಕ್‌ನನ್ನು ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಬಂದಿದ್ದರು. ವಿನಾಕಾರಣ ಇಂಥಾ ಅವಮಾನಕ್ಕೆ ತುತ್ತಾದ ಕುಟುಂಬ ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆಯನ್ನೂ ಮಾಡಿತ್ತು.

ಅಷ್ಟರಲ್ಲೇ ವೈರಲ್ ಆಗಿದ್ದ ಫೋಟೊ ಜನವರಿ 18ರ ಬೆಳಗಿನ ಜಾವ 3 ಗಂಟೆಗೆ ಗುಬ್ಬಿ ಸಬ್‌ಇನ್ಸ್‌ಪೆಕ್ಟರ್‌ರ ಮೊಬೈಲ್‌ಗೂ ಬಂದಿದ್ದರಿಂದ ಮತ್ತು ಅದರಲ್ಲಿ 'ಗುಬ್ಬಿ ಹುಡುಗಿಯರನ್ನು ಕೆಣಕಿದರೆ' ಎಂದು ಬರೆದಿದ್ದುದರಿಂದ ಪೊಲೀಸರು ಮಾಹಿತಿ ಸಂಗ್ರಹಿಸಿ ಅಭಿಷೇಕ್ ಕುಟುಂಬವನ್ನು ಸಂಪರ್ಕಿಸಿದ್ದರು. ಕೊನೆಗೆ ಅಭಿಷೇಕ್ ನೀಡಿದ ದೂರಿನ ಆಧಾರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಿ ಹುಡುಗಿಯ ತಂದೆ ಕಾಡು ಪ್ರಕಾಶ್ ಸೇರಿದಂತೆ ಒಟ್ಟು 5 ಜನರನ್ನು ಬಂಧಿಸಲಾಗಿತ್ತು.

ಮತ್ತೆ ಸುಳ್ಳು ಹರಡಲು ಪ್ರಯತ್ನ

ಯಾವಾಗ ತಾವು ತೆಗೆದ ವಿಡಿಯೋ ಮತ್ತು ಫೋಟೊ ತಮಗೆ ಮುಳುವಾಯಿತೋ ಕೂಡಲೇ ಹುಡುಗಿಯ ಮನೆಯವರು ವರಸೆ ಬದಲಿಸಿದ್ದರು. 'ಹುಡುಗ ನಮ್ಮ ಹುಡುಗಿಯನ್ನು ಮೂರು ತಿಂಗಳಿನಿಂದ ಚುಡಾಯಿಸುತ್ತಿದ್ದ ಹಿಂಬಾಲಿಸುತ್ತಿದ್ದ ಮತ್ತು ಪ್ರೀತಿಸಲು ಒಪ್ಪದಿದ್ದರೆ ಆಸಿಡ್ ಹಾಕುತ್ತೇನೆ ಎಂದೆಲ್ಲಾ ಬೆದರಿಕೆ ಹಾಕಿದ್ದ ಲೈಂಗಿಕ ಕಿರುಕುಳ ನೀಡುತ್ತಿದ್ದ' ಎಂದು ಸುಳ್ಳು ಆರೋಪ ಮಾಡಿದ್ದರು. ಅಲ್ಲದೇ ನಿನ್ನ ತಂದೆ ಜೈಲಿನಿಂದ ಹೊರಬರಬೇಕಾದರೆ ನೀನು ಆ ಹುಡುಗನ ವಿರುದ್ಧ ದೂರು ನೀಡಬೇಕೆಂದು ಹುಡುಗಿಯನ್ನು ಎಮೋಷನಲ್ ಬ್ಲಾಕ್‌ಮೇಲ್ ಮಾಡಿದ್ದರು. ಅದರಂತೆ ಖುದ್ದು ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಭೇಟಿಯಾಗಿ ಹುಡುಗಿ ಕೈಯಿಂದ ಲೈಂಗಿಕ ದೌರ್ಜನ್ಯದ ದೂರು ಕೊಡಿಸಿದ್ದಲ್ಲದೆ ಮಾಧ್ಯಮಗಳ ಮುಂದೆ ಹುಡುಗಿಯಿಂದ ಹುಡುಗನ ವಿರುದ್ಧ ಮಾತನಾಡಿಸಿದ್ದರು. ಅಷ್ಟರಲ್ಲಾಗಲೇ ವೈರಲ್ ಆಗಿದ್ದ ಫೋಟೊ ಮತ್ತು ವೀಡಿಯೋಗಳು ಜನರಿಗೆ ಸತ್ಯವನ್ನು ಮುಟ್ಟಿಸಿಯಾಗಿತ್ತು.

ಗುಬ್ಬಿಯಲ್ಲಿ ದಲಿತ ಸಂಘಟನೆಗಳಿಂದ ಪ್ರತಿಭಟನೆ ನಡೆದು ಆರೋಪಿಗಳನ್ನು ಗಡೀಪಾರು ಮಾಡಲು ಆಗ್ರಹಿಸಲಾಗಿತ್ತು. ಕಾನೂನು ಸಚಿವ ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿ ಟಿ.ಬಿ.ಜಯಚಂದ್ರ ತುಮಕೂರು ಜಿಲ್ಲಾಸ್ಪತ್ರೆಯಲ್ಲಿ ಅಭಿಷೇಕ್‌ನನ್ನು ಭೇಟಿಮಾಡಿ ಮಾತನಾಡಿಸಿ ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸುವ ಖಾತ್ರಿ ನೀಡಿದ್ದರು. ಜೊತೆಗೆ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗದ ಅಧ್ಯಕ್ಷ ಎ.ಮುನಿಯಪ್ಪ ಸಹ ಆಸ್ಪತ್ರೆಗೆ ಭೇಟಿ ನೀಡಿ ಯುವಕನ ಆರೋಗ್ಯ ವಿಚಾರಿಸಿ, ಆರೋಪಿ ಕಾಡು ಪ್ರಕಾಶ್ ಬಳಿ ಇರುವ ಪಿಸ್ತೂಲನ್ನು ವಶಪಡಿಸಿಕೊಂಡು ಅದರ ಪರವಾನಗಿಯನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿದ್ದರು. ಈ ಮಧ್ಯೆ ದಲಿತ ಸಂಘರ್ಷ ಸಮಿತಿಯ ವಿವಿಧ ಬಣಗಳು ಜಿಲ್ಲಾಧಿಕಾರಿ ಕೆ.ಪಿ.ಮೋಹನ್ ರಾಜ್ ಹಾಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್‌ರನ್ನು ಭೇಟಿಮಾಡಿ ನ್ಯಾಯಕ್ಕಾಗಿ ಆಗ್ರಹಿಸಿದ್ದವು.




ಜಿಲ್ಲಾ ಉಸ್ತುವಾರಿ ಸಚಿವ ಟಿ.ಬಿ.ಜಯಚಂದ್ರ

ಇಸ್ಪೀಟ್ ದಂಧೆಕೋರ ಕಾಡು ಪ್ರಕಾಶ್


ಇಡೀ ಘಟನೆಯ ಮಾಸ್ಟರ್‌ಮೈಂಡ್ ಆ ಹುಡುಗಿಯ ಅಪ್ಪ ಕಾಡು ಪ್ರಕಾಶ್ ಒಬ್ಬ ಇಸ್ಪೀಟ್ ಜೂಜುಕೋರ ಮತ್ತು ರಿಯಲ್ ಎಸ್ಟೇಟ್ ಕಳ್ಳ. ಬಹಳಷ್ಟು ವರ್ಷಗಳಿಂದ ಕಾನೂನುಬಾಹಿರ ಇಸ್ಪೀಟ್ ದಂಧೆ ನಡೆಸಿ ದುಡ್ಡು ಗಳಿಸಿದ್ದಾನೆ. ರಿಯಲ್ ಎಸ್ಟೇಟ್ ಮಾಫಿಯಾದಲ್ಲೂ ಪಳಗಿದವನು. ಹಾಗಾಗಿ ರೌಡಿ ಪಟಾಲಂ ಸಾಕಿಕೊಂಡಿದ್ದಾನೆ. ತಿಗಳರ ಸಂಘದಲ್ಲಿ ಸಕ್ರಿಯನಾಗಿರುವ ಈತನಿಗೆ ರಾಜಕಾರಣಿಗಳ ಸಖ್ಯವಿದೆ. ಇದೇ ಕಾರಣಕ್ಕೆ ತನ್ನ ಮಗಳ ಪ್ರೇಮಪ್ರಸಂಗ ತಿಳಿದು ಅಹಂಕಾರದಿಂದ ಈ ಕುಕೃತ್ಯವೆಸಗಿದ್ದಾನೆ. ಈತನ ವಿರುದ್ಧ ಈಗಾಗಲೇ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಸಾಕಷ್ಟು ದೂರುಗಳು ದಾಖಲಾಗಿವೆ. ಈತ ಎಂತಹ ಕ್ರೂರಿ ಎಂದರೆ ಅಭಿಷೇಕ್ ಮೇಲೆ ಹಲ್ಲೆ ನಡೆಸುವ ಸಂದರ್ಭದಲ್ಲಿ ಬಾಯಿ ಮೇಲೆಲ್ಲಾ ತನ್ನ ಪಿಸ್ತೂಲಿನಿಂದ ತಿವಿದಿದ್ದಾನೆ. ಇದರಿಂದಲೇ ನಿನ್ನನ್ನು ಉಡಾಯಿಸುತ್ತೇನೆಂದು ಹೆದರಿಸಿದ್ದಾನೆ. ರಾಡ್‌ಗಳಿಂದ ಸಿಕ್ಕಸಿಕ್ಕಲೆಲ್ಲಾ ಮೃಗೀಯ ದಾಳಿ ನಡೆಸಿದ್ದಾನೆ.

ದಲಿತರ ಮೇಲಿನ ಹಲ್ಲೆಯಂತಹ ಘಟನೆಗಳು ಮರುಕಳಿಸುತ್ತಿದ್ದರೂ ಸರ್ಕಾರ ಕೈಕಟ್ಟಿ ಕೂತಿರುವುದರಿಂದ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಕ್ರೋಶದ ಕಟ್ಟೆಯೊಡೆಯುವ ದಿನಗಳು ಸನ್ನಿಹಿತವಾಗುತ್ತಿವೆ. ಘಟನೆ ಸತ್ಯಾಸತ್ಯತೆ ಪರಿಶೀಲಿಸಲು ಜನವರಿ 21ರಂದು ದಲಿತ ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿ, ಕರ್ನಾಟಕ ಜನಶಕ್ತಿ ಮತ್ತು ಪ್ರಜಾತಾಂತ್ರಿಕ ಜನರ ವೇದಿಕೆಯ ವತಿಯಿಂದ ಸತ್ಯಶೋಧನೆ ನಡೆಸಲಾಯಿತು. ಗುಬ್ಬಿ ಪೊಲೀಸ್ ಠಾಣೆ, ಅಭಿಷೇಕ್‌ನ ಮನೆಯ ನೆರೆಹೊರೆಯವರು ಮತ್ತು ಖುದ್ದು ಅಭಿಷೇಕ್ ಮತ್ತು ಆತನ ತಾಯಿಯನ್ನು ಭೇಟಿಯಾಗಿ ಮಾತಾಡಿಸಲಾಯಿತು. ತನ್ನ ನೋವು ತೋಡಿಕೊಳ್ಳಲು ಮತ್ತು ಆಕ್ರೋಶ ಹೊರಹಾಕಲು ಅಭಿಷೇಕ್ ಬಯಸಿದನಾದರೂ ಬಾಯಿ ಮೇಲೆ ತೀವ್ರ ಪೆಟ್ಟು ಬಿದ್ದಿರುವುದರಿಂದ ಹೆಚ್ಚು ಮಾತನಾಡಲು ಆಗಲಿಲ್ಲ. ಆದರೂ "ಕಾಡು ಪ್ರಕಾಶ್ ಕಿತ್ತುಕೊಂಡಿರುವ ನನ್ನ ಮೊಬೈಲ್ ತೆಗೆದುಕೊಂಡು ನೋಡಿ, ನನ್ನ ಮತ್ತು ಆ ಹುಡುಗಿಯ ನಡುವಿನ ಸಂಭಾಷಣೆಗಳು ದಾಖಲಾಗಿವೆ, ಆನಂತರ ನೀವೇ ತೀರ್ಮಾನಕ್ಕೆ ಬನ್ನಿ" ಎಂದಿದ್ದಾನೆ. ಈ ನಡುವೆ ಅಭಿಷೇಕ್ ವಿರುದ್ಧ ಸೋಮವಾರ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಪೋಸ್ಕೋ ಕಾಯಿದೆಯಡಿ ದೂರು ದಾಖಲಾಗಿದ್ದು ದಲಿತ ಮುಖಂಡರು ಇದನ್ನು ತೀವ್ರವಾಗಿ ಖಂಡಿಸಿದ್ದಾರೆ. ಒಟ್ಟಾರೆ ಘಟನೆಯಿಂದ ಘಾಸಿಕೊಂಡಿರುವ ಮನಸ್ಸುಗಳೆಲ್ಲವೂ ಈ ರೀತಿಯ ಘಟನೆ ಮತ್ತೆ ನಡೆಯದಂತೆ ತಡೆಯಲು, ನಿಷ್ಕ್ರಿಯ ಸರ್ಕಾರವನ್ನು ಎಚ್ಚರಿಸಲು ದೊಡ್ಡ ಹೋರಾಟ ನಡೆಸಲು ತಯಾರಿ ನಡೆಸಿದ್ದಾರೆ.

■ ಅನಿಲ್‌ಕುಮಾರ್ ಚಿಕ್ಕದಾಳವಟ್ಟ




ದಲಿತ ದಮನಿತರ ಸ್ವಾಭಿಮಾನಿ ಹೋರಾಟ ಸಮಿತಿಯ ತಂಡ ಅಭಿಷೇಕ್ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿತು



ದಲಿತ ಯುವಕ ಅಭಿಷೇಕ್‌ನನ್ನು ವಿವಸ್ತ್ರಗೊಳಿಸಿ ಚಪ್ಪಲಿ ಹಾರ ಹಾಕಿರುವುದು


ಎಲ್ಲಿದ್ದಾರೆ ಗೃಹಮಂತ್ರಿ?

ಮಧುಗಿರಿ ತಾಲ್ಲೂಕಿನ ಮಸರಪಡಿ ಗ್ರಾಮದಲ್ಲಿ ಕೆಲವು ತಿಂಗಳುಗಳ ಹಿಂದೆ ದಲಿತರ ದೇವಾಲಯ ಪ್ರವೇಶ ವಿಚಾರವಾಗಿ ಸವರ್ಣೀಯರಿಗೆ ಮತ್ತು ತಳಸಮುದಾಯದವರಿಗೂ ತೀವ್ರತರದ ಜಗಳವಾಗಿತ್ತು. ದಲಿತರ ಮೇಲೆ ಹಲ್ಲೆ ದೌರ್ಜನ್ಯ ನಡೆದಿತ್ತು. ತುಮಕೂರಿನ ಬೀರನಕಲ್ಲು ಗ್ರಾಮದ ದಲಿತ ಮುಖಂಡ ಕಾಂತರಾಜು ಎಂಬುವವರನ್ನು ಅಲ್ಲಿನ ಸವರ್ಣೀಯರು ಮಾರಕಾಸ್ತ್ರಗಳಿಂದ ಕ್ರೂರವಾಗಿ ಹಲ್ಲೆ ನಡೆಸಿ, ಹಾರೆಯಿಂದ ಆತನ ದೇಹಕ್ಕೆ ಚುಚ್ಚಿ ಕೊಂದಿದ್ದರು. ಇದೇ ತುಮಕೂರು ತಾಲ್ಲೂಕಿನ ಮಾಚೇನಹಳ್ಳಿಯಲ್ಲಿ ವಯಸ್ಸಾದ ಲಕ್ಷ್ಮಮ್ಮ ಎನ್ನುವ ದಲಿತ ಮುದುಕಿಯೊಬ್ಬಳು ತನ್ನ ಮಗನ ಶವವನ್ನು ಹೂಳಲು ಭೂಮಿ ಇಲ್ಲದೇ ಎರಡು ದಿನ ಮನೆಯಲ್ಲೇ ಶವ ಇಟ್ಟುಕೊಂಡು ಪರದಾಡಿದ ಹೃದಯ ವಿದ್ರಾವಕ ಘಟನೆ ನಡೆದಿತ್ತು. ಈಗ ಗುಬ್ಬಿಯಲ್ಲಿ ಅಭಿಷೇಕ್ ಎಂಬ ದಲಿತ ಯುವಕನ ಮೇಲೆ ಅತ್ಯಂತ ನಿರ್ಲಜ್ಜ ದಾಳಿ ನಡೆದಿದೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಗೃಹಮಂತ್ರಿ ಡಾ.ಜಿ.ಪರಮೇಶ್ವರರು ಇವುಗಳತ್ತ ಕೊಡಬೇಕಾದಷ್ಟು ಗಮನ ನೀಡುತ್ತಿಲ್ಲ. ವಿಪರ್ಯಾಸವೆಂದರೆ, ಪರಮೇಶ್ವರರು ಸ್ವತಃ ದಲಿತ. ಘಟನೆ ನಡೆದ ಮೇಲಾದರೂ ಅವರು ಸಂತ್ರಸ್ತನನ್ನು ಭೇಟಿಮಾಡಿ ಸಾಂತ್ವನ ಹೇಳಿಲ್ಲ ಎಂಬ ಕೋಪ ದಲಿತ ಸಂಘಟನೆಗಳಿಗಿದೆ. ಇದರತ್ತ ಅವರ ಗಮನ ಹರಿಸಬೇಕಿದೆ.



ಆಸ್ಪತ್ರೆಯಲ್ಲಿ ದಾಖಲಾಗಿರುವ ಅಭಿಷೇಕ್

ನಂಜನಗೂಡು: ದೇವೇಗೌಡರ ಹೊಸ ಸೂತ್ರ





ಚಿತ್ರದಲ್ಲಿ ಗುರುತಿಸಿರುವವರು ಕಳಲೆ ಕೇಶವಮೂರ್ತಿ

ಮಾಜಿ ಸಚಿವ ವಿ.ಶ್ರೀನಿವಾಸ ಪ್ರಸಾದ್ ಅವರು ...ಂಗ್ರೆಸ್ ತೊರೆದು ಬಿಜೆಪಿ ಬಾವುಟ ಹಿಡಿದ ಮೇಲೆ ...ಳೇ ಮೈಸೂರು ಭಾಗದಲ್ಲಿ ಚಿತ್ರವಿಚಿತ್ರ ಬೆಳವಣಿಗೆಗಳು ...ಡೆಯುತ್ತಿವೆ. ನಂಜನಗೂಡು ಉಪ ಚುನಾವಣೆ ಬಗ್ಗೆ ...ನದಿಂದ ದಿನಕ್ಕೆ ಹುಟ್ಟಿಕೊಳ್ಳುವ ಊಹಾಪೋಹಗಳು ...ೈಸೂರು ಸುತ್ತಮುತ್ತಲ ಗಾಳಿಯಲ್ಲಿ ಹಾರಾಡಿ ಕಿವಿಯಿಂದ ...ವಿಗೆ, ಬಾಯಿಂದ ಬಾಯಿಗೆ ಹೊಸ ಹೊಸ ರೂಪ ...ಡೆದುಕೊಳ್ಳುತ್ತಿವೆ. ಈ ಗಾಳಿ ಸುದ್ದಿ ಮೈಸೂರಿನಲ್ಲಷ್ಟೇ ...ಲ್ಲದೆ ರಾಜ್ಯದ ರಾಜಧಾನಿಯನ್ನು ಬಳಸಿಕೊಂಡು ಜೆಡಿಎಸ್ ...ಷ್ಟ್ರಾಧ್ಯಕ್ಷ ಎಚ್.ಡಿ.ದೇವೇಗೌಡ ಅವರ ಹಟ್ಟಿಯ ಕದ ...ಟ್ಟಿದೆ.

ಆದರೆ ಹೀಗೆ ಸುಂಟರಗಾಳಿಯಾಗಿ ಬಂದ ಸುದ್ದಿಯನ್ನು ...ೇವೇಗೌಡರು ಬಡಿದು ಬಿಸಾಕುತ್ತಾರೆ ಎಂದು ಕಾಯುತ್ತಿದ್ದ ...ರಿಗೆ ಅಚ್ಚರಿಯಾಗಿದೆ. ಯಾಕೆಂದರೆ ದೇವೇಗೌಡರು ಕಳಲೆ ...ಶವಮೂರ್ತಿಯನ್ನು ಅತ್ತಿತ್ತ ಅಲ್ಲಾಡದಂತೆ ಕಟ್ಟಿಹಾಕುತ್ತಾರೆ ...ಂದೇ ಜನ ಭಾವಿಸಿದ್ದರು. ಆದರೆ ದೇವೇಗೌಡರು ಕಣ್ಣು ...ುಚ್ಚಿ ಕುಳಿತುಕೊಂಡು 'ಉಪಚುನಾವಣೆಯಲ್ಲಿ ನಮಗೆ ...ರ್ಧಿಸುವ ಶಕ್ತಿ ಇಲ್ಲ' ಎಂದು ಹೇಳುವ ಮೂಲಕ ...ಲ್ಲರೂ ನಿರೀಕ್ಷಿಸಿದ್ದ ದೊಡ್ಡ ಬಾಂಬ್ ಅನ್ನು ಒಂದೇ ...ಟಿಗೆ ಟುಸ್ ಎನಿಸಿದ್ದಾರೆ. ಜೊತೆಗೆ ಕಳಲೆ ಕೇಶವಮೂರ್ತಿಗೆ ...ಂಗ್ರೆಸ್‌ನತ್ತ ಕೈ ತೋರಿಸಿ ನಂಜನಗೂಡು ಉಪಚುನಾವಣೆ ...ಹದಾರಿ ಮಾಡಿಕೊಟ್ಟಿದ್ದಾರೆ.

ದೇವೇಗೌಡರು ಕೇಶವಮೂರ್ತಿಗೆ 'ಕೈ'ತೋರಿದ್ದು ...ದು ಹೇಗೋ ಪಕ್ಷದ ಕಾರ್ಯಕರ್ತರಿಗೆ ತಿಳಿದು ಅಂದು ...ಟ್ಟ ಬೆಕ್ಕಿನಂತಾಗಿದ್ದಾರೆ. "ನಾವು ಹೀಗೆ ಸುಮ್ಮನೆ ...ಳಿತುಕೊಂಡರೆ ಆಗುವುದಿಲ್ಲ" ಎಂದು ರಾಜ್ಯಾಧ್ಯಕ್ಷ ...ಮಾರಸ್ವಾಮಿಯನ್ನು ಮಾತು ಮುಟ್ಟಿಸಿದ್ದಾರೆ. ಆದರೆ ...ಂದೆಯ ರಾಜಕೀಯ ತಂತ್ರ ಅರಿತ ಕುಮಾರಣ್ಣ ಪಕ್ಷದ ...ರ್ಯಕರ್ತರು, ಮುಖಂಡರು, ಶಾಸಕರನ್ನು ...ಮಾಧಾನಪಡಿಸಲು ಮೈಸೂರಿಗೆ ಬಂದೇಬಿಟ್ಟರು.

ಮೈಸೂರಿನ ಖಾಸಗಿ ಹೋಟೆಲ್‌ಗೆ ಕುಮಾರಸ್ವಾಮಿ ...ಂದಿಳಿಯುತ್ತಿದ್ದಂತೆ ಮೈಸೂರು ನಗರಾಧ್ಯಕ್ಷ ಹರೀಶ್‌ಗೌಡ ...ರೆದುಕೊಂಡು ಬಂದಿದ್ದ ಪಟಾಲಂ 'ಹರೀಶ್ ಗೌಡರಿಗೆ ...ೈ... ಹರೀಶ್ ಅಣ್ಣಂಗೆ ಜೈ... ಹರೀಶ್ ಅಣ್ಣಂಗೆ ಚಾಮರಾಜ ...ೇತ್ರದ ಎಂಎಲ್‌ಎ ಟಿಕೆಟ್ ಕೊಡಿ' ಎಂದು ...ೂಗುಹಾಕಲಾರಂಭಿಸಿದರು.

ತಾನು ಕಾರ್ಯಕರ್ತರ ಸಮಾಲೋಚನಾ ಸಭೆಯಲ್ಲಿ ...ಾತನಾಡುತ್ತಿದ್ದರೂ ಗೌಡನ ಪಟಾಲಂ ಕೂಗು ಹಾಕುತ್ತಿದ್ದದ್ದು ಕುಮಾರಸ್ವಾಮಿಗೆ ಕೋಪ ತರಿಸಿತು. "ನನ್ನ ತಂದೆಯೇ ಈ ರೀತಿ ಇಂತವರಿಗೆ ಟಿಕೆಟ್ ಬೇಕು ಎಂದು ಹಟ ಮಾಡುವುದಿಲ್ಲ, ನಿನ್ನೆಮೊನ್ನೆಯ ಈ ಪುಢಾರಿಗಳು ನನ್ನ ಮುಂದೆ ನಿನ್ನೆಮೊನ್ನೆ ನಗರಾಧ್ಯಕ್ಷನಾದ ಹರೀಶ್ ಗೌಡನಿಗೆ ಜೈ ಎಂದು ನನ್ನ ಮಾತನ್ನು ಲೆಕ್ಕಿಸದೇ ಕೂಗು ಹಾಕುತ್ತಾರಲ್ಲ" ಎಂದು ಕೆಂಡಮಂಡಲವಾದ ಕುಮಾರಸ್ವಾಮಿ "ತಲೆಹರಟೆ ಮಾಡಲು ಬಂದಿದ್ದೀಯ" ಎಂದು ಹರೀಶ್ ಗೌಡನ ವಿರುದ್ಧ ಕೆಂಡಕಾರಿದರು.

ಕುಮಾರಸ್ವಾಮಿ ಪತ್ರಿಕಾಗಾರರೊಂದಿಗೆ ಮಾತನಾಡುತ್ತಿದ್ದಾಗಲೂ ಹರೀಶ್ ಗೌಡನ ಬೆಂಬಲಿಗರು ಘೋಷಣೆ ಕೂಗುತ್ತಲೇ ಇದ್ದರು. ಇದರಿಂದ ಮತ್ತಷ್ಟು ಸಿಟ್ಟಾದ ಕುಮಾರಸ್ವಾಮಿ "ಯಾರ್ರೀ ಹರೀಶ್ ಗೌಡ? ಎಷ್ಟು ವರ್ಷದಿಂದ ಪಕ್ಷ ಕಟ್ಟಿದ್ದಾನೆ? ಇಂತಹವರನ್ನೆಲ್ಲಾ ಅಧ್ಯಕ್ಷರನ್ನಾಗಿ ಮಾಡಿದ್ದೀರಿ" ಎಂದು ಹತ್ತಿರದಲ್ಲಿದ್ದ ಜಿ.ಟಿ.ದೇವೇಗೌಡರನ್ನು ಪ್ರಶ್ನಿಸಿದರು. ಅಷ್ಟೇ ಅಲ್ಲ, ಹರೀಶ್ ಗೌಡನನ್ನು ಉದ್ದೇಶಿಸಿ "ಹುಡುಗರಿಂದ ಕೂಗಿಸುತ್ತೀಯಾ? ನೀನು ಪಕ್ಷ ಕಟ್ಟಲು ಬಂದಿದ್ದೀಯೊ, ಬೇರೆ ಏನಕ್ಕೆ ಬಂದಿದ್ದೀಯೋ. ನಿನ್ನನ್ನು ಪಕ್ಷದಿಂದ ಸಸ್ಪೆಂಡ್ ಮಾಡುತ್ತೇನೆ" ಎಂದು ಗದರಿದರು.

ಸಭೆಯಲ್ಲೂ ಇದೇ ಪರಿಸ್ಥಿತಿ ಮುಂದುವರಿದಾಗ ತಾಳ್ಮೆ ಕಳೆದುಕೊಂಡ ಕುಮಾರಣ್ಣ "ಪಕ್ಷದಲ್ಲಿ ಶಿಸ್ತು ಕಲಿತುಕೊಳ್ಳಿ. ನಿಮಗೆ ಇಷ್ಟ ಇಲ್ಲದಿದ್ದರೆ ಪಕ್ಷ ಬಿಟ್ಟು ಹೋಗಿ. ಈಗಾಗಲೇ ಬಹಳ ಜನ ಹೋಗಿದ್ದಾರೆ. ಏನೂ ಆಗಿಲ್ಲ. ಹರೀಶ್ ಗೌಡರನ್ನು ಅಧ್ಯಕ್ಷರನ್ನಾಗಿ ಮಾಡಿದ್ದು ಪಕ್ಷ ಕಟ್ಟಲು. ತಲೆಹರಟೆ ಮಾಡಲು ಅಲ್ಲ" ಎಂದು ಗುಡುಗಿದರು.

ಅದಿರಲಿ, ಈಗ ಇದೇ ಸಭೆಯಲ್ಲಿ ಕಾಣಿಸಿಕೊಂಡ ಕಳಲೆ ಕೇಶವಮೂರ್ತಿ ವಿಷಯಕ್ಕೆ ಬರೋಣ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಶ್ರೀನಿವಾಸಪ್ರಸಾದ್ ಅವರ ವಿರುದ್ಧ ಅಲ್ಪಮತಗಳಿಂದ ಸೋತ ನಂಜನಗೂಡು ತಾಲ್ಲೂಕು ಜಾ.ದಳದ ಅಧ್ಯಕ್ಷ ಕೇಶವಮೂರ್ತಿ ನಂಜನಗೂಡು ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಲಿದ್ದಾರೆ ಎಂಬ ಮಾತು ಹರಿದಾಡುತಿತ್ತು. ಕೇಶವಮೂರ್ತಿ ಸಹ ಕಳೆದ ವಾರ ನಡೆದ ಎಪಿಎಂಸಿ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ಮಾಡಿ ದಳದ ಅಭ್ಯರ್ಥಿಗಳು ಚುನಾವಣೆಯಲ್ಲಿ ನಿಲ್ಲದಂತೆ ನೋಡಿಕೊಂಡಿದ್ದರು.

ಆದರೆ ಮೈಸೂರಿನ ಸಭೆಯಲ್ಲಿ ಕೇಶವಮೂರ್ತಿ "ನಾನು ಜೆಡಿಎಸ್ ಬಿಟ್ಟು ಬೇರೆಲ್ಲೂ ಹೋಗುವುದಿಲ್ಲ. ಜೆಡಿಎಸ್‌ನಲ್ಲೇ ಉಳಿಯುತ್ತೇನೆ. ಮಾಧ್ಯಮಗಳಲ್ಲಿ ನಾನು ಕಾಂಗ್ರೆಸ್ ಸೇರುವ ಬಗ್ಗೆ ವರದಿಯಾಗಿದೆ. ಹೀಗಾಗಿ ನಾನು ಉಪಚುನಾವಣೆಯಲ್ಲಿ ಸ್ಪರ್ಧಿಸುವುದೋ ಬೇಡವೋ ಎಂದು ವರಿಷ್ಠರೇ ತೀರ್ಮಾನ ಕೈಗೊಳ್ಳುತ್ತಾರೆ. ಕುಮಾರಸ್ವಾಮಿ ಏನು ಹೇಳುತ್ತಾರೆಯೋ ಅದರಂತೆಯೇ ನಡೆದುಕೊಳ್ಳುತ್ತೇನೆ" ಎಂದರು.

"ತಿಂಗಳ ಹಿಂದೆ ನಾನು ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರನ್ನು ಭೇಟಿಯಾಗಿದ್ದೆ. ಆಗ ಉಪ ಚುನಾವಣೆಯಲ್ಲಿ ನಾವು ತಟಸ್ಥವಾಗಿ ಇರೋಣ ಎಂದು ಸಲಹೆ ನೀಡಿದ್ದರು. ಅವರ ಸಲಹೆಯಂತೆ ನಾನು ತಟಸ್ಥನಾಗಿದ್ದೇನೆ" ಎಂದು ಹೇಳುವ ಮೂಲಕ ವಿಷಯವನ್ನು ಕಗ್ಗಂಟು ಮಾಡಿದ್ದಾರೆ.

ಸಭೆಯಲ್ಲಿ ಎಲ್ಲಾ ಕ್ಷೇತ್ರಗಳ ಮುಖಂಡರು ತಮ್ಮ ಅಭಿಪ್ರಾಯವನ್ನು ನೀಡಿದ ನಂತರ ಕುಮಾರಸ್ವಾಮಿ ನಂಜನಗೂಡು ಉಪ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ನಿರ್ಧಾರ ಪ್ರಕಟಿಸಿದರಲ್ಲದೆ ಜೆಡಿಎಸ್‌ನ ಅಧಿಕೃತ ಅಭ್ಯರ್ಥಿ ಕೇಶವಮೂರ್ತಿ ಎಂದು ಘೋಷಿಸಿದರು. ಇದು ಅಷ್ಟಕ್ಕೇ ನಿಲ್ಲಲಿಲ್ಲ, ಪಕ್ಷದ ಚುನಾವಣಾ ವೆಚ್ಚಕ್ಕಾಗಿ ಮೈಸೂರಿನ ಬೆಳವಾಡಿಯ ಶಿವಕುಮಾರಸ್ವಾಮಿ ಅವರು 10 ಲಕ್ಷ ರೂಪಾಯಿ, ಮೈಸೂರಿನ ಕೆ.ಜಿ.ಕೊಪ್ಪಲಿನ ಟಿ.ನಾರಾಯಣ ಅವರು 5 ಲಕ್ಷ, ಇತರ ಮುಖಂಡರು 1 ಲಕ್ಷ 50 ಸಾವಿರ ದೇಣಿಗೆ ನೀಡುವುದಾಗಿ ಪ್ರಕಟಿಸಿದರು.

ಆದರೆ ಆನಂತರ ಬೆಂಗಳೂರಿನಲ್ಲಿ ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಪಕ್ಷದ ಉನ್ನತಾಧಿಕಾರ ಸಮಿತಿ (ಕೋರ್ ಕಮಿಟಿ) ಸಭೆಯಲ್ಲಿ ನಂಜನಗೂಡು ಮತ್ತು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬಗ್ಗೆ ಸ್ಪಷ್ಟ ಚಿತ್ರಣ ವ್ಯಕ್ತವಾಗಲಿಲ್ಲ, ಬದಲಾಗಿ ಆಯಾ ಕ್ಷೇತ್ರಗಳಲ್ಲಿನ ಪಕ್ಷದ ಕಾರ್ಯಕರ್ತರ ಅಭಿಪ್ರಾಯ ಪಡೆದು ಮುಂದಿನ ಹೆಜ್ಜೆ ಇಡಲು ತೀರ್ಮಾನಿಸಲಾಯಿತು.

"ಕಾಂಗ್ರೆಸ್ ಮತ್ತು ಬಿಜೆಪಿ ಚುನಾವಣೆಯಲ್ಲಿ ಭಾರೀ ಹಣ ವೆಚ್ಚ ಮಾಡಲಿದ್ದು, ಇಂತಹ ಸಂದರ್ಭದಲ್ಲಿ ನಾವು ಹಣದ ಪೈಪೋಟಿ ನೀಡಲು ಸಾಧ್ಯವಿಲ್ಲ. ಮುಂದಿನ ಏಳೆಂಟು ತಿಂಗಳಲ್ಲಿ ಸಾರ್ವತ್ರಿಕ ಚುನಾವಣೆ ಎದುರಾಗಲಿದ್ದು ಈ ಸಂದರ್ಭದಲ್ಲಿ ಯಾವ ಪುರುಷಾರ್ಥಕ್ಕೆ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಬೇಕು ಎನ್ನುವ ಅಭಿಪ್ರಾಯ ಸಭೆಯಲ್ಲಿ ಕೇಳಿಬಂದಿದೆ" ಎಂದು ಕುಮಾರಸ್ವಾಮಿ ಹೇಳಿದರು.

ಒಟ್ಟಾರೆ "ನಂಜನಗೂಡು ಕ್ಷೇತ್ರದಲ್ಲಿ ಜೆಡಿಎಸ್ ಸ್ಪರ್ಧಿಸುವುದಾದರೆ ಕೇಶವಮೂರ್ತಿ ಅವರನ್ನೇ ಕಣಕ್ಕಿಳಿಸಲಾಗುವುದು. ಅವರು ಕಾಂಗ್ರೆಸ್ ಸೇರುವುದಿಲ್ಲ, ಅವರ ಮೇಲೆ ನಮಗೆ ವಿಶ್ವಾಸವಿದೆ" ಎಂದೂ ಕುಮಾರಣ್ಣ ಸ್ಪಷ್ಟಪಡಿಸಿದರು.

ಆದರೆ ಇದು ಬಾಹ್ಯ ಜಗತ್ತಿಗೆ ಹೇಳುತ್ತಿರುವ ವಿಚಾರ. ಆಂತರಿಕ ವಿಚಾರವೇ ಬೇರೆ ಇದೆ. ಸಭೆಯ ನಂತರ ಕೇಶವಮೂರ್ತಿಯವರನ್ನು "ಉಪ ಚುನಾವಣೆಯಲ್ಲಿ ನೀವೇ ಜೆಡಿಎಸ್ ಅಭ್ಯರ್ಥಿ ಎಂದು ಕುಮಾರಣ್ಣ ಘೋಷಿಸಿದ್ದಾರಂತಲ್ಲ?" ಎಂದು ಕೇಳಿದಾಗ "ಅದು ಈ ಚುನಾವಣೆಗೋ ಅಥವಾ ಸಾರ್ವತ್ರಿಕ ಚುನಾವಣೆಗೂ ಗೊತ್ತಿಲ್ಲ" ಎಂದು ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡಿದ್ದಾರೆ.


ಆದರೆ ಉಪ ಚುನಾವಣೆಯಲ್ಲಿ ಶ್ರೀನಿವಾಸ ಪ್ರಸಾದ್ ವಿರುದ್ಧ ಕೇಶವಮೂರ್ತಿ ಕಾಂಗ್ರೆಸ್ ಅಭ್ಯರ್ಥಿಯಾಗುವುದು ಸ್ಪಷ್ಟ ಎಂದು ಕಾಂಗ್ರೆಸ್ ಮೂಲಗಳು ಹೇಳುತ್ತವೆ. ಯಾಕೆಂದರೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇವೇಗೌಡ ಅವರೊಂದಿಗೆ ಮಾತುಕತೆ ನಡೆಸಿದ್ದು, ಕೇಶವ ಮೂರ್ತಿ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿಸಲು ದೇವೇಗೌಡರು ಒಪ್ಪಿಕೊಂಡಿದ್ದಾರೆ. ಈ ಕಾರಣಕ್ಕೇ ದೊಡ್ಡಗೌಡರು "ನಮ್ಮದು ಪ್ರಾದೇಶಿಕ ಪಕ್ಷ. ಉಪ ಚುನಾವಣೆಯಲ್ಲಿ ಎರಡು ರಾಷ್ಟ್ರೀಯ ಪಕ್ಷಗಳೊಂದಿಗೆ ಸ್ಪರ್ಧೆಯೊಡ್ಡುವುದು ನಮಗೆ ಕಷ್ಟವಾಗುತ್ತದೆ. ಹಾಗಾಗಿ ಕ್ಷೇತ್ರದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೀವೇ ನಿರ್ಧಾರ ತೆಗೆದುಕೊಳ್ಳಿ" ಎಂದು ಸ್ಥಳೀಯ ನಾಯಕರಿಗೆ ಸೂಚಿಸಿದ್ದಾರೆ ಎಂದು ತರ್ಕಿಸಲಾಗುತ್ತಿದೆ.

■ ಶರ

ರೋಣ: ದುರಂತ ಡಾಕ್ಟರ್‌ಗೆ ಸಿಗುತ್ತಾ ದಳದ ಟಿಕೆಟ್?

ರೋಣ ಪಾಲಿನ ಹಕ್ಕಬುಕ್ಕರಂತಿರುವ ಕಾಂಗ್ರೆಸ್‌ನ ...ಎಸ್.ಪಾಟೀಲ್, ಬಿಜೆಪಿಯ ಕಳಕಪ್ಪ ಬಂಡಿಯ ನಡುವೆ ...ಡಿಎಸ್ ಸಣ್ಣಗೆ ಕೊಸರಾಡಲು ಶುರು ಮಾಡಿದೆ. ಇನ್ನೇನು ...018ರ ಚುನಾವಣೆಗೆ ಹೆಚ್ಚೇನು ಸಮಯ ಉಳಿದಿಲ್ಲ. ...ಾಗೆ ನೋಡಿದರೆ ಕಳೆದ ಹದಿನೈದು ವರ್ಷಗಳಿಂದಲೇ ...ಲ್ಲಿ ತೃತೀಯ ಶಕ್ತಿಗೆ ಶಕ್ಯವಾದ ವಾತಾವರಣವಿದೆ. ಅದನ್ನು ...ಾಚಿಕೊಳ್ಳಲು ಜೆಡಿಎಸ್ ಕೊಂಚ ಶ್ರಮ ಹಾಕಿದರೂ ...ಕ್ಸಸ್‌ನ ಸಂಭವ ಇದ್ದೇ ಇದೆ.

ಆದರೆ ದುರಂತ ಏನೆಂದರೆ ಈ ಭಾಗದ ಜೆಡಿಎಸ್ ...ರಿಕ ಬಸವರಾಜ ಹೊರಟ್ಟಿಯ ತಾಳಕ್ಕೆ ತಕ್ಕಂತೆ ...ಲೆಯಾಡಿಸುವ ದಿಗ್ಗಜರಾದ ದೇವೇಗೌಡ ಮತ್ತು ...ುಮಾರಸ್ವಾಮಿ ಟಿಕೆಟ್ ಹಂಚಿಕೆಯ ಸಂದರ್ಭದಲ್ಲಿ ...ಷ್ಠಾವಂತರನ್ನು ಕಡೆಗಣಿಸಿ ರೊಕ್ಕಸ್ಥರಿಗೆ ಟಿಕೆಟ್ ನೀಡುವ ...ಂಸ್ಕೃತಿ ಪಾಲಿಸಿಕೊಂಡು ಬಂದಿದ್ದಾರೆ. ಅದೇ ಜೆಡಿಎಸ್‌ಗೆ ...ುಳುವಾಗುತ್ತಿರೋದು. ಆದರೆ ಈ ಸಲ ಕುಮಾರಸ್ವಾಮಿ ...ುಬ್ಬಳ್ಳಿಯಲ್ಲೇ ಮನೆ ಮಾಡಿ ಉತ್ತರ ಕರ್ನಾಟಕದಲ್ಲಿ ...0 ಸೀಟು ಗೆಲ್ಲುತ್ತೇನೆಂದು ಶಪಥಗೈದಿರೋದರಿಂದ ...ೋಣದಲ್ಲಿ ಜೆಡಿಎಸ್ ಟಿಕೆಟ್‌ಗೆ ಭಾರೀ ಬೇಡಿಕೆ ಬಂದಿದೆ. ...ಡಿಎಸ್ ರಾಜ್ಯ ಯುವಘಟಕದ ಉಪಾಧ್ಯಕ್ಷ ...ಮಂಜುನಾಥ ವಿಶ್ವಬ್ರಾಹ್ಮಣ ತನ್ನ 17 ವರ್ಷಗಳ ...ಷ್ಠೆಯನ್ನು ಒರೆಗೆ ಹಚ್ಚಿ ಟಿಕೆಟ್ ಕೊಡಿ ಎಂದು ದಳ್ಳಿ ...ಡಿದು ಕುಳಿತಿದ್ದಾರೆ. ಅವರಿಗೆ ಅಡ್ಡಗಾಲಾಗಿ ನಮಗೂ ಟಿಕೆಟ್ ಬೇಕೆಂದು ಹೆಚ್.ಎಸ್. ಸೋಂಪುರ, ತಾಲೂಕ್ ಜೆ.ಡಿ.ಎಸ್ ಅಧ್ಯಕ್ಷ ಮುಕ್ತುಮಸಾಬ ಸಾಗರ ಮತ್ತು ನಿಂಗನ ಗೌಡ ಪಾಟೀಲ ಕಸರತ್ತು ನಡೆಸಿದ್ದಾರೆ.



ಮಂಜುನಾಥ

ನಿಜಕ್ಕೂ ಜನತಾ ಪರಿವಾರದ ನಿಷ್ಠೆ ವಿಷಯದಲ್ಲಿ ಮಂಜುನಾಥ್ ಯಾರಿಗೇನೂ ಕಮ್ಮಿಯಿಲ್ಲ. 1983ರಲ್ಲಿ ವಿದ್ಯಾರ್ಥಿ ಮುಖಂಡನಾಗಿದ್ದಾಗಲೆ ಜನತಾ ಪರಿವಾರ ಸೇರಿ 1989ರ ಅಸೆಂಬ್ಲಿ ಚುನಾವಣೆಯಲ್ಲಿ ಅಂದಿನ ರಾಜಕೀಯ ದಿಗ್ಗಜ ಜ್ಞಾನದೇವ ದೊಡ್ಡಮೇಟಿ ಪರವಾಗಿ ದುಡಿದಿದ್ದ. ಅಲ್ಲದೇ 1994ರಲ್ಲಿ ಜನತಾದಳದಿಂದ ಸ್ಪರ್ಧಿಸಿದ್ದ ಶ್ರೀಶೈಲಪ್ಪ ಬಿದರೂರ ಪರವಾಗಿಯೂ ಮಂಜುನಾಥ್ ಕೆಲಸ ಮಾಡಿದ್ದುಂಟು. ಆ ಸಲ ಗೆದ್ದಿದ್ದ ಬಿದರೂರ 1999ರಲ್ಲಿ ಸೋತು ಹೋಗಿದ್ದರು.


2004ರ ಚುನಾವಣೆ ಘೋಷಣೆಯಾದಾಗ ರೋಣ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯನ್ನಾಗಿ ಶ್ರೀಶೈಲಪ್ಪ ಬಿದರೂರನ್ನು ಮತ್ತೆ ಘೋಷಣೆ ಮಾಡಲಾಗಿತ್ತು. ಆದರೆ ಬಿದರೂರ ಶಸ್ತ್ರತ್ಯಾಗ ಮಾಡಿ ಬಿಜೆಪಿ ಸೇರಿಕೊಂಡಿದ್ದ. ಬಿಜೆಪಿಯಿಂದ ಸ್ಪರ್ಧಿಸಿದ್ದ ಕಳಕಪ್ಪ ಬಂಡಿ ಮತ್ತು ಬಿದರೂರ ಇಬ್ಬರೂ ಪಂಚಮಸಾಲಿ ಲಿಂಗಾಯತರು. ತಮ್ಮಿಬ್ಬರ ನಡುವೆ ಮತವಿಭಜನೆಗೊಂಡು ಕಾಂಗ್ರೆಸ್‌ನ ಜಿ.ಎಸ್.ಪಾಟೀಲ್ ಎಲ್ಲಿ ಗೆದ್ದುಬಿಡುತ್ತಾನೋ ಅಂತ ಕಳಕಪ್ಪ ಬಂಡಿ ಹೂಡಿದ ಹುನ್ನಾರಕ್ಕೆ ಬಿದ್ದ ಬಿದರೂರ ತನ್ನನ್ನು ಜಬರ್‌ದಸ್ತ್ ಅಮೌಂಟಿಗೆ ಮಾರಿಕೊಂಡು ಜೆಡಿಎಸ್‌ಗೆ ಕೈಕೊಟ್ಟಿದ್ದ.

ಆಗ ಅನಿವಾರ್ಯವಾಗಿ ಜೆಡಿಎಸ್ ಟಿಕೆಟ್ ಇದೇ ಮಂಜುನಾಥ್ ಕೊರಳಿಗೆ ಜೋತುಬಿದ್ದಿತ್ತು. ಪೂರ್ವ ತಯಾರಿಯೇ ಇಲ್ಲದೆ ಧುತ್ತನೇ ಎರಗಿದ ಕಾಳಗದಲ್ಲಿ ಮಂಜುನಾಥ ವಿಶ್ವಬ್ರಾಹ್ಮಣ ಬರ್ಕತ್ತಾಗಲಿಲ್ಲ. ಬದಲಿಗೆ ಸಾಲ ಮಾಡಿಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ. ಇದ್ದ ಬಿದ್ದ ಮನೆ, ಹೊಲ, ಆಸ್ತಿ ಮಾರಿಕೊಂಡು ಸಣ್ಣದೊಂದು ಷೆಡ್‌ನಲ್ಲಿ ವಾಸಮಾಡುವ ದುರ್ಗತಿ ಬಂದೊದಗಿತ್ತು.

ಮಂಜುನಾಥ್ ಈಗ ಮತ್ತೆ ಸ್ಪರ್ಧೆಗಿಳಿಯುವ ಉತ್ಸಾಹ ತೋರುತ್ತಿದ್ದಾರೆ. ಅಂದಹಾಗೆ, 2008ರಲ್ಲೂ ಮಂಜುನಾಥ್ ಜೆಡಿಎಸ್ ಟಿಕೆಟ್ ಕೇಳಿದ್ದ. ಆದರೆ ಆಗ ಅಡ್ಡಗಾಲಾಗಿದ್ದು ಅಂದಿನ ಜೆಡಿಎಸ್ ಜಿಲ್ಲಾಧ್ಯಕ್ಷ ರವಿ ದಂಡಿನ. ಟಿಕೆಟ್ ತಪ್ಪಿದರೂ ಮಂಜುನಾಥ್ ಪಕ್ಷದ ಅಭ್ಯರ್ಥಿ ಪರವಾಗಿ ದುಡಿದಿದ್ದ. ಆ ಚುನಾವಣೆಯಲ್ಲಿ ದಂಡಿನ 10000 ಮತ ಪಡೆದು ಸೋತಿದ್ದ. 2013ರಲ್ಲಿ ಮಂಜುನಾಥನಿಗೆ ಸ್ವತಃ ಕುಮಾರಸ್ವಾಮಿಯೇ ಟಿಕೆಟ್ ಖಾತರಿ ನೀಡಿದ್ದರು. ಆದರೆ ಬಿಜೆಪಿಯಿಂದ ವಲಸೆ ಬಂದಿದ್ದ ಮುಂಡರಗಿ ಜಿ.ಪಂ ಸದಸ್ಯನಾಗಿದ್ದ ಹೇಮಗಿರೀಶ ಹಾವಿನಾಳಗೆ ಜೆಡಿಎಸ್ ಟಿಕೆಟ್ ನೀಡಲಾಗಿತ್ತು. ಹೀಗೆ ಮಂಜುನಾಥ್ ಎರಡೆರಡು ಬಾರಿ ಟಿಕೆಟ್ ವಂಚನೆಗೆ ಒಳಗಾಗಿದ್ದ.

ಈ ಬಾರಿಯಾದರು ಮಂಜುನಾಥಗೆ ಜೆಡಿಎಸ್ ಟಿಕೆಟ್ ಸಿಗುತ್ತಾ ನೋಡಬೇಕು. ಸದ್ಯ ಜೆಡಿಎಸ್ ರಾಷ್ಟ್ರೀಯ ಕಾರ್ಯಕಾರಿಣಿ ಮಂಡಳಿ ಸದಸ್ಯರೂ ಆಗಿರುವ ಮಂಜುನಾಥ್, ರೋಣ ವಿಧಾನಸಭಾ ಕ್ಷೇತ್ರದಲ್ಲಿ 40,000ದಷ್ಟು ಮತದಾರರನ್ನು ಹೊಂದಿರುವ ಗಾಣಿಗ ಸಮುದಾಯದ ಪಟ್ಟಣಾದವರು. ಈ ಭಾಗದಲ್ಲಿ ವೃತ್ತಿಯಲ್ಲಿ ವೈದ್ಯರಾದ ಇವರಿಗೆ ಒಳ್ಳೆಯ ಹೆಸರಿದೆ. ಜೆಡಿಎಸ್ ದಿಗ್ಗಜರು ಇದನ್ನೆಲ್ಲಾ ಪರಿಗಣಿಸುತ್ತಾರಾ? ಕಾದು ನೋಡಬೇಕು.

■ ಸ.ಶರಣಪ್ಪ ಪಾಟೀಲ



ನೋಟುರದ್ದತಿ – ಡಿಜಿಟಲ್ ಲೂಟಿ

ಕ್ಯಾಷ್‌ಲೆಸ್ ಎಕಾನಮಿಯ ಹೂರಣವೇನು?

ನೋಟು ರದ್ದುಮಾಡಿ ಕಪ್ಪುಹಣ ಹಿಡಿಯುತ್ತೇವೆ ಎಂದು ಮೋದಿ ಘೋಷಿಸಿದ್ದ ಅವಧಿ ದಾಟಿ 3 ವಾರಗಳು ಕಳೆದುಹೋಗಿವೆ. ಫಲಿತಾಂಶ ನಮ್ಮ ಕಣ್ಣ ಮುಂದಿದೆ. ರೈತರು ದಿವಾಳಿಯಾಗಿದ್ದಾರೆ, ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿಪಾಲಾಗಿದ್ದಾರೆ. ಸಣ್ಣಪುಟ್ಟ ವ್ಯಾಪಾರಿಗಳು, ಮಧ್ಯಮ ವರ್ಗದ ಜನತೆ ತಮ್ಮ ದುಡಿಮೆಯ ಹಣವನ್ನು ತಾವು ಬಳಸಲಾಗದ ಆರ್ಥಿಕ ಎಮರ್ಜೆನ್ಸಿಗೆ ಸಿಲುಕಿ ತತ್ತರಿಸಿಹೋಗಿದ್ದಾರೆ.

ಹೀಗೆ ದೇಶದ ಬಡಪಾಯಿ ಜನತೆ ಮುಂದೆ ತಮ್ಮ ಪಾಲಿನ ಅಚ್ಛೆ ದಿನ್‌ಗಳು ಬರಲಿವೆ ಎಂದು ನೋವು ನುಂಗಿಕೊಂಡು ಆಸೆಗಣ್ಣುಗಳಿಂದ ಕಾಯುತ್ತಿದ್ದರೆ, ಮತ್ತೊಂದೆಡೆ ಪ್ರಧಾನಿ ಮೋದಿಯವರು ಡಿಸೆಂಬರ್ ಎರಡನೇ ವಾರದಿಂದಾಚೆಗೆ ಕಪ್ಪುಹಣದ ರಾಗ ಹಾಡುವುದನ್ನೇ ನಿಲ್ಲಿಸಿಬಿಟ್ಟರು. ಅನಿರೀಕ್ಷಿತವಾಗಿ ಹೊಸ ಡಿಜಿಟಲ್ ರಾಗ ಹಾಡಲು ಆರಂಭಿಸಿಬಿಟ್ಟರು.

ಹೀಗೆ ಅನಿರೀಕ್ಷಿತ ತಿರುವು ಪಡೆದುಕೊಂಡ ಡಿಜಿಟಲ್ ಯೋಜನೆಯ ಪ್ರಕಾರ ಭಾರತದಲ್ಲಿ ನಗದು ರೂಪದ ವ್ಯವಹಾರ ಹೆಚ್ಚಾಗಿರುವುದರಿಂದ ಭ್ರಷ್ಟಾಚಾರ ಹೆಚ್ಚಾಗಲು, ಕಪ್ಪುಹಣ ಜಮೆಯಾಗಲು ಕಾರಣವಾಗಿದೆಯಂತೆ. ಆದ್ದರಿಂದ ದೇಶದ ಆರ್ಥಿಕತೆ ಸ್ವಚ್ಛವಾಗಬೇಕೆಂದರೆ ನಾವು ನಗದು ಬಳಕೆ ಕಡಿಮೆ ಮಾಡಬೇಕು. ಡಿಜಿಟಲ್ ರೂಪದಲ್ಲಿ ಹಣದ ವ್ಯವಹಾರ ಮಾಡಬೇಕು. ಅಂದರೆ ಪ್ರತಿಯೊಬ್ಬರೂ ಡೆಬಿಟ್ / ಕ್ರೆಡಿಟ್ ಪ್ಲಾಸ್ಟಿಕ್ ಕಾರ್ಡ್‌ಗಳನ್ನಿಟ್ಟುಕೊಳ್ಳಬೇಕು ಅಥವಾ ಮೊಬೈಲ್ ಪೇಮೆಂಟ್ / ಬ್ಯಾಂಕಿಂಗ್ ಮಾಡುವಂತಹ ಕಂಪನಿಗಳ ಸೇವೆ ಪಡೆದುಕೊಳ್ಳಬೇಕು. ಇದು ಸರ್ಕಾರದ ವಿವರಣೆ.

ಈ ವಿಷಯದಲ್ಲಿ ನಿಮ್ಮ ಸೇವೆಗಾಗಿ ಈಗಾಗಲೇ ಪೇಟಿಎಂ, ಮೊಬಿಕ್ವಿಕ್, ಫ್ರೀಚಾರ್ಜ್, ಆಕ್ಸಿಜನ್ ಮುಂತಾದ ಕಂಪನಿಗಳು ಸಾಲುಗಟ್ಟಿ ನಿಂತಿವೆ.

ಪೇಟಿಎಂನ ಕಾಣದ ಕೈಗಳು

ನೋಟ್‌ಬಂದಿ ಘೋಷಿಸಿದ ಮರುದಿನ, ಅಂದರೆ ನವೆಂಬರ್ 9ನೇ ತಾರೀಕು ಬೆಳಗ್ಗೆ ದೇಶದಾದ್ಯಂತ ಹಲವಾರು ದಿನಪತ್ರಿಕೆಗಳಲ್ಲಿ ಪೇಟಿಎಂ ಎಂಬ ಡಿಜಿಟಲ್ ಹಣ ಪಾವತಿ ಮಾಡುವ ಕಂಪನಿಯೊಂದರ ಪೂರ್ಣ ಮುಖಪುಟದ ಜಾಹಿರಾತು ಪ್ರಕಟವಾಯಿತು. ಆಶ್ಚರ್ಯಕರವಾಗಿ ಪ್ರಧಾನಿ ಮೋದಿಯವರು ಇದರ ಬ್ರಾಂಡ್ ಅಂಬಾಸಿಡರ್‌ನಂತೆ ಕಾಣಿಸಿಕೊಂಡಿದ್ದರು!! 'ಅಬ್ ಎಟಿಎಂ ನಹೀಂ, ಪೇಟಿಎಂ ಕರೋ' ಎಂಬುದು ಅದರ ಟ್ಯಾಗ್‌ಲೈನ್. ಅಂದರೆ ಈಗ ಎಟಿಎಂ ಇಲ್ಲ, ಪೇಟಿಎಂ ಮಾಡಿ ಎಂದರ್ಥ.

ಪೇಟಿಎಂನ ಒಡೆತನ 'ಒನ್‌ನೈನ್97 ಕಮ್ಯುನಿಕೇಷನ್ಸ್ ಲಿಮಿಟೆಡ್' ಕಂಪನಿಯ ಕೈಯಲ್ಲಿದೆ. ಈ ಕಂಪನಿಯನ್ನು ವಿಜಯ್ ಶಂಕರ್ ಶರ್ಮ ಎಂಬುವವರು 2010ರಲ್ಲಿ ಆರಂಭಿಸಿದರು. ಇದರ ಕೇಂದ್ರ ಕಚೇರಿ ನೋಯ್ಡಾದಲ್ಲಿದೆ. ಮೊದಲು ಮೊಬೈಲ್ ರಿಚಾರ್ಜ್ ವ್ಯವಹಾರ ಆರಂಭಿಸಿದ ಕಂಪನಿ ನಂತರ ಮೊಬೈಲ್ ವಾಲೆಟ್ ವ್ಯವಹಾರ ಶುರು ಮಾಡಿದೆ. ಈ ಕಂಪನಿ ಸ್ಟಾರ್ಟ್‌ಅಪ್ ಕಂಪನಿಯಾಗಿದ್ದು ಬಂಡವಾಳದ ಕೊರತೆ ಸಹಜ. ಕಳೆದ ವರ್ಷ ಹಲವು ಸ್ಟಾರ್ಟ್‌ಅಪ್ ಕಂಪನಿಗಳಲ್ಲಿ ರತನ್ ಟಾಟಾ ಬಂಡವಾಳ ಹೂಡಿದ್ದಾಗಿ ಮಾಧ್ಯಮಗಳಲ್ಲಿ ಸುದ್ದಿಯೊಂದು ಪ್ರಕಟವಾಗಿತ್ತು ನೋಡಿ. ಟಾಟಾರನ್ನು ಆಕರ್ಷಿಸಿದ ಸ್ಟಾರ್ಟ್‌ಅಪ್‌ಗಳಲ್ಲಿ ಇದೂ ಒಂದು. ವಿಚಿತ್ರವೆಂದರೆ ಟಾಟಾ ಎಷ್ಟು ಹಣ ಹೂಡಿದ್ದಾರೆ? ಯಾರ ಹೆಸರಿನಲ್ಲಿ ಹೂಡಿದ್ದಾರೆ? ಎಂಬುದೆಲ್ಲಾ ನಿಗೂಢ. ಈ ಬಗ್ಗೆ ಪೇಟಿಎಂನ ಸಿಇಓ ಆಗಲಿ, ರತನ್ ಟಾಟಾ ಆಗಲಿ ಬಾಯಿಬಿಚ್ಚಿಲ್ಲ.

ಇದೇ ಅವಧಿಯಲ್ಲಿ ತೆರಿಗೆ ಸ್ವರ್ಗ ಸಿಂಗಾಪುರದಲ್ಲಿ ನೋಂದಣಿಯಾಗಿರುವ, ರಿಲಯನ್ಸ್ ಗ್ರೂಪ್‌ನ ಜೊತೆ ನಿಕಟಸಂಬಂಧ ಹೊಂದಿರುವ ಎಸ್‌.ಎಐಎಫ್ ಪಾರ್ಟನರ್ಸ್ ಎಂಬ ಕಂಪನಿ ಬಂಡವಾಳ ಹೂಡಿದೆ. ಇದಾದನಂತರ ಚೀನಾದ ಅಲಿಬಾಬಾ ಕಂಪನಿ ಕೂಡ ದೊಡ್ಡಮೊತ್ತದ ಬಂಡವಾಳ ಹೂಡಿದೆ. ಆದರೆ ಈ ಬಂಡವಾಳವೂ ಕೂಡ ನೇರವಾಗಿ ಚೀನಾದಿಂದ ಬಂದಿಲ್ಲ, ತೆರಿಗೆ ಸ್ವರ್ಗ ಸಿಂಗಾಪುರದಲ್ಲಿ ನೋಂದಣಿಯಾಗಿರುವ 'ಅಲಿಪೇ' ಹೆಸರಿನ ಕಂಪನಿಯಿಂದ ಬಂದಿದೆ. ಪೇಟಿಎಂ ಕಂಪನಿಯ ಆಡಳಿತ ಮಂಡಳಿಯಲ್ಲಿ ಸ್ವದೇಶಿ ರತನ್ ಟಾಟಾ ಮತ್ತು ವಿದೇಶಿ ಚೀನಾದ ಜಾಕ್ ಮಾ ಮೊದಲಾದವರು ಸ್ಥಾನ ಪಡೆದುಕೊಂಡಿದ್ದಾರೆ. ಈ ಎಸ್‌ಎಐಎಫ್ ಕಂಪನಿಯ ಮಾಲಿಕರಾರು? ಹೋಗಲಿ, ಈ ಅಲಿಪೇ ಕಂಪನಿಯ ಹಿಂದೆ ಯಾರಿದ್ದಾರೆ? ಯಾರ್‍ಯಾರ ಬಂಡವಾಳ ಇದರಲ್ಲಿದೆ? ಇದರಲ್ಲಿ ಕಪ್ಪುಹಣ ಇದೆಯೆಂಬುದು ಕಾಮನ್‌ಸೆನ್ಸ್‌ನ ವಿಚಾರವಾದರೂ ಅದರ ಹಿಂದಿನ ದಂಧೆಕೋರರನ್ನು ನಿಖರವಾಗಿ ಪತ್ತೆಹಚ್ಚುವ ಕೆಲಸ ಇನ್ನಷ್ಟೇ ಆಗಬೇಕಾಗಿದೆ.

ನರೇಂದ್ರ ಮೋದಿ ನೋಟು ರದ್ದತಿ ಘೋಷಿಸುವ ಕೆಲವೇ ವಾರಗಳ ಹಿಂದೆ ಕಾರ್ಪೊರೇಟ್ ಲೋಕದಲ್ಲಿ ತೆರೆಮರೆಯಲ್ಲಿ ಭಾರೀ ಕಸರತ್ತುಗಳು ನಡೆದಿವೆ. 2016ರ ಅಕ್ಟೋಬರ್ 20ರಂದು ಅಮೆರಿಕದ ಗೂಗಲ್ ಸರ್ಚ್ ಕಂಪನಿಯ ಮಾಜಿ ಮುಖ್ಯಸ್ಥ ಅಮಿತ್ ಸಿಂಘಾಲ್




ಡಿಜಿಟಲ್ ಇಂಡಿಯಾ ಸಭೆ


ಪೇಟಿಎಂನ ಒನ್97 ಕಂಪನಿಯ ಬೋರ್ಡ್‌ಗೆ ಸೇರ್ಪಡೆಯಾಗಿದ್ದಾನೆ. ಅದಾದ ನಾಲ್ಕು ದಿನಗಳಲ್ಲಿ ಅಕ್ಟೋಬರ್ 24ರಂದು ಗೋಲ್ಡ್‌ಮನ್ ಸ್ಯಾಚ್ ಎಂಬ ಅಮೆರಿಕನ್ ದೈತ್ಯ ಬ್ಯಾಂಕ್‌ನ ಚೇರ್ಮನ್ ಮಾರ್ಕ್ ಶ್ವಾಟ್ಜ್ ಬೋರ್ಡ್ ಸದಸ್ಯ ಸ್ಥಾನಕ್ಕೇರಿದ್ದಾನೆ. ಈಗಾಗಲೇ ರತನ್‌ಟಾಟಾ, ಚೀನಾದ ಅಲಿಬಾಬಾ ಕಂಪನಿಯ ಜಿಂಗ್ ಕ್ಸಿಯಾನ್‌ಡಾಂಗ್ ಕೂಡ ಮುಂತಾದವರು ಆಸೀನರಾಗಿದ್ದಾರೆ.

ಹೀಗಿರುವಾಗ ಮೋದಿಯವರ ಆಡಳಿತದಲ್ಲಿ ನಮ್ಮ ಘನ ರಿಸರ್ವ್ ಬ್ಯಾಂಕ್ ಪೇಟಿಎಂ ಕಂಪನಿಗೆ ಪೇಮೆಂಟ್ ಬ್ಯಾಂಕಿಂಗ್ ವ್ಯವಹಾರ ನಡೆಸಲು ಅನುಮತಿ ಕೊಟ್ಟಿದೆ. ಪ್ರಧಾನಿಯೆವರೇ ಅದರ ಬ್ರಾಂಡ್ ಅಂಬಾಸಿಡರ್ ಆಗಿ ಜಾಹಿರಾತು ಕೊಟ್ಟಿದ್ದಾರೆ.

ಎಲ್ಲರೂ ಸೇರಿ ತೆರೆಮರೆಯಲ್ಲೇ ನವಂಬರ್ 8ಕ್ಕೆ ಮುಹೂರ್ತ ಫಿಕ್ಸ್ ಮಾಡಿಬಿಟ್ಟಿದ್ದಾರೆ. ಪರಿಣಾಮವೇನು? ಒಂದೆಡೆ ದೇಶದ ಆರ್ಥಿಕತೆ ಬರ್ಬಾತ್ ಆಗಿ ಕೋಟ್ಯಾನುಕೋಟಿ ಜನರು ತತ್ತರಿಸಿಹೋಗಿದ್ದರೆ, ಮತ್ತೊಂದೆಡೆ ಪೇಟಿಎಂ ಕಂಪನಿ ತನ್ನ ವ್ಯವಹಾರವನ್ನು ಹತ್ತಾರು ಪಟ್ಟು ಹೆಚ್ಚಿಸಿಕೊಂಡಿದೆ.

ಭಾರತದಲ್ಲಿ ಈಗಷ್ಟೆ ಗರಿಗಟ್ಟುತ್ತಿರುವ ಡಿಜಿಟಲ್ ಹಣಕಾಸು ವ್ಯವಹಾರದಲ್ಲಿ ಮುಂಚೂಣಿಯಲ್ಲಿರುವುದು ಪೇಟಿಎಂ. ಇನ್ನು ಎರಡನೇ ಅತಿದೊಡ್ಡ ಕಂಪನಿ ಮೊಬಿಕ್ವಿಕ್. ಇದು ಗುರುಗಾಂವ್‌ನ ವ್ಯಕ್ತಿಯೊಬ್ಬರಿಂದ ಆರಂಭವಾದ ಮತ್ತೊಂದು ಸ್ಟಾರ್ಟ್ ಅಪ್ ಕಂಪನಿ. ನೋಟು ನಿಷೇಧ ಘೋಷಣೆಯಾಗುವ ಹಿಂದಿನ ದಿನ ಅಂದರೆ ನವಂಬರ್ 7ರಂದು ಜಪಾನ್ ಮೂಲದ ವ್ಯಕ್ತಿಯೊಬ್ಬರು ಮೊಬಿಕ್ವಿಕ್‌ನ ಡೈರೆಕ್ಟರ್ ಆಗಿ ನೇಮಕವಾಗಿದ್ದಾರೆ. ಮಾತ್ರವಲ್ಲದೆ ಸಿಂಗಾಪುರದಲ್ಲಿ ನೋಂದಣಿಯಾಗಿರುವ ಟ್ರೀ ಲೈನ್ ಎಂಬ ಕಂಪನಿ ಕೂಡ ಇದರಲ್ಲಿ ಬಂಡವಾಳ ತೊಡಗಿಸಿದೆ. ಎಲ್ಲಕ್ಕಿಂತ ಆಶ್ಚರ್ಯಕರವಾದ ಬೆಳವಣಿಗೆಯೆಂದರೆ ನೆಟ್‌ವರ್ಕಿಂಗ್ ವ್ಯವಹಾರದಲ್ಲಿ ದೈತ್ಯ ಕಂಪನಿಯಾಗಿರುವ ಅಮೆರಿಕದ ಸಿಸ್ಕೋ ಕಂಪನಿ ಮೊಬಿಕ್ವಿಕ್‌ನಲ್ಲಿ ಬಂಡವಾ... ಹೂಡಿರುವುದು. ಸಿಸ್ಕೋ ಕಂಪನಿಯ ಮೌಲ್ಯ 121... ಬಿಲಿಯನ್ ಡಾಲರ್‌ಗಳು! ಅಂದರೆ ಸುಮಾರು 8... ಲಕ್ಷ ಕೋಟಿ ರೂಪಾಯಿಗಳು! ಇಂಥಾ ದೈತ್ಯ ಕಂಪ... ನಿನ್ನೆಮೊನ್ನೆ ಆರಂಭವಾದ ಕೇವಲ 60 ಕೋಟಿ ಬಂಡವಾ... ಹೊಂದಿರುವ ಕಂಪನಿಯಲ್ಲಿ ಬಂಡವಾಳ ತೊಡಗಿ... ಪಾಲುದಾರನಾಗುತ್ತದೆ ಎಂದರೆ ಏನರ್ಥ? ತೆರೆಮರೆಯ... ನಡೆಯುತ್ತಿರುವ ಡಿಜಿಟಲ್ ದಂಧೆಯಲ್ಲಿ ಯಾರ... ಕೈವಾಡವಿದೆ?


ಮುಖೇಶ್ ಅಂಬಾನಿ


ರತನ್ ಟಾಟಾ

ಈ ಸಿಸ್ಕೋ ಭಾರತಕ್ಕೆ ಹೊಸದೇನೂ ಅ... ಈಗಾಗಲೇ ಹಲವಾರು ವರ್ಷಗಳಿಂದ ಗುಜರಾತ್‌ನ... ಕಾರ್ಯ ನಿರ್ವಹಿಸುತ್ತಿದೆ. ಮೋದಿಯ ಸ್ಮಾರ್ಟ್ ... ಯೋಜನೆಯಲ್ಲಿ ಹಲವು ಗುತ್ತಿಗೆಗಳನ್ನೂ ಪಡೆದುಕೊಂಡಿ... ಅಲ್ಲದೆ ಮಹಾರಾಷ್ಟ್ರ, ರಾಜಸ್ಥಾನ, ಆಂಧ್ರ ಪ್ರದೇ... ಮೊದಲಾದ ರಾಜ್ಯ ಸರ್ಕಾರಗಳಿಗೆ ಸಂಬಂಧಿಸಿ... ನೆಟ್‌ವರ್ಕಿಂಗ್ ಇತ್ಯಾದಿ ಗುತ್ತಿಗೆಗಳನ್ನು ಪಡೆದಿದ... ಬೆಂಗಳೂರಿನಲ್ಲೂ ಹಲವಾರು ವರ್ಷಗಳಿಂದ ಸಿಸ್ಕೋ... ಘಟಕಗಳಿವೆ. ಹಾಗೆ ನೋಡಿದರೆ ಈ ಸಿಸ್ಕೋ ಅಂಥ... ಸ್ವಚ್ಛ ವ್ಯವಹಾರ ನಡೆಸುವ ಇತಿಹಾಸವುಳ್ಳ ಕಂಪನಿಯೇನ... ಈ ಹಿಂದೆ ಬ್ರೆಜಿಲ್ ಸರ್ಕಾರ ಸುಮಾರು 5500 ಕೋಟಿ... ತೆರಿಗೆ ವಂಚಿಸಿದ್ದಕ್ಕೆ ಕೇಸು ದಾಖಲಿಸಿತ್ತು, ಚೀನಾ ಸರ್ಕಾರ... ಆನ್‌ಲೈನ್ ಬೇಹುಗಾರಿಕೆ ಮತ್ತು ಹ್ಯಾಕಿಂಗ್ ಮಾಡಬಹುದಾದ ಸಾಧನ-ತಂತ್ರಜ್ಞಾನವನ್ನು ಒದಗಿಸಿ... ಆರೋಪ ಈ ಕಂಪನಿಯ ಮೇಲಿದೆ. ತನ್ನ ಶೇರುದಾರರನ್ನು ಯಾಮಾರಿಸಿರುವ ಬಗ್ಗೆಯೂ ಕೇಸುಗಳಿವೆ.

ಇಂಥಾ ಘನಂದಾರಿ ಕಂಪನಿ ಮೋದಿಯ ನೋಟು ರದ್ದತಿಯನ್ನು ಸ್ವಾಗತಿಸುವಂತಹ ಹೇಳಿಕೆ ಕೊಟ್ಟಿತ್ತು. 'ನೋಟು ರದ್ದತಿಯಿಂದ ತಾತ್ಕಾಲಿಕ ತೊಂದರೆ ಆದರೂ ದೀರ್ಘಕಾಲಿಕವಾಗಿ ಅಗಾಧ ಲಾಭವಾಗಲಿದೆ.' ಆದರೆ ತೊಂದರೆ ಆಗುವುದು ಯಾರಿಗೆ? ಲಾಭ ಆಗುವುದು ಯಾರಿಗೆ ಎಂಬುದನ್ನು ಅವರು ವಿವರಿಸಿಲ್ಲ ಅಷ್ಟೆ!

ಹೀಗೆ ಡಿಜಿಟಲ್ ಇಂಡಿಯಾದ ಹೆಸರಿನಲ್ಲಿ ಹಣ ಬಾಚಲು ಖಾಸಗಿ ಕಾರ್ಪೊರೇಟ್‌ಗಳು ತಯಾರಾ... ನಿಂತಿರುವ ಈ ಹೊತ್ತಿನಲ್ಲಿ ಡಿಸೆಂಬರ್ 30ರಂದು ಭೀಮ್ ಎಂಬ ಸರ್ಕಾರಿ ಅಪ್ಲಿಕೇಷನ್ ಒಂದನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಇದು ಕೇವಲ ಕಣ್ಣೊರೆಸುವ ತಂತ್ರವಾಗಿದ್ದು ಕಾರ್ಪೊರೆಟ್ ಕಂಪನಿಗಳ ಎದುರು ಭೀಮ್ ಬರಕತ್ತಾಗುತ್ತದೆಂದು ನಿರೀಕ್ಷಿಸಲು ಸಾಧ್ಯವಿಲ್ಲ.

ರಿಲಯನ್ಸ್ ಜಿಯೋ– ಹಗರಣಗಳ ಸರದಾರ

ನೋಟ್‌ಬಂದಿ ಘೋಷಣೆಗೆ ಒಂದು ತಿಂಗಳ ಮುಂಚೆ ಸೆಪ್ಟೆಂಬರ್ 2ನೇ ತಾರೀಕು ಮುಖೇಶ್ ಅಂಬಾನಿ ರಿಲಯನ್ಸ್ ಜಿಯೋ ಮೊಬೈಲ್ ಲಾಂಚ್ ಮಾಡುವ ಜಾಹಿರಾತುಗಳಲ್ಲೂ ಮಾನ್ಯ ಪ್ರಧಾನಿಯವರು ಬ್ರಾಂಡ್ ಅಂಬಾಸಿಡರ್ ಆಗಿ ಕಾಣಿಸಿಕೊಂಡಿದ್ದರು. 'ಡಿಜಿಟಲ್ ಇಂಡಿಯಾ – ದೇಶಕ್ಕೆ ಮತ್ತು 120 ಕೋಟಿ ಜನರಿಗೆ ಸಮರ್ಪಣೆ' ಎಂಬುದು ಆ ಜಾಹಿರಾತಿನ ಟ್ಯಾಗ್‌ಲೈನ್ ಆಗಿತ್ತು!! ಹತ್ತಾರು ಹಗರಣಗಳ ಸರದಾರ ಮುಖೇಶ್ ಅಂಬಾನಿ ಜಿಯೋ ಕಂಪನಿಯನ್ನು ಸ್ಥಾಪಿಸಿದ್ದರ ಹಿಂದೆ ಒಂದು ದೊಡ್ಡ ಹಗರಣವೇ ಇದೆ. ಕೇವಲ 2.5 ಕೋಟಿ ಮೌಲ್ಯದ ತನ್ನದೇ ಬೇನಾಮಿ ಕಂಪನಿಯ ಮೂಲಕ ಲೈಸೆನ್ಸ್ ಪಡೆದು ನಂತರ ಕಳ್ಳಮಾರ್ಗಗಳಲ್ಲಿ ಸುಮಾರು 6,000 ಕೋಟಿ ರೂಗಳನ್ನು ಆ ಕಂಪನಿಯಲ್ಲಿ ಹೂಡಿದ್ದಲ್ಲದೆ, 4ಜಿ ಹರಾಜು ಪ್ರಕ್ರಿಯೆಯಲ್ಲೂ ನಾನಾ ಅಕ್ರಮಗಳನ್ನು ಎಸಗಿ ಸರ್ಕಾರದ ಬೊಕ್ಕಸಕ್ಕೆ ಈ ರಿಲಯನ್ಸ್ ಜಿಯೋ ಕಂಪನಿ ಸುಮಾರು 20,000 ಕೋಟಿ ರೂಪಾಯಿ ನಷ್ಟವುಂಟುಮಾಡಿದೆಯೆಂದು ಸಿಎಜಿ ವರದಿಯಲ್ಲಿ ಉಲ್ಲೇಖವಾಗಿತ್ತು. ಹಿರಿಯ ವಕೀಲ ಪ್ರಶಾಂತ ಭೂಷಣ್ ಅವರು ಈ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಪ್ರಕರಣ ದಾಖಲಿಸಿದ್ದಾರೆ.

ಅಂತಿಮವಾಗಿ 2015ರ ಮೇ 8ರಂದು ಸಿಎಜಿ ವರದಿ ಪಾರ್ಲಿಮೆಂಟಿನಲ್ಲಿ ಮಂಡನೆಯಾದಾಗ ಬೊಕ್ಕಸಕ್ಕಾದ ನಷ್ಟದ ಮೊತ್ತವನ್ನು ಆಶ್ಚರ್ಯಕರವಾಗಿ 3,367 ಕೋಟಿಗಳಿಗೆ ಇಳಿದುಬಿಟ್ಟಿತ್ತು. ಮಾತ್ರವಲ್ಲ, 104 ಪುಟಗಳ ತನಿಖಾ ವರದಿಯನ್ನು ಕತ್ತರಿಸಿ ಕೇವಲ 13 ಪುಟಕ್ಕೆ ಇಳಿಸಲಾಗಿತ್ತು. ಇದೇ ರಿಲಯನ್ಸ್ ಕಂಪನಿ ಸರ್ಕಾರಿ ಸ್ವಾಮ್ಯದ ಒಎನ್‌ಜಿಸಿ ತೈಲಬಾವಿಯಿಂದ ತೈಲ ಕಳ್ಳತನ ಮಾಡಿ ಸರ್ಕಾರಕ್ಕೆ ಕನಿಷ್ಠ 17,000 ಕೋಟಿ ನಷ್ಟ ಮಾಡಿದ ಪ್ರಕರಣ ಕೆಲವೇ

▶▶ 16

ಡಿಜಿಟಲ್ ಹಗಲು ದರೋಡೆ

ಡಿಜಿಟಲ್ ಇಂಡಿಯಾ, ಕ್ಯಾಷ್‌ಲೆಸ್ ಎಕಾನಮಿ ಇತ್ಯಾದಿ ಆಕರ್ಷಕ ಮಾತುಗಳ ಹಿಂದೆ ಯಾವ ದೇಶದಲ್ಲೂ, ಯಾವ ಕಾಲದಲ್ಲೂ ಸಂಭವಿಸದೇ ಇದ್ದ ಭಾರೀ ಭಾರೀ ಹಗರಣವೊಂದು ಸುರುಳಿ ಬಿಚ್ಚಿಕೊಳ್ಳುತ್ತಿದೆ. ಅದು ಹೇಗೆ?

ಒಂದು ಉದಾಹರಣೆ ತೆಗೆದುಕೊಳ್ಳಿ. ನೋಟುಗಳು ದೈನಂದಿನ ವ್ಯವಹಾರದಲ್ಲಿ ಕೈಬದಲಾಗಿ ಸಾವಿರಾರು ಮಂದಿಯ ಕೈಗೆ ಬದಲಾಗುತ್ತಿರುತ್ತವೆ. ಹಾಗೆ 100 ರೂಪಾಯಿಯ ನೋಟೊಂದು 1000 ಮಂದಿಯ ಕೈ ಬದಲಾದರೂ ಆ 100 ನೋಟಿನ ಮೌಲ್ಯ ಒಂದು ನಯಾಪೈಸೆಯೂ ಕಡಿಮೆಯಾಗಿರುವುದಿಲ್ಲ. ಹಾಗೆ ಅದನ್ನು ಬಳಸಿದ 1000 ಮಂದಿಗೂ ಕೂಡ ಒಂದು ನಯಾಪೈಸೆಯೂ ವೆಚ್ಚ ಅಥವ ನಷ್ಟವಾಗಿರುವುದಿಲ್ಲ. ಇದುವರೆಗೂ ನಮ್ಮೆಲ್ಲರ ಅನುಭವದಲ್ಲಿರುವ ಈ ವಿಷಯ ಸರಳ, ಸ್ಪಷ್ಟ.

ಆದರೆ ಇದೇ ನೂರು ರೂಪಾಯಿಯ ವ್ಯವಹಾರವನ್ನು ಡಿಜಿಟಲ್ ಬ್ಯಾಂಕಿಂಗ್ ಮೂಲಕ ಮಾಡಿದರೆ ಪ್ರತಿಯೊಂದು ಟ್ರಾನ್ಸಾಕ್ಷನ್‌ಗೂ ಕನಿಷ್ಠ ಶೇಕಡ 1ರಿಂದ 2.5 % ವರೆಗೆ ವಿವಿಧ ರೀತಿಯ ಸೇವಾಶುಲ್ಕ ಕಡಿತಗೊಂಡು ಈ ಡಿಜಿಟಲ್ ಕಂಪನಿಗಳ ಕೈ ಸೇರುತ್ತದೆ. ಹಾಗೇ 1000 ಮಂದಿಯ ಟ್ರಾನ್ಸಾಕ್ಷನ್ ನಡೆದರೆ 1000ದಿಂದ 2,500 ರೂಪಾಯಿಯವರೆಗೆ ಡಿಜಿಟಲ್ ಲೂಟಿ ನಡೆದಿರುತ್ತದೆ.

ನಮ್ಮ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನ ವಾರ್ಷಿಕ 150 ಲಕ್ಷ ಕೋಟಿಗಳು! ಹಾಗಾದರೆ ಈ ಡಿಜಿಟಲ್ ದರೋಡೆಕೋರರು ಎಷ್ಟು ಲಕ್ಷ ಕೋಟಿಗಳಿಗೆ ಹೊಂಚಿಹಾಕಿ ಕೂತಿದ್ದಾರೆ?? ಮೊನ್ನೆ ಮೊನ್ನೆ ನಡೆದ ಒಂದು ಉದಾಹರಣೆ ನೋಡೋಣ. ಕಳೆದ ತಿಂಗಳು ಪೆಟ್ರೋಲ್ ಬಂಕ್ ಮಾಲಿಕರ ಅಖಿಲ ಭಾರತ ಒಕ್ಕೂಟ ಮುಷ್ಕರ ಹೂಡುವುದಾಗಿ ಸರ್ಕಾರಕ್ಕೆ ನೋಟಿಸ್ ನೀಡಿದರು. ಕಾರಣ ಅವರು ಬಳಸುವ ಡಿಜಿಟಲ್ ಹಣ ಸ್ವೀಕೃತಿಗೆ 1 ರಿಂದ 1.5 % ಶುಲ್ಕ ವಿಧಿಸುತ್ತಿದ್ದುದು. ಅದರಿಂದ ಪೆಟ್ರೋಲ್ ಬಂಕ್‌ಗಳಿಗೆ ತಲಾ ಸರಾಸರಿ ಒಂದು ತಿಂಗಳಿಗೆ 2 ಲಕ್ಷ ರೂಪಾಯಿಗಳ ನಷ್ಟವುಂಟಾಗುತ್ತದೆಂದು ಒಕ್ಕೂಟದ ಪದಾಧಿಕಾರಿಗಳು ಅಲವತ್ತುಕೊಂಡಿದ್ದರು.

ಪೆಟ್ರೋಲ್ ಬಂಕ್‌ಗಳು ಬಂದ್ ಆದರೆ ಈಗಾಗಲೇ ಮಡುಗಟ್ಟಿರುವ ಜನರ ಆಕ್ರೋಶ ಸ್ಫೋಟಗೊಳ್ಳಬಹುದೆಂಬ ಭೀತಿಯಿಂದ ಕೇಂದ್ರ ಸರ್ಕಾರ ಕೂಡಲೇ ಮಾತುಕತೆಗೆ ಬಂದು ಸದ್ಯಕ್ಕೆ ಯಾವುದೇ ಶುಲ್ಕ ವಿಧಿಸದಂತೆ ಡಿಜಿಟಲ್ ಕಂಪನಿಗಳನ್ನು ಒಪ್ಪಿಸಿದ್ದಾರೆ. ಈಗ ಸಾಮಾನ್ಯ ಗ್ರಾಹಕರಿಗೂ ಕೂಡ ಡಿಜಿಟಲ್ ಸೇವೆಯ ಉಚಿತ ಸೇವೆ ಒದಗಿಸಲಾಗುತ್ತದೆ ಎಂಬ ಭ್ರಮೆಯನ್ನು ಬಿತ್ತಲಾಗುತ್ತಿದೆ.

ಆದರೆ ಮುಂದಿನ ದಿನಗಳಲ್ಲಿ ಮಾರಿ ಹಬ್ಬ ಕಾದಿದೆ ಹುಷಾರ್!!!

ನವರಿ 22ರಂದು ಬೆಂಗಳೂರಿನಲ್ಲಿ ಕರ್ನಾಟಕ ತ್ರಿ, ದಲಿತ ಸಂಘರ್ಷ ಸಮಿತಿ ಮತ್ತು ಸ್ವರಾಜ್ ಯಾನ ಸಂಘಟನೆಗಳು ಜಂಟಿಯಾಗಿ ನೋಟು ರದ್ದತಿಯ ಬಾಧಕಗಳ ಕುರಿತ ಮುಖಾಮುಖಿ ಚರ್ಚೆಯನ್ನು ಜಿಸಿದ್ದವು. ನೋಟು ರದ್ದತಿಯನ್ನು ಬೆಂಬಲಿಸಿ ದ್ಯಂತ ಭಾಷಣ ಮಾಡುತ್ತಿರುವ ಯುವ ಬ್ರಿಗೇಡ್‌ನ ರ್ತಿ ಸೂಲಿಬೆಲೆ, ಬಿಜೆಪಿಯ ವಕ್ತಾರ ಸಿ.ಟಿ.ರವಿ, ಸಚಿವರುಗಳಾದ ಸದಾನಂದ ಗೌಡ, ಅನಂತಕುಮಾರ್ ಸಂಸದ ಪ್ರತಾಪ್ ಸಿಂಹ–ಇಷ್ಟು ಜನರಿಗೆ ರಿಜಿಸ್ಟರ್ಡ್ ಸ್ಟ್ ಮೂಲಕ ಈ ಮುಖಾಮುಖಿ ಚರ್ಚೆಯ ವನ್ನು ವಿವರಿಸಿ, ಆಹ್ವಾನ ನೀಡಲಾಗಿತ್ತು, ಹಾಗೆಯೇ ಾಜಿಕ ಜಾಲತಾಣಗಳಲ್ಲೂ ಈ ಸಂಗತಿಯನ್ನು ವಾಗಿ ಪ್ರಚಾರಕ್ಕೆ ತರಲಾಗಿತ್ತು, ಆದರೆ, ಮುಖಾಮುಖಿ ದಕ್ಕೆ ಬರಲು ಇವರ್‍ಯಾರೂ ಧೈರ್ಯ ಮಾಡಲಿಲ್ಲ; ವಲ್ಲ, ಪಕ್ಷದಿಂದ ಅಧಿಕೃತವಾಗಿ ನಿಯೋಜಿಸಿ ನ್ನೂ ಕಳಿಸಲಿಲ್ಲ, ಪತ್ರಕರ್ತರು ಈ ಬಗ್ಗೆ ಚಕ್ರವರ್ತಿ ಬೆಲೆಯನ್ನು ಕೇಳಿದಾಗ "ಎರಡು ತಿಂಗಳ ಮೊದಲೇ ಾರ್ಯಕ್ರಮಗಳು ನಿಗದಿಯಾಗಿರುತ್ತವೆ, ಇಂತಹವಕ್ಕೆಲ್ಲ ಹ ಜುಜುಬಿ ಕಾರ್ಯಕ್ರಮಗಳು ಎಂಬ ಅರ್ಥದಲ್ಲಿ) ಗಲು ಸಮಯವಿರುವುದಿಲ್ಲ; ಈ ಪ್ರಶ್ನೆಗಳನ್ನು ಸಲು ನಾನ್ಯಾಕೆ, ನನ್ನ ಹುಡುಗರೇ ಉತ್ತರಿಸುತ್ತಾರೆ" ು ಪ್ರತಿಕ್ರಿಯಿಸಿದ್ದು ವರದಿಯಾಗಿತ್ತು. ಆದರೆ, ಈ ಕದಂದು ಆಗುವುದಿಲ್ಲ, ಬೇರೆ ದಿನಾಂಕ ನಿಗದಿ ಎಂಬಂತಹ ಪತ್ರವನ್ನಾಗಲೀ ಸಂದೇಶವನ್ನಾಗಲೀ ರು. ಅಥವಾ ಅವರ ಸಂಘಟನೆ 'ಬ್ರಿಗೇಡ್' ಾಮುಖಿ ಚರ್ಚೆಯ ಸಂಘಟಕರಿಗೆ ಕಳಿಸಲಿಲ್ಲ, ಕೊನೆಗೆ, ರ್ಯಕ್ರಮದ ದಿನ 'ಸೂಲಿಬೆಲೆಯ ಹುಡುಗರು' ಕೂಡಾ ರೂ ಬಂದು ಪ್ರಶ್ನೆಗಳಿಗೆ ಮುಖಾಮುಖಿಯಾಗುವ ರ್ಯ ತೋರಲಿಲ್ಲ! ಬಿಜೆಪಿ ಪಕ್ಷವೂ ಇದಕ್ಕೆ ಯಿಸಲಿಲ್ಲ!! ಕೊನೆಗೆ, ಮುಖಾಮುಖಿ ಚರ್ಚೆಯಲ್ಲಿ ರಾಗಿ ಪಾಲ್ಗೊಳ್ಳಲು ಬಂದಿದ್ದ ಬಿಜೆಪಿ ಐಟಿ ಘಟಕದ ದ್ ಗುರುಮೂರ್ತಿಯವರೇ ಪಕ್ಷದ ಪರವಾಗಿ ಳನ್ನೆದುರಿಸಬೇಕಾಯಿತು. ಒಟ್ಟಿನಲ್ಲಿ ಜನರ ಪ್ರಶ್ನೆಗಳಿಗೆ ಾಮುಖಿಯಾಗಲು, ನಿರ್ದಿಷ್ಟ ಪ್ರಶ್ನೆಗಳಿಗೆ ನೇರ ಉತ್ತರ ಲು ಬೇಕಾದ ಸರಕು ಬಿಜೆಪಿ ಅಥವಾ ಅವರ ಇತರ ಾವಣೆಗಳಲ್ಲಿ ಇಲ್ಲ ಎಂಬುದು ಖಚಿತವಾಯಿತು.

ಈ ಕಾರ್ಯಕ್ರಮದ ಉದ್ಘಾಟನೆಗೆ, ದೇಶದ ಖ್ಯಾತ ರೂ, ಕಳೆದ ಎರಡು ದಶಕಗಳಿಂದಲೂ ನಿರಂತರವಾಗಿ ಚಾರದ ವಿರುದ್ಧ ಹೋರಾಡುತ್ತಿರುವವರೂ, ಸ್ವರಾಜ್ ಯಾನದ ರಾಷ್ಟ್ರೀಯ ಅಧ್ಯಕ್ಷರೂ ಆದ ಪ್ರಶಾಂತ್ ಣ್‌ರವರು ಬಂದಿದ್ದರು. ಅವರ ಉದ್ಘಾಟನಾ ಭಾಷಣ ಹಣದ ವಿಷಯದಲ್ಲಿ ಸಮಗ್ರ ಒಳನೋಟ ವಂತಿತ್ತು, ಆದ್ದರಿಂದ, ಅದರ ಸಂಗ್ರಹಾನುವಾದವನ್ನು ನೀಡುತ್ತಿದ್ದೇವೆ.

ಎಲ್ಲರಿಗೂ ನಮಸ್ಕಾರಗಳು,


ಈ ಸಮಯದ ಮುಖ್ಯ ಸಂಗತಿಗಳಲ್ಲೊಂದಾದ ಟು ಅಮಾನ್ಯೀಕರಣ ಅಥವಾ ನೋಟುರದ್ದತಿಯ ಮಾತನಾಡಲು ಕರೆದಿದ್ದೀರಿ. ಸಮಕಾಲೀನ ಸಂದರ್ಭದ ಮುಖ್ಯವಾದ ವಿಚಾರವನ್ನು ಚರ್ಚಿಸುತ್ತಿರುವುದು ಾರ್ಹ.

ನೋಟು ರದ್ದತಿ ಈ ದೇಶದ ಜನರ ಕನಸುಗಳು, ಕ್ಷೆಗಳು, ಅವರ ಉದ್ಯೋಗ, ಅಷ್ಟೇ ಏಕೆ ಅವರ ಕನ್ನೇ ಬೀದಿಗೆಸೆದಿದೆ.

ಪ್ರಧಾನಮಂತ್ರಿಗಳು ಕಪ್ಪುಹಣದ ಸಮಸ್ಯೆಯನ್ನು, ೋತ್ಪಾದನೆಯಲ್ಲಿ ಹಣದ ಹರಿವನ್ನು ಹಾಗೂ ಚಾರವನ್ನು ನಿಗ್ರಹಿಸಲು ನೋಟು ರದ್ದತಿ ಮಾಡು ಗಿ ಹೇಳಿದರು. ಆದರೆ, ನಂತರದ ವಾಸ್ತವಾಂಶಗಳು ರುವಂತೆ ಪ್ರಧಾನಿ 86% ನೋಟುಗಳನ್ನು ವಾಪಾಸ್ ುಕೊಂಡಾಗ ಯಾವ ಪರಿಣತರ ಅಭಿಪ್ರಾಯ ಲಿಲ್ಲ, ರಿಸರ್ವ್ ಬ್ಯಾಂಕ್‌ನ ನಿರ್ದೇಶಕ ಮಂಡಳಿಗೆ ು ಗಂಟೆಯ ಮುಂಚೆ ವಿಷಯವನ್ನು ತಿಳಿಸಲಾಗಿತ್ತು, ಹ ದೊಡ್ಡ ನಿರ್ಧಾರ ತೆಗೆದುಕೊಳ್ಳುವಾಗ ಅದಕ್ಕೆ ಂಧಪಟ್ಟ ಯಾವ ಜವಾಬ್ದಾರಿ ವ್ಯಕ್ತಿಗೂ ಾಗಿರಲಿಲ್ಲ, ಆದರೂ ಪ್ರಧಾನಿ ನಿರ್ಧಾರ ಕೈಗೊಂಡರು. ಬಂದಿತವಾಗಿಯೂ ಕಪ್ಪುಹಣ ಮತ್ತು ಭ್ರಷ್ಟಾಚಾರ ವುದು ದೇಶದ ಮುಂದಿರುವ ದೊಡ್ಡ ಸಮಸ್ಯೆಗಳೇ ಆದರೆ ಅವರ ನೋಟು ರದ್ದತಿಯ ಕ್ರಮದ ಹಿಂದಿನ ೇಶ ಇವುಗಳನ್ನು ನಿಗ್ರಹಿಸುವುದೇ ಆಗಿತ್ತೆ? ಈ ೇಶಗಳನ್ನು ಈಡೇರಿಸಲು ಕೈಗೊಳ್ಳಬೇಕಾಗಿದ್ದ ಕ್ರಮ ಆಗಿತ್ತೇ?

ನಾನು .2014ರ ಜೂನ್‌ನಲ್ಲಿ ಅವರು ಅಧಿಕಾರ ಿಸಿದ ಕೆಲವೇ ದಿನಗಳಲ್ಲಿ ಒಂದು ಸುದೀರ್ಘ ಪತ್ರ ದಿದ್ದೆ, ಅದರಲ್ಲಿ, "ನೀವು ಕಪ್ಪುಹಣದ ಸಮಸ್ಯೆ ಿಸುವುದಾದರೆ, ಹೊರದೇಶಗಳಿಂದ ಕಪ್ಪು ಹಣ ಉದ್ದೇಶದಲ್ಲಿ ಗಂಭೀರವಾಗಿದ್ದಲ್ಲಿ, ಕೆಲವು ಕಾನೂನು ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ" ಎಂದು ಬರೆದಿದ್ದೆ, ರೆ ನಮ್ಮ ದೇಶದಲ್ಲಿ ಕಪ್ಪು ಹಣ ಸೃಷ್ಟಿಯಾಗಲು ಸ ಕಾನೂನುಗಳೇ ಅವಕಾಶ ಮಾಡಿಕೊಟ್ಟಿವೆ. ನಾವು

'ಕಪ್ಪು ಸಂಪತ್ತಿನ ಒಡೆಯರನ್ನು ಗುರಿಮಾಡಿ ಜನಸಾಮಾನ್ಯರನ್ನಲ್ಲ!' –ಪ್ರಶಾಂತ್ ಭೂಷಣ್



ಇದನ್ನು ಅನೈತಿಕ ಹಣ ಎಂದು ಕರೆಯೋಣ. ಕಪ್ಪು ಹಣ ಎಂದರೆ ತೆರಿಗೆ ತಪ್ಪಿಸಿರುವ ಹಣ ಅಷ್ಟೇ, ಅನೈತಿಕ ಹಣ ಎಂದರೆ ಅನೈತಿಕ ಮೂಲಗಳಿಂದ ಸಂಪಾದಿಸಿರುವುದು.

ಭಾರತದಲ್ಲಿ ಹಲವು ಲಕ್ಷ ಕೋಟಿಗಳಷ್ಟು ಹಣ ಪಾರ್ಟಿಸಿಪೇಟರಿ ನೋಟುಗಳು ಎಂಬ ರೂಪದಲ್ಲಿ ಹೂಡಿಕೆಯಾಗುತ್ತಿದೆ. ಇದರಲ್ಲಿ ತೊಡಗಿಸಲಾಗಿರುವ ಹಣ ಅನೈತಿಕ, ಆದರೆ ಅದು ಯಾರದ್ದು ಎಂದು ಯಾರಿಗೂ ಗೊತ್ತಾಗುವುದಿಲ್ಲ. ಇದಕ್ಕಾಗಿಯೇ ಕಂಪೆನಿಗಳನ್ನು ಸೃಷ್ಟಿಸಲಾಗಿರುತ್ತದೆ. 'ತೆರಿಗೆ ಕಳ್ಳರ ಸ್ವರ್ಗ' ಎಂದು ಕರೆಯಲಾಗುವ, ಬ್ಯಾಂಕ್ ಖಾತೆದಾರರ ಹೆಸರುಗಳನ್ನು ಬಹಿರಂಗಪಡಿಸದ ಅನೇಕ ದೇಶಗಳು ವಿಶ್ವದಲ್ಲಿವೆ. ಅಲ್ಲಿ ತೆರಿಗೆಯೂ ಅತಿ ಕಡಿಮೆ. ಮೊದಲು ನಾವು ಸ್ವಿಡ್ಜರ್ಲೆಂಡ್ ಬಗ್ಗೆ ಹೀಗೆನ್ನುತ್ತಿದ್ದೆವು. ಈಗ ಮಾರಿಶಸ್, ಪನಾಮಾ ದ್ವೀಪ ಮೊದಲಾದ ಇನ್ನೂ ಹಲವು ದೇಶಗಳಿವೆ. ಇಲ್ಲಿ ಹುಟ್ಟುಹಾಕಲಾಗುವ ಕಂಪೆನಿಗಳಿಂದ ಭಾರತೀಯರೇ 'ವಿದೇಶಿ ನೇರ ಹೂಡಿಕೆ'ಯ ಹೆಸರಿನಲ್ಲಿ ಭಾರತದಲ್ಲೇ ಹೂಡಿಕೆ ಮಾಡಲು ಸಾಧ್ಯ. ನಮ್ಮ ದೇಶದ ಒಟ್ಟು 75% ವಿದೇಶೀ ನೇರ ಹೂಡಿಕೆ ಬರುತ್ತಿರುವುದು ಇಂತಹ ದೇಶಗಳಿಂದ. ಮುಖ್ಯವಾಗಿ ಮಾರಿಷಸ್ ಒಂದರಿಂದಲೇ 65% ಬರುತ್ತಿದೆ. ಭಾರತಕ್ಕೂ ಮಾರಿಷಸ್ಸಿಗೂ ನಡುವೆ 'ದ್ವಿಗುಣ (ಎರಡು ಪಟ್ಟು) ತೆರಿಗೆ' ತಡೆಯುವ ಒಪ್ಪಂದವೂ ಆಗಿದೆ.

ದ್ವಿಗುಣ ತೆರಿಗೆ ಅಂದರೆ, ಯಾವುದೇ ಕಂಪೆನಿಯಲ್ಲಿ ಹೂಡಿಕೆ ಮಾಡುವಾಗ ಮತ್ತು ಅದರ ವಹಿವಾಟು ಆರಂಭವಾದ ಮೇಲೆ ಲಾಭ ಗಳಿಸುವಾಗ, ಎರಡೂ ಬಾರಿ ತೆರಿಗೆ ವಿಧಿಸಲಾಗುತ್ತದೆ–ಉದಾಹರಣೆಗೆ ಅಮೆರಿಕ ಅಥವಾ ಯುರೋಪಲ್ಲಿ ಒಂದು ಕಂಪೆನಿ ರೆಜಿಸ್ಟರ್ ಆದರೆ, ಅದಕ್ಕೆ ಹಣ ಹೂಡುವವರಿಗೆ ಹೂಡಿಕೆ ಮಾಡುವಾಗ ಮತ್ತು ನಂತರದ ವಹಿವಾಟು ಆರಂಭವಾದಾಗ- ಎರಡೂ ಸಂದರ್ಭದಲ್ಲಿ ತೆರಿಗೆ ಹಾಕಲಾಗುತ್ತದೆ. ಇದನ್ನು ದ್ವಿಗುಣ ತೆರಿಗೆ ಎನ್ನುತ್ತಾರೆ. ಆದರೆ ಮಾರಿಷಸ್‌ನಲ್ಲಿ ಒಂದು ಬಾರಿ ಮಾತ್ರ ತೆರಿಗೆ ವಿಧಿಸಲಾಗುತ್ತದೆ. ಆದ್ದರಿಂದ ಕಪ್ಪುಕುಳಗಳು ಮಾರಿಷಸ್ ಮೂಲಕ ಕಪ್ಪು ಹಣವನ್ನು ಭಾರತಕ್ಕೆ ಬಿಳಿಹಣವನ್ನಾಗಿಸಿಕೊಂಡು ಸಾಗಾಣಿಕೆ ಮಾಡಿಕೊಳ್ಳುತ್ತಾರೆ. ಅಂದರೆ, ಮೊದಲು ಮಾರಿಷಶ್‌ನಲ್ಲಿ ಒಂದು ಅನಾಮಿಕ ಕಂಪೆನಿ ಹುಟ್ಟು ಹಾಕಿ ಅದರಲ್ಲಿ ಹೂಡಿಕೆ ಮಾಡುವುದು. ನಂತರ ಆ ಕಂಪೆನಿಯ ಮೂಲಕ ವಿದೇಶೀ ನೇರ ಹೂಡಿಕೆ ಹೆಸರಿನಲ್ಲಿ ಇಲ್ಲಿ ಹೂಡಿಕೆ ಮಾಡುವುದು. ಹೀಗೆ ಹೂಡಿಕೆ ಮಾಡಿದ ನಂತರ ಇಲ್ಲಿ ಗಳಿಸುವ ಯಾವುದೇ ಮೊತ್ತದ ಲಾಭಕ್ಕೆ ತೆರಿಗೆ ಇರುವುದಿಲ್ಲ! "ಇಂತಹ ಬೇನಾಮಿ ಕಂಪೆನಿಗಳ ಮೂಲಕ ಅಥವಾ ಪಾರ್ಟಿಸಿಪೇಟರಿ ನೋಟ್‌ಗಳ ಮೂಲಕ ಹೂಡಿಕೆಯಾಗುವ ಬಂಡವಾಳ ಯಾರದ್ದು ಎಂಬ ಬಗ್ಗೆ ಭಾರತದ ಅಧಿಕಾರಿಗಳಿಗೆ ಕನಿಷ್ಠ ಮಾಹಿತಿ ಇರುವ ವ್ಯವಸ್ಥೆ ಮಾಡಿ" ಎಂದು ನಾನು ಕೇಳಿದ್ದೆ. (ಪಾರ್ಟಿಸಿಪೇಟರಿ ನೋಟ್-ಪಿ ನೋಟ್-ಎಂದರೆ ಭಾರತದ ತೆರಿಗೆ ಅಧಿಕಾರಿಗಳಿಗೆ ಹಣ ಹೂಡುತ್ತಿರುವವರ ಬಗ್ಗೆ ಯಾವುದೇ ಮಾಹಿತಿ ಸಿಗದಂತೆ, ಒಳನುಸುಳಲು ಇರುವ ಒಂದು ಅಧಿಕೃತ ಮಾರ್ಗ. ಹೇಗೆಂದರೆ, ಒಬ್ಬರು ಭಾರತದಲ್ಲಿ 'ವಿದೇಶೀ ನೇರ ಹೂಡಿಕೆ' ಮಾಡಲು ಬಯಸಿದರೆ, ಅವರ ಕುರಿತ ಕನಿಷ್ಠ ಮಾಹಿತಿಯನ್ನು 'ಸೆಬಿ' ಮೊದಲಾದ ಸಂಸ್ಥೆಗಳು ಪಡೆದಿರಬೇಕಾಗುತ್ತದೆ. ಇದಕ್ಕಾಗಿ 'ಕೆವೈಸಿ-ನಿಮ್ಮ ಗ್ರಾಹಕರನ್ನು ತಿಳಿಯಿರಿ' ಎಂಬ ಅರ್ಜಿ ತುಂಬಿಸಿಕೊಳ್ಳುತ್ತದೆ. ಹೀಗೆ ಅರ್ಜಿ ತುಂಬಿ ಅಧಿಕೃತವಾಗಿ ಹೂಡಿಕೆಗೆ ಅನುಮತಿ ಪಡೆದಿರುವ ವ್ಯಕ್ತಿಯ ಜೊತೆ, ಪಾರ್ಟಿಸಿಪೇಟರಿ ನೋಟ್ ಮೂಲಕ ಇನ್ನು ಯಾರು ಬೇಕಾದರೂ ಪಾಲುದಾರರಾಗಬಹುದು. ಅವರ ಬಗ್ಗೆ ತೆರಿಗೆ ಮತ್ತು ಹೂಡಿಕೆ ನಿಗ್ರಹಿಸುವ ಸಂಸ್ಥೆಗಳಿಗೆ ಯಾವುದೇ ಮಾಹಿತಿ ಇರುವುದಿಲ್ಲ!)

ವಿಶ್ವಸಂಸ್ಥೆಯ ಭ್ರಷ್ಟಾಚಾರ ವಿರೋಧಿ ಒಪ್ಪಂದಕ್ಕೆ ಅನೇಕ ದೇಶಗಳು ಸಹಿ ಮಾಡಿವೆ; ಭಾರತವೂ ಸೇರಿ. ಇದರ ಪ್ರಕಾರ ಯಾವುದೇ ದೇಶ ತನಗೆ ಬಾಕೀದಾರರಾಗಿರುವ ತೆರಿಗೆದಾರರ ಕುರಿತು ಮಾಹಿತಿ ಕೇಳಿದರೆ ಕೊಡಲೇಬೇಕು. ಎನ್‌ಆರ್‌ಐ ಆಗಲೀ ಯಾರೇ ಆಗಲಿ, ತಮ್ಮ ಎಲ್ಲಾ ಆಸ್ತಿ ಮತ್ತು ಆದಾಯವನ್ನು ಇಲ್ಲಿ ಘೋಷಿಸಲೇಬೇಕು. ಆದರೆ, ಇದರ ಮೂಲಕ ಬಾಕಿದಾರರನ್ನು ಕಂಡು ಹಿಡಿಯುವಂತೆ ನಾನು ನೀಡಿದ ಸಲಹೆಗಳಿಗೆ, ವಿಶೇಷ ತನಿಖಾ ಸಂಸ್ಥೆ (ಎಸ್‌ಐಟಿ) ಇಂತಹದರ ಮೇಲೆ ಕಣ್ಣಿಡಬೇಕೆಂದು ನೀಡಿದ ಸಲಹೆಗಳಿಗೆ ಯಾವುದೇ ಗಮನ ನೀಡಿಲ್ಲ, ಸಿಂಗಾಪುರದಿಂದ ಭಾರತಕ್ಕೆ ಬಂದಿರುವ ಅತಿದೊಡ್ಡ ಹೂಡಿಕೆ 6240 ಕೋಟಿ. ಇದು ಒಂದು ಪೋಸ್ಟ್‌ಬಾಕ್ಸ್ (ಬೇನಾಮಿ) ಕಂಪೆನಿ ಮೂಲಕ ಬಂದಿದೆ. ಇದರ ಹೂಡಿಕೆ ಅಂಬಾನಿ ಒಡೆತನದ 4 ಕಂಪೆನಿಗಳಲ್ಲಿ ಆಗಿದೆ. ಇಷ್ಟು ಹಣ ಹೂಡಿಕೆ ಮಾಡಿರುವ ಮೂಲಕಂಪೆನಿ ನೂರಾರು ಕಂಪೆನಿಗಳಿರುವ ಒಂದು ಸಣ್ಣ ರೂಮಿನಲ್ಲಿದೆ. ಇದು ಅನುಮಾನಾಸ್ಪದ. ಇದರ ಬಗ್ಗೆ ತನಿಖೆ ನಡೆಸಲು ಕೋರಿ ಮೋದಿಯವರು ಪ್ರಧಾನಿಯಾದ ಕೂಡಲೇ ನಾನು ಪತ್ರ ಬರೆದೆ. ಏನೂ ಆಗಲಿಲ್ಲ.

ರಿಲಯನ್ಸ್ ಕಂಪೆನಿ ತನ್ನ ಸಾಗರೋತ್ತರ ಅನಿಲ ಉದ್ಯಮದಲ್ಲಿ ರಿಗ್ಗಿಂಗ್ ಉಪಕರಣ ಆಮದು ಮಾಡಿದ ವ್ಯವಹಾರದಲ್ಲಿ ಅತಿದೊಡ್ಡ ಓವರ್ ಇನ್‌ವಾಯ್ಸಿಂಗ್ ಮಾಡಿರುವುದು ಗಮನಕ್ಕೆ ಬಂದಾಗಲೂ ಏನೂ ಮಾಡಲಿಲ್ಲ, ಈ ಮೂಲಕ ಬಂದ ಹೆಚ್ಚುವರಿ 1 ಬಿಲಿಯನ್ ಡಾಲರ್ ಹಣವು ಮಾರಿಷಶ್ ದೇಶಕ್ಕೆ ಹೋಗಿ ಬಿಳಿ ಹಣವಾಗಿ ಪರಿವರ್ತನೆಯಾಗಿ ಮುಖೇಶ್ ಅಂಬಾನಿಯ ಕಂಪೆನಿಯಲ್ಲಿ ಹೂಡಿಕೆಯಾಯಿತು. ಅದೇ ರೀತಿ ಅನಿಲ್ ಅಂಬಾನಿಯ ಎರಡು ಕಂಪೆನಿಗಳಲ್ಲೂ ಡಾಲರ್‌ಗಟ್ಟಲೆ ಹಣ ಹೂಡಿಕೆಯಾಯಿತು. ಇದರ ಬಗ್ಗೆ ತನಿಖಾ ಸಂಸ್ಥೆಯೂ ಅನುಮಾನ ವ್ಯಕ್ತಪಡಿಸಿತು. ಇದನ್ನೂ ಪ್ರಧಾನಿಯವರ ಗಮನಕ್ಕೆ ತಂದೆ. ಏನೂ ಆಗಲಿಲ್ಲ. ಬದಲಿಗೆ ರಿಲಯನ್ಸ್ ಜಿಯೋ ಘೋಷಣೆಯಾದಾಗ, ಅದರ ಮಾಲೀಕನ ಬದಲು ಪ್ರಧಾನಿಯವರ ಮುಖ ಪ್ರದರ್ಶನವಾಗುತ್ತಿತ್ತು!

ರಕ್ಷಣಾ ಇಲಾಖೆಗೆ ಬೇಕಿದ್ದ 58000 ಕೋಟಿ ರೂ.ಗಳ ವಿಮಾನಗಳ ಖರೀದಿ ಈ ನಡುವೆ ನಡೆಯಿತು. ಆದರೆ ನಂತರ ಗೊತ್ತಾದಂತೆ, ಇದರಲ್ಲಿ 33000 ಕೋಟಿ ರೂ.ಗಳಷ್ಟು ಒಪ್ಪಂದವನ್ನು ಅನಿಲ್ ಅಂಬಾನಿ 1 ವರ್ಷದ ಹಿಂದೆ ಆರಂಭಿಸಿದ್ದ ಅದೇ ರೀತಿ ಅದಾನಿ ಕಂಪೆನಿಯಲ್ಲಿ ಕಲ್ಲಿದ್ದಲಿನ ಆಮದಿನಲ್ಲಿ ಸಾವಿರಾರು ಕೋಟಿ ರೂ. ಆಮದು ಓವರ್ ಇನ್‌ವಾಯ್ಸಿಂಗ್ ಮಾಡಿರುವುದು ಹೊರಬಂದಿದೆ. ಸುಪ್ರೀಂಕೋರ್ಟ್‌ನ ಮತ್ತೊಂದು ತೀರ್ಪು ಹೇಳುವಂತೆ ಇದೇ ಅದಾನಿ ಕಂಪೆನಿ 1000 ಕೋಟಿ ರೂ. ತೆರಿಗೆ ವಂಚನೆಯನ್ನು ವಜ್ರಾಭರಣದ ವ್ಯವಹಾರದಲ್ಲಿ ಆಗಲೇ ಮಾಡಿದೆ. ಭಾರತದಲ್ಲಿರುವ ಉಷ್ಣವಿದ್ಯುತ್ ಕಂಪೆನಿಗಳಿಗೆ ಕಲ್ಲಿದ್ದಲು ಆಮದು ಮಾಡಲು ಅದಾನಿ ಕಂಪೆನಿ ಆಸ್ಟ್ರೇಲಿಯಾದ ಬ್ಯಾಂಕುಗಳಲ್ಲಿ 6560 ಕೋಟಿ ರೂ. ಸಾಲ ಕೇಳಿದಾಗ ಬ್ಯಾಂಕುಗಳು ನೀಡಲಿಲ್ಲ, ಆದರೆ ನಂತರ ಅವರಿಗೆ ಸಾಲದ ಜೊತೆಗೆ ಪರಿಸರ ಮಾಲಿನ್ಯ ಮಂಡಳಿಯ ನಿರಾಪೇಕ್ಷಣಾ ಪತ್ರ ಹೇಗೆ ಸಿಕ್ಕಿತು? ಈ ಎಲ್ಲಾ ಮಾಹಿತಿ ಯೂ ಪ್ರಧಾನಮಂತ್ರಿಗಳ ಬಳಿ ಇದ್ದರೂ ಯಾವ ಕ್ರಮವೂ ಇಲ್ಲ.

ಕೇಂದ್ರ ಸರ್ಕಾರವೇ ಮುಂದೆ ನಿಂತು ಸಂಘಟಿಸುತ್ತಿರುವ ಈ ಬೃಹತ್ ಭ್ರಷ್ಟಾಚಾರದ ವ್ಯೂಹಕ್ಕೆ ಇನ್ನೊಂದು ಬಹುಮುಖ್ಯವಾದ ಆಯಾಮವಿದೆ. ಅದು ಭ್ರಷ್ಟಾಚಾರ ನಿಗ್ರಹಿಸಲೆಂದೇ ಇರುವ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿರುವುದು! ದೊಡ್ಡ ಸಾಮಾಜಿಕ ಚಳವಳಿಯ ನಂತರ ಲೋಕ್‌ಪಾಲ್ ಮಸೂದೆಗೆ 2013ರಲ್ಲೇ ಸಂಸತ್ತಿನ ಅನುಮತಿ ಸಿಕ್ಕರೂ, 2014ರಲ್ಲೇ ಮೋದಿ ಬಂದು ಇಷ್ಟು ಸಮಯ ಆದರೂ, ಅದರ ಬಗ್ಗೆ ಚರ್ಚೆಯೇ ಇಲ್ಲ! 'ಲೋಕಪಾಲರನ್ನು ನಿಯೋಜನೆ ಮಾಡಲು ವಿರೋಧ ಪಕ್ಷದ ನಾಯಕರ ಅನುಮತಿ ಬೇಕು, ಆದರೆ ಅಧಿಕೃತ ವಿರೋಧ ಪಕ್ಷಕ್ಕೆ ಬೇಕಿರುವಷ್ಟು ಸೀಟುಗಳಿಲ್ಲ, ಅದಕ್ಕಾಗಿ ನಿಯೋಜಿಸಿಲ್ಲ' ಎಂಬ ಕುಂಟುನೆಪ ನೀಡಲಾಗುತ್ತಿದೆ! ಈ ಪ್ರಧಾನ ಮಂತ್ರಿಯವರು ಯಾವುದಾದರೂ ಸಂಸ್ಥೆಯನ್ನು ಕೊಲ್ಲಬಯಸಿದರೆ, ಅವರು ಅದಕ್ಕೆ ಮುಖ್ಯಸ್ಥರನ್ನು ನೇಮಿಸದೇ ತಾನಾಗೇ ಸಾಯಲು ಬಿಡುತ್ತಾರೆ. ಅದೇ ಅವರ ವಿಧಾನ.

ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗ 12 ವರ್ಷ ಕೇಂದ್ರ ವಿಚಕ್ಷಣಾ ದಳಕ್ಕೂ ಯಾರನ್ನೂ ನೇಮಕ ಮಾಡಿರಲಿಲ್ಲ, ಈಗ ಮಾಡಿದ್ದಾರೆ, ಆದರೆ ಅವರು ಅತ್ಯಂತ ಭ್ರಷ್ಟರು. ಅದರಲ್ಲಿ ಒಬ್ಬರು ಬಿರ್ಲಾ ಸಹಾರಾ ದಾಳಿಗಳಾದಾಗ ಆದಾಯ ತೆರಿಗೆ ಅಧಿಕಾರಿಯಾಗಿದ್ದರು. ಅದರಲ್ಲಿ 150 ಕೋಟಿ ಒಂದೇ ವರ್ಷದಲ್ಲಿ ಅವ್ಯವಹಾರ ಆಗಿತ್ತು, ದಾಖಲೆಗಳಲ್ಲಿ ಭ್ರಷ್ಟತೆಯನ್ನು ಸಾಬೀತುಪಡಿಸುವ ಸಕಲ ವಿವರಗಳೂ ಇದ್ದವು. ಆ ಕಂಪ್ಯೂಟರ್ ದಾಖಲೆ ತೋರಿಸುವಂತೆ, 9 ಪ್ರಕರಣಗಳಲ್ಲಿ ಅತಿಹೆಚ್ಚು ಹಣ ಪಡೆದಿದ್ದ ಹೆಸರು, ಆಗಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯವರದ್ದೇ ಆಗಿತ್ತು! ಅದರಲ್ಲಿ ಶೀಲಾ ದೀಕ್ಷಿತ್ ಮೊದಲಾದ ಎಲ್ಲರ ಹೆಸರೂ ಇದೆ. ಈ ಹಿಂದೆ ನಾನು ಹೇಳಿದ ಅಧಿಕಾರಿ, ಈ ಅವಧಿಯ ಆದಾಯ ತೆರಿಗೆ ದಾಳಿಗಳ ಮೇಲ್ವಿಚಾರಣಾ ಅಧಿಕಾರಿಯಾಗಿದ್ದರು. ಇಂತಹ ದಾಳಿಗಳಾದಾಗ ಮೇಲ್ನೋಟಕ್ಕೆ ಭ್ರಷ್ಟಾಚಾರ ಕಂಡುಬಂದರೆ ಎಫ್‌ಐಆರ್ ದಾಖಲಿಸಿ ವಿಚಾರಣೆ ಮಾಡಬೇಕು. ಆತ ಅದೇನನ್ನೂ ಮಾಡಲಿಲ್ಲ, ಅದಕ್ಕೆ ಬಹುಮಾನವಾಗಿ ಆತನಿಗೆ ಬಡ್ತಿ ನೀಡಲಾಯಿತು! ಇಂತಹ ಅನೇಕ ಭ್ರಷ್ಟತೆಯ ಕೆಲಸಗಳಲ್ಲಿ ಶಾಮೀಲಾಗಿರುವುದು ಈ ಅಧಿಕಾರಿಯ ಹೆಚ್ಚುಗಾರಿಕೆ! ಇನ್ನೊಬ್ಬ ಅಧಿಕಾರಿ ಬಸೀನ್ ಅವರ ಮೇಲೆ ಸಾಕ್ಷಾತ್ ವಿಚಕ್ಷಣಾ ದಳವೇ ಆರೋಪ ಹೊರೆಸಿತ್ತು, ಈಗ ಅದರ ಮುಖ್ಯಸ್ಥ ಆತನೇ?!


ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಸಿಬಿಐ ನಿರ್ದೇಶಕರ ನಿವೃತ್ತಿಯ 6 ತಿಂಗಳ ಮೊದಲೇ ಮುಂದಿನ ನಿರ್ದೇಶಕನ ಆಯ್ಕೆ ಆಗಬೇಕು. ಆದರೆ ಈ ಬಾರಿ ಸಿಬಿಐ ಮುಖ್ಯಸ್ಥರ ನಿವೃತ್ತಿಯ ನಂತರ ಸುದೀರ್ಘ ಅನುಭವ ಹೊಂದಿದ್ದ ಆರ್.ಕೆ.ದತ್ತಾ ಎಂಬ–ಕರ್ನಾಟಕದಲ್ಲೂ ಗಣಿ ಹಗರಣಗಳ ಸಂದರ್ಭದಲ್ಲಿ ಸಂತೋಷ್ ಹೆಗಡೆಯವರ ಕೆಳಗೆ ಕೆಲಸ ಮಾಡಿರುವ – ವ್ಯಕ್ತಿ ನೇಮಕವಾಗಬೇಕಿತ್ತು, ಅದರ ಬದಲು ಅವರನ್ನು ವರ್ಗಾವಣೆ ಮಾಡಲಾಯಿತು, ಅವರಿಗೆ ಅನುಭವೇ ಇಲ್ಲದ ಭಯೋತ್ಪಾದನಾ ಜಾಲಕ್ಕೆ ಹಣಪೂರೈಕೆ ತಡೆಯುವ ಘಟಕಕ್ಕೆ! ಅವರ ವಿಶೇಷತೆಯಾಗಿದ್ದದ್ದು ಭ್ರಷ್ಟಾಚಾರ ನಿಗ್ರಹ.

ನಾನು ಹೇಳುತ್ತಿರುವುದೇನೆಂದರೆ, ಪ್ರಧಾನ ಮಂತ್ರಿ ಈ ದೇಶದಲ್ಲಿದ್ದ ಭ್ರಷ್ಟಾಚಾರ ತಡೆಯುತ್ತಿದ್ದ ಪ್ರತಿಯೊಂದು ಸಂಸ್ಥೆಯ ಸೊಂಟ ಮುರಿಯಲು ಸಾಧ್ಯವಿರುವ ಎಲ್ಲಾ ಕರಾಮತ್ತುಗಳನ್ನೂ ಮಾಡಿರುವ ಮನುಷ್ಯ. ಈಗ ಆತ ಕಪ್ಪುಹಣ ತಡೆಯುವ ಹೀರೋನಂತೆ ಬಿಂಬಿಸಿಕೊಳ್ಳಲು ನೋಡುತ್ತಿದ್ದಾರೆ. ನೋಟು ರದ್ದತಿ ಕಪ್ಪುಹಣದ ಮೇಲಿನ ದಾಳಿ ಎಂದು ತೋರಿಸಲು ಪ್ರಯತ್ನಿಸಲಾಗುತ್ತಿದೆ.

ಎಷ್ಟು ಕಪ್ಪು ಹಣ ಇದರಿಂದ ಬಂತು?

ಸರ್ಕಾರ ಹೇಳುತ್ತಿದೆ-ಕಾಳಧನಿಕರ ಚಾಪೆಯಡಿ ಹುದುಗಿದ್ದ ಲಕ್ಷಾಂತರ ಕೋಟಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು. ಆದರೆ ಇತ್ತೀಚಿನ ವರದಿಗಳಲ್ಲಿ ಕಾಣುವಂತೆ ಈಗಾಗಲೇ ಬ್ಯಾಂಕಿಗೆ ಬಂದಿರುವುದು ನಿಷೇಧವಾದ ಅಷ್ಟೂ ಹಣ ಅಥವಾ ಅದಕ್ಕಿಂತ ಹೆಚ್ಚು! ಹೊಸ ನೋಟುಗಳಲ್ಲಿ ಭ್ರಷ್ಟಾಚಾರ ತಡೆಯುವ ಯಾವುದೇ ವಿಶೇಷತೆ ಇಲ್ಲ, ಅಂದರೆ ಮೊದಲು ಕಪ್ಪುಹಣವಾಗಿ 500, 1000 ಬಳಕೆಯಾಗಿದ್ದರೆ, ಈಗ 2000ದ ನೋಟು ಬಳಕೆಯಾಗುತ್ತದೆ! ನಾನು ಕಪ್ಪು ಹಣ ಇಲ್ಲ ಅಂತ ಹೇಳುತ್ತಿಲ್ಲ, ಆದರೆ ಅಂತಹವರು ಎಷ್ಟು ಚಾಣಾಕ್ಷರೆಂದರೆ, ಅವರು ತಮ್ಮ ಹಣವನ್ನು ಬದಲಿಸಿಕೊಳ್ಳಲು ಎಲ್ಲಾ ಜಾಣ ಕುತಂತ್ರಗಳನ್ನೂ ಮಾಡಿದವರು.

▶▶ 17



ದುರ್ಗತಿಯತ್ತ ತಿಥಿ ನಟರು



ಫಸಲಿನ ಸಮೃದ್ಧಿಯ ಜೊತೆಗೆ ಕಳೆಯ ಹಾವಳಿಯೂ ವಿಪರೀತ. 'ಹಳ್ಳಿ ಹೈದ ಪ್ಯಾಟಗೆ ಬಂದ' ಎಂಬ ಟಿವಿ ರಿಯಾಲಿಟಿ ಷೋನ ಸಮೃದ್ಧಿಗೆ ಕಾಡು ಹಕ್ಕಿಯಂತಿದ್ದ ಜೇನು ಕುರುಬರ ಹೈದ ರಾಜೇಶ ನೇಣು ಬಿಗಿದುಕೊಂಡ. ಹುಚ್ಚುಚ್ಚಾಗಿ ಮಾತಾಡಿಕೊಂಡೇ ಲೋಕದ ಕಪಟವನ್ನು ಚುಚ್ಚುತ್ತಿದ್ದ ಹುಚ್ಚಾ ವೆಂಕಟ್ ಅನ್ಯಾಯವಾಗಿ ಜೈಲು ಪಾಲಾದ. ಟಿವಿಗಳದ್ದು ಟಿಆರ್‌ಪಿ ದಾಷ್ಟ್ಯವಾದರೆ ಸಿನಿಮಾ ಶೂರರದ್ದು ಠೊಕ್ಕ ವಿಕೃತಿ. ಅದೀಗ 'ತಿಥಿ' ಎಂಬ ಅಂತರರಾಷ್ಟ್ರೀಯ ಖ್ಯಾತಿಯ ವಿಶಿಷ್ಟ ಚಿತ್ರದ ವಿಲಕ್ಷಣ ಪಾತ್ರಗಳಾದ ಗಡ್ಡಪ್ಪ ಸೆಂಚುರಿಗೌಡ, ಹಳ್ಳಿ ಹೈದ ಅಭಿಯಂತ ಅಭಿಜಾತ ಪ್ರತಿಭೆಗಳ ಮೇಲೆ ಬಿದ್ದಿದೆ!

ಫಸಲಿಗೆ ವಕ್ಕರಿಸಿದ ಕಳೆಯೆಂಬಂತೆ 'ತಿಥಿ'ಯ ಯಶಸ್ಸಿನ ಹುಳದಂತೆ 'ತರ್ಲೆ ವಿಲೇಜ್' ಬಂತು. ಈಗ ಅದೇ ಗಡ್ಡಪ್ಪ ಅದೇ ಸೆಂಚುರಿಗೌಡ ಮತ್ತು ಅದೇ ಅಭಿಷೇಕ್ ತಾರಾಗಣದ 'ಏನ್ ನಿನ್ ಪ್ರಾಬ್ಲಮ್ಮು' ರಾಜ್ಯಾದ್ಯಂತ ಥೇಟರುಗಳಿಗಪ್ಪಳಿಸಿದೆ. ಯಥಾವತ್ತು ಹಲ್ಕಾ ಡೈಲಾಗುಗಳು, ಡಬ್ಬಲ್ ಮೀನಿಂಗ್ ಸಂಭಾಷಣೆ ಮತ್ತು ಹಲ್ಕಟ್ ಚಿತ್ರಕತೆ.

ರಾಜ್ಯಾದ್ಯಂತ ನೂರಾ ಎಪ್ಪತ್ತಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ 'ಏನ್ ನಿನ್ ಪ್ರಾಬ್ಲಮ್ಮು' ತೆರೆಕಂಡಿದೆ. ಯಾರೇ ಸ್ಟಾರ್‌ಗಳಿಲ್ಲದೆ, ಸೆಕ್ಸು, ಹೀರೋಯಿನ್ನು, ಆಕ್ಷನ್ನು, ಬಿಗ್ ಬಜೆಟ್; ಏನೇನೂ ಇಲ್ಲದೆ, ಮಂಡ್ಯದ ಯಾವುದೋ ಕುಗ್ರಾಮವೊಂದರ ಬಡರೈತರನ್ನು ಹಾಕಿಕೊಂಡು ಕೋಟಿ ಸುರಿದು ಸಿನಿಮಾ ಮಾಡಿ ನೂರೆಪ್ಪತ್ತು ಥೇಟರುಗಳಿಗೆ ಬಿಡುಗಡೆ ಮಾಡುತ್ತಾರೆಂದರೆ ಅದೆಂಥ ಧೈರ್ಯ? ಅದಿನ್ನೆಂಥ ಟ್ರೆಂಡು? ಮೊನ್ನೆಯಷ್ಟೇ 'ಏನ್ ನಿನ್ ಪ್ರಾಬ್ಲಮ್ಮು' ಚಿತ್ರದ ಡೈರೆಕ್ಟರ್ 'ಡಬ್ಬಲ್ ಮೀನಿಂಗ್ ಲಕ್ಕಿ' ಕರೆದ ಪತ್ರಿಕಾಗೋಷ್ಠಿಯಲ್ಲಿ ಓಪನ್ನಾಗೇ ಬಾಯಿಬಿಟ್ಟ. "ನೋಡೀ.... ನನ್ನ ಕರ್ಮ ಹೇಗಿದೆ ಅಂದ್ರೆ ಕರುಳು ಕಿತ್ತು ಕಣ್ಣೀರು ಬರುವಂತೆ ಪ್ಯಾಥೋ ಸಾಂಗ್ ಒಂದನ್ನು ಇದಕ್ಕೆಂದೇ ಮಾಡಿದರೆ ಅದನ್ನು ಯೂಟ್ಯೂಬ್‌ನಲ್ಲಿ ನೋಡಿದ್ದು ಬರೇ ನಾಲ್ಕೂವರೆ ಸಾವಿರ ಜನ ಮಾತ್ರ. ಆದರೆ ಡಬ್ಬಲ್ ಮೀನಿಂಗ್, ವಲ್ಗರ್ ಡೈಲಾಗ್‌ಗಳಿರೋ ಟ್ರೇಲರ್ ಬಿಟ್ಟೇ ನೋಡಿ ಕೇವಲ ಎರಡೇ ತಿಂಗಳಲ್ಲಿ ಹದಿನಾಲ್ಕು ಲಕ್ಷಕ್ಕೂ ಅಧಿಕ ಮಂದಿ ನೋಡಿಬಿಡೋದೆ?"

ಡಬ್ಬಲ್ ಮೀನಿಂಗ್ ಲಕ್ಕೀ...

"... ತಪ್ಪು ನಂದಾ ನೀವೇ ಹೇಳಿ. ಒಳ್ಳೇದನ್ನ ಕೊಟ್ರೆ ಜನ ನೋಡಲ್ಲ. ಅದೇ ಕೆಟ್ಟದ್ದನ್ನ ಕೊಟ್ರೆ ಮುಗಿಬಿದ್ದು ನೋಡ್ತಾರೆ. ಇದರಿಂದ ಎಂಥಾ ಪಜೀತಿ ಅಂತೀರಿ? ನನ್ ಹೆಸರನ್ನೇ 'ಡಬ್ಬಲ್ ಮೀನಿಂಗ್ ಲಕ್ಕೀ' ಎಂದು ಬದಲಾಯಿಸಿಬಿಟ್ಟಿದ್ದಾರೆ. ಅದೇನೋ ಈ ವಿಷಯದಲ್ಲಿ ಈ ಲಕ್ಕಿ ಅನ್‌ಲಕ್ಕೀ...!"

ಚಿತ್ರದ ನಿರ್ದೇಶಕನೇ ತನ್ನ ಪಾಪವನ್ನು ಬಹಿರಂಗವಾಗಿ ಪಶ್ಚಾತ್ತಾಪದಂತೆ ನಿವೇದಿಸಿಕೊಳ್ಳುತ್ತಿದ್ದಾನೆಂದರೆ ಇನ್ನು 'ಏನ್ ನಿನ್ ಪ್ರಾಬ್ಲಮ್ಮು' ಎಂಬ ಚಿತ್ರದಲ್ಲಿ ಎಂತೆಂಥಾ ಡೈಲಾಗುಗಳು, ಸನ್ನಿವೇಶಗಳು, ಪಾತ್ರ ಪಜೀತಿಗಳಿರಬೇಡ? ವಲ್ಗರ್ ಕತೆಗಳು, ಚಿತ್ರಗಳು, ಪಾತ್ರಗಳು, ಡೈಲಾಗುಗಳು, ಹಾಡುಗಳು ಹಿಂದೆಲ್ಲ ಬಂದಿಲ್ಲವೆಂದಲ್ಲ, ಆದರೆ ಅದರ ಮೂಲದಲ್ಲಿ ಸ್ಟಾರ್‌ಗಳಿರುತ್ತಿದ್ದರು. ಎನ್ನೆಸ್‌ರಾವ್, ಉಮಾಶ್ರೀ ಜೋಡಿ, ದ್ವಾರಕೀಶ್-ಜಯಾ ಜೋಡಿ, ಜಗ್ಗೇಶ್, ಉಪೇಂದ್ರ, ಕೋಮಲ್; ಹೀಗೆ ಸ್ಟಾರ್‌ಗಳ ಬಾಯಲ್ಲಿ ಹಲ್ಕಾ ಹೇಳಿಸಿ ದುಡ್ಡು ಬಾಚುತ್ತಿದ್ದಕ್ಕೊಂದು ಅಸಹ್ಯದ ತರ್ಕವಾದರೂ ಇರುತ್ತಿತ್ತು. ಈಗ ಹಾಗಲ್ಲ, ಅಪ್ಪಟ ಹಳ್ಳಿ ಹಕ್ಕಿಗಳ ಬಾಯಲ್ಲಿ ಹಳ್ಳಿ ಶೈಲಿಯ ಅವಾಚ್ಯ.

ಉದಾಹರಣೆಗೆ ಏನ್ ನಿನ್ ಪ್ರಾಬ್ಲಮ್ಮು ಚಿತ್ರದ ಸನ್ನಿವೇಶ ಹೀಗಿದೆ. ಮುಸ್ಲಿಂ ಓರ್ವ ಗಡ್ಡಪ್ಪನನ್ನು 'ನಿನ್ ಹೆಸರೇನೋ ಗೌಡಾ...?' ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಈತ ತನ್ನ ಗಡ್ಡ ನೀವುತ್ತಾ 'ಗಡ್ಡಪ್ಪ...' ಎನ್ನುತ್ತಾನೆ. ಮುಸ್ಲಿಂ 'ಅದಕ್ಕೇ ಇಷ್ಟುದ್ದ ಗಡ್ಡಾ ಬಿಟ್ಟಿದ್ದೀಯಾ? ನಿನ್ ಗಡ್ಡಾ ನೋಡಿ ಹೆದರಕೊಂಡ್ ಬಿಟ್ಟಿದ್ದೆ' ಎನ್ನುತ್ತಾನೆ. ಇದಕ್ಕೆ ಗಡ್ಡಪ್ಪನ ಉತ್ತರವೇನು ಗೊತ್ತೆ?

'ಷೋ ರೂಮಲ್ಲಿ ನೋಡೇ ಈ ಪಾಟಿ ಹೆದರ್‌ಕೋತಿಯಲ್ಲ, ಇನ್ನು ಗೋಡೌನಲ್ಲಿ ನೋಡುದ್ರೆ ಯಾಪಾಟಿ ಹೆದರ್ಕೋತೀಯೋ...!'

ಇದು ಸೆಕ್ಸೂ ಅಲ್ಲದ ಅಶ್ಲೀಲವೂ ಅನ್ನಿಸದ ಪಕ್ಕಾ ಅಸಹ್ಯ. ಹೀಗೆ ಗಡ್ಡಪ್ಪ ಡೈಲಾಗ್ ಹೊಡೆಯುತ್ತಿದ್ದರೆ ಅದರ ಟ್ರೇಲರ್‌ನ ತೆರೆಮೇಲೆ **international star Gaddappa** ಎಂಬ ಉಪಶೀರ್ಷಿಕೆ ಬೇರೆ. ಇದೇ ಟ್ರೇಲರ್‌ನ ಮತ್ತೊಂದು ದೃಶ್ಯದಲ್ಲಿ ನಡಕೊಂಡು ಹೋಗುತ್ತಿದ್ದ ರೈತ ಮಹಿಳೆಯೊಬ್ಬಳನ್ನು ಸೆಂಚುರಿಗೌಡ ಕೆಣಕುತ್ತಾನೆ. 'ಅಲ್ಲಾ.. ಕಣಮ್ಮಾ ನಿನ್ ಗಂಡ ರಾತ್ರಿ ನೀರ್ ಹಾಯ್ಸಿದ್ನೋ ಇಲ್ವೋ? ಕರೆಂಟ್ ಬೇರೆ ಹೋಯ್ತಾ ಇತ್ತು ಬರ್ತಾ ಇತ್ತು...!'

ಹೀಗೆ ಸೆಂಚುರಿಗೌಡನ ಬಾಯಿಂದ ಹಲ್ಕಾ ಡೈಲಾಗ್ ಹೊರಡಿಸಿ ಅದರ ಜೊತೆ **No 1 Star 100 Gowda** ಎಂಬ ಮತ್ತೊಂದು ಉಪಶೀರ್ಷಿಕೆ!

ಟ್ರೇಲರಿನಲ್ಲೇ...!

ತಿಥಿ ಚಿತ್ರದ ಪಡ್ಡೆ ಹೀರೋ ಅಭಿಷೇಕ್ ಕೂಡ ಇದಕ್ಕೂ ಹೀರೋ. ಕಬ್ಬಿನ ಗದ್ದೆಯಲ್ಲಿ ಹಳ್ಳಿ ಹುಡುಗಿಯೊಬ್ಬಳು ಪಡ್ಡೆ ಅಭಿಗೆ 'ನನಗೆ ನಿನ್ ಬಿಟ್ರೆ ಬೇರೆ ಯಾರೂ ಇಷ್ಟ ಆಗಲ್ಲ' ಎನ್ನುತ್ತಿದ್ದರೆ ಅದಕ್ಕೆ ಈತ 'ನಂಗೆ ಎದುರುಗಡೆ ಇರೋ ಕಲ್ಪನಾನೂ ಇಷ್ಟ ಆಯ್ತಾಳೆ, ಕುರಿ ಕಾಯೋ ಕಾವೇರಿನೂ ಇಷ್ಟ ಆಯ್ತಾಳೆ' ಅನ್ನುತ್ತಾನೆ. ಅದಕ್ಕೆ ಈ ಹುಡುಗಿ ಬೇರೆ ಯಾರ್‍ಯಾರೋ ಹೆಸರೇಳಿದ್ರೆ ನಿನ್ ತಿಥಿ ಮಾಡ್ ಬಿಡ್ತೀನಿ ಎಂದು ಕೈಯೆತ್ತಿದರೆ, ಈಗ ಪಕ್ಕಾ ಹೆಣ್ಣುಬಾಕನ ಚೇಷ್ಟೆಯಲ್ಲಿ 'ತಿಥಿ ದಿನವೇ ಕೊಟ್ಟಿಗೇಲಿ ನೊಗಾ ನಿಲ್ಸಿದ್ ಮಗಾ ನಾನು. ನನಗೇ ತಿಥಿ ಮಾಡೋಕೆ ಬತ್ತೀಯಾ?' ಎಂದು ಹಲ್ಕಟ್ ಹೂಂಕರಿಸುತ್ತಾನೆ.

ಏನ್ ನಿನ್ ಪ್ರಾಬ್ಲಮ್ಮು ಚಿತ್ರದ ಟ್ರೇಲರಿನಲ್ಲಿರುವ ಕೆಲ ಡೈಲಾಗುಗಳ ಸ್ಯಾಂಪಲ್ಲುಗಳಿವು-

* ನೀನು ಒಳ್ಳೇ ಹುಡುಗಿ ಅಂತ ಸುಮ್ನಿದ್ದೀನಿ. ಇಲ್ಲಾಂದ್ರೆ ಅಷ್ಟೆಯೇ!
* ನಿನ್ ಬಾರೆ ಮೇಲೆ ಕರ್ಕೊಂಡ್ ಹೋಗಿ... ಮಲ್ಕೊಂಡ್ ಆಕಾಶ್ದಲ್ ತಾರೆ ಎಣಿಸು ಅಂತೇಳಿ, ಸೊನ್ನೆಗೆ ಒಂದ್ ಸೇರಿಸಿದ್ರೆ ಎಷ್ಟಾಯ್ತದೆ ಅಂತ ಲೆಕ್ಕ ಹೇಳೀಕೊಡುತ್ತಿದ್ದೆ..!
* ಥೂತ್ತೇರಿ ಮಾಕೀ... ಥೂ ನಿಮ್ಮವ್ವನ್ನ....!
* ನಾನು ಹೈಸ್ಕೂಲ್‌ಗೆ ಹೋಗುವಾಗ ಒಬ್ಬು ಡುಮ್ಮಿ ಎಷ್ಟ್ ಹೇಳದ್ರೂ ಪ್ಯಾದೆ ಪ್ಯಾದೆ ಅಂತ ಕೀಟ್ಲೆ ಮಾಡ್ತಲೇ ಇದ್ಲು. ಒಂದಿನ ಸಿಟ್ಟು ಹತ್ತಿ ಪೊದೆಗೆ ಕರ್ಕೊಂಡ್ ಹೋಗಿ ಗದೇಲಿ ಬಾರಿಸ್ದೆ ನೋಡು. ಆವತ್ತಿಂದ ಸ್ಕೂಲ್ ಕಡೀಕೆ ತಲೇನೇ ಹಾಕಿಲ್ಲ ಅವ್ಳು.
* ಗಾಳಿ ಎದುರುಗಡೆ ಸೇರಿಕ್ಕೊಂಡ್ ನಿಲ್ಲಬಾರದು, ಗೂಳಿ ಎದುರುಗಡೆ ತಿರುಕ್ಕೊಂಡ್ ನಿಲ್ಲಬಾರ್ದು.
* ನನ್ ಉದ್ದಾಗಿರೋ ದೊಣ್ಣೆ ನೋಡುದ್ರೆ ಗೊತ್ತಾಗಲ್ವಾ ನಿಮಗೆ, ಸೆಂಚುರಿಗೌಡ ನೂರಕ್ಕೆ ನೂರು ನಾನೇ ಅಂತ...!
* ಹಸಾ ಹೋರಿ ಒಟ್ಟಿಗೇ ಕಟ್ಟಿ ಕೊಟ್ಟಿಗೆ ಹಾಳ್ ಮಾಡಬಾರ್ದು ಅಂದಂಗಾಯ್ತು ನಿನ್ ಕತೆ!
* ಹಸಾ ಅಂದ್ರೆ ಹಿಂಬಾರನೂ ಆಗಿರ್ಬೇಕು ಮುಂಬಾರನೂ ಆಗಿರ್ಬೇಕು!
* ಥೂತ್ತೇರಿ ಸೀನ್ ಬಂದ್ರೆ ಸಿಂಬಳವೇ ಬತ್ತಿಲ್ಲ, ಈ ವಯಸ್ನಲ್ಲಿ ನಾನ್ ಮದುವೆ ಮಾಡ್ಕಂಡು ಏನ್ ಮಾಡ್ಲೀ...?
* ಉರಿಯೋ ಬೆಂಕಿಗೆ ತುಪ್ಪಾ ಸುರಿಸೋಕೆ ಏನಾರಾ ಪ್ಲಾನ್ ಮಾಡ್ತಾ ಇದ್ದೀಯಾ?

ಜಾಕ್ ಮಂಜು

ಇಲ್ಲಿ ಬರೆಯುವುದಕ್ಕೆ ಈ ಪಾಟಿ ಮುಜುಗರವೆಂದರೆ ಇನ್ನೂ ಥೇಟರಿಗೆ ಬಂದು ನೋಡುವ ಹಳ್ಳಿಯ ರೈತಾಪಿಗಳ ಪರಿಸ್ಥಿತಿ ಏನಾಗಬೇಡ? 'ಏನ್ ನಿನ್ ಪ್ರಾಬ್ಲಮ್' ಚಿತ್ರವನ್ನು ಸೆನ್ಸಾರ್ ಮಂಡಳಿ ಅದೇನು ತಿಂದು ಥೇಟರುಗಳಿಗೆ ಬಿಟ್ಟಿತೋ ಅರ್ಥವಾಗುತ್ತಿಲ್ಲ. ಈ ಚಿತ್ರದ ನಿರ್ಮಾಪಕ ಯೋಗೇಶ್ ರಾಮನಗರ ಹೇಳಿ ಕೇಳಿ ಡೈರೆಕ್ಟರ್ ಡಬ್ಬಲ್ ಮೀನಿಂಗ್ ಲಕ್ಕಿಯ ಸಂಬಂಧಿಯಂತೆ. ಹೆಚ್ಚೆಂದರೆ ಐವತ್ತೋ ಅರವತ್ತೋ ಲಕ್ಷ ಬಂಡವಾಳ ಹಾಕಿರಬಹುದು. ಇದಕ್ಕೂ ಮುನ್ನ ತೆರೆಕಂಡಿದ್ದ 'ತಿಥಿ'ಯ ಯಶಸ್ಸಿತ್ತಲ್ಲ, ಅದೇ ಯಶಸ್ಸಿನ ಮೇಲೆ 'ತರ್ಲೇ ವಿಲೇಜ್' ಬೇರೆ ಹಿಟ್ಟಾಗಿತ್ತಲ್ಲ, ಅದರ ಗುಂಗಲ್ಲೇ ದುಪ್ಪಟ್ಟು ದುಡ್ಡು ಗ್ಯಾರಂಟಿಯೆಂದು ಲೆಕ್ಕ ಹಾಕಿದ ಜಾಕ್ ಮಂಜು ಈ ಚಿತ್ರದ ಹಂಚಿಕೆ ಖರೀದಿಸಿದ.

ಜಾಕ್ ಮಂಜು ಗಾಂಧಿನಗರದ ಮಟ್ಟಿಗೆ ಪ್ರತಿಷ್ಠಿತ ಪ್ರೊಡ್ಯೂಸರ್. ಈ ಹಿಂದೆ ಹತ್ತು ಕೋಟಿ ಸುರಿದು ಶಿವಣ್ಣನನ್ನು ಹಾಕಿಕೊಂಡು 'ಭಜರಂಗಿ'ಯಂಥ ಬಿಗ್ ಬಜೆಟ್ ಚಿತ್ರ ನಿರ್ಮಿಸಿದಾತ. ಇಂಥವನು ಏಕಾಏಕಿ ಎರಡು ಕೋಟಿಗೆ 'ಏನ್ ನಿನ್ ಪ್ರಾಬ್ಲಮ್ಮು' ಖರೀದಿಸಿದಾಗಲೆ ಗಡ್ಡಪ್ಪ, ಸೆಂಚುರಿಗೌಡರ ಮಹಾತ್ಮೆ ಗಾಂಧಿನಗರದುದ್ದ ಮಾತಾಗಿತ್ತು, ಆದರೆ ಯಾರಿಗೂ ಅರ್ಥವಾಗದೇ ಇದ್ದದ್ದು ಇಂಥ ರೈತಾಪಿಗಳ ಬಾಯಲ್ಲಿ ಸಿನಿಮಾ ಮಂದಿ ಹೊರಡಿಸುತ್ತಿದ್ದ ಅಶ್ಲೀಲ ಸಂಭಾಷಣೆ ಮತ್ತು ಗ್ರಾಮಾಂತರ ಕರ್ನಾಟಕದ ರೈತಾಪಿ ಸಮೂಹದ ತಲೆ ಹೊಕ್ಕಿದ್ದ ಡಬ್ಬಲ್ ಮೀನಿಂಗ್ ಸಾಂಸ್ಕೃತಿಕ ಸನ್ನಿ!

ಒಂದು ಮೂಲದ ಪ್ರಕಾರ ಬಿಡುಗಡೆಯಾದ ಎರಡನೇ ವಾರದ ಹೊತ್ತಿಗೆ '.... ಪ್ರಾಬ್ಲಮ್ಮು' 50 ಲಕ್ಷದ ಲಾಭ ಕಂಡಿದೆ. ಚಿತ್ರದ ಪೋಸ್ಟರ್‌ಗಳು ಕರ್ನಾಟಕದ ಗೋಡೆಗೋಡೆಯಲ್ಲೂ ರಾರಾಜಿಸುತ್ತಿವೆ. ಟ್ರೇಲರ್ ಯೂಟ್ಯೂಬಿಗೆ ಬಿಟ್ಟು ಒಂದೆರಡು ವಾರದಲ್ಲೇ ಹದಿನಾಲ್ಕು ಲಕ್ಷಕ್ಕೂ ಅಧಿಕ ಮಂದಿ ಅದನ್ನು ವೀಕ್ಷಿಸುತ್ತಾರೆಂದರೆ ಇದು ಕನ್ನಡದ ಸಾಂಸ್ಕೃತಿಕ ಅಧಃಪತನದ ಮುನ್ಸೂಚನೆಯಲ್ಲವೆ? ಇನ್ನೆರಡು ವಾರದ ಹೊತ್ತಿಗೆ ಲಾಭದ ಪ್ರಮಾಣ ಕಮ್ಮಿಯೆಂದರೂ ಕೋಟಿಗೇರುವುದಿಲ್ಲವೇ?

ತರ್ಲೇ ವಿಲೇಜ್

ಮೊದಲು ನಿರ್ಮಾಣವಾದ ತಿಥಿಗೆ ಅಂತರರಾಷ್ಟ್ರೀಯ ಮನ್ನಣೆಯಿತ್ತು, ನಿರ್ದೇಶಕ ರಾಮರೆಡ್ಡಿ ಅಮೆರಿಕದ ಚಿತ್ರ ನಿರ್ಮಾಣ ಸಂಸ್ಥೆಯೊಂದರ ನೆರವಿನೊಂದಿಗೆ ಮಂಡ್ಯದ

ಲಾಭ ಮತ್ತು ಮುಗ್ಧರ ಸುಲಿಗೆಯ ಹಿಂದೆ

ಗಡ್ಡಪ್ಪ ಇಂಟರ್‌ನ್ಯಾಷನಲ್ ಸ್ಟಾರ್, ಸೆಂಚುರಿಗೌಡ ರೂರಲ್ ಸ್ಟಾರ್, ಅಭಿ ವಿಲೇಜ್ ಸ್ಟಾರ್ ಎಂದೆಲ್ಲ ಸಿನಿಮಾ ಮಂದಿ ಟೈಟಲ್‌ಗಳ ಮೇಲೆ ಟೈಟಲ್ ಕೊಟ್ಟು ಯೂಟ್ಯೂಬ್, ಫೇಸ್‌ಬುಕ್, ವ್ಯಾಟ್ಸಪ್‌ಗಳಲ್ಲಿ ಪ್ರಚಾರ ಗಿಟ್ಟಿಸಿದ್ದೇ ಗಿಟ್ಟಿಸಿದ್ದು. ಹಾಗಂತ ದರ್ಶನ್, ಸುದೀಪ್ ಮಟ್ಟದ ಸಂಭಾವನೆ ಹಾಳಾಗಲಿ ಕನಿಷ್ಠ ಗಾಂಧಿನಗರದ ಹುಡಿಪುಡಿ ಎಕ್ಸ್‌ಟ್ರಾಗಳಿಗೆ ಕೊಡುವಷ್ಟಾದರೂ ಸಂಭಾವನೆ ಕೊಡುತ್ತಿದ್ದಾರಾ?

ತಿಥಿಯಲ್ಲಿ ನಿರ್ಮಾಪಕರು ಗಡ್ಡಪ್ಪ ಮತ್ತು ಸೆಂಚುರಿಗೌಡರಿಗೆಂದು ಕೊಟ್ಟಿದ್ದು 75 ಸಾವಿರ ಮಾತ್ರ. ಆದರಿದಕ್ಕೊಂದು ನ್ಯಾಯಬದ್ಧತೆಯಿತ್ತು, ಏಕೆಂದರೆ ಇಂಥ ರೈತರನ್ನು ಅಂತರರಾಷ್ಟ್ರೀಯ ಮಟ್ಟಕ್ಕೇರಿಸಿದ್ದೇ 'ತಿಥಿ' ಚಿತ್ರತಂಡದ ದೊಡ್ಡ ಕಾಣಿಕೆಯಾಗಿತ್ತು. ಆದರೆ ಈ ಖ್ಯಾತಿಯನ್ನು ಬಳಸಿಕೊಂಡ ಮೈಸೂರಿನ ಸಿದ್ದೇಗೌಡ ಉರ್ಫ್ ಸಿದ್ದರಾಜು ಮತ್ತು ಡೈರೆಕ್ಟರ್ ರಘು ಕೊಟ್ಟಿದ್ದಾದರೂ ಎಷ್ಟು?

ಗಡ್ಡಪ್ಪನಿಗೆ ಐವತ್ತು ಸಾವಿರ ಕೊಟ್ಟಿದ್ದೇ ಕೊನೆ. ಸೆಂಚುರಿಗೌಡನಿಗೂ ಅಷ್ಟೇ ಕೊಟ್ಟು ಕೈತೊಳಕೊಂಡರು. ಅಭಿಗೂ ಅಷ್ಟೇ. ಸಿನಿಮಾ ರಿಲೀಜ್ ಆಗ್ಲಿ ಆನಂತ್ರ ನೋಡೋಣ ಎಂದವರು ಒಂದೂವರೆ ಕೋಟಿಯ ಲಾಭ ಬಂದ ಮೇಲಾದರೂ ಒಂದೆರಡು ಲಕ್ಷ ಕೊಡಬೇಕಿತ್ತಲ್ಲವೆ? ಇವತ್ತಿಗೂ ಕಾಗೆ ಹಾರಿಸುತ್ತಿದ್ದಾರೆ. ಇದು ತರ್ಲೆ ವಿಲೇಜಿನ ಕತೆಯಾದರೆ ನಂತರ ಬಂದ 'ಏನ್ ನಿನ್ ಪ್ರಾಬ್ಲಮ್ಮು' ಚಿತ್ರಕ್ಕೆ ಗಡ್ಡಪ್ಪ, ಅಭಿ ಮತ್ತು ಸೆಂಚುರಿಗೌಡರಿಗೆ ಗಿಟ್ಟಿದ್ದು ತಲಾ 2ರಿಂದ 3 ಲಕ್ಷ ಮಾತ್ರ. ಮಂಡ್ಯದ ಆಸುಪಾಸಿನ ಬರಗೆಟ್ಟ ಹಳ್ಳಿಗಳ ಈ ನಟರಿಗೆ ಅದೇ ಕೋಟಿ ಬಂದಂತಾಗಿತ್ತು, ಬಂದಷ್ಟು ಲಾಭ ಹೋದಷ್ಟು ಗಳಿಗೆ ಎಂಬಂತೆ ಶೂಟಿಂಗ್ ವೇಳೆ ಮೂರು ಹೊತ್ತಿನ ಊಟ ಕಳೆದರೆ ಸಾಕು ಎಂಬಂತೆ ಈ ಪಾತ್ರಗಳದು ದೈನೇಸಿ ಬದುಕು.

ಈಗ ಗಡ್ಡಪ್ಪ ಸೆಂಚುರಿಗೌಡ ಜೋಡಿಯ ಕಮ್ಮಿಯೆಂದರೂ ಐದು ಚಿತ್ರಗಳು ನಿರ್ಮಾಣ ಹಂತದಲ್ಲಿವೆ. ಇಪ್ಪತ್ತೋ ಮೂವತ್ತೋ ಲಕ್ಷಕ್ಕೆ ರೀಲು ಸುತ್ತಿ ಸರ್ಕಾರದ ಸಬ್ಸಿಡಿ ಮುಕ್ಕುತ್ತಿದ್ದ ಕೇಶವ್ ಎಂಬಾತ ತನ್ನ ಚಿತ್ರಕ್ಕೆ ಗಡ್ಡಪ್ಪ ಸರ್ಕಲ್ ಅಂತಲೇ ಹೆಸರು ಕೊಟ್ಟಿದ್ದಾನೆ. ಐವತ್ತೋ ಅರವತ್ತೋ ಲಕ್ಷ ಸುರಿದು ರೀಲು ಸುತ್ತಿದ್ದರೆ ಏನಿಲ್ಲವೆಂದರೂ ಎರಡು ಕೋಟಿಯ ಲಾಭ ಕಟ್ಟಿಟ್ಟ ಬುತ್ತಿ, ಇದಲ್ಲದೆ 'ನವರಂಗಿ' ಡೈರೆಕ್ಟರ್ ಉಮೇಶ್





ಎಂಬಾತ 'ಹಳ್ಳಿ ಕಟ್ಟೆ ಪಂಚಾಯ್ತಿ' ಎಂಬ ಮತ್ತೊಂದು ಚಿತ್ರದ ಶೂಟಿಂಗ್ ಮುಗಿಸಿದ್ದಾನೆ. ತಮ್ಮಣ್ಣನ ಹೊರತಾಗಿ ಗಡ್ಡಪ್ಪ, ಸೆಂಚುರಿಗೌಡ ಮತ್ತು ಅಭಿ ಮೂವರೂ ಇದರಲ್ಲಿದ್ದಾರೆ. ಇದನ್ನು ಬಿಟ್ಟರೆ ಮೂರನೆಯದ್ದು ಮುಸ್ಸಂಜೆ ಮಹೇಶ್‌ನ 'ತಿಥಿ-2' ಎಂಬ ಚಿತ್ರ. ಇದರಲ್ಲಿ ಅಭಿಯ ಬದಲು ಸ್ಟಾರ್ ಮಂಡ್ಯ ಲೋಕಿ ಬಿಟ್ಟರೆ ತಿಥಿಯ ಮಿಕ್ಕೆಲ್ಲರೂ ನಟಿಸಿದ್ದಾರೆ.

ಸದ್ಯ ಇಂಥ ಐದಕ್ಕೂ ಅಧಿಕ ಚಿತ್ರಗಳು ನಿರ್ಮಾಣ ಹಂತದಲ್ಲಿವೆ. ಎತ್ತಿಂದೆತ್ತ ಲೆಕ್ಕ ಹಾಕಿದರೆ ಗಡ್ಡಪ್ಪ, ಸೆಂಚುರಿಗೌಡ, ಅಭಿ, ತಮ್ಮಣ್ಣನ ಒಟ್ಟು ಸಂಭಾವನೆ ಹತ್ತು ಲಕ್ಷ ಮೀರುವುದಿಲ್ಲ. ಸದ್ಯ ಸಣ್ಣಪುಟ್ಟ ಹೀರೋಗಳಿಗೆ ಕಮ್ಮಿಯೆಂದರೂ 25 ಲಕ್ಷ ಕಕ್ಕಬೇಕು. ಹೀರೋಯಿನ್ನು ಸಹನಟರೆಲ್ಲ ಸೇರಿ ಸ್ಟಾರ್ ಕ್ಯಾಸ್ಟಿಗೆಂದೇ ಒಂದೋ ಎರಡೋ ಕೋಟಿ ಕೈಬಿಡುತ್ತದೆ. ಹಾಗಿದ್ದೂ ಹಾಕಿದ ಬಂಡವಾಳಕ್ಕೆ ಗ್ಯಾರಂಟಿಯಿಲ್ಲ, ಆದರೆ 'ತಿಥಿ' ನಟರುಗಳ ಪರಿಸ್ಥಿತಿ ಹಾಗಿಲ್ಲ. ಏನಿಲ್ಲವೆಂದರೂ 2 ಕೋಟಿ ಗ್ಯಾರಂಟಿ. ಕೋಟಿ ಲೆಕ್ಕದಲ್ಲಿ ತಾವು ಜೇಬಿಗಿಳಿಸುವ ಈ ಮಂದಿ ಅದಕ್ಕೆ ಕಾರಣರಾದ ಈ ಮುಗ್ಧರಿಗೆ ಕೊಡುವ ಕಿಮ್ಮತ್ತು ಕಿಲುಬು ಕಾಸಿನದ್ದು!

ವಿಪರ್‍ಯಾಸ ಹೇಗಿದೆಯಲ್ಲವೆ?



...ಪ್ಪಲು ಗ್ರಾಮದಲ್ಲೇ ಚಿತ್ರೀಕರಣ ಮುಗಿಸಿ, ವಿಶೇಷ ...ನ್ನು ಬಳಸಿದ್ದರಿಂದ 'ತಿಥಿ'ಗೆ ಅಂತರರಾಷ್ಟ್ರೀಯ ...ಪ್ತವಾಯಿತು. ಆ ಕಾರಣಕ್ಕೆ ಮೀಡಿಯಾ ಹೈಪ್ ...ಗಿ ಚಿತ್ರ ವಿಶೇಷ ಗಮನ ಸೆಳೆದಿತ್ತು. ತಿಥಿಯ ...ಕ ವೈಶಿಷ್ಟ್ಯ ಅದಕ್ಕಿದ್ದ ಸಾಮಾಜಿಕ ಆಯಾಮ ...ಅಂತರರಾಷ್ಟ್ರೀಯ ಮಟ್ಟದಲ್ಲಿ ಸಿಕ್ಕ ಮನ್ನಣೆಗಿದ್ದ ... ಯಾವುದನ್ನೂ ಅರ್ಥ ಮಾಡಿಕೊಳ್ಳದೆ ಆ ...ರುಲ್ಲೇ 'ಕಳೆ' ಬೆಳೆಯುವ ವಿಕೃತಿಯೊಂದು ...ಗರದಲ್ಲಿ ತಲೆ ಎತ್ತಿತು.

...ರಕ್ಕೆ ಕಾರಣನಾದವನು ಮೈಸೂರಿನ ಸಿದ್ಧರಾಜು. ...' ಸುಖಧರೆಯ ಕೈಕೆಳಗೆ ಅಸೋಸಿಯೇಟ್ ಆಗಿದ್ದ ...ವೇ 'ತರ್ಲೇ ವಿಲೇಜ್'ನ ಸೃಷ್ಟಿಕರ್ತ. ಹಲ್ಕಾಕತೆ, ... ಮೀನಿಂಗ್ ಡೈಲಾಗ್ ಹೆಣೆದದ್ದೇ ತನ್ನ ಜೊತೆ ...ಯೇಟ್ ಆಗಿದ್ದ 'ರಘು' ಎಂಬಾತನಿಗೆ ವಿಲೇಜ್‌ನ ... ವಹಿಸಿಕೊಟ್ಟ. ಹೇಗೂ ತಿಥಿಯ ಹ್ಯಾಂಗೋವರ್ ... ಪುಡಿಕಾಸಿನಲ್ಲಿ ಕೋಟಿ ಕಮಾಯಿಸಬಹುದೆಂಬ ...ರದಲ್ಲೇ ಕುಮಾರ್ ಎಂಬ ನಿರ್ಮಾಪಕ ಒಂದೂವರೆ ...ಗೆ ಇದರ ಹಂಚಿಕೆ ಹಕ್ಕು ಖರೀದಿಸಿದ. 2016ರ ...ರ್‌ನಲ್ಲಿ ನೂರೈವತ್ತು ಥೇಟರುಗಳಲ್ಲಿ ತೆರೆಕಂಡ ...' ಎರಡೇ ವಾರದಲ್ಲಿ ಒಂದೂವರೆ ಕೋಟಿ ಲಾಭ

ತಿಥಿಯಲ್ಲಿ ನಟಿಸಿದ್ದ ಸೆಂಚುರಿಗೌಡ, ಗಡ್ಡಪ್ಪ, ಅಭಿ, ತಮ್ಮಣ್ಣಗೌಡ ಎಲ್ಲರೂ ಈ ಚಿತ್ರದಲ್ಲಿದ್ದರು. ಇದೂ ಕೂಡ ಡಬ್ಬಲ್ ಮೀನಿಂಗ್ ಡೈಲಾಗಿನಿಂದಲೇ ಗೆದ್ದಿತ್ತು. ಇತ್ತ 'ತರ್ಲೆ ವಿಲೇಜ್' ಶೂಟಿಂಗ್ ನಡೆಯುತ್ತಿದ್ದ ಸುದ್ದಿ ಕೇಳಿ ಗಾಲಿ ಲಕ್ಕೀ ಉರ್ಫ್ ಡಬ್ಬಲ್ ಮೀನಿಂಗ್ ಲಕ್ಕೀ ಅದೇ ಧಾಟಿಯ ಇನ್ನೂ ಹಲ್ಕಾ ಸಂಭಾಷಣೆಗಳಿದ್ದ ವಿಕೃತ ಸನ್ನಿವೇಶಗಳ ಅಸಹ್ಯದ ಕತೆ ಹೊಸೆದ. ಸದ್ಯ 'ಗಡ್ಡಪ್ಪ ಮೇನಿಯಾ' ಯಾವ ಮಟ್ಟ ಮುಟ್ಟಿದೆಯೆಂದರೆ ಇಡೀ ಧಾಟಿಯ ಕಮ್ಮಿಯೆಂದರೂ ಇಂಥ ಹತ್ತು ವಿಕೃತ ಚಿತ್ರಗಳು ಗಾಂಧಿನಗರದಲ್ಲಿ ತಯಾರಾಗುತ್ತಿವೆ.

ಚಿತ್ರದಿಂದ ಚಿತ್ರಕ್ಕೆ, ದಿನದಿಂದ ದಿನಕ್ಕೆ ಗಡ್ಡಪ್ಪ, ಸೆಂಚುರಿಗೌಡ, ಅಭಿ, ತಮ್ಮಣ್ಣ ಗೌಡರಂಥ ರೈತಾಪಿಗಳ ಸಂಭಾವನೆಯೂ ಹೆಚ್ಚುತ್ತಿದೆ. ಅವರ ಜೀವನ ಶೈಲಿಯೂ ಬದಲಾಗುತ್ತಿದೆ ಮತ್ತು ಅದರ ಸುತ್ತಮುತ್ತಲ ಹಳ್ಳಿಗಳ ವಾತಾವರಣವೂ ಕಲುಷಿತಗೊಳ್ಳುತ್ತಿದೆ. ಸಂತೆ ಒಂದಲ್ಲ ಒಂದು ದಿನ ಮುಗಿಯಲೇಬೇಕಲ್ಲ! ನಂತರ? ಏನೇನು ಅನಾಹುತ ಕಾದಿದೆಯೋ, ಏನೆಲ್ಲ ಫಜೀತಿಗಳಾಗುತ್ತೋ, ಯಾರ ದುರಂತಕ್ಕೆ ಎಲ್ಲಿ ಗುಂಡಿ ತೋಡಿದೆಯೋ ಗೊತ್ತಿಲ್ಲ. ಸಾಂಸ್ಕೃತಿಕ ವಿಕೃತಿಯೊಂದರ ಅಂತ್ಯ ಮಾತ್ರ ಸುಖಾಂತ್ಯವಾಗಲು ಸಾಧ್ಯವೇ ಇಲ್ಲ.

- ರಾ. ಸೋಮನಾಥ್

ಹಾಡಿಯ ಹಕ್ಕಿ ರಾಜೇಶ್, ಜೈಲುಪಾಲಾದ ಹುಚ್ಚಾ ವೆಂಕಟ ಮತ್ತು ಮನೋರೋಗಿಯಾದ ಕೋತಿರಾಜರ ಹಾದಿಯಲ್ಲಿ...!



...ನಲ್ಲಿ ಸ್ವಚ್ಛಂದವಾಗಿ ವಿಹರಿಸಿಕೊಂಡಿದ್ದ ಮೃಗವನ್ನು ... ಸರ್ಕಸ್ಸಿ ಗೋ ಮೃಗಾಲಯಕ್ಕೋ ತಂದು ...ರಲ್ಲಿ ಕೂಡಿಟ್ಟು ಅದರ ವನ್ಯ ಸಹಜ ವರ್ತನೆಯನ್ನು ...ಕೇಕೆ ಹಾಕುವ ಬೇಟೆಗಾರನ ಕ್ರೌರ್ಯಕ್ಕೂ ಈಗ ... ಸೆಂಚುರಿಗೌಡರ ಬಾಯಲ್ಲಿ ಹಲ್ಕಾ ಡೈಲಾಗ್ ...ದುಡ್ಡು ಬಾಚುವ ಸಿನಿಮಾ ದುರುಳರ ದಾಹಕ್ಕೂ ...ವ್ಯತ್ಯಾಸವೇ ಇಲ್ಲ.

...ರು ಹಳ್ಳಿಯ ಮುಗ್ಧರು. ನಗರ ವಂಚಕರ ಕಪಟ ...ಸವರು. ಏಕಾಏಕಿ ವಿಲಕ್ಷಣ ಖ್ಯಾತಿ, ಅದಕ್ಕೆ ತಕ್ಕಂತೆ ... ಬದಲಾಗುವ ಬದುಕಿನ ಮೌಲ್ಯ ಅದರ ಸುತ್ತ ... ಸಂಬಂಧಗಳೆಲ್ಲ ಏತ್ಥದಂತೆ ನೆತ್ತಿಗೇರಿತೆಂದರೆ ... ಕಟ್ಟಿಟ್ಟ ಬುತ್ತಿ. ರಿಯಾಲಿಟಿ ಹೀರೋ ಹಳ್ಳಿ ...ಜೇಶ ಹೀರೋಯಿನ್ನನ್ನೇ ಹುಚ್ಚಿಕೊಂಡು ಕೈಹಿಡಿದ ... ಹೊಂದಾಣಿಕೆಯಾಗದೇ ಚಡಪಡಿಸಿದ. ಖರೀದಿಸಿ ...ಗೆ ಪೆಟ್ರೋಲಿಗೂ ಗತಿಯಿಲ್ಲದಾಗ ಮತ್ತೆ ಹಳೇ ... ಹೆಡರಿ ನೇಣು ಬಿಗಿದುಕೊಂಡ. ಹುಚ್ಚಾ ವೆಂಕಟ್ ...-ಸಿನಿಮಾಗಳ ಮಾಯಾಲೋಕವೇ ಸೃಷ್ಟಿಯಾ...ಮೊದಲ್ಲೇ ನಿಜವೆಂದು ಭ್ರಮಿಸಿ ಜೈಲು ಪಾಲಾದ. ...ಗೆ ಸೇರುವ ಮತ್ತೊಬ್ಬ ಪ್ರಾಣಿ ಕೋತಿರಾಜ್! ...ಸಸ್ಸೂ, ಓಡಿತಂದು ಸಿನಿಮಾ ಮಂದಿ ರೀಲು ...ಮ್ಮು, ತಾನು ಹೀರೋ ಆಗಿಬಿಟ್ಟೆ ಎಂಬ ಭ್ರಮೆಗೆ ...ತಿರಾಜ್ ಈಗ ಮನೋರೋಗಿ. ಈಗ ತಿಥಿ ... ಅಭಿಷೇಕ್‌ನದ್ದೂ ಇದೇ ಪಾಡು. ತಾನು ಪುನೀತ್, ... ಥರ ಮಿಂಚಲೇಬೇಕೆಂದು ಆಕ್ಷನ್ ಸಿನಿಮಾದ ... ಸಾಕುತ್ತಿದ್ದಾನಂತೆ. ಇದ್ದ ಒಂದೆಕರೆಯನ್ನೂ ...ಡು ಹಸಕ್ಕೆ ಬಿಟ್ಟಿದ್ದಾನಂತೆ. ಇನ್ನು ಗಡ್ಡಪ್ಪನ

ಗೆಟಪ್ಪೇ ಬದಲಾಗಿದೆ. ದೇಶವಿದೇಶಗಳಲ್ಲಿ ತನ್ನ ಸಿನಿಮಾ ಓಡುತ್ತದೆಯೆಂದು ಇನ್ನೆಂಥದ್ದೋ ವ್ಯವಹಾರಕ್ಕಿಳಿದಿದ್ದಾನಂತೆ. ಸೆಂಚುರಿಗೌಡರಿಗೆ ಸಾಯುವ ಮುನ್ನ ಏನೆಲ್ಲ ಮಾಡಬೇಕೆಂಬ ದೊಡ್ಡ ಪಟ್ಟಿಯೇ ಇದೆಯಂತೆ. ತಮ್ಮಣ್ಣ ಅಲಿಯಾಸ್ ತಮ್ಮೇಗೌಡರನ್ನು ಗಡ್ಡಪ್ಪ ಮತ್ತು ಸೆಂಚುರಿಗೌಡರ ಜೊತೆ ಆದಿಚುಂಚನಗಿರಿ ನಿರ್ಮಲನಾಥರೇ ವಾರದ ಹಿಂದೆ ಕರೆದು ಸನ್ಮಾನಿಸಿಬಿಟ್ಟರಂತೆ.

ನಾನು ಇವತ್ತು ಸಾಯ್ತೀನೋ ನಾಳೆ ನೆಗೆದು ಬೀಳ್ತೀನೋ ಗೊತ್ತಿಲ್ಲ. ಆದರೆ ತಿಥಿ ಚಿತ್ರದ ಕಾರಣಕ್ಕೆ ಆದಿಚುಂಚನಗಿರಿ ಸ್ವಾಮಿಗಳ ಪಾದ ಮುಟ್ಟುವ ಭಾಗ್ಯ ಸಿಕ್ಕಿತಲ್ಲ; ಈ ಕ್ಷಣಕ್ಕೆ ನನ್ನ ಪ್ರಾಣಹೋದರೂ ಚಿಂತೆಯಿಲ್ಲ ಎಂದು ತಮ್ಮಣ್ಣಗೌಡ ವೇದಿಕೆಯಲ್ಲೇ ಗಳಗಳನೇ ಅತ್ತುಬಿಟ್ಟನಂತೆ. ತಮ್ಮಣ್ಣನ ಮಗ ಓದುತ್ತಿದ್ದ ಮಂಡ್ಯದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಸಿಬ್ಬಂದಿಯೆಲ್ಲ ತಿಥಿಯ ನಟರ ಜೊತೆ ತಮ್ಮಣ್ಣನನ್ನೂ ವೇದಿಕೆಗೆ ಕರೆದು ಸನ್ಮಾನಿಸಿದ ಮೇಲಂತೂ ಅರ್ಧ ರಾತ್ರಿಯೆದ್ದು ಏನೇನೋ ಹಲುಬುತ್ತಾನಂತೆ!

ಮಂಡ್ಯದ ಸುತ್ತಮುತ್ತಲ ಸಿಕ್ಕಸಿಕ್ಕ ಸಂಘ ಸಂಸ್ಥೆಗಳೆಲ್ಲಕ್ಕೂ ಸದ್ಯ ತಿಥಿ ನಟರನ್ನು ಕರೆದು ಹಾರ ಹಾಕುವುದೇ ಫ್ಯಾಷನ್ನಾಗಿಬಿಟ್ಟಿದೆ. ಮತ್ತೊಂದೆಡೆ ಇಂಥವರನ್ನು ಕಂಡಿದ್ದೇ ತಡ ಸುತ್ತಮುತ್ತಲ ಗ್ರಾಮಸ್ಥರ ಮನಸ್ಥಿತಿಯೇ ಏರುಪೇರಾಗುತ್ತದೆ. ಕಾಡುಪ್ರಾಣಿಗಳನ್ನು ಹಿಡಿದು ಸರ್ಕಸ್ಸಿಗೆ ತಂದು ಅದನ್ನು ತೋರಿಸಲೆಂದೇ ಟಿಕೆಟ್ಟಿಗಿಷ್ಟು ಬೆಲೆಯಿಟ್ಟು ಜನ ಕೇಕೆ ಹಾಕುವಂತೆ ಸೃಷ್ಟಿಸಿದ ವ್ಯವಸ್ಥೆಗೂ ಈಗ ಶುರುವಾಗಿರುವ ಗಡ್ಡಪ್ಪ ಮೇನಿಯಾಕ್ಕೂ ದೊಡ್ಡ ವ್ಯತ್ಯಾಸ ಕಾಣಿಸುತ್ತಿಲ್ಲ. ಮೃಗಗಳಿಗೆ ಆತ್ಮಹತ್ಯೆ ಗೊತ್ತಿಲ್ಲವೆಂಬ ಏಕಮೇವ ವ್ಯತ್ಯಾಸದ ಹೊರತಾಗಿ...!

ಮರ್ಯಾದಾ ಪುರುಷೋತ್ತಮ

03

ಪ್ರೀತಿ ಇಂಗಿಹೋಗಿ ಹದಿನಾರು ವರ್ಷವಾಯಿತು" ಎಂದುಕೊಳ್ಳುತ್ತಾಳೆ.

ಲವಕುಶರು ರಾಮನ ಅಶ್ವವನ್ನು ಕಟ್ಟಿಹಾಕಿದಾಗ ಸೀತೆಗೆ ಸಹಜವಾಗಿಯೇ ಆತಂಕವಾಗುತ್ತದೆ. "ಅಶ್ವವನ್ನು ಕಟ್ಟಿಹಾಕಿದವರನ್ನು ಸೆರೆಹಿಡಿ ಸೋಲಿಸಿ ಅಥವಾ ಕೊಂದಾದರೂ ಬಿಡಿಸಿಕೊಳ್ಳುವುದು ಅಶ್ವಮೇಧದ ಧರ್ಮವೆಂದು ಅವನು ನನ್ನ ಕಂದಗಳನ್ನು ಕೊಲ್ಲಿಸಲೂ ಹೇಸುವವನಲ್ಲ, ಕಳೆದುಕೊಳ್ಳುವವಳು ನಾನು. ವ್ರತದ ಧರ್ಮಪಾಲನೆಗಾಗಿ ಸ್ವಂತ ಮಕ್ಕಳನ್ನೇ ಬಲಿಕೊಟ್ಟನೆಂಬ ಕೀರ್ತಿಯನ್ನು ತನ್ನ ಇಕ್ವಾಕ್ಷು ವಂಶಕ್ಕೆ ಸೇರಿಸಿದ ಧರ್ಮಾತ್ಮನೆನಿಸಿಕೊಳ್ಳುವವನು ಅವನು" ಎಂದು ಅಸಹಾಯಕಳಾಗುತ್ತಾಳೆ.

ಭೈರಪ್ಪನವರು ಈ ಕಾದಂಬರಿಯಲ್ಲಿ ಸೀತೆಯನ್ನು ರೈತಾಪಿ ಮಹಿಳೆಯನ್ನಾಗಿಸಿರುವುದು ಸೂಕ್ತವಾಗಿದೆ. ವಾಲ್ಮೀಕಿಯ ಆಶ್ರಮದಲ್ಲಿ ಆಧ್ಯಾತ್ಮ, ತಪಸ್ಸು ಇತ್ಯಾದಿಗಳ ಗೋಜಿಗೆ ಹೋಗದ ಸೀತೆ, ತಾನು ಭೂಮಿಯಿಂದ ಬಂದವಳಾದ್ದರಿಂದ ತನ್ನ ಸಂಬಂಧ ಇರುವುದು ಭೂಮಿಯೊಂದಿಗೆ ಎಂದು ನಿರ್ಧರಿಸಿ, ಹತ್ತಿರದಲ್ಲಿರುವ ಜಾಗೆಯಲ್ಲಿ ಕೃಷಿಕಳಾಗಿರುತ್ತಾಳೆ. ಫಸಲು ತೆಗೆಯುವುದರಲ್ಲಿ ದನಕರ ಸಾಕುವುದರಲ್ಲೇ ನೆಮ್ಮದಿ ಕಾಣುತ್ತಿರುತ್ತಾಳೆ. ಆದ್ದರಿಂದಲೇ ವಾಲ್ಮೀಕಿ ಕರೆದಿರುವ ಧರ್ಮಸಭೆಗೆಂದು ಆಕೆ ಅಯೋಧ್ಯೆಗೆ ಹಿಂದಿರುಗಿದಾಗ ಕೃಷಿಕರ ಓಣಿಯಲ್ಲಿರುವ ತನ್ನ ಸಖಿಯ ಮನೆಯಲ್ಲೇ ತಂಗುತ್ತಾಳೆ.

ಆ ಸಭೆಯಲ್ಲಿ ಮಹಾರಾಜನ ಮಕ್ಕಳೇ ಕುದುರೆಯನ್ನು ಕಟ್ಟಿಹಾಕಿದ್ದರಿಂದ ಅವರಿಗೇ ಯುವರಾಜಪಟ್ಟ ಕಟ್ಟಿಬಿಡಲಿ ಎಂದು ಜನ ಘೋಷಿಸಿದಾಗ ಸೀತೆ ಕೆಂಡಕಾರುತ್ತಾಳೆ. "ನನ್ನ ಹೆಸರು ಸೀತಾದೇವಿ. ಜನಕ ಮಹಾರಾಜರ ಮಗಳು. ಕುದುರೆಯನ್ನು ಕಟ್ಟಿಹಾಕಿದ ಮಕ್ಕಳ ತಾಯಿ. ಆ ಯಜಮಾನರು ಹೇಳಿದಂತೆ ನನ್ನ ಮಕ್ಕಳು ನಿಮ್ಮ ಮಹಾರಾಜನ ಮಕ್ಕಳಲ್ಲ. ಆದ್ದರಿಂದ ಅವರಿಗೆ ವಂಶಪಾರಂಪರ್ಯದ ಅಧಿಕಾರವಿಲ್ಲ" ಎಂದು ಒಂದಿಷ್ಟೂ ತಡವರಿಸದೆ ಹೇಳುತ್ತಾಳೆ.

ಮುಂದುವರೆದು "ನಿಮ್ಮ ಮಹಾರಾಜನು ನನ್ನನ್ನು ಪರಿತ್ಯಜಿಸಿದಾಗ ಈ ಮಕ್ಕಳು ನನ್ನ ಹೊಟ್ಟೆಯಲ್ಲಿದ್ದವು. ಅಂದರೆ ಅವನು ಅವುಗಳನ್ನೂ ಪರಿತ್ಯಜಿಸಿದ. ಅವನ ಪಿತೃತ್ವವನ್ನು ಕಳೆದುಕೊಂಡ. ಅವನು ನನ್ನ ಗಂಡನಲ್ಲ, ಆದ್ದರಿಂದ ನನ್ನ ಮಕ್ಕಳ ತಂದೆಯಲ್ಲ. ಕೋಸಲರಾಜ್ಯದ ಮೇಲೆ ನನ್ನ ಮಕ್ಕಳಿಗೆ ಪಿತ್ರಾರ್ಜಿತವಾದ ಅಧಿಕಾರವಿಲ್ಲ. ಅವರು ಕಟ್ಟಿಹಾಕಿದ ಯಜ್ಞದ ಕುದುರೆಯನ್ನು ನಿಮ್ಮ ರಾಜನು ಯುದ್ಧಮಾಡಿ ಬಿಡಿಸಿಕೊಳ್ಳಲಿಲ್ಲ. ಆದ್ದರಿಂದ ನನ್ನ ಮಕ್ಕಳು ಸ್ವಂತಶಕ್ತಿಯಿಂದ ಈ ರಾಜ್ಯವನ್ನು ಸಂಪಾದಿಸಿದ್ದಾರೆ. ಅವರು ಇಕ್ವಾಕ್ಷು ವಂಶದ ಹೆಸರು ಹೇಳುವವರಲ್ಲ. ತಮ್ಮದೇ ವಂಶಸ್ಥಾಪಕರಾಗುತ್ತಾರೆ" ಎನ್ನುತ್ತಾಳೆ.

ರಾಮ ಯಾಕೆ ತನ್ನ ಹೆಂಡತಿಯನ್ನು ತ್ಯಜಿಸಿದ ಎಂದು ಸಭೆಯಲ್ಲಿ ವಿವರಿಸಬೇಕೆಂದು ವಾಲ್ಮೀಕಿ ಹೇಳುತ್ತಾರೆ. ಆಗ ರಾಮ ಜನಗಳ ಅಪನಂಬಿಕೆಗೆ ಒಳಗಾಗಿದ್ದ ರಾಣಿಯನ್ನೇ ತ್ಯಜಿಸಿ ಆಡಳಿತದ ಆದರ್ಶವನ್ನು ಸ್ಥಾಪಿಸಲು ನಿಶ್ಚಯಿಸಿದೆ ಎಂದೂ, ತನ್ನ ಎಡಭಾಗದಲ್ಲಿ ಸೀತೆಯ ಸುವರ್ಣಪುತ್ಥಳಿಯನ್ನಿಟ್ಟುಕೊಂಡೇ ಸಿಂಹಾಸನದ ಮೇಲೆ ಕೂತರೂ ವನವಾಸಿ ಬ್ರಹ್ಮಚಾರಿಯಂತೆ ದರ್ಭೆಯ ಹುಲ್ಲಿನ ಮೇಲೆ ಮಲಗುತೀನಿ ಎಂದೂ ವಿವರಿಸುತ್ತಾನೆ.

ಆಗ ಸೀತೆ ಲಂಕೆ ಯುದ್ಧದ ನಂತರವೂ ರಾಮ ತನ್ನನ್ನು ಶಂಕಿಸಿದ್ದನ್ನು ನೆನಪಿಸಿ ಆತನಿಗೆ ತನ್ನಲ್ಲಿ ಪೂರ್ತಿ ನಂಬಿಕೆ ಇರದಿದ್ದರಿಂದ, ಅಯೋಧ್ಯೆಯ ಜನರ ಆಪಾದನೆ ಆತನಿಗೊಂದು ನೆಪ ಕೊಟ್ಟಿತು ಎಂದು ವಾದಿಸುತ್ತಾಳೆ. "ಇನ್ನೊಂದು ಪ್ರಶ್ನೆ. ನಾನು ಪರಿಶುದ್ಧೆ ಅನ್ನುವುದು ನಿನ್ನ ಅಂತರಂಗಕ್ಕೆ ಖಚಿತವಾಗಿದ್ದರೆ ಲಕ್ಷ್ಮಣ ಹೇಳಿದ ಬಲಪ್ರಯೋಗವು ಸೂಕ್ತವಲ್ಲವೆಂದು ನೀನು ತೀರ್ಮಾನಿಸಿದ್ದ ಮೇಲೆ ಅನುಮಾನ ಹೊತ್ತು ಸಿಂಹಾಸನದ ಮೇಲೆ ಕೂರುವುದು ಬೇಡವೆಂದು ತೀರ್ಮಾನಿಸಿ ನೀನು ಸಿಂಹಾಸನವನ್ನೇ ತ್ಯಾಗ ಮಾಡಬಹುದಿತ್ತಲ್ಲ. ಲಕ್ಷ್ಮಣನು ರಾಜ್ಯತ್ಯಾಗ ಮಾಡಿ ಕೌಸಲ್ಯಾಮಾತೆಯ ಜನಪದಕ್ಕೆ ಹೋದಂತೆ ನೀನೂ ನನ್ನೊಡನೆ ಆ ಜನಪದಕ್ಕೇ ಹೋಗಿ ನೆಲೆಸಬಹುದಿತ್ತು. ಆದರೆ ಹಾಗೆ ಮಾಡಲಿಲ್ಲ. ನಿನಗೆ ಸಿಂಹಾಸನದ ಮೇಲೆ ಮೋಹವಿತ್ತು" ಎಂದು ರಾಮನಿಗೆ ತಿರುಗೇಟು ನೀಡುತ್ತಾಳೆ.

ಕೊನೆಗೆ "ನನಗೆ ಸಿಂಹಾಸನದ ಅರ್ಧಭಾಗದ ಆಶೆ ಉಳಿದಿಲ್ಲ. ನಾನು ಜನಕ ಮಹಾರಾಜನ ಹೊಟ್ಟೆಯಲ್ಲಿ ಹುಟ್ಟಿದ ಮಗಳಲ್ಲ. ನೇಗಿಲಗೆರೆಯಲ್ಲಿ ಸಿಕ್ಕಿದ ಶಿಶು. ಈಗಲೂ ನೇಗಿಲು ಹಿಡಿದು ಕೃಷಿ ಮಾಡುವುದರಲ್ಲಿ ನನಗಿರುವ ನೆಮ್ಮದಿ ಅರಮನೆಯ ಜೀವನದಲ್ಲಿ ಇಲ್ಲ" ಎಂದು ಹೇಳಿ ಅಲ್ಲಿಂದ ಹೊರಡುತ್ತಾಳೆ.

ರಾಮ "ಸೀತೇ, ಎಲ್ಲಿಗೆ ಹೊರಟೆ? ಪ್ರಜಾಕೋಟಿಯ ಸಮ್ಮತಿಯಾಗಿದೆ. ಇಲ್ಲಿ ಬಾ. ಅಗ್ನಿಸಾಕ್ಷಿ. ಜೊತೆಯಲ್ಲಿ ಅಶ್ವಮೇಧವನ್ನು ನೆರವೇರಿಸೋಣ" ಎಂದು ಕಿರುಚುತ್ತಾನೆ. ಅದು ತನಗೆ ಕೇಳಿಸಲೇಯಿಲ್ಲದಂತೆ ಹೊರಟುಹೋಗುತ್ತಾಳೆ. ಯಾಕೆಂದರೆ ಆಕೆಗೆ ಗೊತ್ತಾಗಿರುತ್ತದೆ, ರಾಮನಿಗೆ ಬೇಕಿರುವುದು ಸೀತೆಯಲ್ಲ, ಬದಲಾಗಿ ಅಶ್ವಮೇಧ ಶಾಸ್ತ್ರ ಪೂರೈಸಲು ಧರ್ಮಪತ್ನಿ ಬೇಕಿದೆ ಎಂದು. ತನ್ನ ಸಖಿ ಸುಕೇಶಿಗೆ ಹೇಳುತ್ತಾಳೆ: "ಲಂಕೆಯಲ್ಲಿ ಜಯ ಸಾಧಿಸಿದಾಗಲೇ ಪ್ರೀತಿ ಪ್ರೇಮಗಳು ಸತ್ತುಹೋಗಿದ್ದವು. ರಾಜನಾದ ಮೇಲಂತೂ ಕಟ್ಟುಪಾಡುಗಳಷ್ಟೇ" ಎಂದು.

ಆಕೆ ಹೊರಟುಹೋದ ನಂತರ ಲವಕುಶರನ್ನು ಕ್ಷಾತ್ರ ಶಿಕ್ಷಣಕ್ಕೆ ಸೇರಿಸಲಾಗುತ್ತದೆ. ಅತ್ತ ಸೀತೆ ತನ್ನ ಭೂಮಿಯಲ್ಲೇ ನೆಮ್ಮದಿ ಕಾಣಲು ಯತ್ನಿಸಿದರೆ ಇತ್ತ ರಾಮ ಅಯೋಧ್ಯೆಯಲ್ಲಿ ಕಳಾಹೀನನಾಗುತ್ತಾನೆ. ಕೊನೆಗೊಂದು ದಿನ ಆತ ಲವನಿಗೆ ಯುವರಾಜ ಪಟ್ಟವನ್ನು, ಕುಶನಿಗೆ ರಾಜಪಟ್ಟವನ್ನು ಕಟ್ಟಿ ಅವರಿಗೆ ರಾಜ್ಯಾಡಳಿತ ಮತ್ತು ಯುದ್ಧ ತಂತ್ರಗಳ ಶಿಕ್ಷಣ ಕೊಡಲು ಮುಂದಾಗುತ್ತಾನೆ. ಆದರೆ ಅದು ಸಾಧ್ಯವಾಗುವುದಿಲ್ಲ. ಯಾಕೆಂದರೆ ರಾಮನ ಬಗ್ಗೆ ಅವರಿಗೆ ಕಿಂಚಿತ್ತೂ ಗೌರವವಿಲ್ಲ. ರಾಮನೇ ಲಕ್ಷ್ಮಣನಿಗೆ ಹೇಳುತ್ತಾನೆ "ಗುರುವಿನಲ್ಲಿ ಪ್ರೀತಿ ಗೌರವವಿಲ್ಲದ ಮೇಲೆ ಕಲಿಕೆ ಹೇಗೆ ಸಾಧ್ಯ? ಅವರಮ್ಮನಿಗೆ ನಾನು ಅನ್ಯಾಯ ಮಾಡಿದೆನೆಂಬ ಭಾವನೆ ಅವರ ಮನಸ್ಸಿನಲ್ಲಿ ಗಟ್ಟಿಯಾಗಿ ಕೂತಿದೆ. ಅದನ್ನು ಹೋಗಲಾಡಿಸುವುದು ಅಸಾಧ್ಯ. ಪೌಢರಿಗೇ ಅರ್ಥವಾಗದಿರುವ ಸೂಕ್ಷ್ಮಗಳು ಅವರಿಗೆ ಅರ್ಥಮೂಡಿಸೂದು ಹೇಗೆ? ನಿನ್ನನ್ನು ಬಿಟ್ಟರೆ ತಮ್ಮ ಅಮ್ಮನಿಗೆ ಅಯ್ಯೋ ಅನ್ನುವ ಯಾರೂ ಈ ಪ್ರಪಂಚದಲ್ಲಿಲ್ಲ, ಅವಳ ಜೀವ ಉಳಿಸಿದವನೇ ನೀನು ಅನ್ನುವ ಭಾವನೆ ಅವರಲ್ಲಿದೆ. ಅದು ನಿಜವೂ ಹೌದು" ಎಂದು ಹೇಳಿ ಅವರಿಬ್ಬರಿಗೆ ರಾಜ್ಯಧರ್ಮ ತಂತ್ರಗಳನ್ನು ಕಲಿಸುವ ಹೊಣೆಯನ್ನು ತಮ್ಮನಿಗೆ ವಹಿಸುತ್ತಾನೆ.

ಹೀಗೆ ತನ್ನ ಎಲ್ಲಾ ಜವಾಬ್ದಾರಿಗಳನ್ನು ಇತರರಿಗೆ ವಹಿಸಿ ರಾಮ ಏಕಾಂತಕ್ಕೆ ಜಾರುತ್ತಾನೆ. ಒಂದು ಮುಂಜಾನೆ ಸರಯೂ ನದಿಗೆ ಹೋದಾಗ ರಾಮ ನಾಪತ್ತೆಯಾಗುತ್ತಾನೆ. ಆತನ ಶವ ಎರಡು ಕಿ.ಮೀ. ದೂರದಲ್ಲಿ ಒಂದು ಬಂಡೆಗೆ ಸಿಕ್ಕಿಕೊಂಡಿರುತ್ತದೆ. ಆತ ಸತ್ತಿದ್ದು ಕಾಲು ಜಾರಿಯೋ, ಉಸಿರುಕಟ್ಟೋ ಅಥವಾ ಅದು ಇಚ್ಛಾಮರಣವೋ ಗೊತ್ತಾಗುವುದಿಲ್ಲ.

ರಾಮನ ಸಾವಿನ ಸುದ್ದಿ ಹೊತ್ತು ತಂದ ಸುಮಂತ್ರರು ಅಂತ್ಯಸಂಸ್ಕಾರಗಳಿಗೆ ಸೀತೆ ಅಯೋಧ್ಯೆಗೆ ಬರಬೇಕೆಂದು ಹೇಳುತ್ತಾರೆ. ಆದರೆ ಸೀತೆ ಅಯೋಧ್ಯೆಗೆ ಹೋಗಲು ನಿರಾಕರಿಸುತ್ತಾಳೆ.


ಹೀಗೆ ಕಷ್ಟ ನೋವುಗಳಿಂದ ದಿಟ್ಟ ಮಹಿಳೆಯಾದ ಸೀತೆಯನ್ನು ಕಟ್ಟಿಕೊಡುವ ಭೈರಪ್ಪನವರು ಕೊನೆಯ ಮೂರು ಪುಟಗಳಲ್ಲಿ ಆಕೆಗೆ ವಿಚಿತ್ರ ಅಂತ್ಯಕೊಡುತ್ತಾರೆ. ಗಂಡಸತ್ತ ಹತ್ತನೆ ದಿನದ ಪೂಜೆಗಳಿಗೆ ಆಶ್ರಮದ ಮಹಿಳೆಯರು ಆಕೆಯ ಹೊಲದ ಮನೆಗೆ ಹೋಗುತ್ತಾರೆ. ರಾತ್ರಿ ಮಲಗಿಕೊಂಡ ಸೀತೆ ಬೆಳಗ್ಗೆಯಿಂದ ಕಾಣುತ್ತಿಲ್ಲ ಎಂದು ಸಖಿ ಸುಕೇಶಿ ಹೇಳುತ್ತಾಳೆ. ಎಲ್ಲಿ ಹುಡುಕಿದರೂ ಆಕೆಯ ಪತ್ತೆಯಿಲ್ಲ. ಕೊನೆಗೆ ರೇಷ್ಮೆ ಸೀರೆ ಉಟ್ಟು, ಕೈಗೆ ಬಂಗಾರದ ಬಳೆ, ಕೊರಳಿಗೆ ಚಿನ್ನದ ಸರ, ಕಿವಿಗಳಿಗೆ ಓಲೆ, ಬೈತಲೆಗೆ ಬೆಳ್ಳಿಯ ಸರಪಳಿಗಳಿಂದ ಸಿಂಗರಿಸಿಕೊಂಡಿರುವ ಸೀತೆ ತನ್ನ ಹೊಲದ ಬೇಲಿಯ ಹತ್ತಿರ ತೊಟ್ಟಿಲಿನ ಆಗಲದ ಉತ್ತ ನೆಲದಲ್ಲಿ ಕಾಲು ಬಿಟ್ಟು ಮಲಗಿರುವುದು ಗೊತ್ತಾಗುತ್ತದೆ. ಅದು ಇಚ್ಛಾಮರಣ ಎಂದು ನಿರ್ಧರಿಸುವ ವಾಲ್ಮೀಕಿ "ಕ್ಷತ್ರಿಯರದು ಸುಡುವ ಪದ್ಧತಿ. ಆದರೆ ಈ ಮಗಳು ದೊರೆತದ್ದು ಭೂಮಿಯಲ್ಲಿ, ಇಚ್ಛೆಯಿಂದ ಹೊಕ್ಕದ್ದು ಭೂಮಿಯನ್ನು. ಅವಳ ಇಚ್ಛೆಗೆ ಭಂಗ ತರಬೇಡಿ. ಅವಳು ಈಗ ಮಲಗಿರುವಂತೆಯೇ ಆಳ ವಸ್ತ್ರಾಭರಣಗಳ ಸಮೇತ ಮಣ್ಣುಮುಚ್ಚಿ ಸಮಾಧಿ ಮಾಡಿಬಿಡಿ. ಅದರ ಮೇಲೊಂದು ಅವಳಿಗೆ ಪ್ರಿಯವಾಗಿದ್ದ ಅಶ್ವತ್ಥ ಗಿಡವನ್ನು ನೆಟ್ಟು ನೀರು ಹಾಕಿ. ಬೆಳೆದು ಭೂಮಿಗೆ ನೆರಳು, ಹಕ್ಕಿ ಪಕ್ಷಿಗಳಿಗೆ ಆಹಾರ ಕೊಡುತ್ತೆ" ಎಂದು ಆದೇಶಿಸುತ್ತಾರೆ.


ಸೀತೆಗೆ ವಿಧವೆ ಅನ್ನಿಸಿಕೊಳ್ಳುವ ಆಶೆ ಇರಲಿಲ್ಲ ಎಂಬುದು ಭೈರಪ್ಪನವರ ನಿಲುವೇ? ಅಥವಾ ತನ್ನನ್ನು ತ್ಯಜಿಸಿದ್ದ ಗಂಡ ಸತ್ತರೂ ತಾನು ವಿಧವೆ ಅಲ್ಲ ಎಂಬುದು ಆಕೆಯ ಅಭಿಪ್ರಾಯ ಎಂಬುದು ಲೇಖಕರ ತರ್ಕವೇ? ಗೊತ್ತಿಲ್ಲ.

ಒಂದಂತೂ ಸ್ಪಷ್ಟ. ಅವರ 'ಆವರಣ' ಕಾದಂಬರಿ ಮುಸಲ್ಮಾನರ ವಿರುದ್ಧದ ದ್ವೇಷದಿಂದ ಕೂಡಿತ್ತು. 'ಕವಲು' ಕೂಡ ಮಹಿಳೆಯರ ವಿರುದ್ಧದ ಕೃತಿಯಾಗಿತ್ತು. 'ಯಾನ' ಅವರ ಬ್ರಾಹ್ಮಣ್ಯ, ಮೌಢ್ಯ, ಪುರುಷಪ್ರಧಾನ ಮನಸ್ಥಿತಿಯ ಪ್ರತಿಬಿಂಬವಾಗಿತ್ತು. ಅವುಗಳಿಗೆ ಹೋಲಿಸಿದರೆ 'ಉತ್ತರಕಾಂಡ' ಎಲ್ಲರೂ ಒಮ್ಮೆ ಓದಬಹುದಾದ ಕೃತಿ ಅನ್ನಿಸುತ್ತದೆ.

ವಾಣಿಜ್ಯ ವಿದ್ಯೆ ಸಂಗಮಿಸಿದ ದಾವಣಗೆರೆ

ಬರುವ ಮಾರ್ಚ್ 12ರಂದು ದಾವಣಗೆರೆಯಲ್ಲಿ ಪಿ. ಲಂಕೇಶರ 82ನೇ ಹುಟ್ಟುಹಬ್ಬ ಮತ್ತು ಪತ್ರಿಕೆಯ 12ನೇ ವಾರ್ಷಿಕೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಇಲ್ಲಿ ದಾವಣಗೆರೆ ಕುರಿತು ಬಿ.ವಿ.ವೀರಭದ್ರಪ್ಪ ಅವರು ಬರೆದಿದ್ದ ಲೇಖನವನ್ನು ಪ್ರಕಟಿಸುತ್ತಿದ್ದೇವೆ.





ಕರ್ನಾಟಕದ ಭೂಪಟದ ಮೇಲೆ ನಟ್ಟ ನಡುವೆ ಉತ್ತರ-ದಕ್ಷಿಣವಾಗಿ ಒಂದು, ಪೂರ್ವ-ಪಶ್ಚಿಮವಾಗಿ ಒಂದು, ಹೀಗೆ ಎರಡು ಸರಳರೇಖೆಗಳನ್ನೆಳೆದರೆ ಅವು ಹೆಚ್ಚುಕಡಿಮೆ ದಾವಣಗೆರೆ ಇರುವೆಡೆಯಲ್ಲಿ ಸಂಧಿಸುತ್ತವೆ. ಇಲ್ಲಿಯ ಜನ ಬೆಂಗಳೂರು-ಮೈಸೂರುಗಳಿಂದ ದೂರವಾದ, ಹುಬ್ಬಳ್ಳಿ-ಧಾರವಾಡಗಳಿಗಿಂತ ಭಿನ್ನವಾದ ತಮ್ಮದೇ ಆದ ಸಂಸ್ಕೃತಿಯನ್ನು ರೂಪಿಸಿಕೊಂಡಿದ್ದಾರೆ. ಹೊರಗಿನಿಂದ ಬಂದ ಯಾರೇ ಆಗಲಿ ಆ ಊರನ್ನು, ಇಲ್ಲಿಯ ಜನರನ್ನು ಕಂಡು ಪುಲಕಿತರಾಗಿ ಉದ್ಗಾರ ತೆಗೆಯುತ್ತಾರೆ.

ಇಂದು ವಾಣಿಜ್ಯ ಮತ್ತು ಶಿಕ್ಷಣಗಳಲ್ಲಿ ಕರ್ನಾಟಕದ ಪ್ರಮುಖ ನಗರಗಳಲ್ಲೊಂದಾಗಿ ಬೆಳೆದಿರುವ ದಾವಣಗೆರೆ ನೂರೈವತ್ತು ವರ್ಷಗಳ ಹಿಂದೆ ಬೇತೂರಿನ ವರ್ತಕ ದೇವೀಶೆಟ್ಟಿ ದೇವಾಲಯಕ್ಕಾಗಿ ದಾನ ಕೊಟ್ಟ ಹೊಲವಾಗಿತ್ತು. ಅವನನ್ನು ಒಂದು ಶಾಸನ "ಧರ್ಮದ ಮೇರು, ಧರ್ಮದ ತವರ್ಮನೆ ಧರ್ಮದ ಬಿತ್ತು, ಶಿವಧರ್ಮ ದೀಪಕಂ, ಧರ್ಮ ಸಹಾಯನೆಂದು ಧರೆ ಕೀರ್ತಿಸುಗುಂ ಶೈವರ ದೇವೀಶೆಟ್ಟಿಯಂ" ಎಂದು ವರ್ಣಿಸಿದೆ. ಅಂದು ಅವನು ದಾನವಾಗಿ ನೀಡಿದ ಹೊಲದಲ್ಲಿ ಇಂದು ದಾನಿಗಳ ಬೆಳೆ ಹುಲುಸಾಗಿ ಬೆಳೆಯುತ್ತಿದೆ. ಇಲ್ಲಿಯ ಶಿಕ್ಷಣ ಸಂಸ್ಥೆಗಳು ಅವು ಸರ್ಕಾರದವಾಗಿರಲಿ ಖಾಸಗಿಯವಾಗಿರಲಿ ಎಲ್ಲ ದಾನದ ನಿಧಿಯಿಂದ ಪ್ರಾರಂಭವಾದುವೇ ಆಗಿವೆ.

ಧರ್ಮರತ್ನಾಕರ ರಾಜನಹಳ್ಳಿ ಮದ್ದುರಾಯಪ್ಪ ವಿಜ್ಞಾನ ಕಾಲೇಜು, ಬ್ರಹ್ಮಪ್ಪ ದೇವೇಂದ್ರಪ್ಪ ತವನಪ್ಪನವರ್ ಇಂಜಿನಿಯರಿಂಗ್ ಕಾಲೇಜು, ಧರ್ಮ ಪ್ರವರ್ತ ರಾಜನಹಳ್ಳಿ ರಾಮಸೆಟ್ಟಿ ಪಾಲಿಟೆಕ್ನಿಕ್, ಅಜ್ಜಂಪುರ ವಿರುಪಾಕ್ಷಪ್ಪ ಕಮಲಮ್ಮ ಮಹಿಳಾ ಕಾಲೇಜು, ರಾಜನಹಳ್ಳಿ ಲಕ್ಷ್ಮಣಶೆಟ್ಟಿ ಲಾ ಕಾಲೇಜು, ಅಜ್ಜಂಪುರ ರಂಗಪ್ಪ ಗೋವಿಂದಸ್ವಾಮಿ ಕಲಾ ಮತ್ತು ವಾಣಿಜ್ಯ ಕಾಲೇಜು, ಮಾಗನೂರು ಸರ್ವಮಂಗಳಮ್ಮ ಬಸಪ್ಪ ಸಂಜೆ ಕಾಲೇಜು, ಮಾಕನೂರು ಮಲ್ಲೇಶಪ್ಪ ಶಿಕ್ಷಣ ಕಾಲೇಜು, ಮೋತಿ ವೀರಪ್ಪ ಕಿರಿಯ ಕಾಲೇಜು, ಇನ್ನು ಎಷ್ಟೋ ಶಾಲೆ ಕಾಲೇಜುಗಳು ಖಾಸಗಿ ವ್ಯಕ್ತಿಗಳ ದಾನದಿಂದ ಸ್ಥಾಪನೆಯಾಗಿವೆ. ಈ ದಾನಿಗಳ ಒಂದು ವಿಶೇಷ ಗುಣವೇನೆಂದರೆ ಆ ಸಂಸ್ಥೆಗಳ ಆಂತರಿಕ ವ್ಯವಹಾರದಲ್ಲಿ ಅವರೆಂದೂ ಕೈಹಾಕುವುದಿಲ್ಲ! ಅತ್ತ ತಿರುಗಿಯೂ ನೋಡುವುದಿಲ್ಲ, ಆಯಾ ಸಂಸ್ಥೆಗಳ ಆಡಳಿತ ಮಂಡಳಿಗಳು ಅವನ್ನು ನಡೆಸಿಕೊಂಡು ಹೋಗುತ್ತವೆ.

ದಾವಣಗೆರೆ ಸಮಾಜ ವರ್ತಕ ಪ್ರಧಾನವಾದುದು. ನೌಕರಿ ಮಾಡುವ ಮಾಧ್ಯಮ ವರ್ಗದವರು, ಕಾರ್ಮಿಕರು ಇಲ್ಲಿ ಗಣನೀಯವಾಗಿದ್ದರ ಅವರೆಲ್ಲರಿಗೂ ವರ್ತಕ ಸಮುದಾಯವೇ ಮೇಲ್ಪಂಕ್ತಿ, ಖಾಸಗಿ ಕಾಲೇಜುಗಳ ಪ್ರಾಧ್ಯಾಪಕರುಗಳೂ ತಮ್ಮ ನಿವೃತ್ತಿಗೆ ಮೊದಲೇ ಬಾರ್ ನಡೆಸುವುದೋ, ದಳ್ಳಾಳಿ ಮಂಡಿ ವ್ಯಾಪಾರವೋ, ಬಡ್ಡಿ ವ್ಯವಹಾರವೋ ಒಂದಲ್ಲ ಒಂದು ವ್ಯಾಪಾರಗಳಲ್ಲಿ ತೊಡಗಿರುತ್ತಾರೆ. ಇಲ್ಲಿ ನಿವೃತ್ತರಾದ ಸರ್ಕಾರಿ ನೌಕರರು, ಕಾರ್ಮಿಕರೂ ಸಹ ನಿವೃತ್ತಿ ವೇತನ, ಕ್ಷೇಮ ನಿಧಿ ಪಡೆದು ನೆಮ್ಮದಿಯ ವಿಶ್ರಾಂತಿ ಜೀವನ ನಡೆಸುವ ಬದಲು ಒಂದಲ್ಲ ಒಂದು ವ್ಯಾಪಾರ ಆರಂಭಿಸಿ ವರ್ತಕ ಸಮುದಾಯದಲ್ಲಿ ಲೀನವಾಗುತ್ತಾರೆ.

ಇಲ್ಲಿನ ಮಂಡಿ ವರ್ತಕರನ್ನು ಅವರ ವಯಸ್ಸಿಗನುಗುಣವಾಗಿ ಮೂರು ವಿಭಾಗ ಮಾಡಬಹುದು. ಅರವತ್ತು ದಾಟಿದ ಯಜಮಾನರು ಮುಂಜಾನೆ ಐದಕ್ಕೆ ಎದ್ದು ವಚನಗಳನ್ನು ಜಪಿಸುತ್ತ ಊರ ಹೊರಗಿನ ತಮ್ಮ ಹೊಲಗಳಿಗೆ ವಾಕ್ ಹೋಗಿ ಅಲ್ಲಿಂದ ತುಂಬೆ ಹೂವನ್ನು ತರಿದು ತರುತ್ತಾರೆ. ಎರಡು ಮೂರು ಮಕ್ಕಳ ತಂದೆಯರಾದ ತಮ್ಮ ಮಕ್ಕಳನ್ನು ಬಯ್ದು ಎಬ್ಬರಿಸುತ್ತಾ ಸ್ನಾನ ಶಿವಪೂಜೆಗೆ ಅಣಿಯಾಗುತ್ತಾರೆ. ಬಕ್ಕಪ್ಪನ ಗುಡಿಗೆ ಹೋಗಿ ಪ್ರದಕ್ಷಿಣೆ ಹಾಕಿ ಅಂಗಡಿಗೆ ಹೋಗಿ ಗುಮಾಸ್ತರನ್ನು ಗದರಿಸಿದರೆ ಅಂದಿನ ಅವರ ಪಾಲಿನ ಅಂಗಡಿ ಕೆಲಸ ಮುಗಿಯಿತು. ಉಳಿದದ್ದನ್ನು ಮಕ್ಕಳು, ಗುಮಾಸ್ತರು ನೋಡಿಕೊಳ್ಳುತ್ತಾರೆ. ಉಳಿದ ದಿನವನ್ನು ಅವರು ಕಳೆಯುವುದು ಹೇಗೆ? ತಮ್ಮ ಸ್ವಾಮಿಗಳೋ, ಮಠವೋ, ಮಠದ ಸಂಸ್ಥೆಗಳೋ ಅವರನ್ನು ಕೈಬೀಸಿ ಕರೆಯುತ್ತವೆ. ಅಲ್ಲಿ ಹೋಗಿ ಸ್ವಾಮಿಗಳ, ಮಠಗಳ ತರಲೆ ತಕರಾರು ರಾಜಕೀಯದಲ್ಲಿ ಮುಳುಗಿದರೆ ಅವರಿಗೆ ಹೊತ್ತು ಹೋಗುವುದೇ ಗೊತ್ತಾಗುವುದಿಲ್ಲ.

ಇನ್ನು ಮೂವತ್ತು ನಲವತ್ತು ಸುಮಾರಿನ ಚಿಕ್ಕದಣಿಗಳು ಏಳು ಗಂಟೆಗೆ ಎದ್ದು ಒಂದೆರಡು ಬೀಡಿ ಅಥವಾ ಸಿಗರೇಟು ಎಳೆದು ಮಾರಿ ತೊಳೆದು ಹೊರಗೆ ಹೊರಟರೆ ಮಹದೇವಪ್ಪನ ಬೆಣ್ಣೆದೋಸೆ ಹೋಟೆಲ್‌ನತ್ತ ಅವರ ಕಾಲುಗಳು ಅವರಿಗೆ ಅರಿವಿಲ್ಲದೇ ಅವರನ್ನು ಎಳೆದುಕೊಂಡು ಹೋಗಿರುತ್ತವೆ. ಇಲ್ಲಿಯ ಮಂಡಿ ವರ್ತಕರಿಗೆ ಉಳಿದ ಊರವರಿಗೆ ಇರುವಂತೆ ಉಡುಪಿ ಹೋಟೆಲ್‌ಗಳ ಮಸಾಲೆ ದೋಸೆಯ ಆಕರ್ಷಣೆ ಅಷ್ಟಿಲ್ಲ, ಇತ್ತೀಚೆಗೆ ಹಳೇಪೇಟೆಯ ಸಂದಿಗೊಂದಿಗಳಲ್ಲೆಲ್ಲಾ ಮಹದೇವಪ್ಪ ಮರಿ ಮಹದೇವಪ್ಪಗಳ ಹೋಟೆಲ್‌ಗಳು ಹುಟ್ಟಿಕೊಂಡಿವೆ. ಒಂದರ್ಧ ಡಜನ್ ಬೆಣ್ಣೆದೋಸೆ ಉದರದಾಳ ಸೇರಿದ ಮೇಲೆ ಮನೆಗೆ ಬಂದು ಸ್ನಾನ ಶಿವಪೂಜೆಗೆ ತೊಡಗುತ್ತಾರೆ. ಇವರು ಶಿವಪೂಜೆಗೆ ತೆಗೆದುಕೊಳ್ಳುವ ಸಮಯ ಯಜಮಾನದರ ಅರ್ಧದಷ್ಟು ಮಾತ್ರ. ನಂತರ ಗುಮಾಸ್ತರೊಡನೆ ನಿಯಂತ್ರಿತ ಮಾರುಕಟ್ಟೆ ಅಂಗಡಿಗಳನ್ನು ಸಂಧಿಸುತ್ತಾ ಭತ್ತ, ಶೇಂಗ, ಹತ್ತಿ ಇತ್ಯಾದಿ ಖರೀದಿಯಲ್ಲಿ ತೊಡಗುತ್ತಾರೆ.

ದಾವಣಗೆರೆಯ ಮಾರುಕಟ್ಟೆಯ ಪಾರಿಭಾಷಿಕ ಪದಕೋಶವನ್ನು ಬಲ್ಲವರೇ ಬಲ್ಲರು. ಈ ಸಂಭಾಷಣೆ ಕೇಳಿ, 'ಏನು ಶಿವ, ಇವತ್ತು ಹೇಗೈತಿ ಪೇಟೆ? ಹತ್ತು ಹತ್ತು ಹದಿನೈದು ಹರಕಂಡುಬಿಡ್ತು ಕಣ್ಲೇ, ಎಂಟುಲಾಟ್, ಐದು ಕೈ ಕಚ್ಚುತವೆ, ಬಿಡ್ಲೇ ಮಿಂಡ್ರಿ, ಮೊನ್ನೆ ಪೇಟೆ ನದರಿತ್ತಲ್ಲಾ ಆಗ ಹದಿನೈದು ಗಿಟ್ಟಿಸ್ಕಂಡಂತೆ. ನಾಕು ದಿನದ ಕೆಳಗೆ ಐದು ಲೋಡು ಸಾಗಿಸಿದಂತೆ, ಅದರಾಗೆ ಬೇರೆ ಇಪ್ಪತ್ತು ಉಳಿದಿವಾವೆ. ಇವತ್ತು ಎಲ್ಲೋ ಐದು ಕೈ ಕಚ್ಚಿದ್ದಕ್ಕೆ ಸತ್ತಂಗ ಮಾಡ್ತಿಯಲ್ಲಲೇ. ಚಾ ಚಾ ಕುಡಿಯಾನ." ಗೆಳೆಯರು ಸೇರಿ ಮಂಡಕ್ಕಿ ಒಗ್ಗರಣೆ, ಮೆಣಸಿನಕಾಯಿ, ಚಾ ಸೇವಿಸುತ್ತಾ ಮೇಲಿನ ಧಾಟಿಯಲ್ಲೇ ಪೇಟೆ ವಿಮರ್ಶೆಗೆ ತೊಡಗುತ್ತಾರ. ಮಿಂಡ್ರಿ, ಸೂಳೆಮಗ, ತಾಯಿಹಡಕ ಎಂಬ ಪದಗಳ ಬಳಕೆಯನ್ನು ಹೊರಗಿನವರು ಕೇಳಿ ಗಾಬರಿಯಾಗಬಹುದು. ಆದರೆ ಇವು ಇಲ್ಲಿಯ ವರ್ತಕರು ತಮ್ಮ ಆತ್ಮೀಯರನ್ನು ಸಲುಗೆಯಿಂದ ಸಂಬೋಧಿಸುವ ರೀತಿ.

ನಂತರ ಅವರವರ ಗುಮಾಸ್ತರೊಡನೆ ಟೆಂಡರ್ ಹಾಕಿಕೊಂಡು ಬರುತ್ತಾರೆ. ಟೆಂಡರ್ ಕೂಗಿದಾಗಲೇ ಯಾವುದು ಎಫೆಸ್ ಮಾಡಬೇಕು, ಯಾವುದು ರೆಫ್ಯೂಜ್ ಮಾಡ್ಬೇಕು ಎಂಬುದನ್ನು ಹಮಾಲರಿಗೆ ಸಂಕೇತ ಭಾಷೆಯಲ್ಲೇ ತಿಳಿಸಿರುತ್ತಾರೆ. ತೂಕ, ತಳಗಾಳು, ಕೈಚೀಟಿ ಒಂದೊಂದರ ಲೆಕ್ಕದಲ್ಲಿ ಖರೀದಿದಾರ, ದಳ್ಳಾಳಿ ಇಬ್ಬರೂ ಸೇರಿ ರೈತನನ್ನು ಸುಲಿಯುತ್ತಾರೆ. ಗೆಳೆಯರ ಮಾತನ್ನು ಕೇಳಿ; ಇವತ್ತು ಎಷ್ಟು ಹೊಡೆದೆಲೇ. ಇಲ್ಲ ಬಿಡಲೆ ಒಂದೇ ಒಂದು ಸಾವಿರ. ತಾಯಿಹಡಕ ಯಾರ ಹತ್ತಿರ ಸೋಗು ಹಾಕ್ತಿಯಲೇ, ಐದು ಸಾವಿರ ಹೊಡೆದು ಸಾವಿರ ಅಂತೀಯ, ಸಂಜೆಗೆ ಸಿಗು.

ಮಧ್ಯಾಹ್ನ ಮನೆಗೆ ಹೋದವರು ಊಟ ಮುಗಿಸಿ ಅಂಗಡಿಗೆ ಹಿಂತಿರುಗುತ್ತಾರೆ. ಮೂರರಿಂದ ಐದರತನಕ ಬಾಕಿ ಪಟ್ಟಿ ತೀರಿಸ್ತಾರೆ. ನಂತರ ಬಾಕಿ ಎತ್ತಾಕೆ ಹೊರಡ್ತಾರೆ. ಜೊತೆಗೆ ಆಗಲೇ ಹೊಟ್ಟೆ ನಂಜಣ್ಣನ ಕಾರ ಮಂಡಕ್ಕಿ, ಮೆಣಸಿನ ಕಾಯಿ ಸೇವನೆಯೂ ಆಗುತ್ತದೆ. ಅಲ್ಲಿಂದ 'ವರ್ತಕರ ಮಂಡಳಿ'ಗೆ ಬಂದು ಬೊಂಬಾಯಿ ಪೇಟೆಧಾರಣೆ ಕುರಿತು ಚರ್ಚೆ ನಡೆಸ್ತಾರೆ. ಬೊಂಬಾಯಿ ಹರಕಂಡದ್ದರಿಂದ ಯಾವ್ಯಾವ ಪಾರ್ಟಿ ಎಷ್ಟೆಷ್ಟು ಕುಸಿದುಬಿದ್ದವು, ನದರಿದಾಗ ಎಷ್ಟು ಎದ್ದು ಕೊಂಡವು ಎಂಬುದನ್ನು ಅವರವರ ಮುಖಛಾಯೆಗಳಿಂದಲೇ ಅಲ್ಲಿ ತಿಳಿದುಕೊಳ್ತಾರೆ.

ಮಬ್ಬುಗತ್ತಲಾಯಿತು ಅಂದರೆ ಗೆಳೆಯರೊಡನೆ ಬಾರ್ ಸೇರಿ ಗಂಟಲು ಮಟ್ಟ ಕುಡಿದು ಅಗ್ದಿ ಹರಾಮಿ ಕನ್ನಡದಲ್ಲಿ ತಮ್ಮ ಸಹವರ್ತಕರ ಏಳುಬೀಳುಗಳನ್ನು ಕುರಿತು ಆಡಿಕೊಳ್ಳುತ್ತಾರೆ. ಅಷ್ಟೊತ್ತಿಗೆ ಕೆಲವರು ಟೈಟಾಗಿ ಮನೆ ದಾರಿ ಹಿಡಿದರೆ, ಮತ್ತೆ ಕೆಲವರು ಪೂರ್ಣ ರಂಗೇರಿ ಇರುಳುರಾಣಿಯರನ್ನು ಹುಡುಕಿಕೊಂಡು ಹನ್ನೊಂದನೇ ಕ್ರಾಸಿನತ್ತ ನಡೆಯುತ್ತಾರೆ. ನಡುರಾತ್ರಿ ಮೀರಿದ ಮೇಲೆ ಅವರು ಹೇಗೆ ಮನೆ ಸೇರುತ್ತಾರೆಂದು ಹೇಳುವುದು ಕಷ್ಟ. ಕೆಲವೊಮ್ಮೆ ಅವರನ್ನು ಚೆನ್ನಾಗಿ ಬಲ್ಲ ಪೊಲೀಸ್ ಪೇದೆಗಳೇ ಅವರನ್ನು ಮನೆ ಸೇರಿಸುವುದೂ ಉಂಟು.


ಇನ್ನು ಕಿರಿಯ ಪೀಳಿಗೆ ಹದಿನಾರು ಹದಿನೆಂಟು ವರ್ಷದ ಈ ಪಡ್ಡೆ ಹುಡುಗರು ಇತ್ತ ಶಾಲೆ ಕಾಲೇಜುಗಳಲ್ಲಿ ಶಿಸ್ತಿನಿಂದ ಕಲಿಯದೆ, ಅತ್ತ ವ್ಯಾಪಾರದ ಹೊರೆಯೂ ಇಲ್ಲದೆ, ಅಂಗಡಿಯಲ್ಲಿ ಇದ್ದ ಒಂದರ್ಧ ಗಂಟೆಯಲ್ಲಿ ಅಂದಿಗಾಗುವಷ್ಟು ಹಾರಿಸುವುದನ್ನು ಮಾತ್ರ ಕಲಿತಿರುತ್ತಾರೆ. ವೀಡಿಯೋ ಅಂಗಡಿ, ಕಮಲಮ್ಮ ಕಾಲೇಜಿನ ಸುತ್ತ ಗಸ್ತು ತಿರುಗುವುದು ಅವರ ಹವ್ಯಾಸ. ವಾರಕ್ಕೊಮ್ಮೆ ಬಾತಿ, ಕೊಂಡಜ್ಜಿಗಳಲ್ಲಿ ಗೆಳೆಯರೊಡನೆ ಪಾರ್ಟಿ ಮಾಡಿ ತಮ್ಮ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುತ್ತಾರೆ. ಒಮ್ಮೊಮ್ಮೆ ಅವರು ಅಂಗಡಿಯಿಂದ 4-5 ಸಾವಿರ ಹಾರಿಸೊಕಂಡು ತಿಂಗಳುಗಟ್ಟಲೆ ನಾಪತ್ತೆಯಾಗುವುದೂ ಉಂಟು. ಹಾಗೆ ನಾಪತ್ತೆಯಾಗಿ ನಂತರ ಹೇಗೋ ಮನೆ ಸೇರಿದ ಮಗನನ್ನು ಕುರಿತು ಮನೆಯ ಯಜಮಾನರು ಹೇಳ್ತಾರೆ; 'ಕೋಟೇಶ್ರಿ ಅಡ್ಡದಾರಿ ಹಿಡಿದನಲ್ಲೇ. ಯಾವುದಾದರೂ ಗುದ್ದಿ ಕಟ್ಟದೆ ಹೋದರೆ ಅವನು ಕೆಟ್ಟು ಹೋಗ್ತಾನಲೇ'. ತಂದೆ ಮಗನನ್ನು ಮಠದ ಸ್ವಾಮಿಗಳ ಹತ್ತಿರ ಎಳೆದು ತಂದು ಅಡ್ಡ ಬೀಳಿಸ್ತಾನೆ 'ನೋಡಿ ಬುದ್ಧಿ ಈ ಸೂಳೇ ಮಗ ಅಡ್ಡದಾರ್ತಿ ಹಿಡಿದಿದಾನೆ. ಸ್ವಲ್ಪ ಬುದ್ಧಿ ಹೇಳ್ರಿ ಬುದ್ಧಿ.' 'ಏನ್ಲೇ, ನಿಮ್ಮಪ್ಪ ಅಂತಾನಲ್ಲ. ನಿಮ್ಮವ್ವ ಅಂತಾಳಲ್ಲ, ಅವ್ರ ಹೊಟ್ಟೇಗೆ ನೀನೆಂತ ಸೂಳೆಮಗ ಹುಟ್ಟಿದೆಲ್ಲೇ, ಲೇ ಮುರಿಗೇಶಿ ನಿನ್ನ ಮಗಂಗೆ ಮೊದಲೊಂದು ಗುದ್ದಿ ಕಟ್ಟು. ಇಲ್ದಿದ್ರೆ ಇವನು ಪೂರಾ ಕೆಟ್ಟು ಹೋಗ್ತಾನೆ. ಆನೆಕೊಂಡದ ಪರಮೇಶಿ ಬಂದಿದ್ದ. ಮಗಳಿಗೊಂದು ವರ ನೋಡಿ ಬುದ್ಧಿ ಅಂತ. ಬೇಕಾದ್ರೆ ಹೇಳಿಕಳಿಸ್ತಿನಿ ನೋಡಿ..'

ದಾವಣಗೆರೆಯ ಒಂದು ಆಟೋದ ಮೇಲಿನ ಘೋಷಣೆ ಈ ರೀತಿ ಇದೆ; 'ಹಮ್ ಕಿಸೀಸೆ ಕಮ್ ನಹಿ'. ಬಹುಶಃ ಇದು ಇಡೀ ದಾವಣಗೆರಿಗರ ಆಂತರಿಕ ನಿಲುವಿನ ದ್ಯೋತಕವೆನ್ನಬಹುದು. ಊರಿನ ಒಳ್ಳೆಯದಕ್ಕೆ ಎಲ್ಲರೂ ಒಂದಾಗಿ ನಿಲ್ತಾರೆ. ಚಿತ್ರದುರ್ಗ ಮತ್ತು ದಾರಣಗೆರೆಗಳಲ್ಲಿ ಒಂದೇ ಸಾರಿ ಸರ್ಕಾರ, ಕಿರಿಯ ಕಾಲೇಜುಗಳನ್ನು ಸ್ಥಾಪಿಸಿತ್ತು, ಜಿಲ್ಲಾ ಕೇಂದ್ರವೆಂಬ ಕಾರಣಕ್ಕಾಗಿ ಚಿತ್ರದುರ್ಗ ಕಾಲೇಜನ್ನು 1958 ರಲ್ಲಿ ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿಸಲು ಸರ್ಕಾರ ತೀರ್ಮಾನಿಸಿತು. ಮದ್ದೂರಾಯಪ್ಪನವರು ಒಂದು ಲಕ್ಷ ದಾನ ನೀಡಿದ್ದರೂ ದಾವಣಗೆರೆಯ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜಾಗಿ ಮಾಡಲು ನಿರಾಕರಿಸಿತು.

ಸ್ವಾಭಿಮಾನಿಗಳಾದ ದಾವಣಗೆರೆಗರಿಗೆ ಇದರಿಂದ ಅವಮಾನ ವಾದಂತಾಯಿತು. ಅವರು ಕೂಡಲೆ ಬಾಪೂಜಿ ವಿದ್ಯಾಸಂಸ್ಥೆ ಎಂಬ ಹೆಸರಿನಲ್ಲಿ ಒಂದು ಸಂಘವನ್ನು ಸ್ಥಾಪಿಸಿ ಅದೇ ವರ್ಷ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಿಯೇ ಬಿಟ್ಟರು. ಎರಡು ವರ್ಷಗಳ ನಂತರ ಪ್ರಥಮ ದರ್ಜೆ ಕಾಲೇಜನ್ನು ಸರ್ಕಾರವೇ ನಡೆಸಲಿ ಇಲ್ಲವೆ ಸರ್ಕಾರಿ ಕಿರಿಯ ಕಾಲೇಜನ್ನು ಬಾಪೂಜಿ ವಿದ್ಯಾಸಂಸ್ಥೆಗೇ ಬಿಟ್ಟು ಕೊಡಲಿ ಎಂದು ಒತ್ತಾಯ ಮಾಡಿದರು. ಸರ್ಕಾರ ಸರ್ಕಾರಿ ಕಾಲೇಜನ್ನೇ 99 ವರ್ಷಗಳ ಕಾಲ ಬಾಪೂಜಿ ಸಂಸ್ಥೆಗೆ ಲೀಸ್ ಮೇಲೆ ಬಿಟ್ಟುಕೊಟ್ಟಿತು.


ಪ್ರಾರಂಭದಲ್ಲಿ ಸ್ವಲ್ಪ ಕಾಲ ಖರ್ಚುಗಳನ್ನು ಸರಿ ತೂಗಿಸುವುದು ಸಂಸ್ಥೆಗೆ ಕಷ್ಟವಾಯಿತು. ಆದರೆ ಕೆಲವು ಗಣ್ಯವರ್ತಕರು ತಮ್ಮ ಹೆಸರಿನ ಮೇಲೆ ಬ್ಯಾಂಕಿನಿಂದ ಓವರ್ ಡ್ರಾಫ್ಟ್ ಸೌಲಭ್ಯ ಪಡೆದು ಅಧ್ಯಾಪಕರಿಗೆ ಒಂದು ಕಾಸೂ ಕಡಿಮೆ ಇಲ್ಲದಂತೆ ಒಂದನೇ ತಾರೀಖಿಗೇ ಸಂಬಳ ಕೊಡುತ್ತಿದ್ದರು. ಒಂದು ದಿನ ತಡವಾದರೆ ಊರಿನ ಮರ್ಯಾದೆಯೇ ಹೋಯಿತೆಂದು ಹಣೆ ಚಚ್ಚಿಕೊಳ್ಳುತ್ತಿದ್ದರು. ದಿನೇದಿನೇ ಖರ್ಚು ಹೆಚ್ಚಾದಾಗ ಕೆಲವರು ಈ ಕಾಲೇಜು ವ್ಯವಹಾರ ಲಾಭದಾಯಕವಲ್ಲ, ಮಣಿಪಾಲದ ಪೈಗಳಿಗೆ ಕೊಟ್ಟುಬಿಡೋಣ ಎಂದು ಸಲಹೆ ಮಾಡಿದರು. ಮತ್ತೊಮ್ಮೆ ಊರವರ ಸ್ವಾಭಿಮಾನ ಕೆರಳಿತು. ಪೈಗಳು ಅಷ್ಟು ಕಾಲೇಜು ನಡೆಸುವುದಾದರೆ, ನಾವೇಕೆ ನಡೆಸಬಾರದು, ನಾವೇನು ಕಮ್ಮಿ ಎಂದು ತಲೆಕೆಡಿಸಿಕೊಂಡರು. ಅವರಲ್ಲಿ ಒಬ್ಬರು ಪೈಗಳ ಯಶಸ್ಸಿನ ಗುಟ್ಟು ಇರುವುದು ಅವರ ಮೆಡಿಕಲ್ ಕಾಲೇಜಿನಲ್ಲಿ, ನಾವೇಕೆ ಒಂದು ಮೆಡಿಕಲ್ ಕಾಲೇಜು ಸ್ಥಾಪಿಸಬಾರದು ಎಂದರು. ಕೆಲವರು ಅವರನ್ನು ಮೆಣಸಿನಕಾಯಿ ಮಂಡಕ್ಕಿ ಜನ ಮೆಡಿಕಲ್ ಕಾಲೇಜು ಮಾಡ್ತಾರಂತೆ ಗೇಲಿ ಮಾಡಿದರು. ಅವರ ಅದೃಷ್ಟಕ್ಕೆ ಆಗ ಅವರಿಗೆ ಅನುಕೂಲವಾದ ಸರ್ಕಾರ ರಾಜ್ಯ ಕೇಂದ್ರಗಳೆರಡರಲ್ಲೂ ಇತ್ತು, 1965 ರಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭವಾಗಿಯೇ ಬಿಟ್ಟಿತು. ಅದರ ನೆರಳಲ್ಲಿ ಇತರ ಕಾಲೇಜುಗಳೂ ಒಂದಾದಮೇಲೆ ಒಂದು ಮೇಲೆದ್ದು ನಿಂತವು. ದಾವಣಗೆರೆ ಮಾಯಾನಗರದಂತೆ ಬೆಳೆಯಿತು.

ಒಮ್ಮೆ ಬಾಪೂಜಿ ವಿದ್ಯಾಸಂಸ್ಥೆಯ ಅಧ್ಯಾಪಕರಿಗೆ ತಲಾ ಎರಡು ಮೂರು ಸಾವಿರದಂತೆ ಸರ್ಕಾರದಿಂದ ಅರಿಯರ್ಸ್ ಬಂತು. ಸಂಸ್ಥೆಯ ಆಡಳಿತ ಮಂಡಳಿ ಈ ಹಣವನ್ನು ರಚನಾತ್ಮಕವಾಗಿ ವಿನಿಯೋಗಿಸಲು ಒಂದು ಸಹಕಾರಿ ಬ್ಯಾಂಕನ್ನು ಸ್ಥಾಪಿಸಲು ಒಂದು ಯೋಜನೆಯನ್ನು



ಂದಿಟ್ಟಿತು. ಅಧ್ಯಾಪಕರು ಸಂತೋಷದಿಂದ ಸಿದರು. 1970 ರಲ್ಲಿ ಬಾಪೂಜಿ ಸಹಕಾರಿ ಕ್ ಸ್ಥಾಪನೆಯಾಯಿತು. ಇಂದು ಅಲ್ಲಿ ಕೋಟಿಗಟ್ಟಲೆ ಣ ಇದ್ದು ಇಡೀ ಕರ್ನಾಟಕದಲ್ಲೇ ಅತಿಹೆಚ್ಚು ಟು ಇರುವ ಸಹಕಾರಿ ಬ್ಯಾಂಕ್ ಆಗಿದೆ. ದಾವಣಗೆರೆ ದ ವಿವಿಧ ಬಡಾವಣೆ, ಮಾರುಕಟ್ಟೆಗಳಲ್ಲಿ ಅದರ ರು ಶಾಖೆಗಳಿವೆ. ಕಳೆದ ವರ್ಷ ಅದರ ನಿವ್ವಳ ಹದಿನಾರು ಲಕ್ಷ. ಸಹಕಾರಿ ಸಂಸ್ಥೆಗಳು ಸ್ವಾಹಾ ಗಳಾಗಿರುವ ಈ ಕಾಲದಲ್ಲಿ ಇದೊಂದು ಅದ್ಭುತ ನೆಯಾಗಿದೆ.

ಈ ಬ್ಯಾಂಕಿನ ಆಡಳಿತ ಮಂಡಳಿ ಬಾಪೂಜಿ ಸಂಸ್ಥೆಯ ನೌಕರರು ಮತ್ತು ಆಡಳಿತ ಮಂಡಳಿಯಿಂದ ವಾಗಿರುತ್ತದೆ. ಪ್ರಾರಂಭದಲ್ಲಿ ಚುನಾವಣೆಗಳು ನಡೆಯದೆ ನುಮತದಿಂದ ಆಯ್ಕೆಯಾಗುತ್ತಿತ್ತು, ನೌಕರರ ಪರವಾಗಿ ಪ್ರಿನ್ಸಿಪಾಲರುಗಳೇ ಆಡಳಿತ ಮಂಡಳಿಯಲ್ಲಿರುತ್ತಿದ್ದರು. ಅಧ್ಯಾಪಕರು ಅಗತ್ಯ ಕಾರಣಗಳಿಗೆ ಸಾಲ ಕೇಳಿದರೆ ತಲು ಚೌಕಾಸಿ ಮಾಡಲಾಗುತ್ತಿತ್ತು, ಅಧ್ಯಾಪಕರಲ್ಲಿ ಮಾಧಾನ ಭುಗಿಲೆದ್ದಿತು. ಆದರೂ ಆಡಳಿತ ಮಂಡಳಿ ರರ ಪರವಾಗಿ ಪ್ರಿನ್ಸಿಪಾಲರ ಹೆಸರುಗಳನ್ನೇ ಸೂಚಿಸಿದರು. ರರು ಅದನ್ನು ಪ್ರತಿಭಟಿಸಿ ಮೂವರು ಅಧ್ಯಾಪಕರನ್ನು ರು ನಿಲ್ಲಿಸಿದರು. ಅಧ್ಯಾಪಕರ ನಾಮಕರಣ ತೆಗೆಯಲು ಆಡಳಿತ ಮಂಡಳಿ ಮಾಡಿದ ಪ್ರಯತ್ನ ಶಸ್ವಿಯಾಗಲಿಲ್ಲ. ಚುನಾವಣೆ ನಡೆದು ಆಡಳಿತ ಡಳಿಯ ಅಭ್ಯರ್ಥಿಗಳು ಸೋತು ನೌಕರರ ಪ್ರತಿನಿಧಿಗಳು ಯಾದರು. ಇಂದು ಬಾಪೂಜಿ ವಿದ್ಯಾಸಂಸ್ಥೆಯಲ್ಲಿ ಸಲ್ಲಿಸುವ ನೌಕರರಿಗೆ ಅವರವರ ಆದಾಯ ಮತ್ತು ತ್ಯಗಳಿಗೆ ಅನುಗುಣವಾಗಿ 10-15 ಸಾವಿರದವರೆಗೆ ಂದಾಗ ಸಾಲ ಸಿಗುತ್ತದೆ. ತಿಂಗಳ ಕಂತುಗಳಲ್ಲಿ ಳದಿಂದ ಮರುಪಾವತಿಯಾಗುತ್ತದೆ.



ಮತ್ತೊಮ್ಮೆ ಅಧ್ಯಾಪಕರಿಗೆ ಎರಡು ಮೂರು ಸಾವಿರ ರ್ಸ್ ಬಂತು. ಆಗ ಬಾಪೂಜಿ ವಿದ್ಯಾಸಂಸ್ಥೆಯ ನೌಕರರ ನಿರ್ಮಾಣ ಸಂಘ ಸ್ಥಾಪನೆಯಾಯಿತು. ಕಡಿಮೆ ಯಲ್ಲಿ ಬಾಪೂಜಿ ವಿದ್ಯಾಸಂಸ್ಥೆ 25 ಎಕರೆ ನಿವೇಶನ ನಿರ್ಮಾಣ ಸಂಘಕ್ಕೆ ನೀಡಿತು. ಲೋಕೋಪಯೋಗಿ ಖೆಯಲ್ಲಿ ದಕ್ಷ ಮತ್ತು ಪ್ರಾಮಾಣಿಕ ಇಂಜಿನಿಯರ್ ಎು ಹೆಸರು ಮಾಡಿದ್ದ ಬಾತಿ ರೇವಣಸಿದ್ದಪ್ಪ ಅವರ ಯನ್ನು ಎರವಲು ಪಡೆಯಲಾಯಿತು. ಅವರು ಪೂಜಿ ವಿದ್ಯಾನಗರ ಯೋಜನೆಯನ್ನು ತಯಾರಿಸಿದರು. ಟಕ ಗೃಹ ನಿರ್ಮಾಣ ಮಂಡಲಿ ಮತ್ತು ಕರ್ನಾಟಕ ನಿರ್ಮಾಣ ನಿಗಮಗಳಿಂದ ಹಣ ಮಂಜೂರಾಯಿತು. ವರ್ಷಗಳಲ್ಲಿ 74 ಅಧ್ಯಾಪಕರಿಗೆ ಮತ್ತು 60 ಜನ ರಿ ಮತ್ತು ಸೇವಾ ಸಿಬ್ಬಂದಿಗೆ ಅತ್ಯಾಧುನಿಕ ಗಳಾದವು. ರೇವಣಸಿದ್ದಪ್ಪನವರು ಪ್ರತಿಯೊಂದು ಮನೆ ಂದೆ ನಿಂತು ಸ್ವಂತ ಮನೆಗಿಂತ ಹೆಚ್ಚು ನಿಗಾವಹಿಸಿ ದರು. ಅತಿಕಡಿಮೆ ಬೆಲೆಯಲ್ಲಿ ಗಟ್ಟಿಮುಟ್ಟಾದ ಅಂದದ ಗಳನ್ನೂ ಪಡೆದ ನೌಕರರು ರೇವಣಸಿದ್ದಪ್ಪನವರಿಗೆ ಕೃತಜ್ಞತೆಯ ದ್ಯೋತಕವಾಗಿ ಸಂಘದ ಖರ್ಚಿನಲ್ಲೇ ನಗರದಲ್ಲಿ ಒಂದು ಮನೆ ಕಟ್ಟಿಸಿ ಅವರಿಗೆ ನೀಡಲು ನುಮತದ ನಿರ್ಣಯವನ್ನು ಅಂಗೀಕರಿಸಿದರು. ಜೆಯಾಗಿ ಏನನ್ನೂ ಪಡೆಯಲು ಒಪ್ಪದ ಣಸಿದ್ದಪ್ಪನವರು ವಿದ್ಯಾನಗರದ ಸಮೀಪದಲ್ಲೇ ಒಂದು ಶನ ಕೊಂಡರು. ಅವರಲ್ಲಿ ಮನೆ ಕಟ್ಟಲು ಲ್ಲವೆಂದು ತಿಳಿದ ವಿದ್ಯಾನಗರ ನಿವಾಸಿಗಳು ಒಂದು ತ್ತು ನೀಡಲು ತೀರ್ಮಾನಿಸಿದರು. ಅದಿನ್ನೂ ಪೂರ್ಣ ವಾಗುವ ಮೊದಲೇ ಆ ಸಂಗತಿ ರೇವಣಸಿದ್ದಪ್ಪನವರಿಗೆ ಟಿತು. ಆ ನಿಧಿಯನ್ನು ನಾನು ಖಂಡಿತ ಸ್ವೀಕರಿಸು ಲ್ಲ, ನನಗೆ ಗೊತ್ತಾಗದಂತೆ ಅದನ್ನು ನನ್ನ ಕುಟುಂಬದ ಗಾದರೂ ನೀಡಿದರೆ ನನಗೆ ವಿಷ ನೀಡಿದಂತೆ ಎಂದು ದ್ದರಿಂದ ಮುಂದೇನು ಮಾಡಬೇಕೆಂದು ತೋಚದೆ ನಗರದ ನಿವಾಸಿಗಳು ಚಿಂತನೆಗೊಳಗಾಗಿದ್ದಾರೆ.

ಇಂತಹ ಪ್ರಾಮಾಣಿಕ ಇಂಜಿನಿಯರ್ ಸೇವೆ ಸರ್ಕಾರಕ್ಕೆ ಕವಾಗಿದೆ. ಕೇವಲ ಸಹಿ ಮಾಡಿ ಸಂಬಳ ಮುವಂತಹ ಒಂದು ಕೆಲಸವಿರುವ ಜಾಗದಲ್ಲಿ ಅವರನ್ನು ನೇಮಿಸಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ವರಿರುತ್ತಾರೆಂದು ಅವರನ್ನು ನೋಡದವರು ಪ್ಪುದು ಕಷ್ಟ.


ಬಾಪೂಜಿ ವಿದ್ಯಾಸಂಸ್ಥೆಯ ಮೂಲಕ ದಾವಣಗೆರೆಯ ಸಾಂಸ್ಕೃತಿಕ ವಿಕಾಸಕ್ಕೆ ಕಾರಣರಾದ ಅನೇಕರಲ್ಲಿ ಕಾಸಲ ಶ್ರೀನಿವಾಸ ಶೆಟ್ಟಿ, ಮಾಗನೂರು ಬಸಪ್ಪ, ಪಾಂಡುರಂಗ ಸಿರೂರ್, ಡಾ. ಎಚ್.ಕೆ. ಕೃಷ್ಣಸ್ವಾಮಿ, ಎಸ್. ಕೊಟ್ರಬಸಪ್ಪ ಮತ್ತು ಶಾಮನೂರು ಶಿವಶಂಕರಪ್ಪ ಮುಖ್ಯರು. ಇವರೆಲ್ಲ ಬಾಪೂಜಿ ವಿದ್ಯಾಸಂಸ್ಥೆಯಿಂದ ಸಾಕಷ್ಟು ಪ್ರತಿಷ್ಠೆ ಮತ್ತು ಪ್ರಯೋಜನಗಳನ್ನೂ ಪಡೆದಿದ್ದಾರಾದರೂ ದಾವಣಗೆರೆಯ ನಾಗರಿಕರು ಅವರಲ್ಲಿಟ್ಟಿರುವ ವಿಶ್ವಾಸಕ್ಕೆ ಕುಂದು ತರದಂತೆ ನಡೆದುಕೊಂಡಿದ್ದಾರೆ. ದಾವಣಗೆರೆ ಬಹುಮುಖವಾಗಿ ಬೆಳೆಯಲು ಶ್ರಮಿಸಿದ್ದಾರೆ.

ಬೆಳವಣಿಗೆ ಎಂದಾಗ ಅದರ ಅನಿಷ್ಟ ಮುಖಗಳೂ ಅದರಲ್ಲಿ ಸೇರಿರುತ್ತವೆ. ವಿಐಪಿ ಬ್ರೀಫ್‌ಕೇಸುಗಳನ್ನು ಹಿಡಿದು ಹೊಸ ಹೊಸ ಜನ ಊರಲ್ಲಿ ಅಡ್ಡಾದಿಡ್ಡಿಯಾಗಿ ಓಡಾಡಲು ಪ್ರಾರಂಭಿಸಿದರು ಅಂದರೆ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶ ಕಾಲ ಎಂದು ದಾವಣಗೆರೆಯವರು ತಿಳಿಯುತ್ತಾರೆ. ಹೋಟೆಲ್ ರೂಮುಗಳು ಸುಣ್ಣಬಣ್ಣ ಬಳಿದುಕೊಂಡು ಹೊಸ ಗಿರಾಕಿಗಳನ್ನು ಆಕರ್ಷಿಸಲು ಸಿದ್ಧವಾಗುತ್ತವೆ. ಆಟೋ ಚಾಲಕರಿಗೆ ಇದು ಸುಗ್ಗಿಯ ಕಾಲ. ಮೆಡಿಕಲ್ ಕಾಲೇಜಿನ ಉದ್ಯಮದಿಂದ ಯಾರಿಗೆಷ್ಟೇ ಲಾಭವಾಗಿರಲಿ, ಇಲ್ಲಿಗೆ ವರ್ಗವಾಗಿ ಬರುವ ಸರ್ಕಾರಿ ನೌಕರರಿಗೆ ಮಾತ್ರ ತುಂಬಾ ತೊಂದರೆಯಾಗುತ್ತದೆ. ಯದ್ವಾತದ್ವಾ ಮನೆ ಬಾಡಿಗೆಯಿಂದ ಅವರು ತತ್ತರಿಸಿಹೋಗುತ್ತಾರೆ. 200 ರೂ. ಕೊಡಬಹುದಾದ ಮನೆಗೆ 400 ರೂ. ಮಾತಾಡಿ ಮುಂಗಡ ಕೊಡಲು ಹೋಗುವುದರೊಳಗೆ ಅದೇ ಮನೆಯನ್ನು ಪಂಜಾಬಿನ ಅಥವಾ ಕೇರಳದ ವೈದ್ಯ ವಿದ್ಯಾರ್ಥಿಗಳು 500 ರೂ.ಗೆ ಹಿಡಿದು 5000 ರೂ. ಮುಂಗಡ ಕೊಟ್ಟಿರುತ್ತಾರೆ. ವೈದ್ಯ ವಿದ್ಯಾರ್ಥಿಗಳು ಬಂದು ಮನೆ ಹಿಡಿದರು ಅಂದರೆ ಆ ಬೀದಿಯ ನೆಮ್ಮದಿ ಹಾಳಾದಂತೆಯೇ ಸರಿ. ಲಕ್ಷ, ಎರಡು ಕೊಟ್ಟು ವೈದ್ಯಕೀಯ ಕಾಲೇಜು ಸೇರಿದ ಅವರಿಗೆ ನೆರೆಹೊರೆಯವರ ನೆಮ್ಮದಿಯ ಬಗ್ಗೆ ಲಕ್ಷ್ಯವೆಲ್ಲಿಂದ ಬರಬೇಕು. ರಾತ್ರಿ 12-1 ಗಂಟೆಯಲ್ಲೂ ಗಂಟಲುಮಟ್ಟ ಕುಡಿದು ಡಿಸ್ಕೋ ಸಂಗೀತದ ತಾಳಕ್ಕೆ ಕುಣಿಯುವುದು, ಕೇಕೆ ಹಾಕುವುದು ನಂತರ ಹೊಡೆದಾಡಿ ರಕ್ತ ಸುರಿಸುವುದೂ ಸಾಮಾನ್ಯ.

ಕೆಲವು ವರ್ಷಗಳ ಹಿಂದೆ ನಾನಿದ್ದ ಮನೆಯ ಹಿಂದಿನ ಮನೆಯಲ್ಲಿ ನಾಲ್ಕು ಜನ ಮಲೇಶಿಯಾದ ವೈದ್ಯ ವಿದ್ಯಾರ್ಥಿಗಳಿದ್ದರು. ಅವರಲ್ಲಿ ಇಬ್ಬರು ಹುಡುಗರು, ಇಬ್ಬರು ಹುಡುಗಿಯರು. ಒಬ್ಬ ಚೀನಿ ಮೂಲದ ಹುಡುಗಿಯನ್ನು ಬಿಟ್ಟರೆ ಉಳಿದವರೆಲ್ಲ ಭಾರತೀಯ ಮೂಲದವರು. ನಾಲ್ವರೂ ಹುಟ್ಟಿನಿಂದ ಮಲೇಶಿಯಾದ ನಾಗರಿಕರು. ಎಲ್ಲರೂ ಒಂದೇ ಕುಟುಂಬದವರಂತೆ ಇದ್ದರು. ಚೀನಿ ಹುಡುಗಿ ಈಜು ಸ್ಪರ್ಧೆಯಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿದ್ದಳು. ನನ್ನ ಮಕ್ಕಳು ಆಗಾಗ ಅವರ ಮನೆಯಲ್ಲಿ ನುಗ್ಗಿ ಅವರು ಕುಂದವಾಡದ ಕೆರೆಯಿಂದ ಬೇಟೆಯಾಡಿ ತಂದ ಕೊಕ್ಕರೆಗಳ ಪುಕ್ಕ ತರಿಯುವುದನ್ನು ಕಣ್ಣರಳಿಸಿ ನೋಡುತ್ತಾ ಅವರೊಡನೆ ಸಲುಗೆಯಿಂದಿದ್ದರು.

ಒಂದು ಮಧ್ಯಾಹ್ನ ಚೀನಿ ಹುಡುಗಿ ಕೆದರಿದ ಕೂದಲಿನಿಂದ ಅಳುತ್ತಾ ಒಳಬಂದು ``My boy, my boy' ಎಂದು ಬಿಕ್ಕಿದಳು. ನಾನು 'ಏನಾಯ್ತು' ಎಂದೆ. He has quarelled with me and taken pills' ಎಂದಳು. ನಾನು ಬರೀ ಮೈಮೇಲೆ ಒಂದು ಟವಲು ಎಳೆದುಕೊಂಡು ಓಡಿದೆ. ಅವಳ ಜೊತೆ ಹುಡುಗ ಮಂಚದಿಂದ ಕೆಳಗೆ ಬಿದ್ದು ಉರುಳಾಡುತ್ತಿದ್ದ. ಇನ್ನೊಂದು ಜೋಡಿ ಮನೆಯಲ್ಲಿರಲಿಲ್ಲ. ಕೂಡಲೆ ಓಡಿಬಂದು ರಿಕ್ಷಾ ತಂದು ಅದರಲ್ಲಿ ಅವನನ್ನು ನಾಲ್ಕು ಜನ ಎತ್ತಿ ಹಾಕಿ ಆಸ್ಪತ್ರೆಗೆ ಸಾಗಿಸಿದೆವು. ಹೊಟ್ಟೆ ತೊಳೆದು ಚಿಕಿತ್ಸೆ ನೀಡಿದ ಮೇಲೆ ಅವನು ಆರಾಮಾದ. ಎರಡು ದಿನದ ನಂತರ ಮನೆಗೆ ಬಂದ ಮೇಲೆ ಅವನನ್ನು ಕೇಳಿದೆ. 'ಯಾಕಪ್ಪ ಹೀಗೆ ಮಾಡಿದೆ. ನಿನ್ನ ಹುಡುಗಿ, ಹೆದರಿ ಕಂಗಾಲಾಗಿದ್ದಳಲ್ಲ' ಎಂದೆ. 'ಹಾಗೇ ಆಗಬೇಕು. ಹಗಲು ರಾತ್ರಿ ಒಂದೇ ಸಮನೆ ಜಗಳ ಮಾಡುತ್ತಿದ್ದಳು. ಅವಳಿಗೆ ಬುದ್ಧಿ ಕಲಿಸಲು ಹಾಗೆ ಮಾಡಿದೆ' ಎಂದ. 'ಒಳ್ಳೆ ತಮಾಷೆ ಕಣಯ್ಯ. ಹೆಚ್ಚು ಕಡಿಮೆಯಾಗಿದ್ರೆ ನಿನ್ನ ಪ್ರಾಣನೇ ಹೋಗ್ತಿತ್ತಲ್ಲ' ಅಂದೆ. 'ನನಗೆ ಗೊತ್ತಿತ್ತು, ಏನೂ ಆಗಲ್ಲ ಅಂತ' ಅಂದ. ಆಮೇಲೆ ಅವರು ಎರಡು ಮೂರು ವರ್ಷ ಅದೇ ಮನೆಯಲ್ಲಿ ಹೆಚ್ಚು ಗಲಾಟೆ ಮಾಡದೆ ಇದ್ದು ವ್ಯಾಸಂಗ ಮುಗಿಸಿ ತಮ್ಮ ದೇಶಕ್ಕೆ ವಾಪಾಸಾದರು.

ಇಲ್ಲಿಯ ಕೆಲವು ಬಡಾವಣೆಗಳಲ್ಲಿ ಒಂದು ಮನೆ ಖಾಲಿಯಾದರೆ ಅದು ವೈದ್ಯ ವಿದ್ಯಾರ್ಥಿಗಳಿಗೆ ಸಿಗುವುದನ್ನು ತಪ್ಪಿಸಲು, ಸರಿಯಾದ ಬಾಡಿಗೆದಾರನನ್ನೂ ಹುಡುಕುವ ಕೆಲಸವನ್ನು ನೆರೆಹೊರೆಯವರೇ ತಮ್ಮ ಹೆಗಲಮೇಲೆ ಹೊತ್ತುಕೊಳ್ಳುತ್ತಾರೆ. ■




ಸ್ವಚ್ಛ ಭಾರತ!

ಇನ್ನೇನು ಬರಲಿರುವ ಸ್ಕೂಲ್ ಬಸ್ ಹಿಡಿಯಲು ರಸ್ತೆ ಬಳಿ ನಿಂತು ಕಾಯುತ್ತಿರುವ ಆರನೇ ಕ್ಲಾಸಿನ ಕಾನ್ವೆಂಟ್ ಹುಡುಗನ ಕಣ್ಣಿಗೆ, ಎದುರಲ್ಲೇ ಇರುವ ಕಾಂಪೌಂಡ್ ಗೋಡೆಯೆಡೆಗೆ ತಿರುಗಿಕೊಂಡು ಮೂತ್ರ ವಿಸರ್ಜಿಸುವವರು ಬಿದ್ದರು. "ಪ್ರತಿ ದಿನ ಇವ್ರು ಹುಚ್ಚೆ ಹುಯ್ಯೋದನ್ನ ಬೆಳಿಗ್ ಬೆಳಿಗ್ಗನೇ ನೋಡ್ಬೇಕು, ಎಂಥ ಕರ್ಮನಪ್ಪ ನಂದು" ಅಂತ ಒಳಗೊಳಗೆ ಗೊಣಗಿಕೊಳ್ಳಲಾರಂಭಿಸಿದ್ದ.

ಹತ್ತು ನಿಮಿಷ ಕಾದರೂ ಬಾರದ ಸ್ಕೂಲ್ ಬಸ್ಸಿನ ಡ್ರೈವರ್‌ಗೆ ಒಂದಷ್ಟು ಬೈದುಕೊಂಡು ಸಮಯ ತಳ್ಳುವಾಗಲೇ ಹೊಟ್ಟೆಯೊಳಗಿಂದ ಚಿತ್ರವಿಚಿತ್ರ ಶಬ್ದಗಳು ಹೊರಹೊಮ್ಮಲಾರಂಭಿಸಿದವು. "ಅಯ್ಯೋ ಬೆಳಿಗ್ ಬೆಳಿಗ್ಗನೇ ಹೊಟ್ಟೆ ಸೌಂಡ್ ಮಾಡ್ತಿದ್ಯಲ್ಲಪ್ಪ" ಅಂತ ಯೋಚಿಸಲು ಶುರುವಿಟ್ಟುಕೊಳ್ಳುವ ಹೊತ್ತಿಗಾಗಲೇ, ಪರಿಸ್ಥಿತಿ ಅವನ ಕೈ ಮೀರುವ ಹಂತ ತಲುಪಿತ್ತು.

ಟಿಫನ್ ಕ್ಯಾರಿಯರ್ ಇರುವ ಬ್ಯಾಗ್‌ನಿಂದ ನೀರಿನ ಬಾಟಲ್ ತೆಗೆದುಕೊಂಡು ಅಲ್ಲೇ ಇದ್ದ ಅಂಗಡಿಯಲ್ಲಿ ಸ್ಕೂಲ್ ಬ್ಯಾಗ್ ಇಟ್ಟು, ತನ್ನ ದೇಹಬಾಧೆ ತೀರಿಸಿಕೊಳ್ಳಲು ಸಿಗಬಹುದಾದ ಮರೆಮಾಚಿಕೊಳ್ಳಲು ಅವಕಾಶವಿರುವ ಜಾಗಕ್ಕಾಗಿ ಹುಡುಕಾಡಲಾರಂಭಿಸಿದ. ಅವನ ದೇಹ ಅವನದೇ ಮಾತು ಕೇಳದೆ ಪ್ರತಿಭಟನೆ ತೀವ್ರಗೊಳಿಸಿದ್ದರಿಂದಾಗಿ ಹುಡುಕಾಟಕ್ಕೆ ಹೆಚ್ಚು ಸಮಯ ವಿನಿಯೋಗಿಸಲು ಅವಕಾಶವಿರಲಿಲ್ಲ. ಕಣ್ಣಳತೆಯ ದೂರದಲ್ಲಿರುವ ಹಂದಿ ಮಾಂಸದಂಗಡಿಯ ಹಿಂಬದಿಯಲ್ಲಿ ತನ್ನ ಕೆಲಸಕ್ಕೆ ಹೊಂದುವಂತಹ ಸ್ಥಳವಿರುವುದನ್ನು ಕಂಡು ಅವನ ಮನಸ್ಸು ಕೊಂಚ ನಿಟ್ಟುಸಿರು ಬಿಡಲಾರಂಭಿಸಿತು. ತಡಮಾಡದೆ ಎಡಗೈನಲ್ಲಿ ನೀರಿನ ಬಾಟಲ್ ಹಿಡಿದುಕೊಂಡು ಹೊರಟೇಬಿಟ್ಟ.

ಆಗಷ್ಟೇ ಮಾಂಸದಂಗಡಿ ತೆರೆದು ಕುಳಿತಿದ್ದ ಅಂಗಡಿಯವನ ಕಣ್ಣು ಇವನ ಮೇಲೆ ಬಿದ್ದವು. ತನ್ನ ಚೆಡ್ಡಿ ಕೆಳಗಿಳಿಸಿ ಕುಕ್ಕರುಗಾಲಲ್ಲಿ ಕುಳಿತವನಿಗೆ ಹಿಗ್ಗಾಮುಗ್ಗಾ ಬೈಯ್ಯುವ ಬಯಕೆ ಅವನೊಳಗೆ ಉದ್ದೀಪನಗೊಂಡಿತ್ತಾದರೂ ಇವನ ಪರಿಸ್ಥಿತಿ ಕಂಡು ಅವನ ಮನಸ್ಸು ಬೈಯ್ಯಲು ಹಿಂಜರಿಯಿತು. ತರಾತುರಿಯಲ್ಲಿ ಕೆಲಸ ಮುಗಿಸಿ, ಅಂದು



ತೊಳೆದುಕೊಂಡ ಹುಡುಗ, ಚೆಡ್ಡಿ ಮೇಲೇರಿಸಿಕೊಂಡು ಇವನ ಅಂಗಡಿ ಮುಂದೆ ಹಾದು ಹೋಗಲಾರಂಭಿಸಿದ. ಅವನ ಕೈಯಲ್ಲಿದ್ದ ಖಾಲಿ ಬಾಟಲ್ ಗಮನಿಸಿದ ಅಂಗಡಿಯವನು, ಮಾಂಸ ಶುಚಿಗೊಳಿಸಲೆಂದು ಇಟ್ಟುಕೊಂಡಿದ್ದ ನೀರು ಕೊಟ್ಟ. ಅವನು ಮತ್ತೊಮ್ಮೆ ನೀಟಾಗಿ ಕೈ ತೊಳೆದುಕೊಂಡು "ಥ್ಯಾಂಕ್ಸ್ ಅಂಕಲ್" ಅಂತೇಳಿ ತನ್ನ ಸ್ಕೂಲ್ ಬ್ಯಾಗ್ ಇಟ್ಟಿದ್ದ ಅಂಗಡಿಯೆಡೆಗೆ ನಡೆಯಲಾರಂಭಿಸಿದ.

ದೇವರ ನಾಡಲ್ಲಿ...

ಫೇಸ್‌ಬುಕ್‌ನಲ್ಲಿ ವಿಹರಿಸುತ್ತಿದ್ದ ಅವನ ಕಣ್ಣಿಗೆ 'ದೇವರ ನಾಡಲ್ಲಿ' ಚಿತ್ರದ ಹಾಡುಗಳನ್ನು ಒಳಗೊಂಡಿರುವ ಲಿಂಕ್‌ವೊಂದು ಬಿತ್ತು. ಚಿತ್ರದ ಕುರಿತು ಮೊದಲೇ ಆಸಕ್ತನಾಗಿದ್ದ ಅವನು, ತನ್ನೂರಿನ ಥಿಯೇಟರ್‌ನಲ್ಲಿ ಸಿನಿಮಾ ಬಿಡುಗಡೆ ಮಾಡದೇ ಹೋದ ಚಿತ್ರತಂಡಕ್ಕೆ ಒಳಗೊಳಗೇ ಬೈದುಕೊಂಡು, ಕೊನೆಪಕ್ಷ ಚಿತ್ರದ ಹಾಡುಗಳನ್ನಾದರೂ ಕೇಳೋಣವೆಂದುಕೊಂಡು ಆ ಲಿಂಕ್ ಮೇಲೆ ಕ್ಲಿಕ್ ಮಾಡಿದ.

ಯೇಸುವನ್ನು ಪ್ರಾರ್ಥಿಸುವ ಗೀತೆಯೊಂದು ಅವನ ಲ್ಯಾಪ್‌ಟಾಪಿನ ಒಡಲಿಂದ ಹೊರಹೊಮ್ಮಲಾರಂಭಿಸಿದ ಮೇಲೆ "ಇದೇನಪ್ಪ ಇದು ನಾನು ಕ್ಲಿಕ್ ಮಾಡಿದ್ದು ದೇವರ ನಾಡಲ್ಲಿ ಆಡಿಯೋ ಲಿಂಕ್ ಮೇಲಲ್ವ? ಈಗ ನೋಡಿದ್ರೆ ಇದ್ಯಾವ್ದೋ ಪ್ರಾರ್ಥನೆ ಬರ್ತಿದೆ" ಅಂತ ಕಕ್ಕಾಬಿಕ್ಕಿಯಾಗಿ, ಸ್ಟಾಪ್ ಗುರುತಿನ ಮೇಲೆ ಕ್ಲಿಕ್ ಮಾಡಿ ಪರಿಶೀಲಿಸಿದ. 'ದೇವರ ನಾಡಲ್ಲೇ' ಯೇಸುವನ್ನು ಪ್ರಾರ್ಥಿಸುವ ಹಾಡೂ ಇರುವುದು ಮನದಟ್ಟಾದ ಮೇಲೆ, ಸುಮ್ನೆ ಒಂದ್ಸಲ ಕೇಳ್ಬಿಡೋಣ ಅನಿಸಿ ಮತ್ತೆ ಪ್ಲೇ ಗುರುತಿನ ಮೇಲೆ ಕ್ಲಿಕ್ಕಿಸಿದ.

ದೇವರ ಇರುವಿಕೆಯನ್ನೇ ಅಲ್ಲಗಳೆಯುತ್ತ ಬಂದಿರುವ ಅವನು, ತನ್ನ ರೂಮಿನಲ್ಲಿ ಅರ್ಧ ಬಾಗಿಲು ಹಾಕಿಕೊಂಡು ಯೇಸುವನ್ನು ಪ್ರಾರ್ಥಿಸುವ ಗೀತೆ ಆಲಿಸುತ್ತಿರುವುದು ಅವನ ಮನೆಯವರಿಗೂ ತಿಳಿದು ಅನುಮಾನಗೊಂಡು, ಟಿ.ವಿ. ವಾಲ್ಯೂಮ್ ಮ್ಯೂಟ್ ಮಾಡಿ ಅವನು ಕೇಳುತ್ತಿರುವ ಹಾಡು ಯಾವುದೆಂದು ಖಾತ್ರಿಪಡಿಸಿಕೊಳ್ಳುವ ಕಸರತ್ತು ನಡೆಸಿದರು.

ಹಾಲ್‌ನಲ್ಲಿ ಕುಳಿತವರ ಗಮನವೂ ತನ್ನ ಲ್ಯಾಪ್‌ಟಾಪಿನಿಂದ ಹೊರಹೊಮ್ಮುತ್ತಿರುವ ಪ್ರಾರ್ಥನಾ ಗೀತೆಯತ್ತ ಹೊರಳಿರುವುದು ಅವನ ಗಮನಕ್ಕೂ ಬಂತು. ಸ್ಟಾಪ್ ಸಿಂಬಲ್ ಮೇಲೆ ಕ್ಲಿಕ್ ಮಾಡಲು ಹೋದವನ ಮನಸ್ಸಿನಲ್ಲಿ ಒಂದಷ್ಟು ಪ್ರಶ್ನೆಗಳು ಸುಳಿದಾಡಿದವು.

ದೇವರನ್ನೇ ನಂಬದ ತನಗೆ ಯೇಸು, ಅಲ್ಲಾ ಅಥವಾ ಈಶ್ವರ ಯಾರನ್ನೇ ಪ್ರಾರ್ಥಿಸುವ ಹಾಡಾದರೂ ಅದು ಕೇವಲ ಸಂಗೀತವಷ್ಟೇ. ತಾನು ಧಿಕ್ಕರಿಸಿರುವುದು ಹುಟ್ಟಿನೊಂದಿಗೆ ತನಗೆ ಜೋತು ಬಿದ್ದ ಧರ್ಮ ಮತ್ತು ದೇವರನ್ನಷ್ಟೇ ಅಲ್ಲ, ವಾಸ್ತವ ಹೀಗಿರುವಾಗ ಮನೆಯವರ ಅನುಮಾನಕ್ಕೆ ತಾನೇನು ತಲೆ ಕೆಡಿಸಿಕೊಳ್ಳಬೇಕಿಲ್ಲವೆನಿಸಿ ಒಮ್ಮೆ ಹಾಡಿ ನಿಲ್ಲಿಸಿದ ಲಿಂಕಿನ ಮೇಲೆಯೇ ಮತ್ತೊಮ್ಮೆ ಕ್ಲಿಕ್ಕಿಸಿದ.

ಈಶ್ವರನನ್ನು ಒಪ್ಪಿಕೊಳ್ಳದ ತಮ್ಮ ಮಗನ ಪ್ರೀತಿ ಯೇಸುವಿನತ್ತ ಹರಿಯುತ್ತಿರಬಹುದೇ ಎನ್ನುವ ಸಂಶಯ ಹಾಲ್‌ನಲ್ಲಿ ಕುಳಿತು ಮೂಕ ದೃಶ್ಯಗಳನ್ನು ನೋಡಲಾರಂಭಿಸಿದ್ದ ಅವನ ಮನೆಯವರ ಮನದಲ್ಲಿ ಅಸಹನೆಯ ತೆರೆ ಎಳೆಯಲಾರಂಭಿಸಿತು.

■ ಎಚ್.ಕೆ.ಶರತ್

ಅವನತಿಯ ಹಾದಿಯಲ್ಲಿ ಪ್ರಜಾಸತ್ತೆ

ರಾಷ್ಟ್ರೀಯ ಸ್ವಯಂಸೇವಕ ಸಂಘ ಅದೇಕೆ ಸ್ವಪ್ರತಿಷ್ಠೆಯ ಗೀಳು ಮತ್ತು ಕೀಳರಿಮೆಗಳಿಂದ ಬಳಲುತ್ತಿರುವ ವ್ಯಕ್ತಿಯನ್ನೆ ರಾಷ್ಟ್ರದ ಪ್ರಧಾನಿ ಸ್ಥಾನದಲ್ಲಿ ಕೂರಿಸಿತು? ಬಹುಶಃ ಇದಕ್ಕೆ ಪ್ರಧಾನ ಕಾರಣ ಆರೆಸ್ಸೆಸ್‌ನ ಸಿದ್ಧಾಂತ ಹಾಗೂ ಧ್ಯೇಯಗಳಲ್ಲಿ ಇಟ್ಟಿರುವ ಅಚಲ ನಿಷ್ಠೆಯೆ ಇರಬೇಕು. ಆತನ ಸರ್ವಾಧಿಕಾರಿ ಶೈಲಿ (ಸಂಘ ಪರಿವಾರ ಆರಂಭದಿಂದಲೂ ರಾಜನ ಆಳ್ವಿಕೆಯ ಸಮರ್ಥಕ), ಅಲ್ಪಸಂಖ್ಯಾತರ ದ್ವೇಷ, ಜಾತಿವ್ಯವಸ್ಥೆಯ ಸಮರ್ಥನೆ, ಬಂಡವಾಳಶಾಹಿಗಳಿಗೆ ಮಣೆ ಇತ್ಯಾದಿಗಳಿಗೆ ಹೋಲಿಸಿದರೆ ಮೇಲಿನ ಎರಡೂ ಗುಣಗಳು ಗೌಣವೆಂದು ಅದು ಭಾವಿಸಿರಬೇಕು. ಹೀಗಿರುವುದರಿಂದಲೆ ಮೋದಿ ತಾನು ಅಧಿಕಾರಕ್ಕೆ ಬಂದ ದಿನದಿಂದ ಆರೆಸ್ಸೆಸ್‌ನ ಸಿದ್ಧಾಂತವನ್ನು ಚಾಚೂತಪ್ಪದೆ ಅನುಸರಿಸುತ್ತಾ ಅದರ ಗುರಿಸಾಧನೆಗಾಗಿ ಶ್ರಮಿಸುತ್ತಲೆ ತನ್ನ ವೈಯಕ್ತಿಕ ತೀಟೆಗಳನ್ನೂ ತೀರಿಸಿಕೊಳ್ಳುತ್ತಿದ್ದಾನೆ. ಆದುದರಿಂದಲೆ ಆತ ವಿದೇಶೀ ನಾಯಕರೊಂದಿಗೆ ವಿಪರೀತ ಸಲುಗೆ ಬೆಳೆಸುತ್ತಾನೆ. ಮಿರಿಮಿರಿ ಮಿಂಚುವ ಪೋಷಾಕುಗಳನ್ನೆ ಧರಿಸುತ್ತಾನೆ. ಫೋಟೊಗಳಲ್ಲಿ ಎದ್ದು ಕಾಣುವ ರೀತಿ ಪೋಸ್ ಕೊಡುತ್ತಾನೆ. ರೇಡಿಯೊ, ಟಿವಿಗಳಲ್ಲಿ ಏಕಮುಖಿಯಾಗಿ ಮಾತಾಡುತ್ತಾನೆ. ಖಾದಿ ಗ್ರಾಮೋದ್ಯೋಗದ ಕ್ಯಾಲೆಂಡರ್‌ನಲ್ಲಿ ಗಾಂಧಿಯ ಜಾಗವನ್ನು ಆಕ್ರಮಿಸುತ್ತಾನೆ. ಪ್ರಜಾತಾಂತ್ರಿಕ ಸಂಸ್ಥೆಗಳಲ್ಲೆಲ್ಲಾ ಪ್ರತಿಗಾಮಿಗಳದೆ ಮೇಲುಗೈ ಆಗುವಂತೆ ನೋಡಿಕೊಳ್ಳುತ್ತಾನೆ. ಸಂಘಿಗಳ ಅಲ್ಪಸಂಖ್ಯಾತ ವಿರೋಧಿ ಅಭಿಯಾನಗಳಿಗೆ ಮೌನಸಮ್ಮತಿ ನೀಡುತ್ತಾನೆ. ದಲಿತರನ್ನು ಮುಂದಿನಿಂದ ಓಲೈಸುತ್ತಾ ಹಿಂದಿನಿಂದ ಮನುವಾದವನ್ನು ಪ್ರೋತ್ಸಾಹಿಸು ತ್ತಾನೆ. ಡಿಜಿಟಲ್ ವ್ಯವಹಾರದ ಕಾರ್ಪೋರೇಟುಗಳಿಗೆ ಭಾರತವನ್ನು ಮುಕ್ತ ಮಾರುಕಟ್ಟೆಯಾಗಿಸಲು ನೋಟು ರದ್ದತಿ ನಿರ್ಧಾರ ಕೈಗೊಳ್ಳುತ್ತಾನೆ. ಕಾರ್ಪೋರೇಟುಗಳ ಸರಕಿನ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ರೈತರಿಗೆ, ಬಡವರಿಗೆ ಸಬ್ಸಿಡಿ ಕಡಿತ ಮಾಡುತ್ತಾನೆ... ಪಟ್ಟಿ ಬೆಳೆಯುತ್ತಾ ಇದೆ. ಈಗ ಕೆಲವೊಂದು ನಿರ್ದಿಷ್ಟ ವಿದ್ಯಮಾನಗಳನ್ನು ನೋಡೋಣ.

ರೈತ ವಿರೋಧಿ

'ಪ್ರಧಾನಮಂತ್ರಿ ಫಸಲು ವಿಮಾ ಯೋಜನೆ' ಎಂಬುದು ಮೋದಿ ಸರ್ಕಾರದ ಹೃದಯ ರೈತರಿಗಾಗಿ ಮಿಡಿಯುತ್ತಿರುವುದಕ್ಕೆ ಅತ್ಯುತ್ತಮ ಸಾಕ್ಷಿ ಎಂದು ಪ್ರಚಾರ ಮಾಡಲಾಗುತ್ತಿದೆ. ಅತ್ಯದ್ಭುತ ಎನ್ನಲಾಗಿರುವ ಈ ಯೋಜನೆಯಿಂದ ಅಸಲಿಗೆ ಅಭಿವೃದ್ಧಿ ಆಗಲಿರುವುದು ರೈತರಲ್ಲ, ವಿಮಾ ಕಂಪೆನಿಗಳು! ಯೋಜನೆಯ ನಿಯಮಗಳ ಕಡೆಗೆ ದೃಷ್ಟಿ ಹಾಯಿಸಿದರೆ ಸಾಕು, ಅದರ ನಿಜಬಣ್ಣ ಬಯಲಾಗುತ್ತದೆ.

ಮೊದಲನೆ ನಿಯಮವೆಂದರೆ ವಿಮಾ ಕಂಪೆನಿಗಳು ಕಂದಾಯ ಗ್ರಾಮವೊಂದರಲ್ಲಿ ಆಗಿರುವ ಬೆಳೆ ವೈಫಲ್ಯಕ್ಕೆ ಪರಿಹಾರ ನೀಡುವಿಕೆಯನ್ನು ಪರಿಗಣಿಸಬೇಕಿದ್ದರೆ ಅಲ್ಲಿನ ರೈತರಲ್ಲಿ ಶೇಕಡಾ 70ರಷ್ಟು ಮಂದಿ ಪ್ರೀಮಿಯಂ ಕಟ್ಟಿರಬೇಕು! ಎರಡನೆಯ ನಿಯಮದ ಪ್ರಕಾರ ವೈಯಕ್ತಿಕ ನಷ್ಟಗಳನ್ನು ಪರಿಗಣಿಸಲಾಗುವುದಿಲ್ಲ! ಇದೇ ತೆರನಾದ ನಿಬಂಧನೆಗಳನ್ನು ನಗರವಾಸಿಗಳಿಗೆ ವಿಧಿಸಿದಲ್ಲಿ ಹೇಗಾಗಬಹುದು? ವಾಸ್ತವದಲ್ಲಿ ಭೂಸ್ವಾಧೀನ ಮತ್ತು ಕನಿಷ್ಠ ಬೆಂಬಲ ಬೆಲೆಗಳ ವಿಷಯದಲ್ಲಿ ರೈತರಿಗೆ ದ್ರೋಹ ಬಗೆದಿರುವ ಮೋದಿ ಸರ್ಕಾರ ಅದನ್ನು ಮುಚ್ಚಿಹಾಕುವುದಕ್ಕೋಸ್ಕರ ತನ್ನ ಈ ಫಸಲು ವಿಮಾ ಯೋಜನೆ ಒಂದು ಕ್ರಾಂತಿಕಾರಿ ಹೆಜ್ಜೆ ಎಂದು ತುತ್ತೂರಿ ಊದುತ್ತಿದೆ.

ಅಪ್ರಜಾತಾಂತ್ರಿಕ

ಸಂಘಪರಿವಾರಕ್ಕೆ ಸಂವಿಧಾನದಲ್ಲಿ, ಸಂಸದೀಯ ಪ್ರಕ್ರಿಯೆಯಲ್ಲಿ ನಂಬಿಕೆ ಇಲ್ಲ ಎನ್ನುವುದನ್ನು ಮೋದಿ ಸರ್ಕಾರ ಸಾಬೀತುಮಾಡುತ್ತಿದೆ. ಸಂಸತ್ತಿನ ಕಲಾಪಗಳ ಅವಧಿ ಹಿಂದಿಗಿಂತಲೂ ಹೆಚ್ಚು ಮೊಟಕಾಗಿದೆ. ಕೆಲವು ಬಿಜೆಪಿ ಸಂಸದರ ಮಾತುಗಳು ಅವರ ಬೀದಿಬದಿಯ ಹಿನ್ನೆಲೆಗಳನ್ನು ಪ್ರತಿಬಿಂಬಿಸುವಂತಿವೆ. ಪ್ರಧಾನಮಂತ್ರಿ ಕಲಾಪಗಳಲ್ಲಿ ಭಾಗವಹಿಸುವುದೆ ಕಮ್ಮಿ ಅಥವಾ ಉಪಸ್ಥಿತನಿದ್ದರೂ ಚರ್ಚೆಗೆ ಸಿದ್ಧನಿಲ್ಲ, ಮೋದಿ ಸರ್ಕಾರ ಎಂದರೆ ಸುಗ್ರೀವಾಜ್ಞೆಗಳ ಸರ್ಕಾರ ಎಂದಾಗಿದೆ.

ಬಂಡವಾಳವಾದಿ, ಕಾರ್ಪೋರೇಟ್‌ಪ್ರೇಮಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದಲೂ ಎನ್‌ಜಿಒಗಳ ಮೇಲೆ ಚಾಟಿ[illegible] ಬೀಸತೊಡಗಿದೆ. ಗುಜರಾತ್ 2002ಕ್ಕಾಗಿ ಮೋದಿಯನ್ನು ಕಟಕಟೆಗೆ ಎಳೆಯಲಿರುವ; ಭ್ರಷ್ಟಾಚಾರ ವಿರುದ್ಧ ಅಭಿಯಾನ ನಡೆಸುತ್ತಿರುವ; ಬಡವರ, ದಲಿತರ, ದಮನಿತರ ಏಳಿಗೆಗಾಗಿ ಶ್ರಮಿಸುತ್ತಿರುವ ಕೆಲವು ಎನ್‌ಜಿಒಗಳನ್ನು ಹತ್ತಿಕ್ಕುವುದೆ ಇದರ ಮುಖ್ಯ ಉದ್ದೇಶವಾಗಿದೆ. ಆ ನಿಟ್ಟಿನಲ್ಲಿ ಈಗಾಗಲೆ ಸುಮಾರು 20000 ಎನ್‌ಜಿಒಗಳ ಲೈಸೆನ್ಸ್‌ಅನ್ನು ಸಾರಾಸಗಟಾಗಿ ರದ್ದುಗೊಳಿಸಲಾಗಿದೆ.

ಜೇಹುಜೂರ್ ಅಧಿಕಾರಿಗಳು

ಮೋದಿ ಅಧಿಕಾರಕ್ಕೆ ಬಂದನಂತರ ಮಾಡಿರುವ ಮೊದಲ ಕೆಲಸವೆಂದರೆ ತನ್ನ ಫೇವರಿಟ್ ಬಾಲಂಗೋಚಿ, ಜೇಹುಜೂರ್ ಅಧಿಕಾರಿಗಳನ್ನು ಬ್ಯೂರಾಕ್ರಸಿಯಲ್ಲಿ ನಿಯೋಜಿಸಿರುವುದು. ಇಶ್ರತ್ ಜಹಾನ್ ಎನ್‌ಕೌಂಟರ್ ಪ್ರಕರಣಕ್ಕೆ ಸಂಬಂಧಿಸಿದ ಕೆಲವೊಂದು ಕಡತಗಳು ಗೃಹ ಸಚಿವಾಲಯದ ಕಚೇರಿಯಿಂದ ನಾಪತ್ತೆಯಾಗಿದ್ದ ವಿಚಾರ ನೆನಪಿಸಿಕೊಳ್ಳಿ. ವಿಚಾರಣೆಯನ್ನು ವಿಳಂಬಿಸುವ ಏಕೈಕ ಉದ್ದೇಶದಿಂದ 'ಟೈಮ್ಸ್ ನೌ' ಸಹಯೋಗದೊಂದಿಗೆ ಕಾಣೆಯಾದ ಕಡತಗಳು ಎಂಬ ನಾಟಕವನ್ನು ಆಯೋಜಿಸಲಾಯಿತು. ತದನಂತರ ಹೆಚ್ಚುವರಿ ಗೃಹ ಕಾರ್ಯದರ್ಶಿ ನೇತೃತ್ವದ ಏಕಸದಸ್ಯ ಆಯೋಗದಿಂದ ತನಿಖೆ ಎಂಬುದೊಂದು ಪ್ರಹಸನ ನಡೆಯಿತು. ಮೋದಿ ಸರ್ಕಾರದ ಅಧಿಕಾರಿಗಳು ಪ್ರಕರಣದ ಸಾಕ್ಷಿಗಳನ್ನು ಸಂಪರ್ಕಿಸಿ ಅವರ ಹೇಳಿಕೆಗಳು ಹೇಗಿರಬೇಕು ಎಂದು ಹೇಳಿಕೊಟ್ಟರು.

ಇನ್ನೊಂದು ಕಡೆ ಹಿಂದೆ ಗುಜರಾತಿನಲ್ಲಿ 'ಹಿಂದೂ ಹೃದಯ ಸಾಮ್ರಾಟ'ನ ಕೊಲೆಗೆ ಸಂಚು ಹೂಡಿದ್ದರೆನ್ನಲಾದ ಭಯೋತ್ಪಾದಕರನ್ನು ನಕಲಿ ಎನ್‌ಕೌಂಟರ್‌ಗಳ ಮೂಲಕ ನಿರ್ನಾಮಗೊಳಿಸಿದ್ದ ಹಲವಾರು ಪೊಲೀಸರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಗಿದೆ. ಡಿ.ಜಿ. ವಂಜಾ?ರ, ರಾಜ್‌ಕುಮಾರ್ ಪಾಂಡ್ಯನ್, ಅಭಯ್ ಚೂಡಾಸಮಾ ಮುಂತಾದವರಿಗೆಲ್ಲ ಮುಂಬಡ್ತಿ ನೀಡಲಾಗಿದೆ ಅಥವಾ ಒಳ್ಳೊಳ್ಳೆ ಹುದ್ದೆಗಳನ್ನು ಒದಗಿಸಲಾಗಿದೆ.

ಚುನಾವಣೆಗಳ ಸಂದರ್ಭದಲ್ಲಿ ಅಥವಾ/ಮತ್ತು ದೇಶದ ಜನತೆಯಲ್ಲಿ ಅತೃಪ್ತಿ, ಅಸಮಾಧಾನ ಹೊಗೆಯಾಡುತ್ತಿರುವ



ಸಂದರ್ಭದಲ್ಲಿ ಪ್ರಯೋಗಿಸಲಾಗುವ ಈ ವಿಶಿಷ್ಟ 'ಗುಜರಾತ್ ಮಾದರಿ' ಈಗ 'ಹಿಂದೂ ಹೃದಯ ಸಾಮ್ರಾಟ'ನೊಂದಿಗೆ ದಿಲ್ಲಿಗೆ ಆಮದಾಗಿದೆ. ಪರಿಣಾಮವಾಗಿ ಏನೇ ದುರ್ಘಟನೆ ನಡೆದರೂ ಯಾವುದೇ ತನಿಖೆಗೂ ಮೊದಲೆ ಪಾಕ್ ಉಗ್ರರ ಹೆಸರು ಕೇಳಿಬರಲಾರಂಭಿಸಿದೆ. ಇದಕ್ಕೆ ಇತ್ತೀಚಿನ ದೃಷ್ಟಾಂತವಾಗಿ ಉತ್ತರ ಪ್ರದೇಶ, ಆಂಧ್ರಗಳಲ್ಲಿ ಸಂಭವಿಸಿದಂತಹ ಕೆಲವು ರೈಲು ಅಪಘಾತಗಳನ್ನು ಉಲ್ಲೇಖಿಸಬಹುದು. ಅಪಘಾತ ನಡೆದ ಬೆನ್ನಲ್ಲಿ ಈ ದುರಂತಗಳಿಗೆ ಪಾಕಿಸ್ತಾನದ ಐಎಸ್‌ಐ ಹೊಣೆಯೆಂದು ಆರೋಪಿಸಲಾಯಿತು. ಆದರೆ ಈಗ ಖುದ್ದು ಉತ್ತರ ಪ್ರದೇಶದ ಡಿ.ಜಿ.ಪಿ. ಹೇಳಿರುವಂತೆ ತನಿಖೆಯ ನಂತರ ಈ ಆರೋಪದಲ್ಲಿ ಯಾವುದೇ ಹುರುಳಿಲ್ಲವೆಂದು ತಿಳಿದುಬಂದಿದೆ.

ವಿದ್ಯಾರ್ಹತೆ ವಿಷಯದಲ್ಲಿ ಅಲರ್ಜಿ!


ವಿದ್ಯಾರ್ಹತೆಯ ವಿಷಯ ಎತ್ತಿದಾಗ ಹೆಚ್ಚುಕಡಿಮೆ ಇಡೀ ಸಂಘ ಪರಿವಾರಕ್ಕೆ ಒಂದು ಬಗೆಯ ಅಲರ್ಜಿ ಕಾಡುತ್ತಿರುವಂತಿದೆ. ಆದರೆ ಬೆಂಕಿ ಉಗುಳುವ ಭಾಷಣದ ವಿಷಯಕ್ಕೆ ಬಂದಾಗ ಪಿಎಚ್.ಡಿಗಿಂತಲೂ ಮೇಲಿನ ಡಿಗ್ರಿ ಏನಾದರೂ ಇದ್ದಲ್ಲಿ ಅದಕ್ಕೆ ಅರ್ಹರಾದವರ ಸಂಖ್ಯೆ ಸಾಕಷ್ಟು ದೊಡ್ಡದಿದೆ! ಈಗ ಮೋದಿಯ ತಥಾಕಥಿತ 'ಸಂಪೂರ್ಣ ಸಮಾಜ ವಿಜ್ಞಾನ' ಡಿಗ್ರಿಯನ್ನೆ ತೆಗೆದುಕೊಳ್ಳಿ. ಇದಕ್ಕೆ ಸಂಬಂಧಿಸಿದಂತೆ ದಿಲ್ಲಿ ವಿಶ್ವವಿದ್ಯಾನಿಲಯದಲ್ಲಿರುವ ದಾಖಲೆಗಳನ್ನು ಸಾರ್ವಜನಿಕರಿಗೆ ಒದಗಿಸುವಂತೆ ಆದೇಶ ನೀಡಿದಂತಹ ಮಾಹಿತಿ ಹಕ್ಕು ಆಯುಕ್ತ ಎಂ.ಎಸ್.ಆಚಾರ್ಯುಲುರನ್ನು ಹಠಾತ್ತಾಗಿ ಬೇರೊಂದು ಕೆಲಸಕ್ಕೆ ನಿಯುಕ್ತಿಗೊಳಿಸಲಾಗಿದೆ. ಮೋದಿ ಸರ್ಕಾರದ ಈ ನಡೆ ಆ ದಾಖಲೆಗಳಲ್ಲೇನೋ ರಹಸ್ಯ ಅಡಗಿರಬೇಕು ಎಂಬ ಅನುಮಾನವನ್ನು ದೃಢಪಡಿಸುವಂತಿದೆ. ಒಂದು ರೀತಿಯಲ್ಲಿ ಇದು ಕ್ಲಾಸಿಗೆ ಹೋಗದೆ ಪರೀಕ್ಷೆ ಬರೆಯದೆ ಡಿಗ್ರಿ ಸರ್ಟಿಫಿಕೇಟ್ ದೊರೆತಿರುವುದನ್ನು ಪರೋಕ್ಷವಾಗಿ ಒಪ್ಪಿಕೊಂಡಂತಲ್ಲವೆ? ಅತ್ತ ಮಾಜಿ ಮಾನವ ಸಂಪನ್ಮೂಲ ಸಚಿವೆ ಸ್ಮೃತಿ ಇರಾನಿಯ 'ಡಿಗ್ರಿ' ಕಥೆಯೂ ಹೆಚ್ಚುಕಡಿಮೆ ಹೀಗೇ ಇದೆ. ಈಕೆ ಕೂಡಾ ತನ್ನ ಶೈಕ್ಷಣಿಕ ಅರ್ಹತೆಗೆ ಸಂಬಂಧಪಟ್ಟ ದಾಖಲೆಗಳನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಕೂಡ ದೆಂದು ಸಿಬಿಎಸ್‌ಇಗೆ ತಾಕೀತು ಮಾಡಿದ್ದ ವಿಚಾರ ಇದೀಗ ತಿಳಿದುಬಂದಿದೆ. ಅಲ್ಲಿಗೆ ಆಕೆಯೂ ತನಗೆ ಯಾವ ವಿದ್ಯಾರ್ಹತೆಯೂ ಇಲ್ಲವೆಂದು ಪರೋಕ್ಷವಾಗಿ ಒಪ್ಪಿಕೊಂಡಂತಾಯಿತು.

ವ್ಯಾಪಕ ಕೇಸರೀಕರಣ

ಹಿಂದೂ ರಾಷ್ಟ್ರ ಸ್ಥಾಪನೆಗೆ ಪಣತೊಟ್ಟಿರುವ ಆರೆಸ್ಸೆಸ್ ಸ್ವಾತಂತ್ರ್ಯಾನಂತರದಲ್ಲಿ ಮಾಧ್ಯಮರಂಗವನ್ನೂ ಒಳಗೊಂಡಂತೆ ದೇಶದ ವಿವಿಧ ಪ್ರಜಾತಾಂತ್ರಿಕ ಸಂಸ್ಥೆಗಳೊಳಗೆ ತನ್ನ ನಿಷ್ಠಾವಂತರನ್ನು ತೂರಿಸುತ್ತಾ ಬಂದಿರುವ ವಿಚಾರ ಗುಟ್ಟಾಗಿ ಉಳಿದಿಲ್ಲ, ಆದರೆ 2014ರ ಮೇ ನಂತರ ಈ ಪ್ರಕ್ರಿಯೆ ಎಲ್ಲಿಲ್ಲದ ವೇಗವನ್ನು ಪಡೆದುಕೊಂಡಿದೆ. ಇಂದು ಹೆಚ್ಚುಕಡಿಮೆ ಎಲ್ಲಾ ಸಂಸ್ಥೆಗಳನ್ನು ಆರೆಸ್ಸೆಸ್ ತನ್ನ ಕೈವಶ ಮಾಡಿಕೊಂಡಿದೆ. ಅದೇರೀತಿ ಸಾಹಿತ್ಯ ಕಲೆ, ಜನಪದ ಮೊದಲಾದ ಸಾಂಸ್ಕೃತಿಕ ಕ್ಷೇತ್ರಗಳ ಮೇಲೂ ಆರೆಸ್ಸೆಸ್‌ನ ಹಿಡಿತ ಬಿಗಿಯಾಗುತ್ತಿದೆ. ಹಿಂದಿನ ಸಂಚಿಕೆಯೊಂದರಲ್ಲಿ ವಿವರಿಸಿರುವಂತೆ ಸಂಘಪರಿವಾರ ಈಗ ಸಾಹಿತ್ಯೋತ್ಸವಗಳಿಗೂ ಲಗ್ಗೆ ಇಡತೊಡಗಿದೆ. ಇತ್ತೀಚಿನ ಜೈಪುರ ಉತ್ಸವದಲ್ಲಿ ಸಾಹಿತ್ಯದ ಗಂಧಗಾಳಿಯೂ ಇರದಂಥ ಮನಮೋಹನ್ ವೈದ್ಯ ಮತ್ತು ದತ್ತಾತ್ರೇಯ ಹೊಸಬಾಳೆ ಎಂಬ ಹಿಂದೂತ್ವವಾದಿ ಜೋಡಿಯೊಂದು ಭಾಗವಹಿಸಿದೆ. ಇವರಿಬ್ಬರೂ ಅಲ್ಲಿ ತಮ್ಮ ಸಿದ್ಧಾಂತವನ್ನು ಬಿತ್ತರಿಸುತ್ತಾ ಆರೆಸ್ಸೆಸ್‌ನ ನಿಷ್ಠೆ ಸಂವಿಧಾನಕ್ಕಲ್ಲ, ಮನುಸ್ಮೃತಿಗೆ ಎಂದು ಮತ್ತೊಮ್ಮೆ ತೋರಿಸಿಕೊಂಡಿದ್ದಾರೆ. ಜನವರಿ 20ರಂದು ನಡೆದ ಸಂವಾದ ಕಾರ್ಯಕ್ರಮವೊಂದರಲ್ಲಿ ವೈದ್ಯ "ಆದರ್ಶ ವ್ಯವಸ್ಥೆ ಎಂದರೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವುದು. ದಲಿತರು ಮತ್ತು ಬುಡಕಟ್ಟು ಜನರನ್ನು ಸುದೀರ್ಘ ಕಾಲದಿಂದ ವಿದ್ಯೆ ಮತ್ತು ಪ್ರಗತಿಯಿಂದ ಹೊರಗಿಡಲಾಗಿತ್ತು. ಮೀಸಲಾತಿಯಿಂದ ಅವರಿಗೆ ಸಹಾಯವಾಗಿದ್ದರೂ ಅದನ್ನು ಶಾಶ್ವತವಾಗಿ ಮುಂದುವರಿಸುವುದು ಸಮಾಜದ ಹಿತದೃಷ್ಟಿಯಿಂದ ಒಳ್ಳೆಯದಲ್ಲ, ಒಂದು ಹಂತದಲ್ಲಿ ಅದನ್ನು ಕೊನೆಗೊಳಿಸಬೇಕೆಂದು ಅಂಬೇಡ್ಕರ್ ಹೇಳಿದ್ದರು" ಎಂಬರ್ಥದ ಮಾತುಗಳನ್ನಾಡಿದ. ಹೀಗೆ ಆತ ಸಂಘಪರಿವಾರದ ಮನದಾಳದ ಬಯಕೆಯನ್ನು ತೋಡಿಕೊಂಡಿದ್ದಾನೆ. ಆದರೆ ಆತ ಇದನ್ನು ಸಾರ್ವಜನಿಕವಾಗಿ ಹೇಳಿರುವುದು ಮುಂಬರುವ ಚುನಾವಣೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬರಲಿದೆ ಎಂಬುದನ್ನು ಮನಗಂಡ ಆರೆಸ್ಸೆಸ್ ತಕ್ಷಣ ಹೊಸಬಾಳೆ ಮೂಲಕ ತೇಪೆ ಹೊಲಿಯಲೆತ್ನಿಸಿದೆ. "ವೈದ್ಯನ ಹೇಳಿಕೆ ಆತನ ಖಾಸಗಿ ನಿಲುವು; ಅದಕ್ಕೂ ಸಂಘದ ನಿಲುವಿಗೂ ಸಂಬಂಧವಿಲ್ಲ, ಸಂಘದ ಅಭಿಪ್ರಾಯದಲ್ಲಿ ಮೀಸಲಾತಿ ಈಗಲೂ ಅಗತ್ಯವಿದ್ದು ಅದು ಮುಂದುವರಿಯಬೇಕು" ಎಂಬ ಹೇಳಿಕೆಯೊಂದನ್ನು ಮಾಧ್ಯಮಗಳ ಮುಖಾಂತರ ಬಿಡುಗಡೆ ಮಾಡಿದೆ. ಈ ನೂರಕ್ಕೆ ನೂರರಷ್ಟು ಸುಳ್ಳು ಹೇಳಿಕೆಗೆ ದಲಿತರು ಮೋಸಹೋದರೆಂದರೆ ಅದಕ್ಕಿಂತ ದೊಡ್ಡ ದುರಂತ ಇನ್ನೊಂದಿರದು. ಅವರು ಇತ್ತೀಚೆಗೆ ಆರೆಸ್ಸೆಸ್ ಸರಸಂಘಚಾಲಕ ಭಾಗವತ್ ಕೂಡಾ ವೈದ್ಯನಂತಹದೇ ಮಾತುಗಳನ್ನಾಡಿರುವುದನ್ನು ಮರೆಯಬಾರದು. ಮೋದಿಯ ಗುಜರಾತ್‌ನಲ್ಲೆ ಮಲಹೊರುವಿಕೆ ಮುಂದುವರಿದಿರುವುದನ್ನು, ಊನಾ ಮತ್ತು ಅಂತಹುದೆ ಸಾವಿರಾರು ಘಟನೆಗಳನ್ನು ಮರೆಯಬಾರದು.

ಇನ್ನೊಂದು ಕಡೆ ಪಂಜರದ ಅರಗಿಣಿಗಳಂತಾಗಿರುವ ಸಿಬಿಐ ಮತ್ತು ಎನ್‌ಐಎ ಮೋದಿ ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿಯುತ್ತಿವೆ. ಮಾಲೆಗಾಂವ್ ಮತ್ತಿತರ ಭಯೋತ್ಪಾದಕ ಕೃತ್ಯಗಳ ತನಿಖೆಗಳು ಹಳ್ಳ ಹಿಡಿಯುವ ಎಲ್ಲಾ ಸೂಚನೆಗಳು ಕಾಣಿಸುತ್ತಿವೆ. ಆರೋಪಿಗಳಲ್ಲೊಬ್ಬಳಾದ ಪ್ರಜ್ಞಾ ಸಿಂಗ್ ಠಾಕೂರ್‌ಗೆ ಜಾಮೀನು ನೀಡಲು ತನ್ನಿಂದೇನೂ ಅಭ್ಯಂತರವಿಲ್ಲವೆಂದು ಎನ್‌ಐಎ ಇತ್ತೀಚೆಗೆ ನ್ಯಾಯಾಲಯಕ್ಕೆ ತಿಳಿಸಿದೆ!

ಸರ್ಕಾರಿ ಪ್ರತಿನಿಧಿಗಳ ಆಯ್ಕೆಗೇ ಹೆಚ್ಚು ಬೆಲೆ ಇರುವಂತಹ ನ್ಯಾಯಾಂಗ ಆಯೋಗವೆ ಬೇಕೆಂದು ಮೋದಿ ಸರ್ಕಾರ ಪಟ್ಟುಹಿಡಿದಿದೆ. ಆ ಮೂಲಕ ಅದು ಕಾನೂನು, ನ್ಯಾಯಾಲಯಗಳನ್ನೂ ತನ್ನ ಗುಲಾಮರನ್ನಾಗಿಸಲು ಹೊರಟಿದೆ. ತನ್ನ ಈ ಹೆಬ್ಬಯಕೆಗೆ ಅಡ್ಡಿಯಾಗಿರುವ



ನ್ಯಾಯಾಂಗಕ್ಕೆ ಪಾಠ ಕಲಿಸಲು ಮುಂದಾಗಿರುವ ಅ[illegible] ಹೈಕೋರ್ಟು ನ್ಯಾಯಾಧೀಶರ ನೇಮಕಾತಿ ಪ್ರಕ್ರಿಯೆ[illegible] ವಿಪರೀತ ವಿಳಂಬ ಮಾಡುವ ಮೂಲಕ ನ್ಯಾಯ[illegible] ಪ್ರಕ್ರಿಯೆಯನ್ನೆ ವಿಳಂಬಿಸುತ್ತಿದೆ.

ಕ್ಯಾಂಪಸ್‌ಗಳಲ್ಲಿ ವಿಷ

ಕೇಂದ್ರದಲ್ಲಿ ಎನ್‌ಡಿಎ 2 ಆಡಳಿತ ಪ್ರಾರಂಭ[illegible] ನಂತರ ಸಂಘ ಪರಿವಾರ ಕ್ಯಾಂಪಸ್‌ಗಳೊಳಗೆ ತನ್ನ [illegible] ಬಿಚ್ಚಿ ಫೂತ್ಕರಿಸಲು ಶುರುಮಾಡಿದೆ. ದಲಿತ ವಿದ್ಯಾರ್ಥಿ[illegible] ಸಂಘಟಿತರಾಗುವುದನ್ನು ಸಹಿಸದ ಅದರ ಉಪ[illegible] ಎಬಿವಿಪಿ ಮದ್ರಾಸ್ ಐಐಟಿನಲ್ಲಿ ದಲಿತ ವಿದ್ಯಾರ್ಥಿ[illegible] ಅಂಬೇಡ್ಕರ್ ಪೆರಿಯಾರ್ ಅಧ್ಯಯನ ಸಂಘಟನೆ [illegible] ನಂಜು ಕಾರಿದ ನಂತರ ಹೈದರಾಬಾದ್ ವಿಶ್ವವಿದ್ಯಾನಿಲ[illegible] ದಲಿತ ವಿದ್ಯಾರ್ಥಿ ಸಂಘಟನೆಯನ್ನು ಗುರಿಯಾಗಿಸಿ[illegible] ರೋಹಿತ್ ವೇಮುಲನ ಆತ್ಮಹತ್ಯೆಯ ದುರಂ[illegible] ಪರ್ಯವಸಾನಗೊಂಡಿತು. ಇತ್ತ ಮೋದಿ ಸರ್ಕಾ[illegible] ಗುಲಾಮನಂತೆ ವರ್ತಿಸಿದ ಉಪಕುಲಪತಿಗೆ ಮಿಲೆ[illegible] ಪ್ರಶಸ್ತಿ ಸಿಕ್ಕಿತು. ಕಳೆದ ವರ್ಷ ದಿಲ್ಲಿಯ ಜವಾಹರ್[illegible] ವಿಶ್ವವಿದ್ಯಾನಿಲಯದಲ್ಲಿ ಎಬಿವಿಪಿ ಪುಂಡರು ಕನ್ಹ[illegible] ಕುಮಾರ್ ಮತ್ತಿತರರ ವಿರುದ್ಧ ನಡೆಸಿದ ದೊಡ್ಡ ಹಂಗಾ[illegible] ಜ್ಞಾಪಕವಿರಬಹುದು. ಆಗ ಪಾಕ್ ಪರ ಘೋ[illegible] ಕೂಗಿದವರು ಲಷ್ಕರ್ ಕಿಡಿಗೇಡಿಗಳು ಎಂದು ರಾಜ[illegible] ಸಿಂಗ್ ಆರೋಪಿಸಿದ್ದರೆ ಸ್ಮೃತಿ ಇರಾನಿ ತನ್ನ ತಲೆ[illegible] ಕತ್ತರಿಸಿಕೊಳ್ಳಲು ಸಿದ್ಧಳಿದ್ದಳು. ಇಷ್ಟೆಲ್ಲ ನಾಟಕೀಯ ಘಟ[illegible] ಅಂತಿಮ ಫಲಿತಾಂಶವೇನು? ಇದುವರೆಗೂ ಆರೋಪ[illegible] ಸಲ್ಲಿಕೆ ಆಗಿಲ್ಲ! ಇದೀಗ ಎಬಿವಿಪಿ ಜತೆ ತಾ[illegible] ನಡೆಸಿದಂತಹ ನಜೀಬ್ ಎಂಬ ವಿದ್ಯಾರ್ಥಿಯೂ 201[illegible] ಅಕ್ಟೋಬರ್ 15ರಿಂದ ನಾಪತ್ತೆಯಾಗಿದ್ದಾನೆ. [illegible] ಪೊಲೀಸರು ಆತನ ಪತ್ತೆಹಚ್ಚುವಲ್ಲಿ ಅನಾಸಕ್ತರಾಗಿರುವ[illegible] ಏನನ್ನು ಸೂಚಿಸುತ್ತದೆ?

ಸುಳ್ಳು ಸುದ್ದಿಗಳ ಛಾಂಪಿಯನ್

ಸಂಘಪರಿವಾರ ತನ್ನ ಹುಟ್ಟಿನಿಂದಲೂ ಸುಳ್ಳು ಹೇ[illegible] ಕಲೆಯನ್ನು ಕರಗತಮಾಡಿಕೊಂಡಿದೆ. ತಾನೊಂದು [illegible] ಸಾಂಸ್ಕೃತಿಕ ಸಂಘಟನೆ ಎಂದು ಹೇಳಿಕೊಳ್ಳು[illegible] ರಾಜಕೀಯದಲ್ಲೂ ನೇರವಾಗಿ ಕೈಯಾಡಿಸಿರುವುದನ್ನು ಯ[illegible] ತಾನೆ ಕಂಡಿಲ್ಲ? ಗಾಂಧಿಹತ್ಯೆಯ ಘಟನೆಯಿಂದ ಆರಂಭ[illegible] ನಾನಾ ಕೋಮು ಗಲಭೆಗಳನ್ನು ಹಿಂದಿಕ್ಕಿ, ಗುಜ[illegible] ನರಮೇಧವನ್ನು ಹಾಯ್ದು ಮಾಲೆಗಾಂವ್, ಅಜ್ಮೇರ ದ[illegible] ಮುಂತಾದ ಸ್ಫೋಟಕೃತ್ಯಗಳನ್ನು, ಚರ್ಚ್ ದಾಳಿಗಳನ್ನು ದ[illegible] ಇಂದಿನವರೆಗೂ ಅದು ತನ್ನ ಪಾತ್ರವನ್ನು ನಿರಾಕರಿಸು[illegible] ಬಂದಿದೆ. ಮೋದಿ ಪ್ರಧಾನಿ ಆದ ನಂತರದಲ್ಲ[illegible] ಸಂಘಪರಿವಾರದ ಸುಳ್ಳುಗಳಿಗೆ, ಮಿಥ್ಯಾರೋಪಗ[illegible] ಮಿತಿಯೆ ಇಲ್ಲವೆಂದಾಗಿದೆ. ಕ್ಯಾಂಪಸ್‌ಗಳಲ್ಲಿ, ಮಾಧ್ಯಮಗ[illegible] ಎಲ್ಲಿ ನೋಡಿದರಲ್ಲಿ ಸುಳ್ಳೆ ವಿಜೃಂಭಿಸುತ್ತಿದೆ. ದಾವೂ[illegible] ಇಬ್ರಾಹಿಂ ಕುರಿತ ಗಾಳಿ ಸಮಾಚಾರ ಇದಕ್ಕೊಂ[illegible] ಅತ್ಯುತ್ತಮ ನಿದರ್ಶನ. "ದಾವೂದ್ ಇಬ್ರಾಹಿಂ ಸಂಯು[illegible] ಅರಬ್ ಪ್ರಾಂತಗಳಲ್ಲಿ (United Arab Emirate[illegible] ರೂ. 15,000 ಕೋಟಿ ಮೌಲ್ಯದ ಆಸ್ತಿಪಾಸ್ತಿಗಳ ಒಡೆ[illegible] ಇತ್ತೀಚೆಗೆ ಅಲ್ಲಿನ ಸರಕಾರ ದಾವೂದ್‌ನ ಆಸ್ತಿಗಳ ಮೇ[illegible] ದಾಳಿಗಳನ್ನು ಆಯೋಜಿಸಿದೆ; ಇದರ ಪೂರ್ತಿ[illegible] ಮೋದಿಜಿಗೆ ಸಲ್ಲಬೇಕು ಏಕೆಂದರೆ ಇದು ಮೋದಿಜಿ[illegible] 'ಪರಿಣತ ರಾಜತಂತ್ರಿಕ ನಡೆ'"ಯ ಫಲವಾಗಿದೆ" [illegible] ಸುದ್ದಿಯೊಂದನ್ನು ಹಬ್ಬಿಸಲಾಗಿತ್ತು, ಆದರೆ ಸಂಯುಕ್ತ [illegible] ಪ್ರಾಂತಗಳ ರಾಯಭಾರಿ ಆಗಿರುವ ಅಹಮದ್ [illegible] ಬನ್ನಾ ಈ ಸುದ್ದಿಯನ್ನು ನಿರಾಕರಿಸಿರುವುದಷ್ಟೆ ಅಲ್ಲ, [illegible] ದಾಳಿಗಳಾಗಿರುವ ಬಗ್ಗೆ ಯಾವುದೇ ಮಾಹಿತಿ [illegible] ಎಂದಿದ್ದಾರೆ! ಇದರಿಂದ ಮೋದಿಭಕ್ತರ ಬಲೂನಿಗೆ ಮು[illegible] ಚುಚ್ಚಿದಂತಾಗಿದೆ!

ಸಂಘಿಗಳ ಭ್ರಷ್ಟಾಚಾರಕ್ಕೆ ಅಡೆತಡೆಗಳಿ[illegible]

ಭ್ರಷ್ಟಾಚಾರವನ್ನು ಕೊನೆಗೊಳಿಸುವೆನೆಂದು ಹೇಳ[illegible] ವೋಟು ಗಿಟ್ಟಿಸಿ ಅಧಿಕಾರಕ್ಕೆ ಬಂದವರ [illegible]

ರದ ಕೂಪದಲ್ಲಿ ಕೊಳೆಯುತ್ತಿರುವ ವಿಷಯ ಈಗ ಸ್ಯ ಗುಜರಾತ್ ಪೆಟ್ರೋಲಿಯಂ ಕಾರ್ಪೋರೇಷನ್, ಬಿರ್ಲಾ ಪೇಪರ್ಸ್ ಇತ್ಯಾದಿಗಳು ನೇರವಾಗಿ ಯನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿವೆ. ಇನ್ನು ಅಧಿಕಾರದಲ್ಲಿರುವ ಗುಜರಾತ್, ಮಧ್ಯ ಪ್ರದೇಶ, ನ, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ತ್ತಿರುವ ಅವ್ಯವಹಾರಗಳಿಗೆ ಲೆಕ್ಕವಿಲ್ಲ. ಉದಾಹರಣೆಗೆ ತಾಗಿರುವ ಕುಖ್ಯಾತಿಯ ಮಧ್ಯ ಪ್ರದೇಶದಲ್ಲಿ ಇದೀಗ ರು 500 ಕೋಟಿ ಮೌಲ್ಯದ ಹವಾಲಾ ಂದು ನಡೆಯುತ್ತಿರುವ ಸಂಗತಿ ಬೆಳಕಿಗೆ ಬಂದಿದೆ. ಕಟ್ನಿ ಎಂಬಲ್ಲಿ ನಕಲಿ ಕಂಪೆನಿಗಳ ಹೆಸರಲ್ಲಿ, ್ ಕಾರ್ಡುದಾರರ ಮತ್ತು ಇನ್ನಿತರರ ಕಾಲ್ಪನಿಕ ಗಳಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು ಕಪ್ಪುಹಣವನ್ನು ಾಗಿಸುವ ದಂಧೆ ರಾಜಾರೋಷವಾಗಿ ನಡೆಯುತ್ತಿದ್ದು ಅನೇಕ ವಾಣಿಜ್ಯೋದ್ಯಮಿಗಳು ಭಾಗಿಯಾಗಿದ್ದಾರೆ. ಹಿಂದೆ ರಾಜ್ಯದ ಕೈಗಾರಿಕಾ ಸಚಿವ ಸಂಜಯ ನ ಕೈವಾಡವೂ ಇರುವಂತೆ ತೋರಿಬರುತ್ತಿದೆ. ರಲ್ಲಿ ಕಾಂಗ್ರೆಸ್‌ನಿಂದ ಬಿಜೆಪಿಗೆ ಹಾರಿದಂಥಾ ಈ ಧಿಪತಿ ಗಣಿಧಣಿ ರಾಜ್ಯದ ರಾಷ್ಟ್ರೀಯ ಉದ್ಯಾನ ಪ್ರವಾಸಿತಾಣಗಳಲ್ಲಿರುವ ಹಲವಾರು ಹೋಟೆಲ್‌ಗಳ ನೂ ಆಗಿದ್ದಾನೆ. ಈ ಬಹುಕೋಟಿ ಹಗರಣದ ನಡೆಸುತ್ತಿದ್ದ ಪೊಲೀಸ್ ಎಸ್.ಪಿ. ಗೌರವ್ ತಿವಾರಿ ಾರ ಇಬ್ಬರನ್ನು ಬಂಧಿಸಿದ ಬಳಿಕ ಅವರ ಬಾಯಿಂದ ಮಂತ್ರಿಮಹೋದಯನ ಹೆಸರು ಹೊರಬಂದಿದೆ. ಕೆಲವೇ ದಿನಗಳಲ್ಲಿ ತಿವಾರಿಯನ್ನು ಎತ್ತಂಗಡಿ ಾಗಿದೆ!

ಸ್ವಕ್ಷೇತ್ರದಲ್ಲೆ 'ಪಿಂಕ್‌ಕ್ರಾಂತಿ

ನಪಿದೆಯೆ ಮೋದಿ ತನ್ನ 2014ರ ಚುನಾವಣಾ ದ ಭಾಷಣಗಳಲ್ಲಿ "ಪಿಂಕ್ ಕ್ರಾಂತಿ" ಎಂದು ಾರಿಗೆ ಯುಪಿಎ ಸರ್ಕಾರವನ್ನು ತರಾಟೆಗೆ ಕೊಳ್ಳುತ್ತಿದ್ದುದು? ನೆನಪಿದೆಯೆ ತನ್ನ ಹೃದಯ ನಿಂದ ರೋದಿಸುತ್ತಿದೆ ಎಂದು ಹೋದಲ್ಲಿ ಬಂದಲ್ಲಿ ಾತ್ಮಕವಾಗಿ ಭಾಷಣ ಬಿಗಿಯುತ್ತಿದ್ದುದು? ಅದೇ ದಲ್ಲಿ ನಾಲ್ಕು ಅತಿದೊಡ್ಡ ಬೀಫ್ ರಫ್ತು ಕಂಪೆನಿಗಳ ರು ಹಿಂದೂಗಳು ಮತ್ತು ಸಂಗೀತ ಸೋಮ ಸಂಘಿ ಬೀಫ್ ರಫ್ತು ಕಂಪೆನಿಯೊಂದರಲ್ಲಿ ಪಾಲುದಾರ ಸಂಗತಿ ಜಗಜ್ಜಾಹೀರಾಯಿತು. ಈಗ ಇದೇ ಭೂತಿತನದ ಮುಂದುವರಿಕೆಯಂತಿರುವ ಹಲಕರ ಮಾಹಿತಿಯೊಂದು ಲಭ್ಯವಾಗಿದೆ. ವಿಷಯ ರೆ 2014ರ ನವಂಬರ್‌ನಲ್ಲಿ ಮೋದಿ 'ಸಂಸದರ ಗ್ರಾಮ ಯೋಜನೆ' ಅಡಿಯಲ್ಲಿ ತನ್ನ ಚುನಾವಣಾ ದ ವಾರಾಣಸಿಯಿಂದ 30 ಕಿಮೀ ದೂರದಲ್ಲಿರುವ ರ ಎಂಬ ಗ್ರಾಮವನ್ನು ದತ್ತು ತೆಗೆದುಕೊಂಡಿದ್ದ. ಪ್ರಕಾರ ಇದಕ್ಕೆ ಭಾರಿ ದೊಡ್ಡ ಪ್ರಚಾರವನ್ನೂ ಾಗಿದೆ. ಆ ಸಂದರ್ಭದಲ್ಲಿ ಮೋದಿ "ಸಂಸದನೊಬ್ಬ ದನ್ನು ದತ್ತಕ್ಕೆ ತೆಗೆದುಕೊಳ್ಳುವುದಲ್ಲ, ತದ್ವಿರುದ್ಧವಾಗಿ ಸಂಸದನನ್ನು ದತ್ತು ಸ್ವೀಕರಿಸುತ್ತದೆ" ಎಂದೆಲ್ಲ ು ಬಿಟ್ಟಿದ್ದ. ತರುವಾಯ ಹಲವಾರು ಖಾಸಗಿ ಗಳು ಜಯಪುರಕ್ಕೆ ಧಾವಿಸಿ ಬಂದವು. ಗ್ರಾಮ ದ್ಧಿ' ಪಥದಲ್ಲಿ ಸಾಗುತ್ತಿರುವುದನ್ನು ತೋರಿಸಲು ಬಂತು, ಒಂದು ಸೋಲಾರ್ ವಿದ್ಯುತ್ ಉತ್ಪಾದನಾ ದ ಸ್ಥಾಪನೆ ಆಯಿತು, ಸೋಲಾರ್ ಬೀದಿದೀಪಗಳು ತೊಡಗಿದವು. ಹೀಗೆ ಜಯಪುರಕ್ಕೆ ಕಾಲಿಟ್ಟ ಖಾಸಗಿ ಗಳಲ್ಲಿ ಅಲ್ಲಾನಾಸನ್ಸ್ ಕೂಡಾ ಒಂದು. ಅಲ್ಲಾನಾಸನ್ಸ್ ವ್ಯಾಪಾರ ಏನು ಗೊತ್ತೆ? ಮಾಂಸ ರಫ್ತು, ಅದೂ ಾ ಮಾಂಸ ಅಲ್ಲ, ಬೀಫ್! ಅಲ್ಲಾನಾಸನ್ಸ್ ಭಾರತದ ಮಾಂಸವನ್ನು 70ಕ್ಕೂ ಅಧಿಕ ದೇಶಗಳಿಗೆ ರಫ್ತು ತ್ತದೆ! "ಪಿಂಕ್ ಕ್ರಾಂತಿ" ಎಂದರೆ ಇದೇ ತಾನೆ?


ಕೊನೆಹನಿ

ಸ್ತ್ರೀಯತೆ, ಮುಸ್ಲಿಂ ದ್ವೇಷ, ವಲಸಿಗರಿಗೆ ನಿರ್ಬಂಧ, ರುಳ ಭಾಷಣದಂತಹ ವಿಷಯಗಳಲ್ಲಿ ಭಾರತ ಮತ್ತು ಕದ ಪ್ರಸಕ್ತ ನಾಯಕದ್ವಯರ ಮಧ್ಯೆ ಬಹಳಷ್ಟು ಗಳು ಗೋಚರಿಸುತ್ತವೆ. ಆದರೆ ಪ್ರಜಾ ಪ್ರತಿರೋಧ ಮಾಧ್ಯಮ ಸ್ವಾತಂತ್ರದ ವಿಷಯಗಳಿಗೆ ಬಂದಾಗ ು ದೇಶಗಳ ಪ್ರಜಾಸತ್ತೆ ನಡುವಿನ ಅಗಾಧ ವ್ಯತ್ಯಾಸ ಾಣುವಂತಿದೆ. ಅಮೆರಿಕದಾದ್ಯಂತ ಲಕ್ಷಾಂತರ ಜನ ಅಯ್ಯನ್ನು ಖಂಡಿಸಿ ಬೀದಿಗಿಳಿದು ಪ್ರತಿಭಟನೆ ದರೆ ಅಮೆರಿಕನ್ ಪತ್ರಕರ್ತರು ಟ್ರಂಪ್‌ಗೆ ಗಪತ್ರವೊಂದನ್ನು ಬರೆದು "ನಮ್ಮ ಓದುಗರಿಗೆ, ರಿಗೆ, ವೀಕ್ಷಕರಿಗೆ ಅತ್ಯುತ್ತಮ ಸೇವೆ ನೀಡುವುದು ು ನಿರ್ಧರಿಸುವವರು ನಾವೆ ಹೊರತು ನೀವಲ್ಲ... ಯಾರು, ಯಾತಕ್ಕೋಸ್ಕರ ಇಲ್ಲಿರುವೆವು ಎಂಬ ಮೂಲಭೂತ ಪ್ರಶ್ನೆಗಳ ಬಗ್ಗೆ ಮರುಚಿಂತನೆ ಂತೆ ಜುಲುಂ ಮಾಡಿರುವಿರಿ. ಇದಕ್ಕಾಗಿ ನಿಮಗೆ ಆಭಾರಿಯಾಗಿರುವೆವು..." ಎಂದು ಖಾರವಾಗಿ ಗೆ. ಭಾರತದಲ್ಲಿ? ಮಾತು ಸೋತಿದೆ.

■ ಸುರೇಶ್ ಭಟ್ ಬಾಕ್ರಬೈಲ್

ಬಿಡಲಾಗದ ಬ್ರಾಹ್ಮಣಿಕೆಯ ಅಹಂ

ಹಿಂದೂಗಳು ರಾಮಾಯಣ, ಮಹಾಭಾರತದಂತಹ ಎಲ್ಲಾ ಪುರಾಣ ಗ್ರಂಥಗಳಿಗೂ ಹೆಚ್ಚು ಮಾನ್ಯತೆ ಕೊಡುವ ಭಗವದ್ಗೀತೆಯಲ್ಲಿ ಬರುವ ಒಂದು ಪ್ರಸಿದ್ಧ ಮಾತು ಹೀಗಿದೆ: "ನಾವು ಸ್ಥಾವರ ಜಂಗಮ ಯಾವುದನ್ನೇ ಆಗಲಿ ಅದು ಸ್ಥಿರ ಅಥವ ಶಾಶ್ವತವೆಂದು ಭಾವಿಸುವುದೇ ಪರಮ ಮೂರ್ಖತನದ ವಿಚಾರ. ಇಲ್ಲಿಗೆ ಯಾರೂ ಅನಿವಾರ್ಯವಲ್ಲ ಅವಶ್ಯವೂ ಇಲ್ಲ. ವಿಶ್ವದಲ್ಲಿ ಶಾಶ್ವತವಾಗಿ ಇರುವಂತಹ ಸಂಗತಿಯೇನಾದರೂ ಇದ್ದಿದ್ದರೆ ಅದು ಕೇವಲ 'ಬದಲಾವಣೆ' ಎಂಬ ವಿಚಾರ ಮಾತ್ರ. ಪರಿವರ್ತನೆಯೇ ಈ ಜಗದ ಅಸಲಿ ನಿಯಮ" ಎಂದು ಘಂಟಾಘೋಷವಾಗಿ ಸಾರುತ್ತದೆ ಗೀತೆ. ಈ ಗೀತೆಯನ್ನು ಬೋಧಿಸಿದವನೆಂದು ಹಿಂದೂಗಳು ನಂಬುವ ಶ್ರೀಕೃಷ್ಣನೇ ತನ್ನ ಕೊನೆಗಾಲದಲ್ಲಿ ಕಾಲನ ಹೊಡೆತಕ್ಕೆ ಬಲಿಯಾಗಿ ದಾರುಣವಾಗಿ ತನ್ನ ಹಾಗು ತನ್ನವರ ಅಂತ್ಯವನ್ನು ಕಾಣಬೇಕಾಯಿತು. ವೈಜ್ಞಾನಿಕವಾಗಿ ಯೋಚಿಸಿದರೆ, ಒಂದು ಕಾಲಘಟ್ಟದಲ್ಲಿ ಡೈನೋಸಾರ್‌ಗಳು ಈ ಭೂಮಿಯನ್ನು ವ್ಯಾಪಿಸಿಕೊಂಡು ರಾಜಾರೋಷವಾಗಿ ಬದುಕಿದ್ದವು. ಅಂತಹ ಬೃಹತ್ ಗಾತ್ರದ ಜೀವಸಂಕುಲವೇ ಇಂದು ನಾಮಾವಶೇಷವಾಗಿವೆ. ಕೆಲವೇ ದಶಕಗಳ ಹಿಂದೆ ಸಸ್ಯ ಸಂಪತ್ತು ಅರಣ್ಯ ಹಾಗು ಅದನ್ನು ಆಶ್ರಯಿಸಿ ಬದುಕಿದ್ದ ಅಸಂಖ್ಯಾತ ವನ್ಯಜೀವಿಗಳು ನಮ್ಮ ಅಕ್ಕಪಕ್ಕದ ಪರಿಸರದಲ್ಲೇ ನೋಡಬಹುದಾಗಿತ್ತು, ಆದರೆ ಇವತ್ತಿನ ಜೇಸಿಬಿ, ಬುಲ್ಡೋಜರ್, ಪ್ಲಾಸ್ಟಿಕ್ ಹಾಗು ಇಂಟರ್‌ಲಾಕ್ ಸಿಮೆಂಟ್ ಬ್ಲಾಕ್‌ಗಳ ಯುಗದಲ್ಲಿ ಮಾನವನ ಮಿತಿಮೀರಿದ ದುರಾಸೆಯ ಅತಿಕ್ರಮಣಕ್ಕೆ ಹುಲಿ ಸಿಂಹ ಕರಡಿಗಳ ಕತೆ ಬಿಡಿ ಎರೆಹುಳ, ಸಣ್ಣ ಸಣ್ಣ ಗುಬ್ಬಚ್ಚಿಗೂ ನೆಲೆಕೊಡುವವರು ಇಲ್ಲದಂತಾಗಿ ಹೋಗಿದೆ. ನಾಳೆ ಯಾವುದೋ ಭೀಕರ ರೋಗವೋ ಇಲ್ಲಾ ಬೃಹತ್ ಆಕಾಶಕಾಯ ಭೂಮಿಗೆ ಬಿದ್ದೋ ಜಗತ್ತನ್ನಾಕ್ರಮಿಸಿಕೊಂಡ ಮಾನವ ಸಂಕುಲವೂ ವಿನಾಶಗೊಳ್ಳಬಹುದು. ಇದರಿಂದ ಭೂಮಿಯೇನೂ ಕಣ್ಣೀರಿಟ್ಟು ಮರುಗದು. ಯಾಕೆಂದರೆ, ಪ್ರಕೃತಿಯ ಮಟ್ಟಿಗೆ ಯಾರಿಗೆ ಯಾರೂ ಇಲ್ಲಿ ಅನಿವಾರ್ಯವಲ್ಲ, ಇದ್ದಷ್ಟು ಸಮಯ ಸಹಬಾಳ್ವೆಯಿಂದ ಬದುಕುತ್ತಾ, ಸಹಜ ಬದಲಾವಣೆಗಳಿಗೆ ತಕ್ಕಂತೆ ಹೆಜ್ಜೆಹಾಕುವುದೇ ಜಾಣತನ.



ಪರಿವರ್ತನೆಯೇ ಜಗದ ನಿಯಮ, ತೇನವಿನಾ ತೃಣಮಪಿ ನ ಚಲತಿ, (ಅವನ ಆಜ್ಞೆಯಿಲ್ಲದೇ ಹುಲ್ಲು ಕಡ್ಡಿಯೂ ಅಲುಗಾಡದು ವಿಶ್ವದ ಪ್ರತಿಯೊಂದು ನಡೆಯೂ ಆ ದೇವರ ನಿರ್ದೇಶನದಂತೆಯೇ ಜರುಗುತ್ತದೆ ನಾವೆಲ್ಲ ನಿಮಿತ್ತ ಮಾತ್ರ), ಸರ್ವೇ ಜನಾ ಸುಖಿನೋ ಭವಂತು ಎಂಬಿತ್ಯಾದಿಯಾಗಿ ಸಾಂದರ್ಭಿಕವಾಗಿ ಶ್ಲೋಕ ಕುಟ್ಟುವ ಬ್ರಾಹ್ಮಣ ವರ್ಗ ಸಾವಿರಾರು ವರ್ಷಗಳಿಂದ ಕಾಪಾಡಿಕೊಂಡು ಬಂದ ತಮ್ಮ 'ಸಾಮಾಜಿಕ ಕ್ರೀಮೀ ಲೇಯರ್'ಗೆ ಹಾನಿಯಾಗುವ ಲಕ್ಷಣಗಳು ಎದುರಾದಾಗಲೆಲ್ಲ ಮೇಲಿನ ಸಕಾರಾತ್ಮಕ ಶ್ಲೋಕಗಳೆಲ್ಲ ಮರೆತು ಸಾಮಾಜಿಕ ಸಮಾನತೆ ಬಯಸುವವರ ವಿರುದ್ಧವೇ ಮುಗಿಬೀಳುತ್ತವೆ. ಬದಲಾವಣೆಯನ್ನು ಒಪ್ಪದ ಅಥವ ಆದಂತಹ ಬದಲಾವಣೆಗಳ ಕುರಿತು ರೊಳ್ಳೆತೆಗೆಯುವ ಈ ಸಾಂಪ್ರದಾಯಿಕ ಜಿಗುಟರ ಗುಂಪು (ಎಲ್ಲಾ ಬ್ರಾಹ್ಮಣರೂ ಅಲ್ಲ) ಗೀತೆಯ ಬದಲಾವಣೆಯೇ ಜಗತ್ತಿನ ಶಾಶ್ವತ ಸತ್ಯ ಎಂಬ ಸಂದೇಶವನ್ನೇ ಸಾರಾಸಗಟಾಗಿ ಗಾಳಿಗೆ ತೂರುತ್ತವೆ. ಬ್ರಾಹ್ಮಣ್ಯದ ಕಟು ಪ್ರತಿಪಾದಕರೆಂದೇ ಬಿಂಬಿಸಲ್ಪಟ್ಟ ಭೈರಪ್ಪನಂತಹ ಕೆಲ ಪಿಂಡಗಳಂತೂ ಬ್ರಾಹ್ಮಣ ಶ್ರೇಷ್ಠತೆಗೆ ಕಪ್ಪುಚುಕ್ಕೆಗಳೆನಿಸಿ ಆಗಾಗ ಬೊಟ್ಟುಮಾಡಿ ತೋರಿಸುವಂತಹ ಸಾಮಾಜಿಕ ಅನಿಷ್ಟಗಳಿಗಳನ್ನೆಲ್ಲ ಯಾರ್‍ಯಾರದೋ ತಲೆಗೆ ಕಟ್ಟಲು ಹೊರಟು ನಗೆಪಾಟಲಿಗೀಡಾಗುವುದೂ ಉಂಟು. ಮೊನ್ನೆ ಮೊನ್ನೆ ಚೆಡ್ಡಿ ಸಮಾವೇಶದಂತಿರುವ ಜೈಪುರ ಸಾಹಿತ್ಯೋತ್ಸವದಲ್ಲಿ ಭೈರಪ್ಪ ಮಾಡಹೋಗಿದ್ದೂ ಕೂಡ ಇದನ್ನೇ.

ಇತ್ತೀಚೆಗೆ ಉಡುಪಿಯಲ್ಲಿ ನಮ್ಮ ಭೂಸುರಶ್ರೇಷ್ಠ ಪೇಜಾವರ ಸ್ವಾಮಿಗಳು ಮೂರು ದಿನಗಳ ರಾಷ್ಟ್ರೀಯ ಸಂಸ್ಕೃತ ಸಮಾವೇಶವನ್ನು ಭರ್ಜರಿಯಾಗಿ ನಡೆಸಿದ್ದರು. ಅದಕ್ಕೆ ಪೂರ್ವಭಾವಿಯಾಗಿ ಪತ್ರಿಕೆಗಳಲ್ಲಿ ಸಂಸ್ಕೃತದ ಮಹತ್ವಗಳನ್ನು ಹಾಡಿಹೊಗಳುವ ಅನೇಕ ಲೇಖನಗಳು ಬಂದಿದ್ದವು. ಅವುಗಳದ್ದು ಹಾಗು ಸಮಾವೇಶದಲ್ಲಿ ಭಾಗವಹಿಸಿದ ಅನೇಕರ ರಾಗ ಒಂದೇ: ಸಂಸ್ಕೃತವೇ ಜಗತ್ತಿನ ಭಾಷೆಗಳ ತಾಯಿ. ಅದು ಅತ್ಯದ್ಭುತ ಭಾಷೆ, ಸಂಸ್ಕೃತದ ಅವನತಿಗೆ ಬ್ರಾಹ್ಮಣರು ಕಾರಣರಲ್ಲ, ಅನ್ಯರ ದಾಳಿ ಹಾಗು ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಗಳೇ ಕಾರಣವಂತೆ. ವಾಸ್ತವವಾಗಿ ಭಾಷೆಯೊಂದು ಬೆಳೆಯುವುದೇ ಸಂವಹನದಿಂದ. ಇದಕ್ಕೆ ಒಳ್ಳೆಯ ಉದಾಹರಣೆ ಇಂಗ್ಲಿಷ್ ಭಾಷೆ. ಫ್ರೆಂಚ್, ಸ್ಪ್ಯಾನಿಷ್‌ನಂತೆ ಯೂರೋಪ್ ಖಂಡದ ಒಂದು ಮಾಮೂಲಿ ಭಾಷೆಯಾಗಿದ್ದ ಇದು ಮಡಿವಂತಿಕೆಯನ್ನು ಹತ್ತಿರ ಸೇರಿಸದೇ ಬೆಳೆದದ್ದು ವಾಸ್ತವ. ಸ್ವಂತ ಲಿಪಿಯಿಲ್ಲದೇ ರೋಮನ್ ಲಿಪಿಯನ್ನು ಬಳಸಿ ಜಗತ್ತಿನ ಭಾಷೆಗಳಲ್ಲದೇ ಹಿಂದಿ ಹಾಗು ಭಾರತೀಯ ಇನ್ನಿತರ ಭಾಷೆಗಳ ಅನೇಕ ಶಬ್ದಗಳನ್ನು ಪ್ರತಿವರ್ಷ ತನ್ನ ಆಕ್ಸ್‌ಫರ್ಡ್ ನಿಘಂಟಿನಲ್ಲಿ ಸೇರ್ಪಡೆಗೊಳಿಸಿಕೊಳ್ಳುವ (ಹಿಂದಿಯ Jungle ಅಲ್ಲದೇ Ginger ಹಾಗು Coir ಎನ್ನುವುದು ಕೂಡ ಭಾರತೀಯ ಭಾಷೆಯೇ ಆಗಿದೆ. ಮಲಯಾಳಂನಲ್ಲಿ ಇಂಜಿವೇರ್ ಹಾಗು ಕಯರ್ ಎಂದರೆ ಶುಂಠಿ ಹಾಗು ತೆಂಗಿನ ನಾರು ಎಂದರ್ಥ). ಈ ಭಾಷೆ ಇಂದು ಜಾಗತಿಕ ಭಾಷೆಯಾಗಿ ಬೆಳೆದಿದೆ. ಆದರೆ ಪಕ್ಕಾ ಮಡಿವಂತಿಕೆಯ ಸಂಸ್ಕೃತದ್ದು ತದ್ವಿರುದ್ಧ ದಾರಿ ಇದು ಐತಿಹಾಸಿಕ ಸತ್ಯ. ಇದನ್ನು ಸುಳ್ಳೆಂದು ಸಾಧಿಸಲು ನಾಟಕಕಾರ ಪೇಜಾವರ ಸ್ವಾಮಿಗಳು ಹಿಂದುಳಿದವರಲ್ಲೇ ಹಿಂದುಳಿದವರೆಂದು ಬಿಂಬಿತವಾದ ಕೊರಗ ಹಾಗು ಸಿದ್ದಿ ಜನಾಂಗದ ವ್ಯಕ್ತಿಗಳನ್ನು ಹಾಗು ಆದಿಚುಂಚನಗಿರಿಯಂತಹ ಸ್ವಾಮಿಗಳನ್ನು ಸಮಾವೇಶದಲ್ಲಿ ಫೋಕಸ್ ಮಾಡಿ ಕೊರಗ ಜನಾಂಗದ ವ್ಯಕ್ತಿಯಿಂದ "ಮಮ ನಾಮ ಗುರುವಹ" (ನನ್ನ ಹೆಸರು ಗುರುವ) ಎಂದು ಹೇಳಿಸಿ ಸಂಸ್ಕೃತ ಜನಮಾನಸದ ಭಾಷೆಯಾಗಿತ್ತೆಂದು ಹಗಲುವೇಷ ಮಾಡಿದ್ದರು. ಇದು ನಿಜಕ್ಕೂ ಹೌದಾಗಿದ್ದರೆ ಪೇಜಾವರರ ನಡೆ ಪ್ರಾಮಾಣಿಕವಾಗಿದ್ದರೆ ಮತ್ಯಾಕೆ ತಡ? ಸ್ವಾಮಿಗಳೇ, ಈ ಕೊರಗರ ಹಿರಿಯ ಗುರುವರನ್ನೇ ತಮ್ಮ ಉತ್ತರಾಧಿಕಾರಿಯನ್ನಾಗಿಸಬಹುದಲ್ಲ, ಶುಭಸ್ಯ ಶೀಘ್ರಂ?

ಅದೇ ರೀತಿ ಉತ್ತರದ ಜೈಪುರದಲ್ಲಿ ಅಂಬೇಡ್ಕರರಂತಹ ದಲಿತ ವ್ಯಕ್ತಿಯ ವಿದ್ವತ್ತನ್ನು ನೇರಾನೇರ ಅನುಮಾನಿಸಿ ಮಾತನಾಡುವ ನಮ್ಮ ಬೊಮ್ಮನ್ ಭೈರಪ್ಪ ಸತಿಪದ್ಧತಿ ಇಲ್ಲಿನ ಸಂಪ್ರದಾಯವಾದಿಗಳ (ಮನುಸ್ಮೃತಿ ಅನುಯಾಯಿಗಳ) ಬಳುವಳಿಯೆಂಬ ಅಭಿಪ್ರಾಯ ತಪ್ಪು ಅದು ಮುಸ್ಲಿಮ್ ದಾಳಿಕೋರರಿಂದ ಹುಟ್ಟಿದಂತಹ ಬೆಳವಣಿಗೆ ಎಂಬ ಗಾಳಿ ಗುಂಡು ಹೊಡೆದಿದ್ದರು (ಅದು ಸುಳ್ಳೆಂದು ಅವರಿಗೂ ಗೊತ್ತು ಆದರೂ ಒಂದು ವಗಾಯ್ಲೋದು? ತಾಗಿದ್ರೆ ತಾಗ್ತದೆ ಅಷ್ಟೆ). ವಾಸ್ತವವಾಗಿ ಪ್ರಾಚೀನ ಭಾರತದಲ್ಲಿ ಸತಿಹೋಗುವುದು ಹಿಂಸಾತ್ಮಕ ಎನ್ನುವುದಕ್ಕಿಂತ ಸಂಭ್ರಮದ ವಿಚಾರವೇ ಆಗಿತ್ತು, ಜನರು ದೈವೀಕರಿಸಿ ಪೂಜಿಸುವ ಮಾಸ್ತಿಕಲ್ಲು(ಮಹಾಸತಿ)ಗಳೂ ಇದರ ಸಾಮಾಜಿಕ ಔನ್ನತ್ಯವನ್ನ ಸಾರುತ್ತದೆಯೇ ಹೊರತು ದಾಳಿಕೋರರ ಬಲಿಪಶುವಾಗಿ ಸತ್ತಂತಹ ಹೆಣ್ಣಿನ ನೋವಿನ ಛಾಯೆ ಇಲ್ಲಿ ಸುಳಿಯದು. (ಸ್ವಾತಂತ್ರ ಪೂರ್ವ ಕಾಲದ ವಿದೇಶಿ ಪ್ರವಾಸಿಗನೊಬ್ಬ ಸಂಭ್ರಮದ ಮುಖಭಾವದಲ್ಲಿರುವ ಸತಿಯಾಗುವವಳ ಬಗ್ಗೆ ಉಲ್ಲೇಖಿಸಿದ ವಿಚಾರವಿದೆ). ಭಾರತೀಯ ನಂಬಿಕೆಗಳ ಪ್ರಕಾರ ಪತಿ ಪತ್ನಿಯರಾಗುವುದು ಏಳೇಳು ಜನ್ಮದ ಜನ್ಮಾಂತರ ಸಂಬಂಧದ ವಿಚಾರ. ಒಂದುವೇಳೆ ಪತಿ ಮರಣ ಹೊಂದಿದರೆ ಪತಿ ಸೇವೆಯೇ ಪರಮಭಾಗ್ಯವೆಂದು ನಂಬುವ ಪತ್ನಿ ಸ್ವರ್ಗದಲ್ಲಿರುವ ಪತಿಯೆಂಬ ಒಂಟಿ ಜೀವವನ್ನು ಸೇರಬೇಕಾಗುವುದು ಒಂದು ರೀತಿಯ ಕರ್ತವ್ಯವೆಂದೇ ಭಾವಿಸಲಾಗಿತ್ತು. (ಈಜಿಪ್ಟ್‌ನ ಪಿರಮಿಡ್‌ನಲ್ಲಿ ಸತ್ತ ರಾಜನೊಂದಿಗೆ ಸೇವಕರನ್ನೂ ಹೂಳುವಂತೆ.) ವಾಸ್ತವವಾಗಿ ಒಂದು ಕಾಲಘಟ್ಟದಲ್ಲಿ ಈ ಭಾವ ಸಾರ್ವತ್ರಿಕವಾಗಿ ಚಾಲ್ತಿಯಲ್ಲಿಲ್ಲದಿದ್ದರೂ ಸತಿ ಹೋಗುವುದು ಅವರವರ ಐಚ್ಛಿಕ ವಿಷಯವಾಗಿತ್ತೇ ಹೊರತು ಒತ್ತಾಯ ಇದ್ದಿರಲಿಲ್ಲ. ಜೊತೆಗೆ ವಿಧವೆಯಾಗಿ ಇಲ್ಲಿ ಥೀ ಥೂ ಎಂದು ಹೇಳಿಸಿಕೊಂಡು ನರಳುವುದಕ್ಕಿಂತ (ಸ್ವಾತಂತ್ರ್ಯೋತ್ತರ ಕಾಲದಲ್ಲೂ ವಿಧವೆಯರನ್ನು ಕಾಶಿಗೆ ಬಿಟ್ಟು ಬರುತ್ತಿದ್ದರು. ಅಲ್ಲಿ ಸೇರಿದ ಅವರಲ್ಲಿ ಅದರಲ್ಲೂ ಹೆಚ್ಚಿನ ಬಾಲ ವಿಧವೆಯರು ನರಕಸದೃಶ ಬದುಕನ್ನು ನಡೆಸುತ್ತಿದ್ದರು. ಇನ್ನು ಹಿಂದೆ ಈ ಸ್ಥಿತಿ ಹೇಗಿದ್ದಿರಬಹುದು?) ಸತಿಯಾಗುವುದೇ ಒಂದು ರೀತಿಯಲ್ಲಿ ಹಿತವೆನಿಸಿತ್ತು, ಮಹಾಭಾರತದಲ್ಲಂತೂ ಸತಿ ಹೋಗುವ ಬಗ್ಗೆ ಮಾದ್ರಿ ಹಾಗು ಕುಂತಿಯರಲ್ಲಿ ನಾಮುಂದು ತಾಮುಂದೆಂದು ವಾದವೇ ನಡೆದ ಉಲ್ಲೇಖವಿದೆ. ಕೊನೆಗೆ ನನಗಿಂತ ನಿನ್ನ ಮಕ್ಕಳಲ್ಲದಿದ್ದರೂ ನಕುಲ ಸಹದೇವರಲ್ಲಿ ಭೇದ ತೋರದೇ ಬೆಳೆಸುವ ಗುಣ ನಿನ್ನಲ್ಲಿದೆ ಎಂದು ಕಿರಿಯ ಪತ್ನಿಯಾದರೂ ಮಾದ್ರಿಯೇ ಕುಂತಿಗೆ ಪಂಚ್ ಹೊಡೆದು ಪಾಂಡು ಮಹಾರಾಜನ ಚಿತೆಯೇರಿ ಅವನ ಸ್ವರ್ಗಯಾನಕ್ಕೆ ಸಾಥ್ ಕೊಡುತ್ತಾಳೆ. ಹಾಗಾದರೆ ಈ ಸತಿಯ ಮೂಲವೆಲ್ಲಿ?

ಬಿಂದು ಪತ್ರ

ಹೌದು, ಕೇವಲ ಮಾದ್ರಿಯಲ್ಲದೇ ಪುರಾಣದಲ್ಲೇ ಇಂತಹ ಹಲವಾರು ಸತಿ ಹೋಗುವ ಪ್ರಕರಣಗಳ ಉಲ್ಲೇಖಗಳು ಸಿಗುತ್ತವೆ. ಸತಿ ಎನ್ನುವುದು ಪತ್ನಿ ಎನ್ನುವ ಅರ್ಥವನ್ನು ನೀಡಿದರೂ ಸಹ ಮೂಲದಲ್ಲಿ ಅದು ಪಾರ್ವತೀ ದೇವಿಯ ಹೆಸರಾಗಿತ್ತು, ಭಾರತದಲ್ಲಿ ಪ್ರಭಾವಿಸಿದ್ದ ಶಾಕ್ತ ಪಂಥಗಳು ಹಾಗು ದೇಶಾದ್ಯಂತ ಹರಡಿರುವ ಶಕ್ತಿಪೀಠಗಳು ಈ ಸತಿ ಪದ್ಧತಿಯ ಪ್ರಭಾವವನ್ನೇ ತೋರಿಸುತ್ತವೆ. ಭಾರತವಲ್ಲದೇ ಈಗಿನ ಪಾಕಿಸ್ತಾನ, ಅಫ್ಘಾನಿಸ್ತಾನದಲ್ಲೂ ಶಕ್ತಿ ಪೀಠಗಳಿವೆ. ದಕ್ಷಯಜ್ಞದಲ್ಲಿ ಅವಮಾನಿತಳಾದ ಪಾರ್ವತಿ ಅರ್ಥಾತ್ ಸತಿ ಅಲ್ಲಿದ್ದ ಯಜ್ಞಕುಂಡಕ್ಕೆ ಹಾರಿ ಗಂಡ ಬದುಕಿರುವಾಗಲೇ ಸತಿಯಾಗುತ್ತಾಳೆ (ಒಬ್ಬನನ್ನು ಎಲ್ಲರೆದುರು ಕೀಳಾಗಿ ಬೈದರೆ ಅದೇ ಆತನ ಸಾವಿಗೆ ಸಮಾನವಂತೆ. ಕರ್ಣನನ್ನು ಕೊಲ್ಲದೇ ಬಂದ ಅರ್ಜುನನ ಗಾಂಡೀವಕ್ಕೆ ಜರೆದ ಧರ್ಮರಾಯನನ್ನು ಕೃಷ್ಣ ಈ ರೀತಿಯಾಗಿ ಸಾಯಿಸುವಂತ ಸಂದರ್ಭ ಮಹಾಭಾರತದಲ್ಲಿದೆ. ಅದೇರೀತಿ ದಕ್ಷ ತನ್ನ ಬೈಗುಳದಿಂದಲೇ ಶಿವನನ್ನು ಸಾಯಿಸಿದ್ದ). ಅಗ್ನಿಯಲ್ಲಿ ಸತ್ತ ಸತಿಯನ್ನು ನೋಡಿ ಕುಪಿತನಾದ ಶಿವ ಆ ಸತಿಯ ಬೆಂದ ಶವವನ್ನೇ ಹಿಡಿದು ಭಾರತವಿಡೀ ತಿರುಗಾಡಿದಾಗ ಬಿದ್ದಂತಹ ಸತಿಯ ದೇಹದ ಭಾಗಗಳು ಅಲ್ಲಲ್ಲಿ ಶಕ್ತಿ ಪೀಠಗಳೆನಿಸಿಕೊಂಡವಂತೆ. (ನಾಸಿಕದಲ್ಲಿ ಮೂಗು, ಕಾನ್‌ಪುರದಲ್ಲಿ ಕಿವಿ, ಹೀಗೆ.) ಒಟ್ಟಾರೆ ಪ್ರಥಮತಃ ಸತಿ ಹೋಗಿ ಅಂತಹ ಸಂಪ್ರದಾಯಕ್ಕೆ ನಾಂದಿ ಹಾಡಿದ್ದು ಪಾರ್ವತಿಯಾದರೆ ಅದನ್ನು ಪುಣ್ಯಕಾರ್ಯವೆಂದು ದೈವೀಕರಿಸಿ ಮುಂದುವರೆಸಿದ್ದು ಪುರೋಹಿತ ವರ್ಗವೇ ಹೊರತು ಭೈರಪ್ಪ ಹೇಳಿದಂತೆ ಮುಸಲ್ಮಾನ ದಾಳಿಕೋರರಲ್ಲ.

ಬ್ರಾಹ್ಮಣ್ಯ ಶ್ರೇಷ್ಠತೆಯ ಕಾರಣದಿಂದ ಹುಟ್ಟಿದ ಜಾತೀಯತೆಯೇ ಮೊದಲಾದ ಕಂದಾಚಾರಗಳಿಗೆ ಇಂದಿಗೂ ಜೀವಂತಸಾಕ್ಷಿಗಳು ಸಿಗುತ್ತಲಿದ್ದರೂ (ಮೊನ್ನೆ ಮಂಗಳೂರಿನಲ್ಲಿ ರಾಮಕೃಷ್ಣ ಶರ್ಮ ಎಂಬ ಜೋತಿಷಿ ಸಮಸ್ಯೆ ಪರಿಹಾರಕ್ಕೆ ಬ್ರಾಹ್ಮಣನ ಜೊತೆ ಮಲಗುವುದೇ ಪರಿಹಾರ ಎಂದು ಸುದ್ದಿಮಾಡಿದ್ದು ಗೊತ್ತಲ್ಲವೇ) ಇತ್ತೀಚೆಗಿನ ದಿನಗಳಲ್ಲಿ ಭೈರಪ್ಪನಂತವರ ಇಂತಹ ಮೊಂಡು 'ತೇಪೆವಾದ' ಉದ್ದೇಶ ಪೂರ್ವಕವಾಗಿ ಹೆಚ್ಚು ಚಾಲ್ತಿಗೆ ತರಲಾಗುತ್ತಿದೆ. ಬೆಲ್ಲಿಯಪ್ಪ ಬಾಲಯ್ಯನಿಂದ ಹಿಡಿದು ಶಶಿ ತರೂರ್‌ವರೆಗೆ ತೇಪೆವಾದದ ಪ್ರಚಾರಕರು ಇವತ್ತು ಹೆಚ್ಚುತಲಿದ್ದಾರೆ. ಇವರ ಪ್ರಕಾರ ಜಾತೀಯತೆ, ಅಸ್ಪೃಶ್ಯತೆ, ಕಂದಾಚಾರಗಳಿಗೆಲ್ಲ ಬ್ರಾಹ್ಮಣರು ಕಾರಣರಲ್ಲ ಅದಕ್ಕೆ ಕಾರಣ ಮುಸಲ್ಮಾನ ದಾಳಿಕೋರರು ಮತ್ತು ಈಗಿಲ್ಲದ ಬ್ರಿಟಿಷ್ ಆಡಳಿತವಂತೆ.

ಬ್ರಾಹ್ಮಣರೆಲ್ಲರೂ ಜಿಗುಟರಲ್ಲ, ಪಾಪ ಆದರೂ ಕೆಲವರಿಗೆ ಅನಾಯಾಸವಾಗಿ ಸಾವಿರಾರು ವರ್ಷಗಳಿಂದ ದೊರೆತ ಸಾಮಾಜಿಕ ಹಾಗು ಭೂಸುರರೆಂಬ ಧೈವಿಕ ಅಂತಸ್ತನ್ನು ಕಳಕೊಂಡು ಸಾಮಾನ್ಯರೆನಿಸಿಕೊಳ್ಳುವ ಅವ್ಯಕ್ತ ಭಯ ಕಾಡುತ್ತಲಿರಬೇಕು ಹಾಗಾಗಿ ಗೀತೆ ಹೇಳಿದ ಬದಲಾವಣೆಯೇ ಶಾಶ್ವತ ತತ್ವ ಎಂಬ ಸಿದ್ಧಾಂತವನ್ನಿವರು ಯಾವತ್ತಿಗೂ ಒಪ್ಪರು. ನಿಮಗೆ ಗೊತ್ತಿರಬಹುದು ಮೌಢ್ಯ ಪ್ರತಿಬಂಧಕ ಕಾಯ್ದೆ ತರುತ್ತೇನೆಂದ ಸಿದ್ದರಾಮಯ್ಯನರನ್ನು ವ್ಯವಸ್ಥಿತವಾಗಿ ಹಣಿಯಲಾಯಿತು. ಇದ್ದುದ್ದರಲ್ಲಿ ಸಿದ್ದರಾಮಯ್ಯನವರೇ ಲಕ್ಕಿ. ಯಾಕೆಂದರೆ, ಇಂತಹ ಮೌಢ್ಯ ವಿರೋಧಿ ನಿಲುವು ತಳೆದಿದ್ದ ದಾಭೋಲ್ಕರ್, ಗೋವಿಂದ ಪನ್ಸಾರೆ ಹಾಗು ಕನ್ನಡಿಗ ಕಲ್ಬುರ್ಗಿಯವರನ್ನು ನೇರಾನೇರ ಕೊಲ್ಲಲಾಯಿತು. ಇಂತಹ ಕೆಟ್ಟ ಕಾಲಘಟ್ಟದಲ್ಲಿ ಪಕ್ಕಾ ಸಂಪ್ರದಾಯವಾದಿ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ ಬೆಳೆದ ಉಡುಪಿಯ ಹಿರಿಯರೊಬ್ಬರು ದೇವರ ಅಸ್ತಿತ್ವವನ್ನು ಸಾರಾಸಗಟಾಗಿ ತಳ್ಳಿಹಾಕಿ ಮಾತನಾಡುತ್ತಾರೆ. ಅವರೇ ಇಸ್ರೋದ ಮಾಜಿ ಅಧ್ಯಕ್ಷ ಹಿರಿಯ ವಿಜ್ಞಾನಿ ಯು.ಆರ್.ರಾವ್. "ನಾವೀಗ ಶನಿ ಮಂಗಳ ಗ್ರಹಗಳನ್ನೆಲ್ಲ ಹತ್ತಿರದಿಂದ ನೋಡಿದ್ದೇವೆ. ಅಲ್ಲಿರೋದು ಬರೀ ಮಣ್ಣು ಧೂಳು. ದೇವರು ಮೌಢ್ಯಗಳಿಗೆಲ್ಲ ಯಾವತ್ತೂ ಜೋತು ಬೀಳಬೇಡಿ. ಇದನ್ನು ಹಬ್ಬಿಸುವವರಿಂದ ಎಚ್ಚರವಿರಿ" ಎಂದು ಕ್ರೈಸ್ಟ್ ಕಾಲೇಜಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾಮಾಜಿಕ ಸ್ವಾಸ್ಥ್ಯದ ಉದ್ದೇಶವನ್ನಿಟ್ಟುಕೊಂಡು ರಾವ್ ಮಾತನ್ನಾಡಿದರೆ, ಪ್ರಖರ ವಿಚಾರವಾದಿ ಎಚ್.ನರಸಿಂಹಯ್ಯನಂತವರು ಸ್ಥಾಪಿಸಿದ ಕರ್ನಾಟಕ ವಿಜ್ಞಾನ ಪರಿಷತ್‌ನ ಸಹಯೋಗದಲ್ಲಿ ನಡೆದ ರಾಜ್ಯಮಟ್ಟದ ಶಾಲಾಮಕ್ಕಳ ವಿಜ್ಞಾನ ಮೇಳದಲ್ಲಿ ವಿಧಾನ ಪರಿಷತ್ ಸದಸ್ಯ ಕಾರ್ಣಿಕ್‌ರಂತವರು ಇಂಗ್ಲಿಷಿನ Atom ಎಂಬ ಶಬ್ದ ಸಂಸ್ಕೃತದ ಆತ್ಮ ಪದದ ಅಪಭ್ರಂಶ ಎಂದು ಸುಳ್ಳು ಸುಳ್ಳೇ ಹೇಳುತ್ತಾ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕಾದ ಮಕ್ಕಳಲ್ಲಿ ಗಣಪತಿ ತಲೆ ಜೋಡಣೆ, ಕುಂತಿ ಹುಟ್ಟಿನಂತಹ ಕಪೋಲಕಲ್ಪಿತ ಮಂಕನ್ನು ತುಂಬಿಹೋಗುತ್ತಾರೆ.

ಯು.ಆರ್.ರಾವ್‌ರಂತವರು ಗೀತೆ ಹೇಳಿದ ಸಹಜ ಬದಲಾವಣೆಗಳಿಗೆ ಒಗ್ಗುವ ಛಾಯ ಮಾನ ದವರಾದರೆ ಭೈರಪ್ಪ, ಪೇಜಾವರ ಹಾಗು ಅವರ ಶಿಷ್ಯ ಪಡೆ ಆ 'ಜಗದ ನಿಯಮ' ತಮ್ಮ ಪಾಲಿನ ಮುಳುವು ಎಂದು ಭಾವಿಸುವಂತವರು. ವಿಚಿತ್ರವಾಗಿದೆಯಲ್ಲವೇ..!!!

■ ಶಂಕರ್. ಬ್ರಹ್ಮಾವರ್

ಡಿಜಿಟಲ್ ಲೂಟಿ

08 ⏮

ತಿಂಗಳುಗಳ ಹಿಂದೆ ಬೆಳಕಿಗೆ ಬಂದಿತ್ತು. ಈ ಬಗ್ಗೆಯೂ ಕೋರ್ಟ್‌ನಲ್ಲಿ ಪ್ರಕರಣ ನಡೆಯುತ್ತಿದೆ. ರಿಲಯನ್ಸ್‌ನ ಇತಿಹಾಸದ ತುಂಬಾ ಇಂಥಾ ಹತ್ತಾರು ಹಗರಣಗಳು ಹಾಸುಹೊಕ್ಕಾಗಿವೆ. ಆ ಮಾತು ಬೇರೆ.

ರಿಲಯನ್ಸ್ ಕಂಪನಿಯ ಮಾಲಿಕ ಮುಖೇಶ್ ಅಂಬಾನಿ 'ಜಿಯೋ' ಮೊಬೈಲ್ ವ್ಯವಹಾರದಲ್ಲಿ ತಾವು 1,50,000 ಕೋಟಿ ರೂಪಾಯಿಗಳನ್ನು ತೊಡಗಿಸಿರುವುದಾಗಿ ಕಳೆದ ತಿಂಗಳು ಹೇಳಿಕೊಂಡಿದ್ದ! ಇದು ಪ್ರಪಂಚದ ಇತಿಹಾಸದಲ್ಲೇ ಅತಿದೊಡ್ಡ ಸ್ಟಾರ್ಟ್‌ಅಪ್ ಕಂಪನಿಯೆಂದೂ ಅಂಬಾನಿ ಕೊಚ್ಚಿಕೊಂಡಿದ್ದ. ಅಷ್ಟು ಮಾತ್ರವಲ್ಲ, ಭವಿಷ್ಯದ ಭಾರತದಲ್ಲಿ ಬರಲಿರುವ ಡಿಜಿಟಲ್ ಎಕಾನಮಿಯ ಕ್ರಾಂತಿಗೆ ಜಿಯೋ ಕಂಪನಿಯೇ ವಾಹಕವಾಗಲಿದೆ ಎಂದು ಘೋಷಿಸಿದ್ದಾನೆ. ಆದರೆ ವಿಧೀರ್ ಎಂದು ಒಂದೂವರೆ ಲಕ್ಷ ಕೋಟಿ ಹಣ ಬಂದಿದ್ದಾದರೂ ಎಲ್ಲಿಂದ? ಯಾವ ಯಾವ ದೇಶದಲ್ಲಿ ಯಾವ ಬೇನಾಮಿ ಕಂಪನಿಗಳಲ್ಲಿ ಬಂಡವಾಳ ಬಚ್ಚಿಟ್ಟಿದ್ದರು?


ಎರಡು ತಿಂಗಳ ನಂತರ 2017ರ ಜನವರಿ ಮೊದಲವಾರದಲ್ಲಿ ಹೊರಬಿದ್ದ ವರದಿಗಳು ಮತ್ತಷ್ಟು ಆಶ್ಚರ್ಯಕರವಾಗಿದ್ದವು. ರಿಲಯನ್ಸ್ ಜಿಯೋ 29.4 ಬಿಲಿಯನ್ ಡಾಲರ್, ಅಂದರೆ ಎರಡು ಲಕ್ಷ ಕೋಟಿಗಳಿಗಿಂತಲೂ ಹೆಚ್ಚು ಬಂಡವಾಳ ತೊಡಗಿಸಿರುವುದಾಗಿ ಬ್ಲೂಮ್‌ಬರ್ಗ್ ನಿಯತಕಾಲಿಕ ಹೇಳುತ್ತದೆ. ಈ ಮೊತ್ತ ಆಫ್ಘಾನಿಸ್ತಾನ, ಭೂತಾನ್ ಮತ್ತು ಮಾಲ್ದೀವ್ಸ್ ದೇಶಗಳ ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕಿಂತಲೂ ಹೆಚ್ಚು. ಅದರಲ್ಲಿ ಶೇಕಡ 70 ರಷ್ಟು ಬಂಡವಾಳವನ್ನು ನಗದು ರೂಪದಲ್ಲಿ ಹೂಡಿದ್ದಾರೆಂಬುದು ವರದಿಯಲ್ಲಿ ಬಹಿರಂಗಗೊಂಡ ಅಂಶ. ಅಂದರೆ ಸುಮಾರು 1,40,000 ಕೋಟಿ ರೂಪಾಯಿ ನಗದು!! ಅಷ್ಟೊಂದು ನಗದು ಮೊತ್ತವನ್ನು ರಿಲಯನ್ಸ್ ಕಂಪನಿ ಎಲ್ಲಿ ಇಟ್ಟುಕೊಂಡಿತ್ತು? ಅಥವ ಅಷ್ಟೊಂದು ನಗದು ಹೊಂದಿಸುವುದು ಹೇಗೆ ಸಾಧ್ಯವಾಯಿತು? ಹೋಗಲಿ, ಅದರ ಬಣ್ಣ ಯಾವುದಿತ್ತು? ಕಪ್ಪೋ ಬಿಳುಪೋ??


ನೋಟು ರದ್ದತಿ ಘೋಷಿಸಿದ ಎರಡು ದಿನಗಳ ನಂತರ ಅಂದರೆ ನವೆಂಬರ್ 10ರಂದು ಮತ್ತೊಂದು ಬೆಳವಣಿಗೆ ಸದ್ದುಗದ್ದಲವಿಲ್ಲದೆ ನಡೆದುಹೋಯಿತು. ದೇಶದ ಅತಿದೊಡ್ಡ ಸರ್ಕಾರಿ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಜೊತೆ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಸೇರಿಕೊಂಡು 'ಜಿಯೋ ಪೇಮೆಂಟ್ಸ್ ಬ್ಯಾಂಕ್ ಲಿಮಿಟೆಡ್' ಎಂಬ ಆನ್‌ಲೈನ್ ಬ್ಯಾಂಕಿಂಗ್ ಒಂದನ್ನು ಸ್ಥಾಪಿಸಿದ್ದಾರೆಂದು ರಿಜಿಸ್ಟರ್ ಆಫ್ ಕಂಪನೀಸ್ ಕಚೇರಿ ದಾಖಲೆಗಳಿಂದ ಹೊರಬಿದ್ದಿದೆ.

ದೇಶಾದ್ಯಂತ ಅತಿಹೆಚ್ಚಿನ ಬ್ಯಾಂಕಿಂಗ್ ಜಾಲವನ್ನು ಹೊಂದಿರುವ ಎಸ್‌ಬಿಐ ಮತ್ತು ವಿಸ್ತೃತವಾಗಿ ಹರಡಿರುವ/ಹರಡುತ್ತಿರುವ ಜಿಯೋ ಮೊಬೈಲ್ ನೆಟ್‌ವರ್ಕ್ ಜಾಲವನ್ನು ಬಳಸಿಕೊಂಡು ಡಿಜಿಟಲ್ ಹಣಕಾಸು ವ್ಯವಹಾರದ ಸಿಂಹಪಾಲನ್ನು ಪಡೆದುಕೊಳ್ಳಲು ಮುಖೇಶ್ ಅಂಬಾನಿ ಭಾರೀ ಷಡ್ಯಂತ್ರ ಹೆಣೆದಿದ್ದಾನೆ. ಈ ಹೊಸ ಕಂಪನಿಯ ಬೋರ್ಡ್ ಸದಸ್ಯರಾಗಿ ಅಶೋಕ್ ಲೈಲ್ಯಾಂಡ್ ಹಾಗೂ ಮೈಂಡ್‌ಟ್ರೀ ಕಂಪನಿಗಳ ಪ್ರತಿನಿಧಿಗಳು ಕೂಡ ಸೇರಿದ್ದಾರೆ. ದುರಂತವೆಂದರೆ ಈ ಷಡ್ಯಂತ್ರದ ಸೂತ್ರಧಾರನಾಗಿ ಸ್ವತಃ ಪ್ರಧಾನಿ ಮೋದಿಯವರೇ ನಿಂತಿದ್ದಾರೆ.

ಹಿಂದಿನ ದಿನಗಳಲ್ಲಿ ಪ್ರಧಾನಿಗಳು ತಮ್ಮ ಭಾವಚಿತ್ರವನ್ನು ಹಾಕಿ ಜಾಹಿರಾತು ಪ್ರಕಟಿಸುತ್ತಿದ್ದದ್ದು ಸ್ವಾತಂತ್ರ್ಯ ದಿನಾಚರಣೆ ಅಥವ ಗಣರಾಜ್ಯೋತ್ಸವ ದಿನದಂತಹ ಸಂದರ್ಭಗಳಲ್ಲಿ ಮಾತ್ರ. ಆದರೆ ಈಗಿನ ಪ್ರಧಾನಿಯ ಜಾಹಿರಾತು ಹಾಗಲ್ಲ; ಅವರು ರಿಲಯನ್ಸ್ ಜಿಯೋ ಕಂಪನಿಗೆ ಅಥವ ಪೇಟಿಎಂ ಕಂಪನಿಗಳಿಗೆ ಬ್ರಾಂಡ್ ಅಂಬಾಸಡರ್ ಆಗಿ ಪೂರ್ಣ ಪುಟದ ಜಾಹಿರಾತಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಕಪ್ಪುಹಣದ ವಿರುದ್ಧ ಹೋರಾಟ ನಡೆಸಲು ಕ್ಯಾಶ್‌ಲೆಸ್ ಡಿಜಿಟಲ್ ವ್ಯವಹಾರ ಜಾರಿಗೆ ತರುತ್ತೇವೆಂದು ಭಾಷಣ ಮಾಡುತ್ತಿದ್ದಾರೆ. ಯಾಕೆಂದರೆ ಮೋದಿಯವರನ್ನು ಗುಜರಾತ್ ಸಿಎಂ ಸ್ಥಾನದಿಂದ ದೆಹಲಿಯ ಸಿಂಹಾಸನಕ್ಕೆ ತಂದು ಕೂರಿಸಲು ಅಂಬಾನಿ ಸುರಿದ ಹಣ ಸಾವಿರಾರು ಕೋಟಿಗಳು!


ಜಂಗ್ ಕ್ವಯಾನ್‌ಡಾಂಗ್


ಮಾರ್ಕ್ ಶ್ಚುಟ್


ವಿಜಯ್ ಶೇಖರ್ ಶರ್ಮ

ಹೋಗಲಿ, ಅದೆಲ್ಲಾ ಹಳೆಯ ಸಂಗತಿ. ಇಂತಹ ಖಾಸಗಿ ಕಂಪನಿಗಳ ಜಾಹಿರಾತಿನಲ್ಲಿ ಈ ದೇಶದ ಪ್ರಧಾನಿ ಕಾಣಿಸಿಕೊಳ್ಳಬಹುದೆ? ದೇಶದ ಪ್ರಧಾನಿಯ ಚಿತ್ರವನ್ನು ಜಾಹಿರಾತಿನಲ್ಲಿ ಬಳಸಿಕೊಳ್ಳುವುದು ಕಾನೂನಾತ್ಮಕವಾಗಿ ಅಪರಾಧ, ನೈತಿಕವಾಗಿಯೂ ಸರಿಯಲ್ಲ. ಆದರೆ ದೇಶದ ಇಡೀ ಸಂಪತ್ತನ್ನು ತಮ್ಮ ಹಿಂದಿನ ಕಾರ್ಪೊರೇಟ್ ಕುಳಗಳಿಗೆ ಧಾರೆಯೆರೆಯುವುದನ್ನೇ ದೇಶೋದ್ಧಾರ ಎಂದು ಬೊಂಬಡಾ ಬಜಾಯಿಸುತ್ತಿರುವ ಮಾನ್ಯ ಮೋದಿಯವರಿಂದ ಇಂತಹ ನೈತಿಕತೆಯನ್ನು ಪ್ರಜೆಗಳು ನಿರೀಕ್ಷೆ ಮಾಡುವುದು ತೀರಾ ದುಬಾರಿ. ವಿಪರ್ಯಾಸ ಹೇಗಿದೆ ನೋಡಿ. ರಿಲಯನ್ಸ್? ಜಿಯೋ ಜಾಹಿರಾತುಗಳಲ್ಲಿ ಪ್ರಧಾನಿಯವರ ಭಾವಚಿತ್ರ ಬಳಸಿಕೊಳ್ಳಲು ಅನುಮತಿ ನೀಡಲಾಗಿತ್ತೆ ಎಂಬ ಮಾಹಿತಿಯನ್ನು ಕೇಳಿ ವಕೀಲರೊಬ್ಬರು ಹಾಕಿದ ಆರ್‌ಟಿಐ ಅರ್ಜಿಗೆ ಪ್ರಧಾನಿ ಕಾರ್ಯಾಲಯ ಎರಡೂವರೆ ತಿಂಗಳಾದರೂ ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ. ಇನ್ನೂ ಒಂದು ತಮಾಷೆಯ ಸಂಗತಿಯಿದೆ. ಹೀಗೆ ಕಾನೂನು ಉಲ್ಲಂಘನೆ ಮಾಡಿದ ಕಂಪನಿಗಳಿಗೆ ಶಿಕ್ಷೆ ಏನು ಗೊತ್ತೆ? 500 ರೂಪಾಯಿ ದಂಡ! ಇಂಥಾ ಕಾನೂನು ಇರುವಾಗ ಮೋದಿ ಮತ್ತು ಅವರ ಕೂಟ ಅದನ್ನು ಸದ್ಬಳಕೆ ಮಾಡಿಕೊಳ್ಳದಿರಲು ಹೇಗೆ ಸಾಧ್ಯ? ಇದು ಮೋದಿ ಮಾದರಿ ಆಡಳಿತದ ಒಂದು ಸಣ್ಣ ಸ್ಯಾಂಪಲ್!!


ನೋಟ್‌ಬಂದಿ : ರೀಟೈಲ್ ಮಾರ್ಕೆಟ್‌ನ ರಾಜಕೀಯ!!

ಇದೇನಿದು ವಿಚಿತ್ರ ಸಂಬಂಧ? ಎತ್ತಣಾ ನೋಟ್‌ಬಂದಿ, ಎತ್ತಣಾ ರೀಟೈಲ್ ಮಾರುಕಟ್ಟೆ, ಎತ್ತಣಿಂದೆತ್ತಣಾ ಸಂಬಂಧ ಎಂದು ಕೇಳಬೇಡಿ. ಸ್ವಲ್ಪ ಗಮನ ಕೊಟ್ಟು ಓದಿ. ನಂತರ ಏನು ಸಂಬಂಧ ಅಂತಾ ನೀವೇ ಹೇಳಿ.

ಭಾರತದ ರೀಟೈಲ್ ಮಾರುಕಟ್ಟೆ ಪ್ರಪಂಚದಲ್ಲೇ ಅತಿಹೆಚ್ಚು ಕಂಪನಿಗಳನ್ನು ಆಕರ್ಷಿಸುತ್ತಿರುವ ಕ್ಷೇತ್ರ. ಸುಮಾರು 3.5 ಕೋಟಿ ಭಾರತೀಯರಿಗೆ ಉದ್ಯೋಗ ಕಲ್ಪಿಸಿರುವ ಚಿಲ್ಲರೆ ಮಾರುಕಟ್ಟೆ ಕ್ಷೇತ್ರವು ಕೃಷಿ ಹಾಗೂ ನಿರ್ಮಾಣ ಕ್ಷೇತ್ರಗಳ ನಂತರ ಅತಿಹೆಚ್ಚಿನ ಉದ್ಯೋಗ ಒದಗಿಸಿರುವ ಮೂರನೇ ಅತಿದೊಡ್ಡ ಕ್ಷೇತ್ರ. ಈ ಮಾರುಕಟ್ಟೆಯಲ್ಲಿ ಆಹಾರ, ದಿನಸಿ ಮತ್ತಿತರ ದಿನಬಳಕೆ ವಸ್ತುಗಳ ವಹಿವಾಟಿನ ಪಾಲು ಅರ್ಧಕ್ಕಿಂತಲೂ ಹೆಚ್ಚು. ಅಂದರೆ ದೇಶದ 130 ಕೋಟಿ ಜನತೆ ಈ ಮಾರುಕಟ್ಟೆಯೊಂದಿಗೆ ಒಂದಲ್ಲ ಒಂದು ರೀತಿಯ ಸಂಬಂಧ ಹೊಂದಿರುತ್ತಾರೆ. ರೀಟೈಲ್ ಶಾಪ್‌ಗಳಿಗೆ ಪ್ರತಿಯೊಂದು ವಸ್ತುವಿಗೂ ಅದರದೇ ಆದ ವಿತರಣಾ ವ್ಯವಸ್ಥೆ ಇರುತ್ತದೆ. ಚಿಲ್ಲರೆ ವರ್ತಕರು ತಮ್ಮ ಗ್ರಾಹಕರು ಹಾಗೂ ವಿತರಕರೊಂದಿಗೆ (ಡಿಸ್ಟ್ರಿಬ್ಯೂಟರ್ಸ್) ವ್ಯವಹರಿಸುವುದು ಬಹುಪಾಲು ನಗದಿನಲ್ಲೇ.

ನೋಟ್‌ಬಂದಿ ಜಾರಿಯಾದಮೇಲೆ ಚಿಲ್ಲರೆ ವ್ಯಾಪಾರದಲ್ಲಿರುವವರನ್ನು ಯಾರನ್ನು ಕೇಳಿದರೂ ಕಳೆದ ಎರಡು ತಿಂಗಳಿನಿಂದ 40-50% ವ್ಯಾಪಾರ ಕಡಿಮೆಯಾಗಿದೆ ಎಂಬ ಉತ್ತರ ಸಿಗುತ್ತದೆ. ಆದರೆ ಇದೇ ಸಂದರ್ಭದಲ್ಲಿ ಸೂಪರ್ ಮಾರ್ಕೆಟ್‌ಗಳ ಡಿಜಿಟಲ್ ವ್ಯವಹಾರದ ಪಾಲು ಎರಡು ಪಟ್ಟು ಏರಿಕೆಯಾಗಿದೆ!

ಭಾರತದ ರೀಟೈಲ್ ಮಾರುಕಟ್ಟೆಗೆ ಈಗಾಗಲೇ ಅಮೆರಿಕದ ವಾಲ್‌ಮಾರ್ಟ್, ಜರ್ಮನಿಯ ಮೆಟ್ರೋ ಕ್ಯಾಷ್? ಕ್ಯಾರಿ ಮುಂತಾದ ವಿದೇಶಿ ಕಂಪನಿಗಳನ್ನು ಒಳಗೊಂಡು ಅಂಬಾನಿಯ ರಿಲಯನ್ಸ್ ಫ್ರೆಶ್, ಬಿರ್ಲಾನ ಮೋರ್, ಟಾಟಾನ ಸ್ಟಾರ್ ಬಜಾರ್, ಕಿಶೋರ್ ಬಿಯಾನಿಯ ಬಿಗ್‌ಬಜಾರ್ ಮೊದಲಾದ ಭಾರೀ ಬಂಡವಾಳಿಗರು ತಳವೂರಿದ್ದಾರೆ. ಏರ್‌ಟೆಲ್‌ನ ಭಾರ್ತಿ ಗ್ರೂಪ್ ಕೂಡ ವಿವಿಧ ಪಾರ್ಟನರ್ಸ್ ಜೊತೆ ಮಾತುಕತೆಯಲ್ಲಿದೆ. ಅಕ್ಕಿ-ಬೇಳೆ, ಸೋಪು-ಪೇಸ್ಟು ಮಾರಲಿಕ್ಕೆ ದೈತ್ಯ ಕಂಪನಿಗಳು ಯಾಕೆ ಬರುತ್ತಿವೆ? ಯಾಕೆಂದರೆ ಇದು 130 ಕೋಟಿ ಗ್ರಾಹಕರನ್ನು ಹೊಂದಿರುವ ದೊಡ್ಡ ಮಾರುಕಟ್ಟೆ ! ಭಾರತದ ರೀಟೈಲ್ ಮಾರುಕಟ್ಟೆ ವೇಗಗತಿಯಲ್ಲಿ ಬೆಳೆಯುತ್ತಿದೆ. ಇಷ್ಟು ದೊಡ್ಡ ದೇಶದ ಜನರ ದೈನಂದಿನ ಅಗತ್ಯಗಳನ್ನು ಪೂರೈಸುವ ಚಿಲ್ಲರೆ ಮಾರುಕಟ್ಟೆಯ ಪ್ರಮಾಣ 2015ರಲ್ಲಿ 600 ಬಿಲಿಯನ್ ಡಾಲರ್ ಕೋಟಿಗಳು! ಅಂದರೆ ಸುಮಾರು 41 ಲಕ್ಷ ಕೋಟಿ ರೂ ಮೌಲ್ಯದ್ದು. ಪ್ರತಿವರ್ಷ ಈ ಮಾರುಕಟ್ಟೆ ಸರಾಸರಿ ಶೇಕಡ 16.7 ರ ದರದಲ್ಲಿ ಏರಿಕೆಯಾಗುತ್ತಿದ್ದು 2020ರ ವೇಳೆಗೆ 1.3 ಟ್ರಿಲಿಯನ್ ಡಾಲರ್‌ಗಳಿಗೆ, ಅಂದರೆ ಸುಮಾರು 89 ಲಕ್ಷ ಕೋಟಿಗಳಿಗೆ ಏರಿಕೆಯಾಗಲಿದೆ ಎಂದು ಕೇಂದ್ರ ವಾಣಿಜ್ಯ ಇಲಾಖೆಯ ಅಧ್ಯಯನಗಳೇ ಹೇಳುತ್ತವೆ. ಹೀಗೆ ಆಕರ್ಷಕವಾಗಿರುವ ಭಾರತದ ರೀಟೈಲ್ ಮಾರುಕಟ್ಟೆ ದೇಶೀ-ವಿದೇಶಿ ಬಂಡವಾಳಿಗರ ಬಾಯಲ್ಲಿ ನೀರು ತರಿಸುತ್ತಿದೆ.



ಬಿಗ್‌ಬಜಾರ್‌ನ ಮಾಲಿಕ ಕಿಶೋರ್ ಬಿಯಾನಿ 'ಮೊದಲ ವಾರ ಅಲ್ಪಪ್ರಮಾಣದ ಕುಸಿತ ಕಂಡಿದ್ದರೂ, ನಂತರದಲ್ಲಿ ನಮ್ಮ ವ್ಯಾಪಾರ ವಾಸ್ತವದಲ್ಲಿ 50% ಏರಿಕೆಯಾಗಿದೆ.... ದೇಶದ ಆರ್ಥಿಕ ಅಭಿವೃದ್ಧಿಗೆ ಡಿಮಾನಿಟೈಸೇಷನ್ ಸ್ವಾಗತಾರ್ಹ ಕ್ರಮ' ಎಂದಿದ್ದಾರೆ.

ನೋಟುರದ್ದತಿಯಿಂದಾಗಿ ನಗರ ಪ್ರದೇಶಗಳಲ್ಲಿ ಗ್ರಾಹಕರು ತಮ್ಮ ದೈನಂದಿನ ಅಗತ್ಯಗಳಿಗಾಗಿ ದೊಡ್ಡ ದೊಡ್ಡ ಮಾಲುಗಳ ಕಡೆ ಸಾಗುವ ಅನಿವಾರ್ಯತೆ ಸೃಷ್ಟಿಯಾಗಿದೆ. ಪರಿಣಾಮ ಸೂಪರ್ ಮಾರ್ಕೆಟ್ / ಮಾಲುಗಳನ್ನು ನಡೆಸುವ ಬಂಡವಾಳಿಗರಿಗೆ ಮತ್ತಷ್ಟು ಲಾಭ ಹಾಗೂ ಸಣ್ಣಪುಟ್ಟ ವರ್ತಕರಿಗೆ ಮತ್ತಷ್ಟು ಹೊಡೆತ ಬೀಳಲಿದೆ. ಸಣ್ಣ ವ್ಯಾಪಾರಿ ವರ್ಗ ದಿವಾಳಿಯಾಗುವುದು ಮಾತ್ರವಲ್ಲದೆ, ಮತ್ತಷ್ಟು ಜನರು ಉದ್ಯೋಗ ಕಳೆದುಕೊಂಡು ಬೀದಿಗೆ ಬೀಳುವುದು ನಿಶ್ಚಿತ.

ಭಾರೀ ಬಂಡವಾಳಿಗರ ಅಪೇಕ್ಷೆಯಂತೆ ಹಿಂದಿನ ಕಾಂಗ್ರೆಸ್ ಸರ್ಕಾರ 2012ರಲ್ಲಿ ಶೇಕಡ 51ರಷ್ಟು ವಿದೇಶಿ ನೇರ ಹೂಡಿಕೆಗೆ ಅವಕಾಶ ಕೊಟ್ಟಿತ್ತು. ಈಗಿನ 'ಸ್ವದೇಶಿ' ಮೋದಿ ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆಹೋಗಿ ಆನ್‌ಲೈನ್ ಮಾರ್ಕೆಟಿಂಗ್‌ನಲ್ಲಿ ಶೇಕಡ 100ರಷ್ಟು ವಿದೇಶಿ ನೇರ ಹೂಡಿಕೆಗೆ ಅವಕಾಶ ಮಾಡಿಕೊಟ್ಟಿದೆ.

ಜೊತೆಗೆ, ಡಿಜಿಟಲ್ ವ್ಯವಹಾರ, ಕ್ಯಾಷ್‌ಲೆಸ್ ಎಕಾನಮಿ ಎಂಬ ಭ್ರಮಾಲೋಕದತ್ತ ಭಾರತದ ಬಡಜನತೆಯ[...] ಕುತ್ತಿಗೆ ಹಿಡಿದು ದಬ್ಬುತ್ತಿರುವುದರಿಂದ ಭಾರತದ ರೀಟೈ[...] ಕ್ಷೇತ್ರ ಬುಲೆಟ್ ಟ್ರೈನ್‌ನ ವೇಗದಲ್ಲಿ ಅಂಬಾನಿ, ಅದಾ[...] ಟಾಟಾ, ಬಿರ್ಲಾಗಳು ಹಾಗೆಯೇ ವಾಲ್‌ಮಾರ್ಟ್, ಮೆಟ್ರೊ[...] ಮ್ಯಾಕ್‌ಡೊನಾಲ್ಡ್‌ನಂತಹ ವಿದೇಶಿ ಕಂಪನಿಗ[...] ಕೈವಶವಾಗಲಿದೆ.

ಬಿಜೆಪಿ ಪಕ್ಷದ ಸ್ವದೇಶಿ ಘೋಷಣೆಯನ್ನು ನಂಬಿಕೊಂ[...] ಅನಾದಿಯಿಂದಲೂ ಅವರನ್ನು ಬೆಂಬಲಿಸುತ್ತಾ ಬಂದ ವ[...] ಸಮುದಾಯಕ್ಕೆ ತಿರುಪತಿ ತಿಮ್ಮಪ್ಪನೇ ಗತಿಯಾಗಲಿದೆ[...]

ಈಗ ಹೇಳಿ, ಎತ್ತಣಾ ಡಿಜಿಟಲ್? ಎತ್ತಣ ರೀಟೈಲ್[...]

ಆದರೆ ಎಲ್ಲಿ ನೋಡಿದರೂ ಅದೇ ಮುಖೇಶ್/ಅನಿ[...] ಅಂಬಾನಿ, ಗೌತಮ್ ಅದಾನಿ, ಸುನಿಲ್ ಭಾರ್ತಿ, ರತ[...] ಟಾಟಾ, ಆದಿತ್ಯ ಬಿರ್ಲಾ ಇಂಥವರೇ ಕಾಣುತ್ತಿದ್ದಾರಲ್ಲ[...] ಇವರ ಜೊತೆಜೊತೆಗೆ ವಿದೇಶಿ ದೈತ್ಯ ಕಂಪನಿಗಳು [...] ಹಾಕುತ್ತಿವೆ ಅಲ್ಲವೆ? ಈ ಬಂಡವಾಳಿಗರ ಕೂಟಕ್ಕೆ ನ[...] ದೇಶದ ಪ್ರಧಾನಿಯೇ ಬ್ರಾಂಡ್ ಅಂಬಾಸಡರ್ ಆಗಿ ಹಾ[...] ಸುಗಮಗೊಳಿಸುತ್ತಿದ್ದಾರೆ ಅಲ್ಲವೆ?


ಕನ್‌ಫ್ಯೂಸ್ ಆಗಬೇಡಿ, ಎಲ್ಲದಕ್ಕೂ ನೇರಾನೇ[...] ಸಂಬಂಧವಿದೆ. ಈ ದೇಶದ ರಾಜಕೀಯದ ನಿಯಂತ್ರ[...] ಕಾರ್ಪೊರೇಟ್ ಕಂಪನಿಗಳ ಕೈಯಲ್ಲಿ ಸಿಲುಕಿಕೊಂಡಿದ[...] ಕಾರ್ಪೊರೇಟ್ ಕಂಪನಿ ಕೂಟವೇ ಮೋದಿಯನ್ನು ತಂದ[...] ದೆಹಲಿಯಲ್ಲಿ ಪ್ರತಿಷ್ಠಾಪಿಸಿದೆ. ಮತ್ತೊಂದೆಡೆ ಕಪ್ಪುಹಣವನ್ನ[...] ಹಿಡಿಯುವುದಾಗಿ, ಭ್ರಷ್ಟಾಚಾರ, ತೆರಿಗೆ ವಂಚನೆಗಳನ್ನ[...] ಮಟ್ಟಹಾಕುವುದಾಗಿ ಮೋದಿ ಭಕ್ತ ಮಂಡಳಿ ಒಂದೇಸಮ[...] ಹೂಳಿಡುತ್ತಿದೆ.

ರಾಷ್ಟ್ರ ಭಕ್ತಿಯ, ದೇಶೋದ್ಧಾರದ ಅಬ್ಬರದ ಪ್ರಚಾರಗಳಿಂದಾಗಿ ಈ ದುಷ್ಟಕೂಟದ ಸಂಬಂಧವನ್ನ[...] ಅರ್ಥಮಾಡಿಕೊಳ್ಳಲು ಭಾರತ ಹೆಣಗಾಡುತ್ತಿದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ



ಕಥೆಗಳ ಕಥೆ-ವ್ಯಥೆ



ಒಂದಾನೊಂದು ಕಾಲದಲ್ಲಿ ಸಾವಿರಾರು ಕಥೆಗಳಿದ್ದವು. ...ನ್ನವು. ಚಿಕ್ಕವು; ಹಳೆದು, ಹೊಸದು; ಹತ್ತಿರದವು, ...ರದವು- ಹೀಗೆ ಎಲ್ಲಾ ತರದ ಕಥೆಗಳು ಇದ್ದವು. ...ಕಾಲ ಒಂದಾಗಿ ಇದ್ದವು. ಆದರೆ ಕಾಲ ಕಳೆದಂತೆ, ...ಣ ಅವುಗಳಲ್ಲಿ ಎರಡು ಪಂಗಡಗಳಾದವು. ಮೊದಲಿಗೆ ... (ಪಂಡಿತರ ಕಥೆಗಳು) ಹುಟ್ಟಿಕೊಂಡ. ಅವನ ...ಪಾಸವನ್ನು ತಡೆಹಿಡಿಯಲು ನಂತರ ಜಕ (ಜನರ ...ಳು) ಹುಟ್ಟಿಕೊಂಡ. ಇವರಿಬ್ಬರು ಹುಟ್ಟಿಕೊಳ್ಳುತ್ತಿದ್ದ ... ಇವರ ನಡುವೆ ಜಗಳಗಳು ಶುರುವಾದವು. ಚಿಕ್ಕ ...ರದ ಮತ್ತು ಹಳೆಯ ಕಥೆಗಳು ಇವರಿಬ್ಬರಿಗೆ ಹೆದರಿ ...ರೆಯಾದವು. ಪಕ "ನಾನೇ ಶ್ರೇಷ್ಠ" ಎಂದು ಜಂಭ ...ಕೊಂಡರೆ, ಜಕ "ನಿನಗಿಂತ ನಾನೇನು ಕಡಿಮೆ ಇಲ್ಲ" ...ದು ಸೆಡ್ಡು ಹೊಡೆಯುತ್ತಿದ್ದ. ಇವರಿಬ್ಬರ ಜಗಳ ...ಹರಿಯುವ ಲಕ್ಷಣಗಳು ಕಾಣಲೇ ಇಲ್ಲ. ಪರಿಸ್ಥಿತಿ ...ರೇಪಕ್ಕೆ ಹೋಗಿ ಇವರಿಬ್ಬರ ನಡುವೆ ಯುದ್ಧಗಳಾದವು. ...ದ್ಧದಲ್ಲಿ ಅನೇಕ ಜಕ ಮತ್ತು ಪಕಗಳು ಕೊಲ್ಲಲ್ಪಟ್ಟವು. ...ಪಾತಗಳಾದವು. ಇಷ್ಟೆಲ್ಲಾ ಆದಾಗ್ಯೂ ಇವರಿಬ್ಬರ ಜಗಳ ...ಹಾರವಾಗಲೇ ಇಲ್ಲ. ಇವರಿಬ್ಬರು ಹೀಗೆ ಯುದ್ಧ ...ಡುತ್ತಾ ಇದ್ದರೆ ಮುಂದೆ ಜಗತ್ತಿನಲ್ಲಿ ಕಥೆಗಳೇ ...ವುದಿಲ್ಲವೆಂದು ಜನ ಅಂದುಕೊಂಡರು. ಇಬ್ಬರಲ್ಲಿ ...ರು ಶ್ರೇಷ್ಠರು ಎಂದು ಅವರು ನಿರ್ಧರಿಸಲಾಗದೆ ...ಲಾದರು. "ಜಗಳ, ಯುದ್ಧ ಶುರು ಮಾಡಿದ್ದು ಜಕ. ...ನೇ ಮೊದಲು ರಾಜಿಯಾಗಬೇಕು" ಎಂದು ಪಕ ...ಳಿದರೆ, "ಜಗಳ ಆಡಲು ಮೊದಲು ಕಾಲು ...ಕೊಂಡು ಬಂದದ್ದು ಪಕ. ಅವನೇ ಮೊದಲು ಈ ...ವನ್ನು ನಿಲ್ಲಿಸಬೇಕು. ನಾನಲ್ಲ" ಎಂದು ಜಕ ಮೂಗು ...ದಿದ. ಒಟ್ಟಾರೆ ಜನರಿಗೆ ಇವರ ಯುದ್ಧವನ್ನು ನಿಲ್ಲಿಸಲು ...ಲೇ ಇಲ್ಲ. ಜಕ-ಪಕರು ಅವರನ್ನು ಮೀರಿ ಬೆಳೆದಿದ್ದರು. ...ದರು ಮಾಡಿ ಇವರಿಬ್ಬರ ಜಗಳವನ್ನು ನಿಲ್ಲಿಸಿ, ...ಗಳನ್ನು ಬದುಕಿಸಬೇಕೆಂದು ಜನ ನಿರ್ಧರಿಸಿದರು. ...ದಲಿನ ಹಾಗೆ ಕಥಾ ಜಗತ್ತನ್ನು ಸೃಷ್ಟಿಸಬೇಕು ಎಂದು ...ರು ಅಂದುಕೊಂಡರು. ಇವರ ಜಗಳವನ್ನು ನಿಲ್ಲಿಸುವುದಕ್ಕೆ ...ರಿಗೆ ಸಾಧ್ಯ ಎಂದು ಎಲ್ಲರೂ ಯೋಚಿಸುತ್ತಿರಬೇಕಾದರೆ, ...ರ ಮನಸ್ಸಿಗೆ ತೋಚಿದ್ದು ದನಕಾಯುವ ಒಬ್ಬ ಹುಡುಗ. ...ಆ ದನ ಕಾಯುವವನು ಬೆಟ್ಟದ ಮೇಲೆ ಕೊಳಲನ್ನು ...ದುತ್ತಾ ದನಗಳನ್ನು ಮೇಯಿಸುತ್ತಿದ್ದ ಒಬ್ಬ ತಿರುಪೋಕಿ. ...ನು ಹೆಂಗಸರನ್ನು ಕಾಡಿಸುತ್ತಾ ಅವರಿವರ ಮನೆಯಿಂದ ...ಕದ್ದು ಹೊಟ್ಟೆ ಹೊರೆದುಕೊಳ್ಳುತ್ತಿದ್ದ. ಆದರೆ ಅವನ ... ಒಂದು ವಿಶೇಷ ವದಂತಿ ಎಲ್ಲಾ ಕಡೆ ಹರಡಿತ್ತು. ...ಸ್ಟಾ ಅಂದರೆ, ಅವನ ಹಿರಿಕರು ಉತ್ತರ ದೇಶದಿಂದ ...ದವರಂತೆ. ಅಲ್ಲಿ ಅದ್ಯಾರೊ ಕೌರವರಿಗೂ, ...ಡವರಿಗೂ ಯುದ್ಧವಾದಾಗ ಈ ದನಕಾಯುವವನ ಪೂರ್ವಜನೊಬ್ಬ ಪಾಂಡವರಿಗೆ ಸಹಾಯ ಮಾಡಿ ಯುದ್ಧ ಗೆಲ್ಲಿಸಿಕೊಟ್ಟನೆಂದು ಪ್ರತೀತಿ ಇದೆಯಂತೆ. ಯುದ್ಧ ಮಾಡಿಸೋದು ಹೇಗೆ, ನಿಲ್ಲಿಸೋದು ಹೇಗೆ ಅಂತ ನಂಗೆ ಗೊತ್ತು ಎಂದು ಈ ದನಕಾಯುವವನು ಜನರ ಮುಂದೆ ಅನೇಕ ಸಾರಿ ಜಂಭ ಕೊಚ್ಚಿಕೊಂಡಿದ್ದ. ಹೀಗಾಗಿ ಈಗ ಜನರು ಇವನ ಬಳಿ ಹೋಗಿ ಜಕ-ಪಕರ ಯುದ್ಧವನ್ನು ನಿಲ್ಲಿಸಲು ಕೇಳಿಕೊಂಡರು. ಆ ದನಕಾಯುವವನು ಮುಗುಳ್ನಗುತ್ತಾ "ಇದೇನು ಮಹಾ! ಕ್ಷಣಮಾತ್ರದಲ್ಲಿ ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ. ಆದರೆ ಒಂದು ಶರತ್ತು, ಯುದ್ಧ ನಿಲ್ಲಿಸಿದ ಮೇಲೆ ನೀವೆಲ್ಲರೂ ನನ್ನನ್ನು ಪೂಜಿಸಬೇಕು" ಎಂದು ಹೇಳಿದ. ಜಕ-ಪಕರ ಯುದ್ಧ ನಿಂತರೆ ಸಾಕೆಂದು ಸುಸ್ತಾಗಿದ್ದ ಜನರೆಲ್ಲರೂ ದನಕಾಯೋನು ಹಾಕಿದ ಷರತ್ತಿಗೆ ಹಿಂದೆ-ಮುಂದೆ ನೋಡದೆ ಒಪ್ಪಿಕೊಂಡರು.

ದನಕಾಯುವವನು ಜಕ-ಪಕರ ಹತ್ತಿರ ಬಂದಾಗ ಅವರಿಬ್ಬರು ತಮ್ಮ ಕಥೆಗಳೊಂದಿಗೆ ಮತ್ತೊಂದು ಘೋರ-ಯುದ್ಧಕ್ಕೆ ತಯಾರಾಗುತ್ತಿದ್ದರು. ಅವರಿಬ್ಬರ ಹತ್ತಿರ ಹೋಗಿ ದನಕಾಯುವವನು ಹೇಳಿದ, "ಇಲ್ಲಿ ನೋಡಿ. ನಿಮ್ಮಿಬ್ಬರ ಯುದ್ಧದಿಂದ ಸಾವಿರಾರು ಕಥೆಗಳು ಸಾಯುತ್ತಿವೆ. ನಿಮ್ಮ ಹಠದಿಂದ ಜನರಿಗೆ ಹೊಸ ಕಥೆಗಳೇ ಸಿಗುತ್ತಿಲ್ಲ. ಹೀಗೆ ಆದರೆ ಮುಂದೆ ಕಥೆಗಳೆ ಇರುವುದಿಲ್ಲ. ಜನರಿಗೆ ಉಸಿರು ಎಷ್ಟು ಮುಖ್ಯವೋ, ಅಷ್ಟೆ ಮುಖ್ಯ ಕಥೆಗಳು. ಆದ್ದರಿಂದ ನೀವಿಬ್ಬರು ಯುದ್ಧವನ್ನು ನಿಲ್ಲಿಸಲೇಬೇಕು" ಎಂದು ಉಪದೇಶ ನೀಡಿದ. ಜಕ-ಪಕರು ಮೊದಮೊದಲು ಇದಕ್ಕೆ ಒಪ್ಪಲೇ ಇಲ್ಲ.

ದನಕಾಯುವವನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಸ್ವಲ್ಪ ಸಮಯದ ನಂತರ ಅವನು ಮತ್ತೆ ಹೇಳಿದ, "ನೋಡಿ ನಿಮ್ಮಿಬ್ಬರ ಹಠದಿಂದ ಬೇರೆ ಕಥೆಗಳು ಹೊಸದಾಗಿ ಹುಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಇರೋ ಕಥೆಗಳು ಯಾಕೆ ಸಾಯಬೇಕು? ನಿಮ್ಮಿಬ್ಬರ ನಡುವೆ ಒಂದು ಪಂದ್ಯವಾಗಲಿ. ಅದರಲ್ಲಿ ಯಾರು ಗೆಲ್ಲುತ್ತಾರೋ ಅವರೇ ಶ್ರೇಷ್ಠರು? ಗೆದ್ದಾದ ಮೇಲೆ ಮತ್ತೆ ಯಾವತ್ತೂ ನಿಮ್ಮಿಬ್ಬರ ನಡುವೆ ಯುದ್ಧವಾಗಬಾರದು. ಒಪ್ಪಿಗೇನಾ?" ಎಂದು ಜಕ-ಪಕರನ್ನು ಕೇಳಿದ. ಇಬ್ಬರು ಬಹಳ ಯೋಚಿಸಿದ ನಂತರ ದನಕಾಯೋನ ಸೂಚನೆಗೆ ಒಪ್ಪಿಕೊಂಡರು. "ಏನದು ಪಂದ್ಯ?" ಎಂದು ಕೇಳಿದಾಗ, ದನಕಾಯುವವನು ಪಂದ್ಯದ ಬಗ್ಗೆ ವಿವರಿಸಿದ, "ನಾನು ಕೊಡುವ ದೊಡ್ಡ ಹಂಡೆಯಲ್ಲಿ ಹಾಲಿನ ಕೆನೆ ತುಂಬಿರುತ್ತದೆ. ನೀವಿಬ್ಬರು ಅದರಿಂದ ಬೆಣ್ಣೆಯನ್ನು ಕಡೆಯಬೇಕು. ಯಾರು ಹೆಚ್ಚು ಬೆಣ್ಣೆಯನ್ನು ಕಡೆಯುತ್ತಾರೊ ಅವರು ಪಂದ್ಯದಲ್ಲಿ ಗೆದ್ದ ಹಾಗೆ". ಜಕ ಈ ಪಂದ್ಯ ಸುಲಭವೆಂದು, ತಾನು ಬಹಳ ಬಲಶಾಲಿಯಿರುವುದರಿಂದ ಪಂದ್ಯವನ್ನು ಸುಲಭವಾಗಿ ಗೆಲ್ಲಬಹುದೆಂದು ತಕ್ಷಣ ಒಪ್ಪಿಕೊಂಡ. ಪಕ ಕೂಡ ಒಪ್ಪಿಕೊಳ್ಳಲೇಬೇಕಾಯಿತು.

ಪಂದ್ಯ ಶುರುವಾಯಿತು. ಜಕ-ಪಕರು ಹಾಲಿನ ಕೆನೆಯಿಂದ ಬೆಣ್ಣೆಯನ್ನು ಕಡೆಯಲು ಶುರು ಮಾಡಿದರು. ಸ್ವಲ್ಪ ಸಮಯದ ನಂತರ ಜಕ ಅಧಿಕ ಪ್ರಮಾಣದಲ್ಲಿ ಬೆಣ್ಣೆ ಕಡೆದ. ಪಕನಿಗೆ ಬೆಣ್ಣೆ ಕಡೆಯಲು ಬಾರದೆ, ಸುಸ್ತಾಗತೊಡಗಿದ. ತಾನು ಸೋಲುತ್ತೇನೆ ಎಂದು ಅವನಿಗೆ ಖಾತ್ರಿಯಾಯಿತು. ಏನು ಮಾಡೋದು ಎಂದು ತೋಚದೆ ಬಸವಳಿದ. ಕೊನೆಗೆ ದನಕಾಯುವವನ ಕಡೆಗೆ ದೈನ್ಯದಿಂದ ನೋಡಿ "ನನ್ನನ್ನು ಗೆಲ್ಲಿಸು" ಎಂದು ಸಪ್ಪೆ ಮೋರೆ ಹಾಕಿಕೊಂಡು ಕೇಳಿದ. ದನಕಾಯುವವನು ಮುಗುಳ್ನಕ್ಕ.

*****


ದನಕಾಯೋನು ರುಚಿಗಂತ ಜಕನ ಬೆಣ್ಣೆಯನ್ನು ಅವನಿಗೆ ಗೊತ್ತಿಲ್ಲದ ಹಾಗೆ ಕದ್ದು ಸವಿಯತೊಡಗಿದ. ಜೊತೆಗೆ ಸ್ವಲ್ಪ, ಸ್ವಲ್ಪ ಬೆಣ್ಣೆಯನ್ನು ಪಕನ ಮಡಿಲಿಗೆ ಹಾಕುತ್ತಿದ್ದ. ಇದರಿಂದ ಜಕನ ಬೆಣ್ಣೆ ಕರಗುತ್ತಾ ಹೋಯಿತು. ಎಷ್ಟು ಕಡೆದರೂ ಬೆಣ್ಣೆಯ ಪ್ರಮಾಣ ಹೆಚ್ಚಾಗಲೇ ಇಲ್ಲ. ಇತ್ತ ಕಡೆ ಪಕನ ಬೆಣ್ಣೆ ಈಗ ಹೆಚ್ಚುತ್ತಾ ಹೋಯಿತು. ಜಕ ಕೆನೆಯನ್ನು ಕಡೆದು, ಕಡೆದು ಸುಸ್ತಾಗಿ ಹೋದ. ಕೊನೆಗೆ ದಣಿವಾಗಿ ಕೆಳಗೆ ಬಿದ್ದ. ಪಕನ ಬೆಣ್ಣೆ ಅಧಿಕವಾಗಿದ್ದರಿಂದ ಪಂದ್ಯದಲ್ಲಿ ಅವನೇ ಗೆದ್ದ. ಪಂದ್ಯ ಸೋತಿದ್ದರಿಂದ ಜಕನ ಅನೇಕ ಸೈನಿಕರು ಪಕನ ಆಸರೆ ಹೋದರು. ಪಕನೇ ಶ್ರೇಷ್ಠ ಎಂದು ದನಕಾಯೋನು ಘೋಷಿಸಿದ. ಜನರೆಲ್ಲರೂ ದನಕಾಯೋನ ನಿರ್ಣಯಕ್ಕೆ ತಲೆ ಬಾಗಿದರು. ಜಕನಿಗೆ ದನಕಾಯೋನಿಂದ ಆದ ಮೋಸದ ಬಗ್ಗೆ ತಿಳಿಯುವ ಹೊತ್ತಿಗೆ ಪಕನ ಪ್ರಾಬಲ್ಯ ಅತಿಯಾಗಿತ್ತು. ಜನರು ಪಕನ ಪ್ರಾಬಲ್ಯಕ್ಕೆ ಮರುಳಾಗಿದ್ದರು. ಅವನ ಎಲ್ಲಾ ಕಥೆಗಳನ್ನು ಜನರು ಕುರುಡಾಗಿ ನಂಬತೊಡಗಿದರು.

*****

ಈಗಲೂ ಕೂಡ ಪಕ ತಾನು ಬರೆದ ಕಥೆಗಳಲ್ಲಿ ಜಕನ ಅನೇಕರನ್ನು ಅವನಿಗೆ ಗೊತ್ತಿಲ್ಲದ ಹಾಗೆ ಸೇರಿಸಿಕೊಳ್ಳುತ್ತಿದ್ದಾನೆ. ಆಗಾಗ ಜಕನ ಪ್ರಾಬಲ್ಯ ಹೆಚ್ಚಾಗುವ ಲಕ್ಷಣ ಕಂಡರೆ, ದನಕಾಯೋನು ಪಕನ ರಕ್ಷಣೆಗೆ ಬರುತ್ತಾನೆ. ಜನರೆಲ್ಲಾ ದನಕಾಯೋನು 'ಕಥೆಗಳ ರಕ್ಷಕ' ಎಂದು ತಲೆ ಮೇಲೆ ಕುರಿಸಿಕೊಂಡು ಮೆರವಣಿಗೆ ಮಾಡುತ್ತಿದ್ದಾರೆ.

■ ಡಾ. ವಿಜಯಕುಮಾರ ಎಂ ಬೋರಟ್ಟಿ

ಬಿಳಿಯಾನೆಗಳು



ಆ ದಿವಸ ಈಸ್ಟ್ ಇಂಡಿಯಾ ಕಂಪನಿ
ಗೋಣಿಚೀಲಗಳಲ್ಲಿ
ಎಷ್ಟೊಂದು ಬತ್ತನೆಯ ಬೀಜಗಳನ್ನು ತಂದರೊ
ಅವೀಗ ಮೊಳೆತು ಬೆಳೆದು ಹೆಮ್ಮರಗಳಾಗಿ
ಬೆಳೆದಿವೆ ದೇಶದಾದ್ಯಂತ
ಅವುಗಳ ಮೋಸ ಸಂಚು ಸಂಚಿತ ಭಾವನೆಗಳಿಂದಾಗಿ
...ಜತ್ತು ಸಮಪಂಚಿತ ನಾಗರಿಕತೆ ಆವರಿಸಿದೆ
...ರ್ವ ಸಂತ ಸಚರಾಚರ
ಕಣ್ಣು ಹಿಗ್ಗಲಿಸಿ ನೋಡಿತು
ಭಾರೀ ಭವನಗಳು ಸಾಲುಸಾಲು ನಡು
ನಡುವೆ ಸವಿಸ್ತೃತ ರಸ್ತೆಗೆ
ಅಧಿಕಾರಿಗಳ ಪಾದಧೂಳಿ ಕೆಂಧೂಳು
ಪೆಂಡೆಪೆಂಡೆ ಫೈಲು ರಾಶಿ ಟೈಪು ಮಿಷಿನ್ನುಗಳು
ಅವುಗಳ ಬದಲಿಗೀಗ ಕಂಪ್ಯೂಟರ್‌ಗಳು
ಅವಿವುಗಳೆಲ್ಲ ಆದೇಶಗಳ ಪ್ರಸಾಧನ
ಅವರ ಆಜ್ಞಾನುಸಾರ ಗಾಳಿ ಒಮ್ಮೆ ಮೆಲ್ಲಗೆ
ಇನ್ನೊಮ್ಮೆ ಚಂಡಮಾರುತ ಸದೃಶ ಸುಳಿಯುತ್ತದೆ
ನದಿನದಿಗಳ ಮೇಲೆ ಅಲೆಗಳಾಗಿ ನರ್ತಿಸುತ್ತವೆ
ಮಿಂಚು ಗುಡುಗು ಸಿಡಿಲುಗಳು ಅವರ ಮುಷ್ಟಿಯಲ್ಲಿ
ಮನೆ ಮಾಡಿವೆ ಉಸಿರುಗಟ್ಟಿವೆ.
ಅಷ್ಟಕ್ಕೂ ಮುಖವಾಡಗಳ ಮರೆಯಲ್ಲಿ
ಅಡಗಿದ್ದಾರೆ ಇವರು
ಅಣ್ಣತಮ್ಮಂದಿರ ನಡುವೆ ಮೊಳೆಯುತ್ತದೆ
ರಕ್ತ ಸಂಬಂಧ, ಮಗ ತನ್ನನ್ನು ನೋಡಿಕೊಳ್ಳುವನೆಂದು
ನಿಶ್ಚಿಂತೆಯಲ್ಲಿದ್ದಾನೆ ತಂದೆ,
ತನ್ನ ಸಹೋದರ ರಾಜನೆಂದು ನೆಮ್ಮದಿಯಿಂದ
ಇದ್ದಾಳೆ ತಂಗಿ ಹೆಮ್ಮೆಯಿಂದ ಬೀಗುತ್ತ
ಚಂಡಮಾರುತಕ್ಕೂ ಭೂಕಂಪಗಳಿಗೂ
ಹೆದರುತ್ತಿಲ್ಲ ಫೈಲುಗಳ ರಕ್ಷಣೆಯಲ್ಲಿರುವ ಇವರು
ಜನಸಾಮಾನ್ಯರ ಹಸಿವು ಆಕ್ರಂದನಗಳಿವರಿಗೆ
ದರಬಾರಿ ಕಾನಡ ಮಾಲಕೌಂಸ್,
ಊರ ಹೊರಗಿನ ಈ ಹನುಮಪ್ಪಂದಿರು
ಸುಡುವ ಮನೆಮಠಗಳ ಚಿತೆಯಲ್ಲಿ
ಪರಮಾನ್ನ ಬೇಯಿಸಿಕೊಳ್ಳುವ
ಬಿಳಿಯಾನೆಗಳು

■ ಗೋ. ತಿಪ್ಪೇಶ್

ಕಪ್ಪು ಸಂಪತ್ತಿನ....

09

ಈಗ ಎಲ್ಲಾ ನೋಟುಗಳೂ ಬ್ಯಾಂಕಿಗೆ ಬಂದ ನಂತರ, ನೋಟು ರದ್ದತಿಯ ಘೋಷಿತ ಉದ್ದೇಶವನ್ನೇ ಬದಲಿಸಲಾಗಿದೆ! ನೋಟುಗಳು ಚಲಾವಣೆಯಲ್ಲಿಲ್ಲದಿರುವುದರಿಂದ, ಜನರು ನಗದುರಹಿತ ವ್ಯವಹಾರಕ್ಕೆ ಹೋಗುತ್ತಾರೆ, ಇದರಿಂದ ಅಭಿವೃದ್ಧಿ ಎಂದು ಹೇಳಿದ್ದಾರೆ. ಈ ದೇಶದ 50% ಜನರಿಗೆ ಬ್ಯಾಂಕ್ ಖಾತೆ ಇಲ್ಲ, ದೊಡ್ಡ ಸಂಖ್ಯೆಯ ಜನರಿಗೆ ಓದುಬರಹ ಬರುವುದಿಲ್ಲ, ಶಾಲೆಗೆ ಮಕ್ಕಳನ್ನು ಕಳಿಸಲು ಕಷ್ಟ. ಇಂತಹ ಸಂದರ್ಭದಲ್ಲಿ ಅವರು ನಗದುರಹಿತ ಚಲಾವಣೆ ಮಾಡಬೇಕೇ?

ಆಲ್ ಇಂಡಿಯಾ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಶನ್ ಅವರ ವರದಿಯಲ್ಲಿ, ನೋಟು ರದ್ದತಿಯ ನಂತರ ಉತ್ಪಾದನಾ ಕ್ಷೇತ್ರದಲ್ಲಿ ಶೇ.35 ಉದ್ಯೋಗ ನಷ್ಟವಾಗಿದೆ, ಮುಂದಿನ ಕೆಲವು ತಿಂಗಳಲ್ಲಿ ಋಣಾತ್ಮಕ ಅಭಿವೃದ್ಧಿ ದರಕ್ಕೆ ದೇಶ ತಲುಪುತ್ತದೆ! ಬಿಹಾರದಲ್ಲಿ ಒಬ್ಬ ಮಹಿಳೆ 500 ರೂಗಾಗಿ 2 ದಿನ ಕ್ಯೂ ನಲ್ಲಿ ನಿಂತಳು. ಆಕೆಗೆ 2ರೂ ನಾಣ್ಯಗಳಲ್ಲಿ 500 ರೂ ಸಿಕ್ಕಿತು. ಈಗ ಮತ್ತೆ ಹೋದರೆ ಮತ್ತೆ 2000 ಮಾತ್ರ ಸಿಕ್ಕಿತು! ನಮ್ಮ ದೇಶ ಇರುವುದು ಇಂತಹ ಪರಿಸ್ಥಿತಿಯಲ್ಲಿ!

ಈ ಸಂದರ್ಭದಲ್ಲಿ ಹೊರಬಿದ್ದ ಒಂದು ವಿಡಿಯೋದಲ್ಲಿ ದೆಹಲಿಯ ಜನಪ್ರತಿನಿಧಿ ಮನೀಶ್ ತಿವಾರಿ ಮತ್ತು ಆತನ ಸಂಗಡಿಗರು ಬಡಜನರನ್ನು ಕ್ಯೂನಲ್ಲಿ ನಿಲ್ಲುವಂತೆ ತಾವು ಮಾಡಿರುವ ರೀತಿಯ ಬಗ್ಗೆ ಮಾತಾಡಿ ನಗುತ್ತಿದ್ದರು! ಈ ಸರ್ಕಾರ ದೇಶದ ಸಾಮಾನ್ಯ ಬಡಜನರ ಬಗ್ಗೆ ಯಾವುದೇ ಕಾಳಜಿಯಿಲ್ಲದ, ಕೇವಲ ಖಾಸಗಿ ಬಂಡವಾಳಿಗರ ಲಾಭದ ಬಗ್ಗೆ ಕಾಳಜಿಯಿರುವ ಸರ್ಕಾರ. ದೇಶದ ಇತಿಹಾಸದಲ್ಲೇ ಅತ್ಯಂತ ಸಂವೇದನಾಶೂನ್ಯ ಸರ್ಕಾರ. ನ.8ರಂದು ಪ್ರಧಾನಿ ನೋಟು ರದ್ದತಿ ಘೋಷಿಸಿದ ಮರುದಿನವೇ ಎಲ್ಲಾ ಮುಖ್ಯ ಪತ್ರಿಕೆಗಳಲ್ಲಿ ಪ್ರಧಾನಿ ಮತ್ತು ಪೇಟಿಎಂ ಕಂಪೆನಿಯ ಜಾಹೀರಾತು ಬಂತು!

ನೋಟು ನಿಷೇಧ ಘೋಷಿಸುವ ಮುನ್ನ ಯಾವ ಪರಿಣತರ ಸಲಹೆಯೂ ಇಲ್ಲ, ಪೂರ್ವಸಿದ್ಧತೆಯೂ ಇಲ್ಲ. ಚಲಾವಣೆಯಲ್ಲಿದ್ದ ನೋಟುಗಳನ್ನು ಮುದ್ರಿಸಲು ಕನಿಷ್ಠ 9 ತಿಂಗಳು ಬೇಕೇಬೇಕು. ಹೇಗೆ ರಾತ್ರೋರಾತ್ರಿ ಘೋಷಣೆ ಮಾಡಿದಿರಿ?

ಈ ದೇಶದ ಎಲ್ಲಾ ಭ್ರಷ್ಟಾಚಾರ ನಿಗ್ರಹ ಸಂಸ್ಥೆಗಳನ್ನೂ ಒಂದುಕಡೆ ನಾಶ ಮಾಡಿ ಇನ್ನೊಂದೆಡೆ ಭ್ರಷ್ಟರಿಗೆ ಕುಮ್ಮಕ್ಕು! ಈಗ ವಿಷಲ್ ಬ್ಲೋಯರ್ಸ್ ಆಕ್ಟನ್ನು ಜಾರಿಮಾಡಿ ಎಂದರೆ, ಅದನ್ನು ತಿದ್ದುಪಡಿ ಮಾಡುವತನಕ ತರುವುದಿಲ್ಲ ಎನ್ನುತ್ತಿದ್ದಾರೆ. ಈ ಕಾಯ್ದೆಗೆ 2013ರಲ್ಲೇ ಅಂಕಿತವಾಗಿತ್ತು! ಬಡ ಶ್ರೀಸಾಮಾನ್ಯ ನಗದುರಹಿತ ವ್ಯವಹಾರ ಮಾಡಬೇಕು ಎನ್ನುವ ಈ ಸರ್ಕಾರ, ರಾಜಕೀಯ ಪಕ್ಷಗಳಿಗೆ ಬರುವ ಎಲ್ಲಾ ಹಣ ಬ್ಯಾಂಕುಗಳ ಮೂಲಕವೇ ಬರುವಂತೆ ನಗದುರಹಿತ ವಹಿವಾಟಿನ ಕಾಯ್ದೆ ತರಲು ಯಾವ ಕಾರಣಕ್ಕೂ ಸಿದ್ಧವಿಲ್ಲ! ಇದರ ಅರ್ಥ ಏನು?

ಇವರ ನೋಟು ರದ್ದತಿಯ ಈ ಕ್ರಮ ಇಡೀ ದೇಶದ ಪ್ರತಿಯೊಬ್ಬ ಸಾಮಾನ್ಯನ ಬದುಕಿಗೆ ದೊಡ್ಡ ಹೊಡೆತ ನೀಡಿದೆ. ಅದರಿಂದ ಯಾರೂ ತಪ್ಪಿಸಿಕೊಳ್ಳಲಾಗಿಲ್ಲ.


ಮನೀಶ್ ತಿವಾರಿ (ದೆಹಲಿಯ ಬಿಜೆಪಿ ರಾಜಕಾರಣಿ) ಹೇಳಿ ನಗುತ್ತಿದ್ದ- 'ನಮ್ಮ ದೇಶದ ಜನರಿಗೆ ತಾವು ಕ್ಯೂನಲ್ಲಿ ನಿಂತಿರುವುದು ದೇಶಭಕ್ತಿಯಿಂದ, ದೇಶಕ್ಕಾಗಿ ಎಂದು ನಂಬಿಸಿದರೆ ಸಾಕು, ಎಷ್ಟು ದಿನ ಬೇಕಾದರೂ ಕಾಯುತ್ತಾರೆ' ಎಂದು. ನಿಮ್ಮನ್ನು ಕೊಲ್ಲುತ್ತಿರುವುದು ನಿಮ್ಮ ಒಳ್ಳೆಯದಕ್ಕಾಗಿ ಎಂದು ಹೀಗೆ ತೋರಿಸಿಕೊಳ್ಳುತ್ತಿರುವ ಯಾವ ಸರ್ಕಾರವೂ ಈವರೆಗೂ ಇರಲಿಲ್ಲ.

ಹಾಗೆಯೇ ನಗದುರಹಿತ ವಹಿವಾಟಿನ ವಿಷಯಕ್ಕೆ ಬರುವುದಾದರೆ, ಅದು ನಮಗೆ ಬೇಕು. ಆದರೆ, ಅದನ್ನು ಈಗ ಇವರು ತರುವ ರೀತಿಯಲ್ಲಿ ಜಾರಿಗೆ ತರಲಾಗದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಈ ರೀತಿ ಮಾಡುವುದು ದೇಶದ ಜನರಿಗೆ ಅಪಾರವಾದ ತೊಂದರೆಯನ್ನಷ್ಟೇ ತರುತ್ತದೆ. ದೇಶದಲ್ಲಿ ಭಾರೀ ದೊಡ್ಡ ಸಂಖ್ಯೆಯಲ್ಲಿ ಅನಕ್ಷರಸ್ಥರಿರುವಾಗ, ಇದನ್ನು ಹಂತಹಂತವಾಗಿ, ಎಲ್ಲರನ್ನೂ ಶಿಕ್ಷಿತರನ್ನಾಗಿ ಮಾಡುತ್ತಾ ತರಬೇಕು ಅಷ್ಟೇ.


ಧನ್ಯವಾದಗಳು

ಅನುವಾದ: ಮಲ್ಲಿಗೆ, ಕರ್ನಾಟಕ ಜನಶಕ್ತಿ

ಹೊಗಳಿಕೆ ತೆಗಳಿಕೆ



ಎಲ್ಲೆಡೆ ಮೋದಿ ಸರಕಾರದ್ದು ಯೂ-ಟರ್ನ್



ಶೇ.90 ಭಾರತೀಯರು ನೋಟು ಅಮಾನ್ಯಕ್ಕಾಗಿ ತಮ್ಮನ್ನು ಮನದಲ್ಲೇ ಹೀನಾಯವಾಗಿ ಬಯ್ಯುತ್ತಿದ್ದಾರೆ ಎಂಬ ಸತ್ಯ ಮೋದಿ ಮತ್ತು ಭಕ್ತ-ಕುರಿಗಳಿಗೆ ಗೊತ್ತಿದ್ದರೂ ಗೊತ್ತಿಲ್ಲದಂತೆ ನಾಟಕ ಆಡುತ್ತಿದ್ದಾರೆ ಅಷ್ಟೇ. ಆದಕ್ಕಾಗಿ ಎಲ್ಲಾ ಭಾರತೀಯರು ನೋಟು ಅಮಾನ್ಯೀಕರಣ ಬೆಂಬಲಿಸಿದ್ದಾರೆ ಎಂದು ಹೋದಹೋದಲ್ಲೆಲ್ಲಾ ಮೋದಿ ಬಾಲಿಶ ಸುಳ್ಳು ಹೇಳುತ್ತಿದ್ದಾರೆ. "ಜಯಪ್ರಕಾಶ್ ನಾರಾಯಣ, ಲಾಲ್ ಬಹದ್ದೂರ್ ಶಾಸ್ತ್ರಿ, ರಾಮಮನೋಹರ್ ಲೋಹಿಯಾ, ಕಾಮರಾಜ್ ಅವರಂತಹ ನಾಯಕರು ಈಗ ಇದ್ದಿದ್ದರೆ, ಜನರು ತೋರಿದ ಸಂಯಮವನ್ನು ಅವರೆಲ್ಲಾ ಮೆಚ್ಚುತ್ತಿದ್ದರು" ಎಂದು ಮೋದಿ ಮೊನ್ನೆ ಹೊಸ ವರ್ಷದ ಹಿಂದಿನ ದಿನ ದೇಶವನ್ನು ಉದ್ದೇಶಿಸಿ ಹೇಳಿದರು. ಆದರೆ ಈ ಎಲ್ಲಾ ನಾಯಕರು ಜೀವಂತ ಇದ್ದಿದ್ದರೆ ಮೋದಿಯಂತಹ ಸುಳ್ಳಪ್ಪ ಪ್ರಧಾನಿ ಆಗಲು ಸಾಧ್ಯವೇ ಇರಲಿಲ್ಲ ಎಂಬುದು ಸ್ವತಃ ಸುಳ್ಳೇಂದ್ರ ಮೋದಿಗೆ ಚೆನ್ನಾಗಿ ಗೊತ್ತಿದೆ.

ನೋಟು ರದ್ದತಿ ಮೂಲತಃ ಮೋದಿಯ ಐಡಿಯಾ ಆಗಿರಲಿಲ್ಲ, ಅದು ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿ (ಯುಎಸ್‌ಎಐಡಿ- USAID) ಸಂಸ್ಥೆ ಹೇರಿದ ಐಡಿಯಾ ಆಗಿತ್ತು ಎನ್ನುತ್ತದೆ ಅಮೆರಿಕದಲ್ಲಿ ಅತಿಹೆಚ್ಚು ಪ್ರಸಾರ ಹೊಂದಿರುವ ನ್ಯೂಯಾರ್ಕ್ ಟೈಮ್ಸ್. ಮೋದಿಯವರು ನೋಟು ರದ್ದತಿ ಮಾಡಿದ್ದು ಕಾಳಧನ ಹೊರಗೆ ತರಲು ಅಥವಾ ಭ್ರಷ್ಟಾಚಾರ, ಭಯೋತ್ಪಾದನೆ, ನಕಲಿ ನೋಟುಗಳನ್ನು ನಿವಾರಿಸಲು ಅಲ್ಲವೇ ಅಲ್ಲ, ಮೋದಿಯ ಮುಖ್ಯ ಗುರಿ ನಗದುರಹಿತ ಆರ್ಥಿಕತೆ ಭಾರತೀಯರ ಮೇಲೆ ಹೇರುವುದೇ ಆಗಿತ್ತು ಎಂದು ನ್ಯೂಯಾರ್ಕ್ ಟೈಮ್ಸ್ ಬಹಿರಂಗಪಡಿಸಿದೆ. ಮೋದಿಯವರು ಸ್ವತಃ ಅರ್ಥಶಾಸ್ತ್ರಜ್ಞರಲ್ಲ ಹಾಗೂ ಅವರ ಸುತ್ತ ಇರುವವರೂ ಭಾರತದ ಆರೂವರೆ ಲಕ್ಷ ಹಳ್ಳಿಗಳ ಗ್ರಾಮೀಣ ಆರ್ಥಿಕತೆಯ ಸರಿಯಾದ ಜ್ಞಾನ ಹೊಂದಿದವರಲ್ಲ, ಹಾಗಾಗಿ ತನ್ನ ಗುರಿ ಸಾಧಿಸುವುದು ಸುಲಭ ಎಂದು ಯುಎಸ್‌ಎಐಡಿ ಮನಗಂಡಿದ್ದರಿಂದ ನೋಟು ರದ್ದತಿಯನ್ನು ಒಬಾಮಾ ಇನ್ನೂ ಅಮೆರಿಕದ ಅಧ್ಯಕ್ಷರಾಗಿರುವ ಕಾಲದಲ್ಲಿಯೇ ಹೇರುವಂತೆ ಯುಎಸ್‌ಎಐಡಿ ಸಂಸ್ಥೆ ಭಾರತದ ಪ್ರಭಾವಿಗಳ ಮುಖಾಂತರ ಮೋದಿಯ ಮೇಲೆ ಒತ್ತಡ ತಂದು ತನ್ನ ಗುರಿ ಸಾಧಿಸಿದೆ ಎಂದು ಅಮೆರಿಕದ ಪತ್ರಿಕೆ ಬಹಿರಂಗಪಡಿಸಿದೆ.

ಮೋದಿಯವರು ಸ್ವಂತ ಬುದ್ಧಿ ಉಪಯೋಗಿಸದೇ ಅಮೆರಿಕದ ಯುಎಸ್‌ಎಐಡಿಯ ತಾಳಕ್ಕೆ ಕುಣಿದು ಭಾರತದ 125 ಕೋಟಿ ಜನರನ್ನು ಸಂಕಷ್ಟಕ್ಕೆ ದೂಡಿದ್ದರಿಂದ ಮೋದಿಯ ಟೊಳ್ಳುತನ ಈಗ ಇಡೀ ಜಗತ್ತಿಗೆ ಗೊತ್ತಾಗಿದೆ. ಈಗ ಅವರು ಹೇಳುವುದನ್ನು ಜನ ನಂಬುತ್ತಿಲ್ಲ, ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾಸ್ಯದ ವಸ್ತು ಆಗಿದ್ದಾರೆ. ಉದಾಹರಣೆಗೆ, ಒಬ್ಬ ಅನಿವಾಸಿ ಭಾರತೀಯ ತನ್ನ ಅಮೆರಿಕನ್ ಮಿತ್ರನಿಗೆ ಹೇಳಿದನಂತೆ 'ನೀವು ಎಂತಹ ಪೆದ್ದ ನಾಟಕಕಾರನನ್ನು (ಟ್ರಂಪ್‌ನನ್ನು) ನಿಮ್ಮ ದೇಶದ ಅಧ್ಯಕ್ಷನನ್ನಾಗಿ ಆರಿಸಿರುವಿರಿ?" ಅದಕ್ಕೆ ಅಮೆರಿಕನ್ ಮಿತ್ರ ಉತ್ತರಿಸಿದನಂತೆ "ಅದನ್ನು ನಾವು ನಿಮ್ಮಿಂದಲೇ ಎರಡೂವರೆ ವರ್ಷದ ಹಿಂದೆ ಕಲಿತಿದ್ದು!"

ಭಾರತದ ತಟ್ಟೆಯಲ್ಲಿ ಹೆಗ್ಗಣ ಸತ್ತು ಬಿದ್ದಿರುವಾಗ ಅಮೆರಿಕದ ತಟ್ಟೆಯಲ್ಲಿ ನೊಣ ಸತ್ತು ಬಿದ್ದಿರುವುದನ್ನು ತೋರಿಸುವ ಮನಸ್ಥಿತಿ ಕೆಲವು ಭಾರತೀಯರದ್ದು! ದಾವೂದ್ ಇಬ್ರಾಹಿಂನ ರೂ.15 ಸಾವಿರ ಕೋಟಿಯ ದುಬೈ ಆಸ್ತಿಯನ್ನು ಮೋದಿಯವರು ತನ್ನ ಚಾಣಾಕ್ಷ ಮುತ್ಸದ್ದಿತನದಿಂದ ಮುಟ್ಟುಗೋಲು ಹಾಕಿಸಿದ್ದಾರೆ ಎಂಬ ಮೋದಿ ಭಕ್ತರ ಸುಳ್ಳು ಸುದ್ದಿ ದುಬೈಯ ಪತ್ರಿಕೆಗಳಲ್ಲಿ ದೊಡ್ಡ ತಮಾಷೆಯ ವಸ್ತು ಆಗಿತ್ತಂತೆ. ಮೋದಿಯ ನೋಟು ಅಮಾನ್ಯೀಕರಣದಿಂದ ಪಾಕಿಸ್ತಾನದಲ್ಲಿಯ ನೂರಾರು ಖೋಟಾನೋಟು ಪ್ರಿಂಟಿಂಗ್ ಪ್ರೆಸ್‌ಗಳು ಬಂದಾಗಿ ಸಾವಿರಾರು ಏಜಂಟರು ನಿರ್ಗತಿಕರಾದರು ಎಂದು ಇನ್ನೊಂದು ಸುದ್ದಿ ಮೋದಿಯ ಪ್ರಚಾರಕರು ಮಾಧ್ಯಮಗಳಲ್ಲಿ ಹರಿಯಬಿಟ್ಟಿದ್ದರು. ಪಾಕಿಸ್ತಾನದ ಪತ್ರಿಕೆಗಳು ಈ ಬಗ್ಗೆ ಲೇವಡಿ ಮಾಡುತ್ತಾ "ಭಾರತೀಯ ನೋಟುಗಳೇನು ಬೀಡಿಯ ಕಟ್ಟಿನ ಲೇಬಲ್‌ನಷ್ಟು ಕಳಪೆಯಾಗಿತ್ತೇ? ಪಾಕಿಸ್ತಾನದ ಬೀಡಿ ಲೇಬಲ್ ಮತ್ತು ಸಿನಿಮಾ ಪೋಸ್ಟರ್ ಮುದ್ರಿಸುವ ನೂರಾರು ಪ್ರೆಸ್ಸುಗಳು ಭಾರತೀಯ ಖೋಟಾನೋಟು ಮುದ್ರಿಸಿ ಭಾರತದಲ್ಲಿ ಯಶಸ್ವಿಯಾಗಿ ಚಲಾಯಿಸುತ್ತಿದ್ದರೆ" ಎಂದು ಕೇಳುತ್ತಿವೆಯಂತೆ. ಇದನ್ನು ಸಮರ್ಥಿಸುವಂತೆ ಮೊನ್ನೆ ದಿಲ್ಲಿಯಲ್ಲಿ ಒಬ್ಬರು ಹೊಸ 500 ರ ನೋಟುಗಳನ್ನು ಮರೆತು ಶರ್ಟಿನಲ್ಲಿಯೇ ಬಿಟ್ಟು ವಾಷಿಂಗ್ ಮಶೀನ್ ಒಳಗೆ ಹಾಕಿದಾಗ ಹೊಸ 500 ರ ನೋಟಿನಲ್ಲಿ ಗಾಂಧಿ ಚಿತ್ರ ಸಹಿತ ಎಲ್ಲಾ ಪ್ರಿಂಟ್ ಮಾಯವಾಗಿ ಬಿಳಿ ಕಾಗದವಾದ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ಫೇಸ್‌ಬುಕ್ಕಿನಲ್ಲಿ ಸಚಿತ್ರ ವರದಿಯಾಗಿತ್ತು.

ಈಗ ನಮ್ಮ ರಿಸರ್ವ್ ಬ್ಯಾಂಕ್ ನೂರು ಮತ್ತು ಐವತ್ತು ರೂಪಾಯಿಯ ಹೊಸ ನೋಟುಗಳನ್ನು ಚಲಾವಣೆಗೆ ತರುತ್ತಿದೆ. ಇದರಲ್ಲಿ ಗಾಂಧೀಜಿಯ ಚಿತ್ರ ಇರುವುದಿಲ್ಲ ಎಂದು ರಿಸರ್ವ್ ಬ್ಯಾಂಕ್ ಅಧಿಕೃತವಾಗಿ ಹೇಳಿದೆ. ಇಂತಹದ್ದೇ ಗಾಂಧೀಜಿಯ ಚಿತ್ರವಿರದ ನೋಟನ್ನು ಯುಪಿಎ ಸರಕಾರವಿದ್ದಾಗ ಮೂರು ವರ್ಷದ ಹಿಂದೆ ರಘುರಾಮ್ ರಾಜನ್ನರ ಸಹಿಯೊಂದಿಗೆ ಹೊರತಂದಿತ್ತು. ಆಗ ಇದೇ ಬಿಜೆಪಿಯವರು ಈ ಬಗ್ಗೆ ಹುಯಿಲೆಬ್ಬಿಸಿ ಸೋನಿಯಾ ಗಾಂಧಿ ಮತ್ತು ಮನಮೋಹನ್ ಸಿಂಗ್ ಮಹಾತ್ಮ ಗಾಂಧಿಯವರಿಗೆ ಅವಮಾನ ಮಾಡಿದ್ದಾರೆ ಎಂದು ಹುಯಿಲೆಬ್ಬಿಸಿ ಅಂತಹ ಹೊಸ ನೋಟನ್ನು ಚಲಾವಣೆಯಿಂದ ಹಿಂತೆಗೆಯುವಂತೆ ಮಾಡಿದ್ದರು. ಸಾರಾಯಿ ವಿರೋಧಿ ಗಾಂಧೀಜಿಯ ಚಿತ್ರವಿರದ ಇಂತಹ ನೋಟುಗಳನ್ನು ಯುಪಿಎ ಸರಕಾರ ಸಾರಾಯಿ ಕೊಳ್ಳಲು ಕುಡುಕರಿಗೆ ಅನುಕೂಲವಾಗಲು ಛಾಪಿಸಿದ್ದು ಎಂದು ವ್ಯಂಗ್ಯ ಮಾಡಿದ್ದರು. ಆದರೆ ಈಗ ನೋಡಿದರೆ ಅದೇ ಬಿಜೆಪಿ ಸರಕಾರ ಕುಡುಕರಿಗೆ ಅನುಕೂಲವಾಗಲೆಂದು ಮತ್ತೆ ಗಾಂಧೀಜಿ ಚಿತ್ರವಿರದ ನೂರು ಮತ್ತು ಐವತ್ತು ರೂಪಾಯಿಯ ಹೊಸ ನೋಟು ಮುದ್ರಿಸಿದೆ ಮಾತ್ರವಲ್ಲ ಕೆಲವು ಬ್ಯಾಚಿನ ಹೊಸ ಎರಡು ಸಾವಿರ ರೂಪಾಯಿಯ ನೋಟುಗಳಲ್ಲೂ ಗಾಂಧೀಜಿಯ ಚಿತ್ರ ಬಿಟ್ಟು ಹೋಗಿ ಇತ್ತೀಚೆಗೆ ದೊಡ್ಡ ರಾದ್ಧಾಂತ ಮಾಡಿದೆ.

ಹೀಗೆ ಮೋದಿಯ ಆಡಳಿತದಲ್ಲಿ ಸೈನಿಕರಿಗೆ ಕೊಡುವ ಆಹಾರಸಹಿತ ಎಲ್ಲವೂ ಕಳಪೆ. ಈ ರೀತಿ ಎಲ್ಲೆಡೆ ಮೋದಿ ಸರಕಾರದ್ದು ಯೂ-ಟರ್ನ್. ಸ್ವಂತ ಜ್ಞಾನ ಇಲ್ಲದೇ ಅಮೆರಿಕ ಮತ್ತು ಅಂಬಾನಿಯ ತಾಳಕ್ಕೆ ಕುಣಿಯುವ ಬಾಡಿಗೆ ಬುದ್ಧಿಯವರದ್ದು ಕೊನೆಗೆ ಇದೇ ಅವಸ್ಥೆ ಆದರೆ ಇಂತಹ ಸ್ವೇಚ್ಛಾಚಾರಿಗಳಿಂದ ಇಡೀ ದೇಶ ದುರವಸ್ಥೆಗೆ ಇಳಿಯುತ್ತಿದೆ ಅದುವೇ ದೊಡ್ಡ ದುರಂತ.


- ಆರ್. ಬಿ. ಶೆಣಾವ, ಮಂಗಳೂರು

ಭೈರಪ್ಪ ಮತ್ತು ಚಿಮೂಗಳ ಸಂಶೋಧನೆಗಳು

ಭಾರತದಲ್ಲಿ ಸತಿಪದ್ಧತಿ ಬಂದಿದ್ದು ಮುಸ್ಲಿಮರಿಂದಾಗಿ ಎಂದು ಭೈರಪ್ಪ ಹೇಳಿದರೆ, ಭಾರತಕ್ಕೆ ಹಿಂಸೆ ಬಂದಿದ್ದು ಮುಸ್ಲಿಮರು ಭಾರತಕ್ಕೆ ಬಂದನಂತರ ಎಂದು ಚಿಮೂ... ಹೇಳಿದ್ದಾರೆ. ಹಾಗಾದರೆ ಮಹಾಭಾರತದ ಕಾಲದಲ್ಲಿ... ಮುಸ್ಲಿಮರು ಬಂದಾಗಿತ್ತೇ? ನಪುಂಸಕ ಪಾಂಡುರಾಜ ಸ... ಅವನ ಎರಡನೇ ಹೆಂಡತಿ ಮಾದ್ರಿ, ಪಾಂಡುವಿನ ಚಿತೆ... ಸುಟ್ಟುಕೊಂಡು ಸತಿ ಹೋಗಿದ್ದಕ್ಕೆ ಮುಸ್ಲಿಮರು ಕಾರಣ... ಭೈರಪ್ಪಾಜಿ? ಅಷ್ಟೇ ಅಲ್ಲ, ಕೃಷ್ಣ ತನ್ನ 125 ನೇ ವಯಸ್ಸಿ... ಜರ ಎಂಬ ಬೇಡನ ಬಾಣದಿಂದ ಸತ್ತಾಗ ಅವನ ಹದಿನಾ... ಸಾವಿರ ಹೆಂಡತಿಯರಲ್ಲಿ ಜೀವಂತ ಇದ್ದವರೆಲ್ಲಾ ಆತ್ಮಹ... ಮಾಡಿಕೊಂಡಿದ್ದು ಸತಿ ಅಲ್ಲವೇ? ರಾಧೆ ಇನ್ನೊ... ಹೆಂಡತಿಯಾಗಿದ್ದರೂ ಅವಳೂ ಕೃಷ್ಣ ಸತ್ತಾಗ ಆತ್ಮ... ಮಾಡಿಕೊಂಡಿದ್ದು ಸತಿ ತಾನೇ?

ಭಯಂಕರ ಸಂಶೋಧಕ ಚಿ.ಮೂ ಪ್ರಕಾರ ಭಾರ... ಹಿಂಸೆ ಬಂದಿದ್ದೂ ಮುಸ್ಲಿಮರು ಬಂದನಂತರವ... ಹಾಗಾದರೆ ಕುರುಕ್ಷೇತ್ರ ಯುದ್ಧ ನಡೆದದ್ದು ಮುಸ್ಲಿಮ... ಬಂದ ನಂತರವೇ? ಜೂಜುಕೋರ ಧರ್ಮರಾಯನಿಂದ... 75 ಲಕ್ಷ ಮನುಷ್ಯರು ಮತ್ತು 20 ಲಕ್ಷ ಆನೆ-ಕುದುರೆಗ... ಸತ್ತಿದ್ದು ಹಿಂಸೆಯಲ್ಲವೇ? ಈ ಘೋರ ಹಿಂಸೆಯನ್ನು ... ಸುಲಭವಾಗಿ ತಡೆಯಬಹುದಿತ್ತಾದರೂ ಅರ್ಜುನನ... ಪ್ರಚೋದಿಸಿ ಅವನನ್ನು ಘೋರ ಹಿಂಸೆಗೆ ಇಳಿಸಿದ್ದು ಕೃಷ್ಣ... ತಾನೇ! ಮಹಾಭಾರತದಲ್ಲಿ ಧರ್ಮರಾಯ ಹಾ... ರಾಮಾಯಣದಲ್ಲಿ ಶ್ರೀರಾಮ ಅಶ್ವಮೇಧ ಯ... ಮಾಡಿದಾಗ ಲಕ್ಷಾಂತರ ಯೋಧರು ಯುದ್ಧದಲ್ಲಿ ಮಡಿದ... ಅದು ಹಿಂಸೆಯಲ್ಲವೇ?


ಮೇಲಿನದು ಕಾಲ್ಪನಿಕ ಪುರಾಣವಾಯಿತು ಬಿಡಿ. ಆ... ನಮ್ಮ ಇತಿಹಾಸ ನೋಡಿದಾಗಲೂ ಕಾಣಿಸುವುದೇ... ಎಲ್ಲೆಲ್ಲಿಯೂ ಹಿಂಸೆಯೇ ಹಿಂಸೆ ಅಲ್ಲವೇ. ಕಳಿಂಗ... ಅಶೋಕ ಚಕ್ರವರ್ತಿ ಮಾಡಿದ್ದ ಘೋರ ನರಮೇ... ಚಂದ್ರಗುಪ್ತ, ಹರ್ಷವರ್ಧನ, ಪುಲಿಕೇಶಿ, ಚೋಳ, ಪ... ರಾಜರು ನೆರೆಯ ರಾಜ್ಯ ಕಬಳಿಸಲು ಮಾಡಿದ್ದ ನರ... ಇವೆಲ್ಲಾ ಹಿಂಸೆ ಅಲ್ಲವೇ? ಭಾರತದ ಎರಡೂವರೆ ಸಾ... ವರ್ಷದ ಇತಿಹಾಸ ನೋಡಿದರೆ ಭೂಮಿಗಾಗಿ, ಹೆಣ್ಣಿ... ಹಾಗೂ ಧಾರ್ಮಿಕ ಕಾರಣಕ್ಕಾಗಿ ವರ್ಷವಿಡೀ ಒಂದ... ಒಂದು ಯುದ್ಧ ಹಿಂದೂ ರಾಜರುಗಳ ನಡುವೆ ನಡೆಯುತ್ತ... ಇತ್ತು, ಇವೆಲ್ಲಕ್ಕಿಂತ ಮಿಗಿಲಾಗಿ ಸರ್ವಸಂಗ ಪರಿತ್ಯಾಗಿಯಾ... ಶಂಕರಾಚಾರ್ಯ ನಾಗಾರ್ಜುನಕೊಂಡದಲ್ಲಿ ಬೌ... ಭಿಕ್ಷುಗಳನ್ನೆಲ್ಲಾ ಕೊಂದಿದ್ದು ಹಿಂಸೆಯಲ್ಲವೇ? ಇದ... ನಡೆದದ್ದು ಭಾರತಕ್ಕೆ ಮುಸ್ಲಿಮರು ಬರುವುದಕ್ಕೆ ತುಂ... ಮುಂಚೆ ಎಂಬ ಇತಿಹಾಸದ ಪ್ರಾಥಮಿಕ ಜ್ಞಾನವಾದ...



ಎಂತಹ ಮಾನವೀಯ ಗುಣ ಸರಕಾರದ್ದು

ಭ್ರಷ್ಟಾಚಾರ ನಿವಾರಣೆಗಾಗಿ ನೋಟು ರದ್ದತಿ ಮಾಡಿರುವುದಾಗಿ ಮೋದಿ ಹೇಳಿಕೊಂಡು ಬರುತ್ತಾರೆ. ಆದರೆ ನೋಟು ರದ್ದತಿಯಿಂದ ಭ್ರಷ್ಟಾಚಾರ ನಿಲ್ಲಲು ಹೇಗೆ ಸಾಧ್ಯ ಎಂದು ಅವರು ವಿವರಿಸುತ್ತಿಲ್ಲ, ಹಳೆ ನೋಟಿನ ಬದಲು ಹೊಸ ನೋಟಿನಲ್ಲಿ ಲಂಚ ಕೊಡಲು ಸಾಧ್ಯವಿಲ್ಲ ಎಂದು ಮೋದಿಗೆ ಯಾವ ಪೆದ್ದ ಹೇಳಿದ್ದು? ಅದು ಬಿಡಿ, ನನ್ನ ಪರಿಚಯದ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಇದ್ದಾನೆ. ಅವನ ಕೆಲಸ ಜನರಿಗೆ ಬ್ಯಾಂಕುಗಳಿಂದ ಸಾಲ ಕೊಡಿಸಿ ಕಮಿಷನ್ ಪಡೆಯುವುದು. ಅವನ ಕಮಿಷನ್ನಿನಲ್ಲಿ ಬ್ಯಾಂಕ್ ಮ್ಯಾನೇಜರರ ಲಂಚವೂ ಸೇರಿರುತ್ತದೆ. ಬಹಳ ದಿನಗಳ ನಂತರ ಅವನು ಮೊನ್ನೆ ಸಿಕ್ಕಿದಾಗ ಕುತೂಹಲದಿಂದ ಕೇಳಿದೆ: "ನೋಟು ರದ್ದತಿಯಿಂದ ನಿನ್ನ ಬ್ಯಾಂಕ್ ಸಾಲ ಕೊಡಿಸುವ ದಂಧೆ ಬಂದ್ ಆಗಿರಬೇಕು ಅಲ್ಲವೇ? ಕಾರಣ ಈಗ ಮೋದಿ ಹೇಳಿದಂತೆ ಹಿಂದಿನ ಎರಡು ತಿಂಗಳಿಂದ ಭ್ರಷ್ಟಾಚಾರ ಸಂಪೂರ್ಣ ನಿಂತಿದೆ." ಆದಕ್ಕೆ ಅವನು ಗಹಿಗಹಿಸಿ ನಕ್ಕು "ಮೊದಲು 500, 1000 ನೋಟುಗಳಲ್ಲಿ ನಾನು ಬ್ಯಾಂಕ್ ಮ್ಯಾನೇಜರ್‌ಗೆ ಲಂಚ ಕೊಡುತ್ತಿದ್ದೆ. ಆದರೆ ಈಗ ಎರಡು ಸಾವಿರ ಮತ್ತು ನೂರರ ನೋಟುಗಳಲ್ಲಿ ಲಂಚ ಕೊಡುತ್ತಿದ್ದೇನೆ ಅಷ್ಟೇ. ಇಷ್ಟೇ ಅಲ್ಲ ಮೋದಿ ನಗದುರಹಿತ ವ್ಯವಹಾರ ಮಾಡಬೇಕೆಂದು ಹೇಳಿರುವುದರಿಂದ ಈಗ ಬ್ಯಾಂಕ್ ಮ್ಯಾನೇಜರ್‌ಗಳು ನಗದು ಲಂಚ ತೆಗೆದುಕೊಳ್ಳುವುದಿಲ್ಲ, ಅವರ ಲಂಚ ಈಗ ಎರಡು ಗ್ರಾಂ ಅಥವಾ ಐದು ಗ್ರಾಂ ಚಿನ್ನದ ಪವನಿನಿಂದ ಪಾವತಿಯಾಗುತ್ತದೆ. ಇವತ್ತೇ ಮಧ್ಯಾಹ್ನ ಮ್ಯಾನೇಜರ್‌ಗೆ ಲಂಚ ಕೊಡಲು ನನ್ನಲ್ಲಿ ಈಗಾಗಲೇ ಎರಡು ಪವನ್ ರೆಡಿಯಾಗಿದೆ" ಎಂದು ಹೇಳುತ್ತಾ ಕಿಸೆಯಿಂದ ಚಿನ್ನದ ನಾಣ್ಯ ತೆಗೆದು ತೋರಿಸಿದ. ಇದು ನೋಡಿ ದೇಶಪ್ರೇಮ ಅಂದರೆ, ಪ್ರಧಾನಿಯ ಮಾತಿಗೆ ಗೌರವ ಕೊಟ್ಟು ಲಂಚವೂ ಈಗ ನಗದು-ರಹಿತ ಆಗಿದೆ.

ನೋಟು ರದ್ದತಿಯಿಂದ ಪಾಕ್ ಭಯೋತ್ಪಾದಕರ ಹಾಗೂ ನಕ್ಸಲೈಟರ ಸೊಂಟ ಮುರಿದಿದೆ, ಇವೆರಡೂ ಗುಂಪಿನ ವಿಧ್ವಂಸಕ ಕೃತ್ಯಗಳು ನಿಂತಿವೆ ಎಂದು ಮೋದಿಯವರು ಹೇಳುತ್ತಿದ್ದರು. ಆದರೆ ಹಿಂದಿನ ಎರಡು ತಿಂಗಳಲ್ಲಿ ಉತ್ತರ ಭಾರತದಲ್ಲಿ ಹಾಗೂ ಆಂಧ್ರದಲ್ಲಿ ನೂರಾರು ಜನರನ್ನು ಆಹುತಿ ಪಡೆದ ಮೂರು ರೇಲ್ವೆ ಅಪಘಾತಗಳನ್ನು ಈಗ ರಾಜ್ಯ ಸರಕಾರಗಳು ನಕ್ಸಲೈಟರ ತಲೆಗೆ ಕಟ್ಟುತ್ತಿದ್ದರೆ ಕೇಂದ್ರ ಸರಕಾರವು ಈ ಮೂರೂ ಅಪಘಾತಗಳಲ್ಲಿ ದಾವೂದ್ ಇಬ್ರಾಹಿಂ ಮತ್ತು ಪಾಕಿನ ಐಎಸ್‌ಐ ಕೈವಾಡ ಕಾಣಿಸುತ್ತಿದೆ ಎಂದು ಹೇಳಿದೆ. ಹಾಗಾದರೆ ಮೋದಿ ಹೇಳಿರುವಂತೆ ನೋಟು ರದ್ದತಿಯಿಂದ ಪಾಕ್ ಭಯೋತ್ಪಾದನೆ ಮತ್ತು ನಕ್ಸಲಿಸಂ ನಿಂತಿದ್ದು ನಿಜವಾದರೆ ಈಗ ಈ ರೇಲ್ವೆ ಅಪಘಾತಗಳನ್ನು ಭಯೋತ್ಪಾದಕರ ಅಥವಾ ನಕ್ಸಲೈಟರ ವಿಧ್ವಂಸಕ ಕೃತ್ಯ ಎಂದು ಕೇಂದ್ರ ಸರಕಾರ ಹೇಗೆ ಆರೋಪಿಸುತ್ತಿದೆ? ಮುಂಬರುವ ಉತ್ತರ ಪ್ರದೇಶ ಮತ್ತು ಪಂಜಾಬ್ ಚುನಾವಣೆಯಲ್ಲಿ ಮುಸ್ಲಿಮರ ವಿರುದ್ಧ ಮತದಾರರಲ್ಲಿ ದ್ವೇಷ ಹುಟ್ಟಿಸಿ ತಮ್ಮ ಪಕ್ಷಕ್ಕೆ ಜನರ ಸಹಾನುಭೂತಿ ಮತ ಪಡೆಯಲು ಇದು ಅಮಿತ್ ಷಾನ ತಂ... ಆಗಿರಬಹುದೇ? ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟ ಪ್ರಕರಣದಂತಹದ್ದೇ ಈ ಮೂ... ರೈಲು ಅಪಘಾತ ಪ್ರಕರಣಗಳೂ ಯಾಕಾಗಿರಬಾರದು? ಅಥವಾ ನೋಟು ರದ್ದತಿ... ಮೂಲ ಉದ್ದೇಶವೇ ವಿಫಲ ಆಗಿದೆ ಎಂದು ಈ ಮೂಲಕ ಕೇಂದ್ರ ಸರಕಾ... ಒಪ್ಪಿಕೊಳ್ಳುತ್ತಿದೆಯೇ? ಸುರೇಶ್ ಪ್ರಭು ರೇಲ್ವೆ ಮಂತ್ರಿ ಆದ ಮೇಲೆ ಒಟ್ಟು ವಿ...





ರೈಲು ಅಪಘಾತಗಳಾಗಿವೆ ಹಾಗೂ ಐನೂರಕ್ಕಿಂತ ಹೆಚ್ಚು ಪ್ರಯಾಣಿಕರು ಸಾವಿಗೀಡಾಗಿದ್ದಾ... ಅಂದರೆ ಸುರೇಶ್ ಪ್ರಭು ರೇಲ್ವೆಗೆ ಸಾಡೇಸಾತಿ ಆಗಿರುವಂತಿದೆ.

ನವಂಬರ್ 20 ರಂದು ಕಾನ್ಪುರದಲ್ಲಿ ಆದ ರೈಲು ಅಪಘಾತದಲ್ಲಿ 150 ಕ್ಕೂ ಹೆಚ್ಚು ಜನ ಸತ್ತಿದ್ದರು. ಈ ಅಪಘಾತದ ನೈತಿಕ ಹೊಣೆ ಹೊತ್ತು ರೇಲ್ವೆ ಮಂತ್ರಿ ಸುರೇಶ್ ಪ್ರಭು ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ಜನರು ಕೇಳಿದಾಗ ಈ ಪ್ರಭು "ಆ ಪ್ರಯಾಣಿಕರೆಲ್ಲಾ ತಮ್ಮಲ್ಲಿದ್ದ ಕಪ್ಪು ಹಣವನ್ನು ಬಿಳಿಯಾಗಿಸಲು ಎಲ್ಲೆಲ್ಲಿಗೋ ಹೋಗುತ್ತಿದ್ದರು, ಮೇಲಾಗಿ ಅವರೆಲ್ಲಾ ಟಿಕೆಟ್ ಇಲ್ಲದೇ ಪ್ರಯಾಣಿಸುತ್ತಿದ್ದರು ಆದುದರಿಂದ ಅವರಿಗೆ ಪರಿಹಾರ ಕೊಡಲು ಸಾಧ್ಯವಿಲ್ಲ ಮತ್ತು ನಾನು ರಾಜೀನಾಮೆ ಸಹ ಕೊಡಬೇಕಾಗಿಲ್ಲ" ಎಂದು ಹೇಳಿದರೆಂದು ವರದಿಯಾಗಿದೆ. ಬಹುಶಃ ಅದಕ್ಕಾ... ಕೆಲವು ಗಾಯಗೊಂಡವರಿಗೆ ಆಸ್ಪತ್ರೆಗೆ ಹೋಗಲು ರೇಲ್ವೆ ಇಲಾಖೆ ಆಗ ಕೊಟ್ಟ ಹ... ಸಹ ಹಳೆಯ ಐನೂರರ ನೋಟುಗಳಲ್ಲಿಯೇ ಇತ್ತಂತೆ. ವಾಹ್, ಎಂತಹ ಮಾನವೀಯ ಗುಣವುಳ್ಳ ಸರಕಾರವಿದು!

-ಅಭಿಷೇಕ್ ಪಡಿವಾಳ್, ಸು...

...ಂಪ್‌ಗೂ, ಮೋದಿಗೂ ವ್ಯತ್ಯಾಸವೇನೂ ಇಲ್ಲ

ಹಿಂದಿನ ಎರಡೂವರೆ ತಿಂಗಳಿನಿಂದ ನೋಟು ರದ್ದತಿಯ ಹೊಡೆತದಿಂದ ತತ್ತರಿಸಿರುವ ಬಡ ಕುಟುಂಬಗಳ ಮಕ್ಕಳು, ...ಳೆಯರು, ಮುದುಕರು ತಮ್ಮನ್ನು ಘೋರ ಸಂಕಷ್ಟಗಳಿಂದ ಪಾರು ಮಾಡುವಂತೆ ಬೇಡಿಕೊಂಡು ಒಟ್ಟು ಒಂದು ಲಕ್ಷಕ್ಕೂ ...ಚ್ಚಿ ಪತ್ರಗಳನ್ನು ಪ್ರಧಾನಿ ಮೋದಿಗೆ ಬರೆದಿದ್ದರೂ ಒಂದಕ್ಕೂ ಪ್ರಧಾನಿ ಕಚೇರಿಯಿಂದ ಸ್ಪಂದನೆಯೇ ಸಿಗಲಿಲ್ಲ ಎಂದು ಹಿಂದಿ ...ಕೆಗಳು ವರದಿ ಮಾಡಿವೆ. ಯೋಧರ ಬಗ್ಗೆ ಭಾರಿ (ನಕಲಿ) ಅಭಿಮಾನ ತೋರಿಸುವ ಮೋದಿ ಮಾಜಿ ಯೋಧರು ತಮಗೆ ...ನ್ ಡ್ರಾ ಮಾಡಲಾಗದೇ ತಮ್ಮ ಕುಟುಂಬಗಳು ಉಪವಾಸ ಬಿದ್ದಿವೆ. ಹಾಗಾಗಿ ಪೆನ್ಶನ್ ಕೊಡುವಂತೆ ಬ್ಯಾಂಕುಗಳಿಗೆ ...ೇಶ ಮಾಡಿ ಎಂದು ಯೋಧರು ಬರೆದ ಪತ್ರಗಳಿಗೂ ಮೋದಿ ಕಿಂಚಿತ್ ಗೌರವ ಕೊಡಲಿಲ್ಲವಂತೆ. ಹೀಗಿದ್ದರೂ ಇದೇ ...ೋದಿ ನೋಟು ಬದಲಾವಣೆಗೆ ಸಹಕರಿಸಿದ ಕೆಲವು ಶತಭ್ರಷ್ಟ ಬ್ಯಾಂಕಿನ ನೌಕರರನ್ನು ಗಡಿ ಕಾಯುವ ಯೋಧರಿಗೆ ...ೋಲಿಸಿ ನಿಜ ಯೋಧರಿಗೇ ಅಪಮಾನ ಮಾಡಿದರು.


ಈಗಿನ ಬಿಜೆಪಿ ಆಡಳಿತದ ಮೊದಲಿನ ಎರಡು ವರ್ಷ ಮೋದಿಯ ಪ್ರಚಾರ ವಿಭಾಗದವರು ಮೋದಿಯೊಬ್ಬ ...ತ್ಯಂತ ಜನಪರ ಕಾಳಜಿಯುಳ್ಳ ಮಹಾನ್ ವ್ಯಕ್ತಿ ಎಂಬಂತೆ ಬಿಂಬಿಸುವ ಸಲುವಾಗಿ, ಸಣ್ಣಪುಟ್ಟ ಮಕ್ಕಳು ಬರೆದ ...ಲ್ಪನಿಕ) ಪತ್ರಗಳಿಗೆ ಮೋದಿ ತಕ್ಷಣ ಸ್ಪಂದಿಸಿ ಅವರ ಊರಿನ ರಸ್ತೆ ರಿಪೇರಿ ಮಾಡಿಸಿದರು, ಡ್ರೇನೇಜ್ ಸ್ವಚ್ಛ ...ಾಡಿಸಿದರು ಎಂದೆಲ್ಲಾ ತಮ್ಮ ಕಾಲು ನೆಕ್ಕುವ ಪತ್ರಿಕೆಗಳಲ್ಲಿ ಪ್ಲಾಂಟ್ ಮಾಡಿದ್ದರು. ಆದರೆ ಈಗ ನೋಟು ರದ್ದತಿಯ ...ಪ ಸಂಕಷ್ಟದ ಬಗ್ಗೆ ಬಡಜನರು ನಿಜವಾಗಿ ಬರೆದ ಒಂದು ಲಕ್ಷ ಪತ್ರಗಳು ಮಾತ್ರ ಮೋದಿಯ ಕಚೇರಿಯ ...ದಬುಟ್ಟಿ ಸೇರಿದವು. ಶ್ರೀಮಂತ ರಿಲಾಯನ್ಸ್ ಜಿಯೋ ಮತ್ತು ಪೇಟಿಎಂ ಕಂಪನಿಗಳಿಗೆ ಪ್ರತಿ ವರ್ಷ ಕೋಟ್ಯಾಂತರ ...ಭ ತಂದುಕೊಡುವ ನಗದುರಹಿತ ಪಾವತಿಯ ಪ್ರಚಾರ ಮಾಡುವುದರಲ್ಲಿಯೇ ಮೋದಿ ತಲ್ಲೀನರಾಗಿರುವಾಗ ಬಡ ...ರ ಪತ್ರಗಳನ್ನು ಓದುವಷ್ಟು ಬಿಡುವು ಅವರಿಗೆಲ್ಲಿದೆ ಬಿಡಿ. ಮೋದಿಯ ದೃಷ್ಟಿಯಲ್ಲಿ ಅಂಬಾನಿಯ ಎದುರು ...ಾಜಿ ಯೋಧರು ಮತ್ತು ಬಡವರು ಬರೀ ಕ್ಷುಲ್ಲಕ ಜೀವಿಗಳು ಅನಿಸಿರಬೇಕು.

ಇನ್ನ ಈ ನಕಲಿ ಗಾಂಧಿ ನಿಜವಾದ ಮಹಾತ್ಮ ಗಾಂಧಿಯವರನ್ನು ಬದಿಗೆ ಸರಿಸಿ ಖಾದಿಯ ಬ್ರ್ಯಾಂಡ್ ...ಬಾಸಡರ್ ಆಗುವ ಬಗ್ಗೆ ಏನು ಹೇಳಬೇಕೆಂದರೆ, ಜೀವನದಲ್ಲಿ ಎಂದೂ ಖಾದಿ ಉಡದ ಆರೆಸ್ಸೆಸ್ಸಿನವರ ...ನಸ್ಥಿತಿಯೇ ಮೋದಿಯದ್ದು. ಖಾದಿ ಕಾಂಗ್ರೆಸ್ಸಿನೊಂದಿಗೆ ಸಮೀಕರಣ ಆಗಿರುವುದರಿಂದ ಖಾದಿ ಕಂಡರೆ ಮೋದಿಗೆ ...ರ್ಜಿ. ಮೊನ್ನೆ ಹೊಸ ವರ್ಷದ ಕ್ಯಾಲಂಡರಿಗೆ ಮಾಡೆಲ್ ಆಗುವಾಗಲೂ ಈ ಮೋದಿ ಖಾದಿ ಉಡಲಿಲ್ಲ. ಆ ...ಲಂಡರಿನ ಫೋಟೋ ಸೆಷನ್ನಿನಲ್ಲಿ ಮೋದಿ ಉಟ್ಟಿದ್ದು ದುಬಾರಿ ಪಾಲಿಸ್ಟರ್ ಬಟ್ಟೆಯನ್ನೇ ಹೊರತು ಖಾದಿಯಲ್ಲ. ...ತ ಎಂತಹ ಆಷಾಢಭೂತಿ ಎಂದು ಇದರಿಂದಲೇ ಅರ್ಥವಾಗುತ್ತದೆ. ಮೇಲಾಗಿ ಈ ಕ್ಯಾಲಂಡರಿನ ಫೋಟೋ ...ನ್ನಿನ ವಿಡಿಯೋ ಯುಟ್ಯೂಬಿನಲ್ಲಿ ಇತ್ತೀಚೆಗೆ ಅಪ್ಲೋಡ್ ಆಗಿದೆ. ಅದರಲ್ಲಿ ಮೋದಿ ಚರಕದ ಚಕ್ರವನ್ನು ಸಣ್ಣ ...ಡುಗರ ಆಟಿಕೆಯಂತೆ ಬಲಗೈಯಲ್ಲಿ ತಿರುಗಿಸುತ್ತಿದ್ದಾರೆಯೇ ಹೊರತು ಎಡಗೈಯಲ್ಲಿ ಹತ್ತಿಯ ಲಡಿ ಹಿಡಿದು ...ಲುತ್ತಲೇ ಇಲ್ಲ. ಬದಲಿಗೆ ಒಬ್ಬ ಹೆಂಗಸು ಅದೇ ಚರಕದ ಎಡ ತುದಿಗೆ ಕುಳಿತು ನೂಲು ತೆಗೆಯುತ್ತಿದ್ದಾಳೆ. ...ಹಾತ್ಮ ಗಾಂಧೀಜಿ ಸ್ವತಃ ತಾವೇ ಚರಕ ತಿರುಗಿಸಿ ತಾವೇ ನೂಲು ತೆಗೆಯುತ್ತಿದ್ದರು. ಈ ರೀತಿ ಬೇರೆಯವರ ...ಾಯ ತೆಗೆದುಕೊಳ್ಳುತ್ತಿರಲಿಲ್ಲ. ಮೇಲಾಗಿ ಮೋದಿಯ ಹಿಂದೆ ಕುಳಿತಿರುವ ವಯಸ್ಸಾದ 10-15 ಮಹಿಳೆಯರು ...ಮ್ಮ ತಮ್ಮ ಚರಕದಲ್ಲಿ ನೂಲುವುದನ್ನು ಬಿಟ್ಟು ದೇವಮಾನವ ಮೋದಿಗೆ ಕೈಮುಗಿಯುತ್ತಾ ಕುಳಿತಿದ್ದಾರೆ. ಗಾಂಧೀಜಿ ...ಗೆ ಎಂದೂ ಮಾಡುತ್ತಿರಲಿಲ್ಲ. ಅವರು ಸಾಮೂಹಿಕ ಭಜನೆ ಮಾಡಿಸುತ್ತಾ ತಮ್ಮೊಂದಿಗಿದ್ದ ಎಲ್ಲರಿಂದಲೂ ...ರವರ ಚರಕದಿಂದ ನೂಲು ನೇಯಿಸುತ್ತಿದ್ದರು. ಅವರು ಎಂದೂ ಕೇವಲ ಫೋಟೋಗೆ ಪೋಸ್ ಕೊಡಲೋಸುಗ ...ಕ ಹಿಡಿದಿರಲಿಲ್ಲ ಹಾಗೂ ಅವರು ಖಾದಿ ಬಿಟ್ಟು ಬೇರೆ ಯಾವ ಬಟ್ಟೆಯನ್ನೂ ತೊಡುತ್ತಿರಲಿಲ್ಲ.

ಗಾಂಧೀಜಿ ಮೋದಿಯಂತಹ ನಟಸಾಮ್ರಾಟ, ಭಾಷಣ-ಭೀಷಣ, ಅಭಿನಯ-ವಿಶಾರದ ಆಗಿರಲಿಲ್ಲ. ಗಾಂಧಿಜಿ ...ವನದಲ್ಲೆಂದೂ ಸುಳ್ಳು ಹೇಳಿಲ್ಲ ಮತ್ತು ಸತ್ಯವೇ ದೇವರು ಅನ್ನುತ್ತಿದ್ದರು, ಆದರೆ ಈ ಮೋದಿ [illegible] ... ಮಾತನಾಡಿಲ್ಲ ಹಾಗೂ ಸುಳ್ಳೇ ದೇವರ ಅಪ್ಪ ಎನ್ನುತ್ತಾರೆ. ಅಮೆರಿಕದ ಈಗಿನ ಅಧ್ಯಕ್ಷ [illegible] ...ರಿಯಾಲಿಟಿ ಶೋ ಮೂಲಕ ಟ್ರಂಪ್ ಹಾಗೂ ವೇದಿಕೆಯಲ್ಲಿ ಮೊಸಳೆ ಕಣ್ಣೀರು ಹಾಕುವ ನಮ್ಮ ಮೋದಿ [illegible]ಗೂ ...ತ್ಯಾಸವೇನೂ ಇಲ್ಲ.

-ಮಲ್ಲಿಕಾರ್ಜುನ ಶೆಟ್ಟರ್, ಬೆಳಗಾವಿ

...ಥೂ.ಮೂರ್ತಿಗೆ ಇದೆಯೇ? ಮುಸ್ಲಿಮರು ಬಂದ ...ಲೆಯೂ ಹಿಂದೂಗಳೇ ಹಿಂದೂಗಳನ್ನು ರಾಜ್ಯ ...ರಣೆಗಾಗಿ ಅಥವಾ ಸಂಪತ್ತಿಗಾಗಿ ಕೊಲ್ಲುತ್ತಿರಲಿಲ್ಲವೇ. ...ತ್ತ ಬ್ರಾಹ್ಮಣರಾಗಿದ್ದ ಪೇಶ್ವೆಗಳು ಹಿಂದೂ ಮಠವಾದ ...ಗೇರಿಯ ಮೇಲೆಯೇ ದಾಳಿ ಮಾಡಿ ...ದಾರು ಹಿಂದೂ ಕನ್ನಡಿಗರನ್ನು ಕೊಂದು ...ಠದ ಸಂಪತ್ತು ಲೂಟಿ ಮಾಡಿದ್ದು ...ಸೆಯಲ್ಲವೇ? ಹಿಂದೂ ಕೃಷ್ಣದೇವರಾಯ ...ಂಗದ ಹಿಂದೂ ರಾಜ ಗಜಪತಿ ಮತ್ತು ...ವನ ಸೈನಿಕರ ನರಮೇಧ ನಡೆಸಿದ್ದು ...ಯನಗರ ಇತಿಹಾಸದ ಸಂಶೋಧನೆ ...ಡಿರುವ ಚಿಮೂಗೆ ಮರೆತುಹೋಯಿತೆ?




ಹಿಂದೂ ಧರ್ಮದ ಅವಿಭಾಜ್ಯ ...ಗವಾದ ಜಾತಿತಾರತಮ್ಯವೂ ಹಿಂಸೆಯ ...ಭಾಜ್ಯ ಅಂಗವಾಗಿದೆ. ಶೇ.90% ...ರಿಗೆ ವಿದ್ಯೆ ನಿರಾಕರಿಸಿ ಅವರಿಗೆ ಜ್ಞಾನ ಸಿಗದಂತೆ ...ಡಿದ್ದು ಮತ್ತು ದೇವರ ಶ್ಲೋಕಗಳನ್ನು ಕೇಳಿಸಿಕೊಂಡ ...ದ್ರರ ಕಿವಿಗಳಿಗೆ ಕಾದ ಸೀಸವನ್ನು ಹೊಯ್ಯುತ್ತಿದ್ದದ್ದು ಹಾಗೂ ಕೆಳಜಾತಿಯವರು ದೇವಸ್ಥಾನ ಪ್ರವೇಶ ಮಾಡಿದಾಗ ಅವರನ್ನು ಆನೆಯಿಂದ ತುಳಿಸಿ ಕೊಲ್ಲುತ್ತಿದ್ದದ್ದು, ಇವೆಲ್ಲಾ ಹಿಂಸೆಯಲ್ಲವೇ? ದಲಿತರನ್ನು ಊರ ಹೊರಗೆ ಇಟ್ಟು ಸರಿಯಾದ ನೀರು ಆಹಾರ ಬಟ್ಟೆಯನ್ನೂ ಕೊಡದೇ ಅವರನ್ನು ಯುಗಯುಗಾಂತರದಿಂದ ಶೋಷಿಸುತ್ತಿದ್ದದ್ದು ಹಿಂಸೆಯಲ್ಲವೇ? ಮೂರು ಸಾವಿರ ವರ್ಷದ ಹಿಂದೆ ಈ ರೀತಿಯ ನೀಚ ಹಿಂಸೆ ವೈದಿಕರಿಂದ ಆಗುತ್ತಿದ್ದಾಗ ಮುಸ್ಲಿಮರು ಇರಲೇ ಇಲ್ಲವಲ್ಲ. ಗೌತಮ ಬುದ್ಧ, ಜೈನ ತೀರ್ಥಂಕರರು, ಅಶೋಕ ಚಕ್ರವರ್ತಿ ಇವರೆಲ್ಲಾ ಜನರಿಗೆ ಹಿಂಸೆ ತ್ಯಜಿಸಿ ಅಹಿಂಸೆಯನ್ನು ಸ್ವೀಕರಿಸಲು ಬೋಧಿಸುತ್ತಿದ್ದಾಗ ಬೇರೆ ಧರ್ಮದವರು ಭಾರತಕ್ಕೆ ಇನ್ನೂ ಬಂದಿರಲಿಲ್ಲ. ಹಾಗಾದರೆ ಈ ಎಲ್ಲಾ ಮಹಾತ್ಮರು ಹಿಂಸೆ ತ್ಯಜಿಸಲು ಬೋಧಿಸುತ್ತಿದ್ದದ್ದು ಯಾರಿಗೆ? ಆರೆಸ್ಸೆಸ್, ಬಿಜೆಪಿ ಮತ್ತು ಕೇಸರಿ ಪಡೆಗಳನ್ನು ಒಲಿಸಿಕೊಳ್ಳಲು ಹಿರಿಯ ವಯೋವೃದ್ಧ ಸಾಹಿತಿಗಳಾದ ಭೈರಪ್ಪ ಮತ್ತು ಚಿ.ಮೂ ಹೀಗೆಲ್ಲಾ ಇತಿಹಾಸವನ್ನು ವಿಕೃತವಾಗಿ ತಿರುಚಿ ಮುಸ್ಲಿಮರ ವಿರುದ್ಧ ಹಿಂದೂಗಳಲ್ಲಿ ದ್ವೇಷ ಹುಟ್ಟಿಸುವುದು ಸಹ ಭಾರತ ಮಾತೆಯ ದೃಷ್ಟಿಯಲ್ಲಿ ದೇಶದ್ರೋಹವೇ ಆಗಿದೆ.

- ಜೆ. ರವಿಕಿರಣ, ಮೈಸೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...nkesh70@rediffmail.com ಗೆ ನುಡಿ ...ಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ...ನಿಸಿಕೆಗಳನ್ನು 9980331427 ನಂಬರ್‌ಗೂ ...ಪ್ತವಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

ಸುಲಭಕ್ಕೆ ದಕ್ಕದ ಅಲ್ಲಮ: ಧನಂಜಯ್



ಟಿ.ಎಸ್.ನಾಗಾಭರಣ ನಿರ್ದೇಶನದ 'ಅಲ್ಲಮ' ಚಿತ್ರದಲ್ಲಿ ಅಲ್ಲಮನಾಗಿ ಕಾಣಿಸಿಕೊಂಡಿದ್ದಾರೆ ನಟ ಧನಂಜಯ್. ಈ ಪಾತ್ರಕ್ಕಾಗಿ ಅವರು ಹಲವು ರೀತಿಗಳಲ್ಲಿ ತಯಾರಿ ಮಾಡಿಕೊಂಡಿದ್ದಾರೆ. ಈ ಕುರಿತು ಅವರು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

****


ಈವರೆಗೂ ಕಮರ್ಷಿಯಲ್ ಚಿತ್ರಗಳ ಮೂಲಕ ಗುರುತಿಸಿಕೊಂಡವರು ಧನಂಜಯ್. 'ಡೈರೆಕ್ಟರ್ ಸ್ಪೆಷಲ್', 'ರಾಟೆ', 'ಬದ್ಮಾಶ್' ಸೇರಿದಂತೆ ಹಲವು ಸಿನಿಮಾಗಳಲ್ಲಿ ನಾಯಕರಾಗಿ ನಟಿಸಿದರೂ ಹೇಳಿಕೊಳ್ಳುವಂತಹ ಗೆಲುವು ಅವರದ್ದಾಗಿಲ್ಲ. ಆದರೂ ತಮ್ಮ ಪ್ರಯತ್ನವನ್ನು ಅವರು ಬಿಟ್ಟಿಲ್ಲ. ಈ ವಾರ ಧನಂಜಯ್ ನಟನೆಯ 'ಅಲ್ಲಮ' ಚಿತ್ರ ರಾಜ್ಯಾದ್ಯಂತ ರಿಲೀಸ್ ಆಗುತ್ತಿದೆ. ಟಿ.ಎಸ್.ನಾಗಾಭರಣ ನಿರ್ದೇಶನದಲ್ಲಿ ಮೂಡಿಬಂದ ಈ ಚಿತ್ರದಲ್ಲಿ ಧನಂಜಯ್ ಅಲ್ಲಮನಾಗಿ ಕಾಣಿಸಿಕೊಂಡಿದ್ದಾರೆ. ಪಾತ್ರಕ್ಕಾಗಿ ಸಾಕಷ್ಟು ರೀತಿಯಲ್ಲಿ ತಯಾರಿ ಕೂಡ ಮಾಡಿಕೊಂಡಿದ್ದಾರೆ. ಈ ಕುರಿತಾಗಿ ಅವರೊಂದಿಗಿನ ಮಾತುಕತೆ ಇಲ್ಲಿದೆ.

ಈ ಕಾಂಬಿನೇಷನ್ ಹೇಗಿತ್ತು?

ಅದನ್ನು ಪದಗಳಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಇಂತಹ ಸಿನಿಮಾ ನನಗೆ ಸಿಕ್ಕಿದ್ದೂ ನನಗೆ ಸಿಕ್ಕ ಗೌರವ ಎಂದೇ ಭಾವಿಸುತ್ತೇನೆ. ಅವರು ರಂಗಭೂಮಿಯವರು ಆಗಿದ್ದರಿಂದ ಸುಲಭವಾಗಿ ನನಗೆ ಅರ್ಥವಾಗುತ್ತಾ ಹೋದರು. ಅವರು ಹೇಳಿಕೊಡುವ ರೀತಿ, ಡೈಲಾಗ್ ಏರಿಳಿತ ಮತ್ತು ಪಾತ್ರವನ್ನು ಪೋಷಿಸುವ ವಿಧಾನ ಕಷ್ಟವಾಗಲಿಲ್ಲ. ಅಲ್ಲಮನನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಕಷ್ಟ. ಆದರೆ ನಾಗಾಭರಣ ಸಾರ್ ನಿರ್ದೇಶನ ಮಾಡುತ್ತಿದ್ದರಿಂದ ಅವರು ಹೇಳಿದಂತೆ ನಾನು ನಟಿಸುತ್ತಾ ಹೋದೆ.

* ಪಾತ್ರಕ್ಕಾಗಿ ನೀವು ಏನೆಲ್ಲ ತಯಾರಿಯನ್ನು ಮಾಡಿಕೊಳ್ಳಬೇಕಾಯಿತು?

ಶಾಲಾ ದಿನಗಳಲ್ಲಿ ಅಲ್ಲಮ ಪ್ರಭುಗಳ ವಚನಗಳನ್ನು ನಾನು ಓದಿದ್ದೆ. ನಂತರ ಥಿಯೇಟರ್‌ನಲ್ಲಿ ಕೆಲಸ ಮಾಡುವಾಗ ಅಲ್ಲಮ ಬಗೆಗಿನ ನಾಟಕಗಳನ್ನು ನೋಡಿದ್ದೆ. 'ಪ್ರಭುಲಿಂಗ ಲೀಲೆ', 'ಅಲ್ಲಮನ ಬಯಲಾಟ' ಇವಷ್ಟೇ ಅಲ್ಲಮ ಎಂದುಕೊಂಡಿದ್ದೆ. ಅದರಾಚೆಗಿನ ಅಲ್ಲಮನನ್ನು ನಿರ್ದೇಶಕರು ನನಗೆ ತೋರಿಸಿಕೊಟ್ಟರು. ಹಾಗಾಗಿ ಪಾತ್ರಕ್ಕಾಗಿ ನಾನು ತಯಾರಿ ಮಾಡಿಕೊಳ್ಳಲೇಬೇಕಾಯಿತು. ಅಲ್ಲಮನ ಬಗ್ಗೆ ಹರಿಹರ, ಚಾಮರಸ ಹೇಳಿದ್ದನ್ನು ಓದಿಕೊಂಡೆ. ಕಾಮಲತೆ, ಮಾಯೆ ಮತ್ತು ಅಲ್ಲಮನ ವಚನಗಳನ್ನು ಓದೋಕೆ ಶುರು ಮಾಡಿದೆ. ಅಲ್ಲಮರ ಬಗ್ಗೆ ತಿಳಿದುಕೊಂಡವರ ಜತೆ ಮಾತನಾಡಿದೆ. ಇಡೀ ಸ್ಕ್ರಿಪ್ಟ್ ಡಿಸ್ಕಷನ್ ರೆಕಾರ್ಡ್ ಆಗಿತ್ತು, ಅದನ್ನು ಕೇಳಿಸಿಕೊಂಡೆ. ಯೋಗ ಆರಂಭಿಸಿದೆ, ಬೇಸಿಕ್ಸ್



* ಈಗಾಗಲೇ ಮೂರ್‍ನಾಲ್ಕು ಚಿತ್ರಗಳಲ್ಲಿ ನಟಿಸಿದ್ದೀರಿ. ಆ ಪಾತ್ರಗಳು ಯಾಕೆ ನಿಮ್ಮ ಕೈ ಹಿಡಿಯಲಿಲ್ಲ?

ನಟನಾಗಿ ನಾನು ನನ್ನ ಕೆಲಸ ಮಾಡಿದ್ದೇನೆ. ಸಿನಿಮಾ ಹೀಗೆಯೇ ವರ್ಕ್ ಆಗುತ್ತದೆ ಅಂತ ಹೇಳುವುದಕ್ಕೆ ಕಷ್ಟ. ಎಲ್ಲರೂ ನನ್ನ ನಟನೆ ಮತ್ತು ಪಾತ್ರದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡುತ್ತಾರೆ. ಸಿನಿಮಾಗಳು ಕೂಡ ಚೆನ್ನಾಗಿಯೇ ಮೂಡಿ ಬಂದಿರುತ್ತವೆ. ಆದರೆ, ಬಿಡುಗಡೆಯ ಟೈಮ್ ಸರಿ ಇರಲ್ಲ, ಪ್ರಚಾರದ ಕೊರತೆಯೂ ಕಾಡುತ್ತದೆ. ಥಿಯೇಟರ್ ಸಮಸ್ಯೆಯೂ ಎದುರಾಗಬಹುದು. ಹೀಗೆ ನಾನಾ ಕಾರಣಗಳಿಂದಾಗಿ ಚಿತ್ರಗಳು ಅಂದುಕೊಂಡಷ್ಟು ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡಿಲ್ಲ.

* ಈವರೆಗೂ ಯಂಗ್ ಡೈರೆಕ್ಟರ್ಸ್ ಜತೆ ಕೆಲಸ ಮಾಡಿದ್ದೀರಿ. 'ಅಲ್ಲಮ' ಚಿತ್ರಕ್ಕೆ ಟಿ.ಎಸ್.ನಾಗಭರಣ ನಿರ್ದೇಶಕರು. ಈ ಪಾತ್ರಕ್ಕೆ ನೀವು ಆಯ್ಕೆ ಆಗಿದ್ದು ಹೇಗೆ?

ನಾಗಾಭರಣ ಸಾರ್ ಬಗ್ಗೆ ನನಗೆ ಗೊತ್ತಿತ್ತು. ಅವರನ್ನು ಮೀಟ್ ಮಾಡಲು ನಾನು ಕೂಡ ಟ್ರೈ ಮಾಡುತ್ತಿದ್ದೆ. ಇಂತಹ ವೇಳೆಯಲ್ಲಿ ಬಂದ ಆಫರ್ ಇದು. ಒಂದು ದಿನ ನಾಗಾಭರಣ ಅವರು ನನ್ನನ್ನು ಭೇಟಿ ಮಾಡುತ್ತೇನೆ ಅಂದರು. ನಾನೇ ನಿಮ್ಮಲ್ಲಿಗೆ ಬರುತ್ತೇನೆ ಅಂತ ಹೋದೆ. ಆಗ ಅಲ್ಲಮನ ಬಗ್ಗೆ ಹೇಳಿದರು. ನಿಜಕ್ಕೂ ಖುಷಿ ಆಯಿತು. ಅವರು ನನ್ನ 'ಜಯನಗರ 4ನೇ ಬ್ಲಾಕ್' ಕಿರುಚಿತ್ರ ನೋಡಿದ್ದರಂತೆ. ಅದು ಇಷ್ಟವಾದ ಕಾರಣ ನನ್ನನ್ನು ಕರೆಯಿಸಿಕೊಂಡಿದ್ದರು. ಹೀಗೆ ನನಗೆ ಪಾತ್ರ ಸಿಕ್ಕಿದ್ದು.

* ನೀವು ರಂಗಭೂಮಿ ಹಿನ್ನೆಲೆಯಿಂದ ಬಂದವರು. ನಾಗಾಭರಣ ಕೂಡ ಮೂಲತಃ ರಂಗಭೂಮಿಯವರು.

ಮೃದಂಗ ಕಲಿಯಲು ಆರಂಭಿಸಿದೆ. ವರ್ಷಗಳ ಕಾಲ ತಯಾರಿ ಮಾಡಿಕೊಂಡೆ.

* ಅಲ್ಲಮ ಪಾತ್ರಕ್ಕಾಗಿ ಸಿಕ್ಸ್‌ಪ್ಯಾಕ್ ಮಾಡಿಕೊಂಡಿದ್ದೀರಿ ಅಂತ ಸುದ್ದಿ ಆಗಿತ್ತು?

ಹೌದು. ನಾನು ಈ ಸಿನಿಮಾಗಾಗಿ ಸಿಕ್ಸ್‌ಪ್ಯಾಕ್ ಮಾಡಿರಲಿಲ್ಲ. ಬೇರೊಂದು ಚಿತ್ರಕ್ಕೆ ತಯಾರಿ ಮಾಡಿಕೊಂಡಿದ್ದೆ. ಇದೇ ಟೈಮ್‌ನಲ್ಲೇ ನನಗೆ 'ಅಲ್ಲಮ' ಸಿನಿಮಾ ಸಿಕ್ಕಿತು. ಹಾಗಾಗಿ ಮಾಧ್ಯಮದವರು ಕೂಡ ನನ್ನ ಬಗ್ಗೆ ಸಿಕ್ಸ್‌ಪ್ಯಾಕ್ ಅಲ್ಲಮ ಎಂದು ಬರೆದರು. ನಂತರ ನಾನು ಬಾಡಿಬಿಲ್ಡ್ ಮಾಡಿದ್ದನ್ನು ನಾರ್ಮಲ್ ಮಾಡಿಕೊಂಡೆ.

* ಅಲ್ಲಮನ ಪಾತ್ರಕ್ಕೆ ನ್ಯಾಯ ಸಲ್ಲಿಸಿದ್ದೇನೆ ಎಂಬ ನಂಬಿಕೆ ನಿಮಗಿದೆಯಾ?

ನನ್ನ ಅನುಭವಕ್ಕೆ ಸಿಕ್ಕ ಅಲ್ಲಮನಾಗಿ ನಟಿಸಿದ್ದೇನೆ. ಎಷ್ಟು ಪ್ರಾಮಾಣಿಕವಾಗಿ ತೆರೆ ಮೇಲೆ ಪ್ರೆಸೆಂಟ್ ಮಾಡಬೇಕೋ ಅಷ್ಟನ್ನು ನಾನು ಮಾಡಿದ್ದೇನೆ. ನಾನು ಏನೇ ತಪ್ಪು ಮಾಡಿದ್ದರೂ ಅದು ನನ್ನದು. ಪಾತ್ರ ಚೆನ್ನಾಗಿದೆ ಅಂದರೆ, ಅದು ನಿರ್ದೇಶಕರಿಗೆ ಸೇರಬೇಕು.

* ಅಲ್ಲಮ ಪಾತ್ರ ನಿರ್ವಹಿಸಿದ ನಂತರ ನಿಮ್ಮಲ್ಲಿ ಆದ ಬದಲಾವಣೆ ಏನು?

ಶೂಟಿಂಗ್ ಮುಗಿಯುವವರೆಗೂ ಅಲ್ಲಮನಾಗಿಯೇ ಇದ್ದೆ. ಅದೇ ಮೂಡ್‌ನಲ್ಲಿ ಇರುತ್ತಿದ್ದ ಕಾರಣ, ನನ್ನ ಗೆಳೆಯರು ನನ್ನನ್ನು ಅಲ್ಲಮ ಅಂತಾನೇ ರೇಗಿಸುತ್ತಿದ್ದರು. ಸಿನಿಮಾ ಶೂಟಿಂಗ್ ಮುಗಿದು ಸುಮಾರು ಒಂದು ತಿಂಗಳು ಕಳೆದರೂ, ಆ ಪಾತ್ರದಿಂದ ಹೊರಬರಲು ನನ್ನಿಂದ ಸಾಧ್ಯವಾಗಲಿಲ್ಲ. ■

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 08-02-2017 RNI No. KARKAN2005/1



ಪಾರೂಲ್ ಈಗ 'ಕ್ವೀನ್'

ಬಾಲಿವುಡ್‌ನಲ್ಲಿ ಸಖತ್ ಹವಾ ಕ್ರಿಯೇಟ್ ಮಾಡಿದ್ದ 'ಕ್ವೀನ್' ದಕ್ಷಿಣ ಭಾರತಕ್ಕೂ ಕಾಲಿಡುತ್ತಾಳೆ ಅನ್ನುವ ಸುದ್ದಿ ಆರೇಳು ತಿಂಗಳಿಂದ ಹರಿದಾಡುತ್ತಿತ್ತು. ತೆಲುಗು, ತಮಿಳು ಮತ್ತು ಕನ್ನಡದಲ್ಲಿ ಈ ಸಿನಿಮಾ ಏಕಕಾಲಕ್ಕೆ ನಿರ್ಮಾಣ ಮಾಡುವುದಾಗಿ ನಿರ್ಮಾಣ ಸಂಸ್ಥೆ ಹೇಳಿಕೊಂಡಿತ್ತು, ಈಗದು ನಿಜವಾಗಿದೆ. ತಮಿಳಿನಲ್ಲಿ ರೇವತಿ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದರೆ, ಕನ್ನಡ ಮತ್ತು ತೆಲುಗು ಚಿತ್ರಕ್ಕೆ ರಮೇಶ್ ಅರವಿಂದ್ ಆಕ್ಷನ್ ಕಟ್ ಹೇಳಲಿದ್ದಾರಂತೆ. ಕಂಗನಾ ರಣಾವತ್ ಬಾಲಿವುಡ್‌ನಲ್ಲಿ ನಿರ್ವಹಿಸಿದ್ದ ಪಾತ್ರವನ್ನು ಕನ್ನಡದಲ್ಲಿ ಪಾರೂಲ್ ಯಾದವ್, ತೆಲುಗಿನಲ್ಲಿ ತಮನ್ನಾ ಮಾಡಲಿದ್ದಾರೆ.

ಬಲ್ಲ ಮೂಲಗಳ ಪ್ರಕಾರ ಈ ಚಿತ್ರಕ್ಕೆ ಲಂಡನ್ ಮೂಲದ ಸಂಸ್ಥೆಯೊಂದು ಹಣ ಹೂಡುತ್ತಿದ್ದು, ಈ ಸಿನಿಮಾದ ಮೂಲಕ ರಮೇಶ್ ಅರವಿಂದ್ ತೆಲುಗು ಸಿನಿಮಾ ರಂಗಕ್ಕೆ ನಿರ್ದೇಶಕರಾಗಿ ಪದಾರ್ಪಣೆ ಮಾಡುತ್ತಿದ್ದಾರೆ. ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ಚಿತ್ರದ ಕುರಿತು ಅಧಿಕೃತ ಘೋಷಣೆಯಾಗಲಿದ್ದು ಸದ್ಯದಲ್ಲೇ ಹೆಚ್ಚಿನ ಮಾಹಿತಿಯನ್ನು ನೀಡುವುದಾಗಿ ನಿರ್ಮಾಣ ಸಂಸ್ಥೆ ಹೇಳಿಕೊಂಡಿದೆ.

ನಿರ್ಮಾಪಕರ ಮೇಲೆ ಸಿಟ್ಟಾದ ಧ್ರುವ

ಕೆಲ ತಿಂಗಳ ಹಿಂದೆ ತನ್ನದೇ ಆದ ಅಭಿಮಾನಿ ಬಳಗ ಹೊಂದಿದ್ದರು ಧ್ರುವ ಸರ್ಜಾ. ಈ ಕಾರಣಕ್ಕೆ ಈತನ ಮೇಲೆ ದುಡ್ಡು ಹಾಕಲು ನಿರ್ಮಾಪಕರು ಮುಂದೆ ಬರುತ್ತಿದ್ದರು. ಈಗ ಎಲ್ಲವೂ ಬದಲಾಗಿದೆ. ಸಿನಿಮಾ ರಂಗದಿಂದ ಧ್ರುವ ನಾಪತ್ತೆ ಆಗಿರುವ ಹಿನ್ನೆಲೆಯಲ್ಲಿ ಈಗಾಗಲೇ ಅಡ್ವಾನ್ಸ್ ಕೊಟ್ಟಿರುವ ನಿರ್ಮಾಪಕರು ಧ್ರುವನ ಹಿಂದೆ ಬಿದ್ದಿದ್ದಾರೆ. ಕೊಟ್ಟಿರುವ ಅಡ್ವಾನ್ಸ್ ವಾಪಸ್ಸು ಮಾಡುವಂತೆ ಕೇಳಿದ್ದಾರೆ.

ಪರಿಸ್ಥಿತಿ ಉಲ್ಟಾ ಹೊಡೆಯುತ್ತಿದ್ದಂತೆಯೇ ಎಚ್ಚೆತ್ತುಕೊಂಡಿರುವ 'ಸ್ಯಾಂಡಲ್‌ವುಡ್ ಪ್ರಿನ್ಸ್' ಧ್ರುವ, ತನ್ನೆಲ್ಲ ಕೋಪವನ್ನು 'ಭರ್ಜರಿ' ಚಿತ್ರದ ನಿರ್ಮಾಪಕ ಕನಕಪುರ ಶ್ರೀನಿವಾಸ್ ಅವರತ್ತ ತಿರುಗಿಸಿದ್ದಾರೆ. 'ಭರ್ಜರಿ' ಶುರುವಾಗಿ ಬರೋಬ್ಬರಿ ಎರಡು ವರ್ಷಗಳಾದರೂ, ಇನ್ನೂ ಸಿನಿಮಾ ಮುಗಿಸದ ಕಾರಣ, ನಿರ್ಮಾಪಕರ ಮೇಲೆ ಮುನಿಸಿಕೊಂಡಿದ್ದಾರೆ. ಈ ಕುರಿತು ಮಾತನಾಡಲು ಸ್ವತಃ ಧ್ರುವ ಸರ್ಜಾ ಮಾಧ್ಯಮಗಳ ಮುಂದೆಯೂ ಬಂದಿದ್ದಾರೆ. "'ಭರ್ಜರಿ' ಸಿನಿಮಾ ತಡವಾಗಿದ್ದಕ್ಕೆ ನನ್ನ ಮೇಲೆ ಆರೋಪ ಮಾಡಲಾಗುತ್ತಿದೆ. ನಾನು



ಯಾರ ಕೈಗೂ ಸಿಗ್ತಿಲ್ಲ ಅನ್ನುವ ಮಾತೂ ಕೇಳಿಬರುತ್ತಿದೆ. 'ಭರ್ಜರಿ' ಸಿನಿ[illegible] ತಡವಾಗಿದ್ದಕ್ಕೆ ನಾನು ಕಾರಣವಲ್ಲ, ಆ ಕುರಿತು ಯಾರು ಬೇಕಾದ[illegible] ನಿರ್ಮಾಪಕರನ್ನು ಕೇಳಬಹುದು. ನನ್ನ ಪಾಡಿಗೆ ನಾನು ಮನೆಯಲ್ಲಿ ಇದ್ದೇ[illegible] ಅನ್ನುವುದು ಧ್ರುವ ಮಾತು.



ನಿಧಿ ನಿರ್ಮಾಪಕಿ

ಕನ್ನಡ ಸಿನಿಮಾ ರಂಗದಿಂದ ಬಾಲಿವುಡ್‌ಗೆ ಹಾರಿದ್ದ ನಿಧಿ ಸುಬ್ಬಯ್ಯ[illegible] ಅಲ್ಲಿ ಹೇಳಿಕೊಳ್ಳುವಂತಹ ಹೆಸರೇನೂ ಮಾಡಲಿಲ್ಲ. ಕೈತುಂಬಾ ಚಿತ್ರಗ[illegible] ಸಿಗಲಿಲ್ಲ. ಹಾಗಂತ ಅವರೇನೂ ಬರೀಗೈಲಿ ಸ್ಯಾಂಡಲ್‌ವುಡ್‌ಗೆ ವಾಪಸ್ಸಾಗುತ್ತಿ[illegible] ಬಾಲಿವುಡ್‌ನಿಂದ ದೊಡ್ಡ ನಿರ್ಮಾಪಕರನ್ನೇ ಕನ್ನಡಕ್ಕೆ ಕರೆತರುತ್ತಿದ್ದಾರೆ. [illegible] ಮೂಲಕ ಅವರೂ ಕೂಡ ನಿರ್ಮಾಪಕಿ ಆಗುತ್ತಿದ್ದಾರೆ.

ಬಾಲಿವುಡ್‌ನಿಂದ ಕನ್ನಡಕ್ಕೆ ಬರುತ್ತಿರುವ ಆ ನಿರ್ಮಾಪಕ ಯಾರು ಅಂತೀರ[illegible] ಇವರೇ ಲವೇಶ್ ಖೈರಜನಿ. ಮುಂಬಯಿಯ ಉದ್ಯಮಿ ಆಗಿರುವ ಇವ[illegible] ನಿಧಿ ಸುಬ್ಬಯ್ಯ ಜತೆ ಸಪ್ತಪದಿಯನ್ನೂ ತುಳಿಯಲಿದ್ದಾರೆ.

ಲವೇಶ್ ಮತ್ತು ನಿಧಿ ಇಬ್ಬರೂ ಮೊದಲು ಪ್ರೇಮಿಗಳು. ಎರ[illegible] ವರ್ಷದ ಇವರ ಪ್ರೇಮ ಈಗ ಮದುವೆ ಹಂತಕ್ಕೆ ಬಂದಿದೆ. ಫೆ.1[illegible] ಕೂರ್ಗ್‌ನಲ್ಲಿ ಇಬ್ಬರೂ ಸತಿಪತಿಗಳಾಗಲಿದ್ದು, ಆನಂತರ ಸ್ಯಾಂಡಲ್‌ವುಡ್‌ನ[illegible] ನಿರ್ಮಾಣ ಸಂಸ್ಥೆಯನ್ನು ಶುರು ಮಾಡಲಿದ್ದಾರಂತೆ.



ಮತ್ತೆ ಬಂದಳು ಚಾಂದಿನಿ

'ಉಪೇಂದ್ರ' ಸಿನಿಮಾದ ಮೂಲಕ ಸಿನಿಮಾರಂಗಕ್ಕೆ ಪರಿಚಯ ಆದವರು ನಟಿ ಚಾಂದಿನಿ. ಉಪೇಂದ್ರ ನಿರ್ದೇಶನದ 'ಎ' ಸಿನಿಮಾ ಚಾಂದಿನಿಗೆ ದೊಡ್ಡ ಬ್ರೇಕ್ ನೀಡಿತು. ಆನಂತರ ಸಿನಿಮಾರಂಗದಿಂದ ದೂರವಾದ ಇವರು, ಬೇರೆ ಬೇರೆ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡರು. ಈಗ ಹತ್ತೊಂಬತ್ತು ವರ್ಷಗಳ ನಂತರ ಮತ್ತೆ ಉಪೇಂದ್ರ ಜತೆ ನಟಿಸಲು ಚಾಂದಿನಿ ಬೆಂಗಳೂರಿಗೆ ಬರುತ್ತಿದ್ದಾರೆ. 'ಉಪೇಂದ್ರ ಮತ್ತೆ ಹುಟ್ಟಿ ಬಾ' ಚಿತ್ರದಲ್ಲಿ ಇವರು ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ಸಿನಿಮಾ ಹಲವು ಕಾರಣಗಳಿಂದಾಗಿ ನಿರೀಕ್ಷೆ ಮೂಡಿಸಿದೆ.



17 ವರ್ಷದ ನಂತರ ಪ್ರೇಮಾ ಮತ್ತು ಉಪೇಂದ್ರ ಈ ಚಿತ್ರದಲ್ಲಿ ಒಟ್ಟಿಗೆ ನಟಿಸುತ್ತಿದ್ದಾರೆ. ಉಪೇಂದ್ರ ಅವರ 'ಎಚ್‌ಟುಓ' ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದ ಲೋಕಿ ಈ ಸಿನಿಮಾದ ನಿರ್ದೇಶಕರು. ಹಾಗಾಗಿ ಉಪೇಂದ್ರ ಅವರ ಹಳೆಯ ಚಿತ್ರಗಳ ನಾಯಕಿಯರು ಮತ್ತೆ ಈ ಸಿನಿಮಾದಲ್ಲಿ ಒಂದಾಗಿದ್ದು ವಿಶೇಷ.

ಪ್ರೇಮಾ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದರೆ, ಚಾಂದಿನಿಗೆ ಅತಿಥಿ ಪಾತ್ರ ಸಿಕ್ಕಿದೆ. ಅಲ್ಲದೇ ಸ್ಪೆಷಲ್ ಹಾಡಿಗೂ ಇವರು ಹೆಜ್ಜೆ ಹಾಕಲಿದ್ದಾರಂತೆ. ಚಿತ್ರದಲ್ಲಿ ನಾಲ್ವರು ನಾಯಕಿಯರಿದ್ದು, ಉಪೇಂದ್ರರದ್ದು ಎರಡು ಗೆಟಪ್.

ಬಿಗ್‌ಬಾಸ್ ವೇದಿಕೆಯಲ್ಲಿ ಶಿಲ್ಪಾ ಶೆಟ್ಟಿ

ಬಿಗ್‌ಬಾಸ್ ರಿಯಾಲಿಟಿ ಶೋ ಅಂದುಕೊಂಡಷ್ಟು ಯಶಸ್ಸು ಗಳಿಸಲಿಲ್ಲ. ವಾರಾಂತ್ಯದಲ್ಲಿ ಸುದೀಪ್ ಕಾಣಿಸಿಕೊಂಡರೂ ರೇಟಿಂಗ್ ಎದ್ದೇಳಲಿಲ್ಲ. ಫಿನಾಲೆಗೂ ಇದೇ ಗತಿ ಆಗದಿರಲೆಂದು ಆಯೋಜಕರು ಆಕರ್ಷಕ ಬೆಡಗಿಯನ್ನು ಫಿನಾಲೆಯ ವೇದಿಕೆಗೆ ಕರೆತರುತ್ತಿದ್ದಾರೆ. ರವಿಚಂದ್ರನ್ ಸಿನಿಮಾಗಳ ಮೂಲಕ ಕನ್ನಡದ ಹುಡುಗರ ಎದೆಯಲ್ಲಿ ಕಿಚ್ಚೆಬ್ಬಿಸಿದ ಶಿಲ್ಪಾ ಶೆಟ್ಟಿ ಅಂದು ಕಲರ್‌ಫುಲ್ ವೇದಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಈ ಕುರಿತು ಶಿಲ್ಪಾ ಅವರೊಂದಿಗೆ ಮಾತುಕತೆ ಕೂಡ ಮುಗಿದಿದೆ.

ಇದೇ ಶನಿವಾರ ಬೆಂಗಳೂರಿನ ಇನೋವೇಟಿವ್ ಫಿಲ್ಮ್ ಸಿಟಿಯಲ್ಲಿ ಅಂತಿಮ ಹಣಾಹಣಿ ಇದೆ. ಸುದೀಪ್ ಅವರ ಸೊಗಸಾದ ನಿರೂಪಣೆಯಲ್ಲಿ ಇಡೀ ಕಾರ್ಯಕ್ರಮ ರೂಪುಗೊಂಡಿದ್ದು, ಶಿಲ್ಪಾ ಶೆಟ್ಟಿ ನೃತ್ಯವೊಂದಕ್ಕೆ ಹೆಜ್ಜೆ ಹಾಕಲಿದ್ದಾರೆ.

ಮೂಲತಃ ಮಂಗಳೂರಿನವರಾದ ಶಿಲ್ಪಾ ಕನ್ನಡ ಚಿತ್ರರಂಗಕ್ಕೂ ಚಿರಪರಿಚಿತರು. ಅಲ್ಲದೇ ನಾನಾ ಕಾರ್ಯಕ್ರಮಗಳಿಗೆ ಅತಿಥಿಯಾಗಿ [illegible] ಬೆಂಗಳೂರಿಗೆ ಬರುತ್ತಲೇ ಇರುತ್ತಾರೆ. ಹಾಗಾಗಿ ಇವರನ್ನೇ ಆಯ್ಕೆ [illegible] ಬಿಗ್‌ಬಾಸ್ ಟೀಮ್. ಫಿನಾಲೆ ಸಮಾರಂಭಕ್ಕಾಗಿ [illegible] ವೇದಿಕೆ [illegible]. ಪ್ರೇಕ್ಷಕರಿಗೆ ಪ್ರವೇಶ ನಿರ್ಬಂಧಿಸಲಾಗಿದ್ದು, ಸ್ಪರ್ಧಾಳುಗಳ [illegible] ಆಹ್ವಾನ ನೀಡಲಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com